ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಅವಶೇಷಗಳ ವಯಸ್ಸಿನ ಪತ್ತೆಯಲ್ಲಿ 'ಕಾರ್ಬನ್ ಡೇಟಿಂಗ್' ಸುದ್ದಿ ಮಾಡುತ್ತಿರುತ್ತದೆ

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ 9
ಭಾರತದಲ್ಲಿ ಹೂಡಿಕೆಗೆ ಮೋದಿ ಆಹ್ವಾನ 11
ಐ.ಟಿ.: ಕೆಲಸ ಕಳೆದುಕೊಂಡವರ ಸಂಖ್ಯೆ 60 ಸಾವಿರ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,981 ▲	18,348 ▲	₹62,300 (ಬೆಂಗಳೂರು) ▼	₹73,900 (ಬೆಂಗಳೂರು) ▼	82.85

ಯು.ಟಿ. ಖಾದರ್ ಸ್ಪೀಕರ್ ಖಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾಧ್ಯಕ್ಷರಾಗಿ ಮಂಗಳೂರು ಕ್ಷೇತ್ರದಿಂದ ಐದನೇ ಬಾರಿಗೆ ಚುನಾಯಿತ ರಾಗಿರುವ ಕಾಂಗ್ರೆಸ್ಸಿನ ಹಿರಿಯ ಶಾಸಕ ಯು.ಟಿ. ಖಾದರ್ ಆಯ್ಕೆ ಖಚಿತವಾಗಿದೆ. ಈ ಸ್ಥಾನಕ್ಕೆ ಅವರು ಮಾತ್ರ ನಾಮಪತ್ರ ಸಲ್ಲಿಸಿದ್ದು, ಹಂಗಾಮಿ ಸಭಾಧ್ಯಕ್ಷ ಆರ್.ವಿ. ದೇಶಪಾಂಡೆ ಅವರು ಬುಧ ವಾರ ಬೆಳಿಗ್ಗೆ ಸದನದಲ್ಲಿ ಖಾದರ್ ಅವರ ಅವಿರೋಧ ಆಯ್ಕೆಯನ್ನು ಘೋಷಿಸಲಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಿಂದ ಸಭಾಧ್ಯಕ್ಷರಾಗುತ್ತಿರುವ ಎರಡನೇ ಜನ ಪ್ರತಿನಿಧಿ ಖಾದರ್. ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದಿಂದ ಈ ಹುದ್ದೆಗೆ ಏರಿದ ಮೊದಲ ವ್ಯಕ್ತಿ. ಈ ಹಿಂದೆ ಬೆಳ್ತಂಗಡಿ ಕ್ಷೇತ್ರದಿಂದ ಆಯ್ಕೆಯಾಗಿದ್ದ ಬಿ. ವೈಕುಂಠ ಬಾಳಿಗಾ ಎರಡು ಬಾರಿ (1962, 1967) ಸಭಾಧ್ಯಕ್ಷರಾಗಿದ್ದರು.

ನಾಮಪತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಸ್ತಾಪಿಸಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅನುಮೋದಿಸಿದರು.

ವಿದ್ಯಾರ್ಥಿ ದೆಸೆಯಲ್ಲೇ ಭರವಸೆ ಮೂಡಿಸಿದ್ದ ಖಾದರ್ 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಿದ್ದರಾಮಯ್ಯ ಪೂರ್ಣಾವಧಿ ಸಿ.ಎಂ: ಸಚಿವರ ಹೇಳಿಕೆ ತಂದ ಕಂಪನ

ಪಾಟೀಲ 'ಕಿಡಿ': 'ಕೈ' ಉರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿಯಾಗಿರಲಿದ್ದಾರೆ' ಎಂದು ಸಚಿವ ಎಂ.ಬಿ. ಪಾಟೀಲ ನೀಡಿದ ಹೇಳಿಕೆ ಕಾಂಗ್ರೆಸ್‌ನಲ್ಲಿ ಅಂತರ್ಯುದ್ಧದ ಕಿಡಿ ಹೊತ್ತಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣಗಳ ಮಧ್ಯದ ತಿಕ್ಕಾಟಕ್ಕೆ ಮತ್ತಷ್ಟು ತುಪ್ಪ ಸುರಿದಂತಾಗಿದೆ.

ಪಾಟೀಲರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿರುವ ಕಾಂಗ್ರೆಸ್ ಹೈಕಮಾಂಡ್, ಅಧಿಕಾರ ಹಂಚಿಕೆ ಸೂತ್ರದ ಬಗ್ಗೆ ಯಾರೂ ಚರ್ಚಿಸಬಾರದು ಎಂದು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಬಣದ ಸಚಿವರು, ಶಾಸಕರಿಗೆ ಖಡಕ್ ಎಚ್ಚರಿಕೆ ನೀಡಿದೆ.

ಮೈಸೂರಿನ ಸುತ್ತೂರಿನಲ್ಲಿ ಸೋಮವಾರ ರಾತ್ರಿ ಮಾತನಾಡಿದ್ದ ಎಂ.ಬಿ. ಪಾಟೀಲ, 'ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರೇ ಪೂರ್ಣಾವಧಿ ಇರಲಿದ್ದಾರೆ. ಅಧಿಕಾರ ಹಂಚಿಕೆ ಬಗ್ಗೆ ಯಾವುದೇ ಮಾತುಕತೆ ನಡೆದಿಲ್ಲ' ಎಂದು ಹೇಳಿದ್ದರು.

ಈ ಹೇಳಿಕೆ ವಿವಾದಕ್ಕೀಡಾಗುತ್ತಿದ್ದಂತೆಯೇ ಮಂಗಳವಾರ ಬೆಳಿಗ್ಗೆ ಸ್ಪಷ್ಟನೆ ನೀಡಿರುವ ಪಾಟೀಲರು, 'ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಹೇಳಿದ್ದನ್ನೇ ನಾನು ಪುನರುಚ್ಚರಿಸಿದ್ದೇನೆ' ಎಂದರು.

ಆದರೆ, ಪಾಟೀಲರ ಹೇಳಿಕೆಯನ್ನು ರಾಜಕೀಯ ಪಡಸಾಲೆಯಲ್ಲಿ ನಾನಾ ರೀತಿಯಲ್ಲಿ ವಿಶ್ಲೇಷಿಸಲಾಗಿದೆ. ಪಾಟೀಲರು ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ.

7ನೇ ಪುಟ ನೋಡಿ

'ಪಕ್ಷದ ವರಿಷ್ಠರು ಹೇಳಿದ್ದನ್ನಷ್ಟೇ ಹೇಳಿದ್ದೇನೆ'

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಂದು ನಮ್ಮ ನಾಯಕರು ಹೇಳಿದ್ದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸುದ್ದಿಗೋಷ್ಠಿಯಲ್ಲಿ ಏನು ಹೇಳಿದ್ದರೋ ಅದನ್ನೇ ನಾನು ಹೇಳಿದ್ದೇನೆ. ಅಧಿಕಾರ ಹಂಚಿಕೆ ಇಲ್ಲ. ಇದ್ದರೆ ಅದು ಜನರ ಜೊತೆ ಮಾತ್ರ ಎಂದೂ ವೇಣುಗೋಪಾಲ್ ಹೇಳಿದ್ದರು. ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ. ಶಿವಕುಮಾರ್ ಮುಂದುವರೆಯುತ್ತಾರೆ ಎಂದೂ ಹೇಳಿದ್ದರು. ನಾನು ಅದನ್ನೂ ಹೇಳಿದ್ದೇನೆ. ಅಧಿಕಾರ ಹಂಚಿಕೆಯ ಸಂಧಾನ ಸೂತ್ರ ನನಗೆ ಗೊತ್ತಿಲ್ಲ. ನಾನು ವೈಯಕ್ತಿಕವಾಗಿ ಮಾತನಾಡಿಲ್ಲ. ಪಕ್ಷದ ವರಿಷ್ಠರು ಹೇಳಿದ್ದನ್ನಷ್ಟೇ ನಾನು ಹೇಳಿದ್ದೇನೆ.

ಎಂ.ಬಿ. ಪಾಟೀಲ, ಸಚಿವ

ಯಾರು ಏನು ಬೇಕಾದರೂ ಹೇಳಿಕೊಳ್ಳಲಿ. ನಾನು ಆ ಬಗ್ಗೆ ಏನೂ ಮಾತಾಡುವುದಿಲ್ಲ. ಅಧಿಕಾರ ಮತ್ತಿತರ ಪಕ್ಷದ ವಿಚಾರಗಳನ್ನು ನೋಡಿಕೊಳ್ಳಲು ಎಐಸಿಸಿ ಇದೆ. ಎಲ್ಲ ವಿಚಾರಗಳನ್ನು ಪಕ್ಷದ ರಾಷ್ಟ್ರೀಯ ಮುಖಂಡರು ನೋಡಿಕೊಳ್ಳುತ್ತಾರೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಮಾತ್ರ ನಮ್ಮ ಆದ್ಯತೆ.

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ನಾನು ಎಂ.ಬಿ. ಪಾಟೀಲ ಅವರಿಗೆ ತೀಕ್ಷ್ಣವಾದ ಎಚ್ಚರಿಕೆ ಕೊಡ ಬಲ್ಲೆ. ಆದರೆ, ಈಗ ಅದು ಬೇಡ. ಅವರ ಹೇಳಿಕೆಯ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದರೆ ಸುರ್ಜೇವಾಲಾ ಅವರನ್ನೇ ಕೇಳಿ.

ಡಿ.ಕೆ. ಸುರೇಶ್, ಸಂಸದ

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉನ್ನತ ಮಟ್ಟದ ಹಿರಿಯ ಪೊಲೀಸ್ ಅಧಿಕಾರಿಗಳ ಜತೆ ಬೆಂಗಳೂರಿನಲ್ಲಿ ಮಂಗಳವಾರ ಸಭೆ ನಡೆಸಿದರು. ಡಿಜಿಪಿ ಅಲೋಕ್ ಮೋಹನ್, ಸಚಿವರಾದ ಕೆ.ಜೆ. ಜಾರ್ಜ್, ಎಂ.ಬಿ. ಪಾಟೀಲ, ಜಮೀರ್ ಅಹಮದ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಇದ್ದರು

ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ: ಸಿ.ಎಂ ಆದೇಶ

ಮತೀಯ ಗೂಂಡಾಗಿರಿ ಹತ್ತಿಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನು ಪಾಲನೆ ಮಾಡುವಾಗ ಧರ್ಮದ ಆಧಾರದಲ್ಲಿ ತಾರತಮ್ಯ ಇರಕೂಡದು. ರಾಜ್ಯದಲ್ಲಿ ಮತೀಯ ಗೂಂಡಾಗಿರಿ ಇನ್ನು ಸಂಪೂರ್ಣ ಬಂದ್ ಆಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಂಪುಟದ ಇತರ ಸದಸ್ಯರ ಜತೆ ಮಂಗಳವಾರ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ ಅವರು, 'ನಿರ್ದಿಷ್ಟ ಸಮುದಾಯಗಳನ್ನು ಗುರಿಯಾಗಿಸಿಕೊಂಡು ಮತೀಯವಾದಿಗಳು ಗೂಂಡಾಗಿರಿ ನಡೆಸುವ ಪ್ರವೃತ್ತಿಗೆ ರಾಜ್ಯದಲ್ಲಿ ಅವಕಾಶ ಇರಕೂಡದು. ಅಂತಹ ಚಟುವಟಿಕೆಗಳನ್ನು ಸಂಪೂರ್ಣವಾಗಿ ಹತ್ತಿಕ್ಕಬೇಕು' ಎಂದು ಸೂಚಿಸಿದ್ದಾರೆ.

ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪೊಲೀಸ್ ಠಾಣೆಗಳಲ್ಲಿ ಎಲ್ಲರನ್ನೂ ಸಮಾನವಾಗಿ ನೋಡಬೇಕು. ಎಲ್ಲರಿಗೂ ಸಮಾನ ರಕ್ಷಣೆ ದೊರೆಯಬೇಕು. ಯಾವುದೇ ಸ್ಥಳದಲ್ಲಿ ಅಪರಾಧ ನಡೆದರೂ ಠಾಣಾಧಿಕಾರಿ ಮಾತ್ರವಲ್ಲ, ಎಸ್‌ಪಿ, ಡಿಸಿಪಿಗಳನ್ನೂ ಹೊಣೆಗಾರರನ್ನಾಗಿ ಮಾಡಲಾಗುವುದು' ಎಂದರು.

7ನೇ ಪುಟ ನೋಡಿ

ಕೇಸರೀಕರಣ: ಡಿಕೆಶಿ ಎಚ್ಚರಿಕೆ

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಪೊಲೀಸ್ ಇಲಾಖೆಯ ಕಾರ್ಯವೈಖರಿ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಭೆಯಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. 'ಪೊಲೀಸ್ ಇಲಾಖೆಯನ್ನು ಕೇಸರೀಕರಣ ಮಾಡಲು ಬಿಡುವುದಿಲ್ಲ' ಎಂದು ಎಚ್ಚರಿಸಿದ್ದಾರೆ.

ಅವರ ಕಿಡಿನುಡಿ ಹೀಗಿದೆ

- ಪೊಲೀಸ್ ಇಲಾಖೆಯನ್ನು ಕೇಸರೀಕರಣ ಮಾಡಲು ಹೊರಟಿದ್ದೀರಾ?
- ಮಂಗಳೂರು, ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ನೀವು ಕೇಸರಿ ಬಟ್ಟೆ ಹಾಕಿಕೊಂಡು ಇಲಾಖೆಗೆ ಅವಮಾನ ಮಾಡಿದ್ದೀರಿ. ಈ ಸಭೆಗೂ ಕೇಸರಿ ಬಟ್ಟೆ ಧರಿಸಿ ಬರಬೇಕಾಗಿತ್ತು.
- ಅದಕ್ಕೆಲ್ಲಾ ಅವಕಾಶ ನೀಡುವುದಿಲ್ಲ. ದೇಶದ ಬಗ್ಗೆ ಗೌರವ ಇದ್ದರೆ ರಾಷ್ಟ್ರಧ್ವಜ ಧರಿಸಿಕೊಂಡು ಕೆಲಸ ಮಾಡಬೇಕು.
- ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಎಡಿಜಿಪಿ ಶ್ರೇಣಿಯ ಅಧಿಕಾರಿಯೇ ಉತ್ತರ ಪತ್ರಿಕೆ ತಿದ್ದಿದ್ದಾರೆ.
- ಪಿಎಸ್‌ಐ ಹಗರಣ ಬಹಿರಂಗಪಡಿಸಿದ ಪ್ರಿಯಾಂಕ್ ಖರ್ಗೆಗೆ ಕಿರುಕುಳ ನೀಡಲಾಯಿತು.

7ನೇ ಪುಟ ನೋಡಿ

ಬೆಂಗಳೂರಿನ ಭಾವನಾಗೆ 55ನೇ ರ್‍ಯಾಂಕ್ • ಸಾಧನೆಯಲ್ಲಿ ಗ್ರಾಮೀಣರೂ ಮುಂದು

ಯುಪಿಎಸ್ಸಿ: 30ಕ್ಕೂ ಹೆಚ್ಚು ಮಂದಿ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸಿದ್ದ 2022ನೇ ಸಾಲಿನ ನಾಗರಿಕ ಸೇವೆಗಳ ಪರೀಕ್ಷೆ ಯಲ್ಲಿ ಈ ಬಾರಿಯೂ ರಾಜ್ಯದ ಅಭ್ಯರ್ಥಿ ಗಳು ಉತ್ತಮ ಸಾಧನೆ ತೋರಿದ್ದಾರೆ.

ರಾಜ್ಯದ 30ಕ್ಕೂ ಹೆಚ್ಚು ಅಭ್ಯರ್ಥಿಗಳು ಆಯ್ಕೆಯಾಗಿದ್ದು, ಹೆಚ್ಚಿನವರು ನಗರ ಪ್ರದೇಶದವರು. ಆದರೆ, ಬೆಂಗಳೂರಿಗಿಂತಲೂ ಎರಡನೇ ಮತ್ತು ಮೂರನೇ ಹಂತದ ನಗರದವರೇ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದಾರೆ. ತಾಲ್ಲೂಕು ಕೇಂದ್ರ ಮತ್ತು ಗ್ರಾಮೀಣ ಪ್ರದೇಶದವರು ಆಯ್ಕೆಯಾಗಿರುವುದು ಗಮನಾರ್ಹ. ಈ ಬಾರಿಯೂ ಎಂಜಿನಿಯರಿಂಗ್ ಪದವೀಧರರೇ ಹೆಚ್ಚು ಆಯ್ಕೆಯಾಗಿದ್ದಾರೆ. ಕೆಲವರು ವೈದ್ಯಕೀಯ ಪದವೀಧರರು. ಆದರೆ, ಎಂಜಿನಿಯರಿಂಗ್ ಪದವೀಧರರು ಎಂಜಿನಿಯರಿಂಗ್ ಸಂಬಂಧಿಸಿದ ವಿಷಯ ಆಯ್ಕೆ ಮಾಡಿಕೊಂಡಿಲ್ಲ.

11ನೇ ಪುಟ ನೋಡಿ

ಮಹಿಳೆಯರ ಮೇಲುಗೈ

ನವದೆಹಲಿ: ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ನಡೆಸಿದ್ದ 2022ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆಗಳ ಫಲಿತಾಂಶ ಪ್ರಕಟಿಸಿದ್ದು, ಈ ಬಾರಿ ಕೂಡ, ಮೊದಲ ನಾಲ್ಕು ಸ್ಥಾನಗಳು ಸೇರಿ ಮಹಿಳಾ ಅಭ್ಯರ್ಥಿ ಗಳೇ ಪಾರಮ್ಯ ಮೆರೆದಿದ್ದಾರೆ. ಮೊದಲ 25 ಅಗ್ರ ಸ್ಥಾನ ಪಡೆದವರಲ್ಲಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ 14.



ಇಶಿತಾ ಕಿಶೋರ್

ವಿವರ 11

ಅಂಕಿ–ಅಂಶ

933 ನೇಮಕಾತಿಗೆ ಯುಪಿಎಸ್‌ಸಿ ಶಿಫಾರಸು ಮಾಡಿರುವ ಅಭ್ಯರ್ಥಿಗಳ ಸಂಖ್ಯೆ

613 ಆಯ್ಕೆಯಾಗಿರುವ ಪುರುಷರ ಸಂಖ್ಯೆ

320 ಆಯ್ಕೆಯಾಗಿರುವ ಮಹಿಳಾ ಅಭ್ಯರ್ಥಿಗಳ ಸಂಖ್ಯೆ

ಕರ್ನಾಟಕದಲ್ಲಿ ಮನೆ ಮಾತಾದ ಮಹಾನ್ ಚೇತನ

ಡಾ. ಕೆ. ಭುಜಂಗ ಶೆಟ್ಟಿ

ನಾರಾಯಣ ನೇತ್ರಾಲಯದ ಸ್ಥಾಪಕರು, ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು

1953 - 2023

ನಮ್ಮ ಸಂಸ್ಥೆಯ ಅಧ್ಯಕ್ಷರು, ತಮ್ಮ ಮಾಂತ್ರಿಕ ಸ್ಪರ್ಶದಿಂದಲೇ ಲಕ್ಷಾಂತರ ಜನರ ಬದುಕಿಗೆ ಬೆಳಕು ತಂದ ಮಹಾನ್ ನಾಯಕ ನಮ್ಮನ್ನು ಅಗಲಿದ್ದಾರೆ. ಮನೆಯಲ್ಲಿ ತಲೆಗೆ ಪೆಟ್ಟು ಬಿದ್ದ ನಂತರ ಉದ್ಭವಿಸಿದ ಸಮಸ್ಯೆಗಳು ಅವರನ್ನು ನಮ್ಮಿಂದ ದೈಹಿಕವಾಗಿ ದೂರ ಮಾಡಿವೆ. ಅವರಿಗೆ ಜನರ ಬಗ್ಗೆ ಇದ್ದ ಅಂತಃಕರಣ ಹಾಗೂ ಮಾನವೀಯ ಪ್ರೇಮ ಲಕ್ಷಾಂತರ ಜನರು ತಮ್ಮ ಕುಟುಂಬದಲ್ಲಿ ಒಬ್ಬರನ್ನಾಗಿ ಪ್ರೀತಿಸುವಂತೆ ಮಾಡಿದೆ. ಅವರನ್ನು ನೆನಪಿಸಿಕೊಳ್ಳದ ಕ್ಷಣಗಳೇ ಇಲ್ಲ. ಅವರು ಪಾಲಿಸಿದ ಆದರ್ಶ, ದೇವರ ಸೇವೆಯಂತೆ ಜನರ ಜೊತೆಗೆ ನಡೆದುಕೊಂಡು ಬಂದಂತಹ ಪದ್ಧತಿ ಮುಂಬರುವ ತಲೆಮಾರುಗಳ ಮನಸ್ಸು, ಹೃದಯಗಳ ಪಾಲಿಗೆ ಮುನ್ನಡೆಸುವ ದಾರಿದೀಪವಾಗಿದೆ.



ನಿಮ್ಮ ಆತ್ಮಕ್ಕೆ ಸದ್ಗತಿ ದೊರೆಯಲಿ. ನೀವು ಕೈಗೊಂಡ ಸೇವಾ ಕೈಂಕರ್ಯದಿಂದಾಗಿ ಅಸಂಖ್ಯಾತರ ಜೀವನದಲ್ಲಿ ಬದಲಾವಣೆ ಹಾಗೂ ಸಂಚಲನವನ್ನೇ ತಂದಿದೆ. ನಿಮ್ಮ ಆ ಬೆಚ್ಚನೆಯ ಭಾವ ನಮ್ಮ ಹೃದಯದ ತಿಜೋರಿಯಲ್ಲಿ ಸದಾ ಜೋಪಾನವಾಗಿರುತ್ತದೆ. ಕಾಯಿಲೆ ಬಂದಾದ ಮೇಲೆ ಅದನ್ನು ಗುಣಪಡಿಸುವ ಪರಿಪಾಠದ ಜೊತೆಗೆ ಕಾಯಿಲೆಯನ್ನು ತಡೆಯುವುದಕ್ಕೆ ಏನು ಮಾಡಬೇಕು ಎಂಬ ಹೊಸ ಚಿಕಿತ್ಸಾ ವಿಧಾನವನ್ನೇ ಪರಿಚಯಿಸಿದ ಬದಲಾವಣೆಯ ಹರಿಕಾರರು ನೀವು. ಜೀವನಶೈಲಿಯ ನಿರ್ವಹಣೆ ಮತ್ತು ಸಿದ್ಧಾಂತದ ರಕ್ಷಣೆ ಹೇಗೆ ಮಾಡಿಕೊಳ್ಳಬೇಕು ಎಂದು ತೋರಿಸಿಕೊಟ್ಟ ಮಹಾನ್ ವೈದ್ಯ.

ನೀವು ಹಾಕಿಕೊಟ್ಟ ಪರಂಪರೆ ಮುಂದುವರಿಯಲಿದೆ, ನಡೆದು ಬಂದ ದಾರಿ ಅಸಂಖ್ಯಾತ ಬದುಕುಗಳಲ್ಲಿ ಬದಲಾವಣೆ ತರಲಿದೆ.

ಇಲ್ಲಿ ಯಾರೂ ಶಾಶ್ವತ ಅಲ್ಲ, ಆದರೆ ನೀವು ಸೃಷ್ಟಿಸಿರುವ ಎಲ್ಲವೂ ಸದಾ ಜೀವಂತವಾಗಿರುತ್ತವೆ!

ಬರೀ ಪದಗಳಲ್ಲಿ ಕಟ್ಟಿಕೊಡಲಾಗದಷ್ಟು ಮಟ್ಟಿಗೆ ನಾವು ನಿಮಗೆ ಆಭಾರಿಗಳು

ನಾರಾಯಣ ನೇತ್ರಾಲಯ ಮತ್ತು ಕುಟುಂಬ

ADMISSIONS OPEN
FOR THE YEAR 2023-2024
APPLY NOW @
www.jssuni.edu.in

JSS ACADEMY OF HIGHER EDUCATION & RESEARCH
(DEEMED TO BE UNIVERSITY) MYSURU

Dental*
- Bachelor of Dental Surgery (BDS)

Fellowship
- Psychosexual Medicine
- Pain Medicine
- Neonatology
- Critical Care Medicine

B.Sc.
(Allied Health Sciences)
- Medical Laboratory Technology
- Medical Imaging Technology
- Anaesthesia & Operation Theatre Technology
- Renal Dialysis Technology
- Respiratory Care Technology
- Cardiac Care Technology
- Perfusion Technology
- Emergency Medicine Technology
- Optometry
- Physician Assistant (CTVS)
- Forensic Sciences
- Medical Genetics
- Bachelor of Occupational Therapy (BOT)

M.Sc. / MPH / M.Phil
(Biomedical / Medical Sciences)
- Medical Microbiology
- Medical Biochemistry
- Medical Physiology
- Medical Anatomy
- Medical Pharmacology
- Medical Genetics & Genomics
- Echocardiography
- Clinical Psychology
- Forensic Odontology
- Clinical Embryology
- Master of Public Health (MPH)
- M. Phil Psychiatric Social Work
- M. Phil Clinical Psychology

Ph.D.
Medicine / Dentistry / Pharmacy / Management Studies / Life Sciences / Biomedical Sciences

Pharmacy
- B.Pharm
- II B.Pharm (Lateral Entry)
- D Pharm
- B Pharm Practice
- Pharm D
- Pharm D (PB)

M.Pharm
- Pharmaceutics
- Pharmaceutical Quality Assurance
- Regulatory Affairs
- Industrial Pharmacy
- Pharmacy Practice
- Pharmacology
- Pharmaceutical Chemistry
- Pharmaceutical Analysis
- Pharmacognosy
- Pharmaceutical Biotechnology

*Note : The Schedule for Entrance Test & Counselling is hosted at the Website.

M.Sc. Life Sciences
- Cognitive Neuroscience
- Environmental Science
- Geoinformatics
- Nanoscience & Technology
- Nutrition & Dietetics
- Molecular Biology
- Biochemistry
- Microbiology
- Medical Statistics
- Bioinformatics
- Cosmetic Science
- Sports Nutrition & Management
- Biotechnology
- Medical Physics

Diploma in
- Tissue Culture
- Nutraceutical Technology
- Environment, Health & Safety Management

Yoga
- B.Sc. in Yoga
- M.Sc. in Yoga
- Yoga Teachers Course (YTC) (3 months)

B.Sc. Life Sciences
General (3 Years) / Honours (4 Years)
- Biotechnology
- Microbiology
- Environmental Science
- Food, Nutrition & Dietetics
- Psychology
- Biochemistry

Dental Diploma
- Diploma in Dental Mechatronics
- DORA - Dental Operating Room Assistant

Health System Management Studies
- BBA in Hospital & Health System Management
- MBA in Hospital Administration
- MBA in Pharmacy Administration
- MBA in Information Technology

Open Distance Learning
- Diploma in Environment, Health & Safety Management
- Diploma in Tissue Culture
- Certificate Program in Statistical Methods & Research Methodology

Online Learning Programs
- MBA in Hospital Administration
- BBA in Hospital and Health System Management
- B.Sc in Psychology
- Certitifcate Programme in Dental
- Ethics & Jurisprudence

Diploma in
- Pharmacovigilance
- Quality Control
- Bioinformatics
- Regulatory Affairs
- Medical Devices

*NOTE : Guidance will be given for UG Dental (BDS) 2023 admissions. NEET UG 2023 eligible candidates may apply at Medical Counselling Committee (MCC) W : www.mcc.nic.in for online counselling & Seat allotment to JSS Dental College & Hospital, Mysuru. For more details please email at admissions@jssuni.edu.in

JSS ACADEMY OF HIGHER EDUCATION & RESEARCH
Sri Shivarathreeshwara Nagar, Bannimantap, Mysuru - 570 015, Karnataka, India. | T: 0821-2548416 / 400 / 014
E: admissions@jssuni.edu.in | W: www.jssuni.edu.in | FB: www.fb.com/jssuniversity

ಯುಪಿಎಸ್‌ಸಿ: 10 ಮಂದಿಗೆ ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೂನಿವರ್ಸಲ್ ಕೋಚಿಂಗ್ ಸೆಂಟರ್‌ನಲ್ಲಿ ತರಬೇತಿ ಪಡೆದ 10 ಅಭ್ಯರ್ಥಿಗಳು ಕೇಂದ್ರ ನಾಗರಿಕ ಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದಿದ್ದಾರೆ.

ಗರಿಮಾ ಲೋಹಿಯಾ 2ನೇ ರ‍್ಯಾಂಕ್ ಪಡೆದಿದ್ದಾರೆ. ವೈಷ್ಣವಿ ಪೌಲ್ (62), ವಿಶ್ವಜೀತ್ ಸೌರ್ಯನ್ (126), ಪಿ.ಶ್ರವಣ್ ಕುಮಾರ್ (222), ಶಿವಾಂಗ್ ರಸ್ತೋಗಿ (307), ಶುಭ್ರತೋಷ್ ಶರ್ಮ (358), ಸ್ವಸ್ತಿಕಾ ಆರ್.ಪಿ. (456), ಪ್ರಣಯ್ ಕುಮಾರ್ ಸಿಂಗ್ (602), ಮನ್‌ಪ್ರೀತ್ ಸಿಂಗ್ (616) ಹಾಗೂ ರಾಮ್‌ದೇನಿ ಸಾಯಿನಾಥ್ (743) ರ‍್ಯಾಂಕ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಯೂನಿವರ್ಸಲ್ ಕೋಚಿಂಗ್ ಸೆಂಟರ್ ಇಲ್ಲಿನ ವಿಜಯನಗರದಲ್ಲಿ 23 ವರ್ಷಗಳ ಹಿಂದೆ ಪ್ರಾರಂಭವಾಗಿದ್ದು, ಇಲ್ಲಿ ತರಬೇತಿ ಪಡೆದವರಲ್ಲಿ ಸಾವಿರಾರು ಅಭ್ಯರ್ಥಿಗಳು ಯಶಸ್ಸು ಸಾಧಿಸಿದ್ದಾರೆ' ಎಂದು ಯೂನಿವರ್ಸಲ್ ಕೋಚಿಂಗ್ ಸೆಂಟರ್‌ನ ನಿರ್ದೇಶಕ ಉಪೇಂದ್ರ ಶೆಟ್ಟಿ ತಿಳಿಸಿದ್ದಾರೆ.

ಅಕ್ಕ ಐಎಎಸ್ ಅಕಾಡೆಮಿ: 4 ರ‍್ಯಾಂಕ್

ಬೆಂಗಳೂರು: ಕೇಂದ್ರ ನಾಗರಿಕ ಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆಯಲ್ಲಿ ಅಕ್ಕ ಐಎಎಸ್ ಅಕಾಡೆಮಿಯಲ್ಲಿ ತರಬೇತಿ ಪಡೆದ ನಾಲ್ಕು ಅಭ್ಯರ್ಥಿಗಳು ರ‍್ಯಾಂಕ್ ಪಡೆದಿದ್ದಾರೆ. ಚೆಲುವರಾಜು ಆರ್. 238, ಶೃತಿ ಯರಗಟ್ಟಿ ಎಸ್. 362, ಆದಿನಾಥ ಪದ್ಮಣ್ಣ ತಮದಡ್ಡಿ 566 ಹಾಗೂ ಪದ್ಮನಾಭ 923ನೇ ರ‍್ಯಾಂಕ್ ಪಡೆದಿದ್ದಾರೆ. 'ಕನ್ನಡ ಸಾಹಿತ್ಯದ ಬೋಧನೆಯಲ್ಲಿ ಹೆಸರುವಾಸಿಯಾಗಿದ್ದೇವೆ' ಎಂದು ಸಂಸ್ಥೆ ಹೇಳಿದೆ.

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. CAO/CN/BNC/13/2023
ದಿನಾಂಕ: 18.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಗದಗ–ಹೊಟಗಿ ಡಬ್ಲಿಂಗ್	ರೂ. 26,19,87,203/-

ವಿಭಾಗ: **1.** ಮುಗಳೊಳ್ಳಿ ಯಾರ್ಡ್ ನಲ್ಲಿ ಕಿಮೀ 101/806 ನಲ್ಲಿ 1x5.0 ಮೀ x 5.150ಮೀ ಆರ್‌ಸಿಸಿ ಸೆಗ್ಮೆಂಟಲ್ ಬಾಕ್ಸ್‌ಗಳಾಗಿ ಎಲ್ ಸಿ ನಂ.50 ರ ಬದಲಾಗಿ ಆರ್ ಯುಬಿ ನಿರ್ಮಾಣ. **2.** ಸೀತಿಮನಿ ಮತ್ತು ಕೂಡಲಸಂಗಮ ರಸ್ತೆ ನಿಲ್ದಾಣಗಳ ನಡುವೆ ಸೇತುವೆಗಳು ಸಂ.62ಇ (ಆರ್ ಯುಬಿ) ನಲ್ಲಿ ಕಿಮೀ.120.747 ನಲ್ಲಿ ಅಸ್ತಿತ್ವದಲ್ಲಿರುವ 10.932 ಮೀ ಸ್ಟೀಲ್ ಗರ್ಡರ್ ಅನ್ನು ಸರಿಯಾಗಿ ಕಿತ್ತುಹಾಕಿ 1x6.00x5.00ಮೀ ಎಸ್‌ಕ್ಯೂ (8.967 ಎಸ್‌ಕೆ) ಆರ್‌ಸಿಸಿ ಸೆಗ್ಮೆಂಟಲ್ ಬಾಕ್ಸ್‌ನಂತೆ ಆರ್‌ಯುಬಿ ನಿರ್ಮಾಣ. **3.** ಸೀತಿಮನಿ ಮತ್ತು ಕೂಡಲಸಂಗಮ ರಸ್ತೆ ನಿಲ್ದಾಣಗಳ ನಡುವೆ ಕಿಮೀ.120/947 ನಲ್ಲಿ ಸ್ಪ್ಯಾನ್ 1x1.80x1.20ಮೀ ಆರ್‌ಸಿಸಿ ಬಾಕ್ಸ್‌ರ ಸೇತುವೆ ಸಂ.62ಎಫ್ ನಿರ್ಮಾಣ. **4.** ಆಲಮಟ್ಟಿ ಮತ್ತು ವಂದಾಲ ನಿಲ್ದಾಣಗಳ ನಡುವೆ ಕಿಮೀ.128.925 ನಲ್ಲಿ 21.80ಮೀ ಕ್ಲಿಯರ್ ಸ್ಪ್ಯಾನ್ ಆರ್‌ಸಿಸಿ ಟಿ ಬೀಮ್ ಸ್ಲ್ಯಾಬ್ ಅನ್ನು ಸರಿಯಾಗಿ ಕಿತ್ತುಹಾಕಿ 60.00ಮೀ ಬೋ ಸ್ಟ್ರಿಂಗ್ ಗಿರ್ಡರ್‌ನ ಕಿಮೀ.128.940 ನಲ್ಲಿ ಸೇತುವೆ ಸಂ.63ಸಿ ಆರ್‌ಓಬಿ ನಿರ್ಮಾಣ. **(ಟೆಂಡರ್ ಉಲ್ಲೇಖ ಸಂಖ್ಯೆ: HIGA-92-R).**

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08–06–2023, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಂಜಿನಿಯರ್/ನಿರ್ಮಾಣ/ಕಾಮಗಾರಿಗಳು ಬೆಂಗಳೂರು ಕಂಟೋನ್ಮೆಂಟ್

PUB/111/AAV/PRB/SWR/2023-24

S.W.Railways SWRRLY SWRRLY

'ಪ್ರಕಸಂ' ರಂಗತಂಡದಿಂದ 'ವರಲಕ್ಷ್ಮಿ ಅವಾಂತರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಂಗಭೂಮಿಯಲ್ಲಿ ಚಿರಪರಿಚಿತ 'ಪ್ರಕಸಂ' ರಂಗತಂಡ 'ವರಲಕ್ಷ್ಮಿ ಅವಾಂತರ' ಎಂಬ ನೂತನ ನಾಟಕದೊಂದಿಗೆ ಮತ್ತೆ ಪ್ರೇಕ್ಷಕರ ಎದುರು ಬರುತ್ತಿದೆ. ಬೆಂಗಳೂರಿನ ಕೆ.ಎಚ್. ಕಲಾಸೌಧವನ್ನು ದಶಕಗಳ ಕಾಲ ನಿರ್ವಹಿಸಿದ್ದ 'ಪ್ರಕಸಂ' ನಗೆ ನಾಟಕಗಳಿಗೆ ಜನಪ್ರಿಯ. ಪ್ರತಿ ವರ್ಷ ಹೊಸ ಕಲಾವಿದರೊಂದಿಗೆ ಒಂದು ನಾಟಕ ಪ್ರದರ್ಶಿಸುವ ವಾಡಿಕೆಯನ್ನು ಈ ತಂಡ ರೂಢಿಸಿಕೊಂಡು ಬಂದಿದೆ. ಈ ವರ್ಷ ಮನುಷ್ಯ ಹಾಗೂ ಸಾಕು ಪ್ರಾಣಿಗಳ ನಡುವಿನ ಸಂಬಂಧ ವಿವರಿಸುವ 'ವರಲಕ್ಷ್ಮಿ ಅವಾಂತರ' ಎಂಬ ಹಾಸ್ಯ ನಾಟಕ ಪ್ರದರ್ಶಿಸುತ್ತದೆ.

ಮೇ 27ರಂದು ಸಂಜೆ 7.30 ಗಂಟೆಗೆ ಮತ್ತು ಮೇ 28ರಂದು 4.30ಕ್ಕೆ ಹಾಗು 7.30ಕ್ಕೆ ನಗರದ ಕೆ.ಎಚ್.ಕಲಾಸೌಧದಲ್ಲಿ ಪ್ರದರ್ಶನಗಳು ನಡೆಯಲಿವೆ. 'ನಾಟಕದೊಳಗೆ ಸ್ಟ್ಯಾಂಡಪ್ ಅಳವಡಿಸಿಕೊಂಡಿರುವ ಮೊಟ್ಟ ಮೊದಲ ಪ್ರಯೋಗ ಇದಾಗಿದೆ ಎನ್ನುತ್ತಾರೆ ನಾಟಕದ ನಿರ್ದೇಶಕ ಪಿ.ಡಿ.ಸತೀಶ್ ಚಂದ್ರ. ನಾಗವೇಣಿ ರಂಗನ್ ಈ ನಾಟಕದ ರಚನಾಕಾರರು. ಈ ತಂಡ ಹಿಂದೆ ಸೈರಂಧ್ರಿ, ಮಹಪೀಡೆ ಮಹಬ್ಲೂ ರಂಗಪ್ರಯೋಗ ನಡೆಸಿತ್ತು.

ನಾಟಕದ ಟಿಕೆಟ್ ಮತ್ತು ವಿವರಗಳಿಗೆ : www.prakasamtrust.org/va ಅಥವಾ ಕರೆ ಮಾಡಿ 9900012648

ಜಯದೇವ: ಆಂಜಿಯೋಪ್ಲಾಸ್ಟಿ ಕಾರ್ಯಾಗಾರ ಜೂ.12ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವತಿಯಿಂದ 200 ಮಂದಿಗೆ ಉಚಿತ ಸ್ಟೆಂಟ್ ಅಳವಡಿಸುವ ಆಂಜಿಯೋಪ್ಲಾಸ್ಟಿ ಕಾರ್ಯಾಗಾರವನ್ನು ಜೂನ್ 12ರಿಂದ 18 ರವರೆಗೆ ಹಮ್ಮಿಕೊಳ್ಳಲಾಗಿದೆ.

ಡಾ.ಗೋವಿಂದರಾಜು ಸುಬ್ರಮಣಿ ಹಾರ್ಟ್ ಫೌಂಡೇಷನ್ ಹಾಗೂ ಅಮೆರಿಕದ ಮೆಡ್‌ಟ್ರಾನಿಕ್ಸ್, ವಿಸ್ಕಿನ್‌ಸನ್ ಸಂಸ್ಥೆಗಳ ಸಹಯೋಗದಲ್ಲಿ ಈ ಕಾರ್ಯಾಗಾರ ನಡೆಯಲಿದೆ. ಜೂನ್ 12 ರಿಂದ 14ರ ವರೆಗೆ ಬೆಂಗಳೂರಿನಲ್ಲಿರುವ ಆಸ್ಪತ್ರೆಯ ಕೇಂದ್ರ ಕಚೇರಿ, 15 ಮತ್ತು 16ಕ್ಕೆ ಆಸ್ಪತ್ರೆಯ ಮೈಸೂರು ಶಾಖೆ, 17 ಮತ್ತು 18ಕ್ಕೆ ಆಸ್ಪತ್ರೆಯ ಕಲಬುರಗಿ ಶಾಖೆಯಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

'ಬಡ ರೋಗಿಗಳು ಹಾಗೂ ಬಿಪಿಎಲ್ ಕುಟುಂಬದ ಹಿರಿಯ ನಾಗರಿಕರಿಗಾಗಿ ಆಯೋಜಿಸಲಾಗಿದೆ. ಪ್ರತಿ ರೋಗಿಗೂ ಉನ್ನತಮಟ್ಟದ ಸ್ಟೆಂಟ್‌ಗಳನ್ನು ಉಚಿತವಾಗಿ ಅಳವಡಿಸಲಾಗುತ್ತದೆ. ಈಗಾಗಲೇ ಆ್ಯಂಜಿಯೋಗ್ರಾಂ ತಪಾಸಣೆಗೆ ಒಳಪಟ್ಟ ರೋಗಿಗಳು ಈ ಸೌಲಭ್ಯ ಪಡೆಯಬಹುದು. ರೋಗಿಗಳು ದಾಖಲಾತಿ ಸಂದರ್ಭದಲ್ಲಿ ಬಿಪಿಎಲ್ ಕಾರ್ಡ್ ಅಥವಾ ಆದಾಯ ಪ್ರಮಾಣ ಪತ್ರ ಹೊಂದಿರಬೇಕು. ಆಸಕ್ತರು ಜೂನ್ 8ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: ನಿರ್ದೇಶಕರ ಕಚೇರಿ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಜಯನಗರ 9ನೇ ಬ್ಲಾಕ್, ಮೊ. 9480827888 ಅಥವಾ 080-26944874

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. 07 UBL 2023-24
ದಿನಾಂಕ: 19.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ವೆಚ್ಚ
1	ಹುಬ್ಬಳ್ಳಿ ವಿಭಾಗ: **ಉಪ ಕಾಮಗಾರಿ I):** ಕರಂಜೋಲ್–ಸೋನಾಲಿಯಮ್ ವಿಭಾಗದಲ್ಲಿ ಕಿಮೀ 30/400–500, 33/400–500, 37/700–800 & 38/900–39/100 ರಲ್ಲಿ ವರ್ಟಿಕಲ್ ಕಟಿಂಗ್ ನಿಂದ ಬಂಡೆಗಳ ಬೀಳುವಿಕೆಯಿಂದ ಟ್ರ್ಯಾಕ್ ಅನ್ನು ರಕ್ಷಿಸಲು ಬೌಲ್ಡರ್ ನೆಟ್ಟಿಂಗ್ ಒದಗಿಸುವುದು. **ಉಪ ಕಾಮಗಾರಿ II):** ಲೋಂಡಾ–ವಾಸ್ಕೋ–ಡ–ಗಾಮಾ ವಿಭಾಗದಲ್ಲಿ ಸವೆತ ನಿಯಂತ್ರಣ ಜಿಯೋಮ್ಯಾಟ್ / ಟರ್ಫ್ ಬಲವರ್ಧನೆ ಮ್ಯಾಟ್ ವ್ಯವಸ್ಥೆ ಒದಗಿಸುವ ಮೂಲಕ ದುರ್ಬಲ ಕಟಿಂಗ್ ಸ್ಲೋಪ್ಸ್ ಸ್ಥಿರೀಕರಣ ಮತ್ತು ಕಿಮೀ 23/000–100, 31/200–300, 34/600–700 & 99/100–200 ರಲ್ಲಿ ಕ್ಯಾಚ್ ವಾಟರ್ ಡ್ರೈನ್ ಒದಗಿಸುವುದು. (ಎರಡು ಪ್ಯಾಕೆಟ್ ವ್ಯವಸ್ಥೆ).	ರೂ. 11,02,32,649/-
2	ಹುಬ್ಬಳ್ಳಿ ವಿಭಾಗ: ತಡವಾಳ ದಲ್ಲಿ 04 ಘಟಕಗಳ ಟೈಪ್–II ಕ್ವಾರ್ಟರ್‌ಗಳ ಉದ್ದೇಶಿತ ನಿರ್ಮಾಣ.	ರೂ. 89,58,695/-
3	ಹುಬ್ಬಳ್ಳಿ ವಿಭಾಗ: ಹೊಸಪೇಟೆ – ಹೊಸಪೇಟೆಯಲ್ಲಿ ಸಿಬ್ಬಂದಿ ಕ್ವಾರ್ಟರ್ಸ್ ಟೈಪ್–III – 02 ಘಟಕಗಳ ಉದ್ದೇಶಿತ ನಿರ್ಮಾಣ.	ರೂ. 59,91,358/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **16–06–2023, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನಿಯರ್/ಕೋ–ಆರ್ಡ್ ಹುಬ್ಬಳ್ಳಿ

PUB/110/AAV/PRB/SWR/2023-24

S.W.Railways SWRRLY SWRRLY

SANSERA ideas@work

SANSERA ENGINEERING LIMITED

CIN: L34103KA1981PLC004542

Registered Address: Plant-7, No.143/A, Jigani Link Road, Bommasandra Industrial Area, Bengaluru - 560105. **Phone:** 080 27839081/82/83; **Fax:** 080 27839309; **Email:** rajesh.modi@sansera.in; **Website:** www.sansera.in

CONSOLIDATED FINANCIAL RESULTS FOR THE QUARTER AND YEAR ENDED 31 MARCH 2023

(Rs. in Million except EPS)

Sl. No.	Particulars	Quarter ended		Year ended	
		31-03-2023 (Unaudited)	31-03-2022 (Unaudited)	31-03-2023 (Audited)	31-03-2022 (Audited)
1	Revenue from Operations	6,165.74	5,743.22	23,383.03	19,890.32
2	Net Profit/(Loss) for the period (before Tax, Exceptional and/or Extraordinary items)	486.03	526.20	2,032.32	1,783.68
3	Net Profit/(Loss) for the period before Tax (after Exceptional and/or Extraordinary items)	486.03	526.20	2,032.32	1,783.68
4	Net Profit/(Loss) for the period after Tax (after Exceptional and/or Extraordinary items)	354.20	373.60	1,483.42	1,318.89
5	Total Comprehensive Income For the period [comprising Profit/(Loss) for the priod (after tax) and other comprehensive Income (after tax)]	361.00	392.62	1,463.81	1,304.30
6	Equity Share Capital	105.86	104.31	105.86	104.31
7	Reserves (excluding Revaluation Reserve) as shown in the Audited balance Sheet of the previous year			11573.48	10,129.51
8	Earnings per share (of Rs. 2/- each)				
	1. Basic:	6.64	7.18	27.74	25.27
	2. Diluted:	6.53	6.97	27.17	24.36

Note:

a. The above is an extract of the detailed format of quarterly and year ended financial results filed with the stock exchanges under Regulation 33 of the SEBI (Listing and other Disclosure Requirements) Regulations, 2015. The full format of the unaudited quarterly and audited year ended financial results are available on the websites of the stock exchange(s) i.e., www.bseindia.com / www.nseindia.com and the Company i.e., www.sansera.in.

b. The above consolidated financial results of the Group were reviewed by the Audit Committee and approved by the Board of Directors at their meeting held on 22 May 2023. The financial results for the year ended 31 March 2023 have been audited and for the quarter ended 31 March 2023 have been reviewed by the statutory auditors and have issued an unmodified report.

c. Standalone financial information of the Company pursuant to regulation 47(1)(b) of SEBI (LODR) Regulations, 2015

(Rs. in Million)

Particulars	Quarter ended		Year ended	
	31-03-2023 (Unaudited)	31-03-2022 (Unaudited)	31-03-2023 (Audited)	31-03-2022 (Audited)
Revenue from Operations	5,471.94	5,106.99	20,900.95	17,450.04
Profit before Tax	500.91	547.43	2,026.31	1,715.09
Profit after Tax	372.87	407.79	1,502.00	1,281.57

For & on behalf of the Board of Directors
Sd/-
S. Sekhar Vasan
Chairman and Managing Director
DIN: 00361245

Date: 22 May 2023
Place: Bengaluru

ಗೈರಾದವರ ಹೆಸರುಗಳನ್ನು ಪದೇ ಪದೇ ಕರೆದ ಕಾರ್ಯದರ್ಶಿ, ಸಭಾಧ್ಯಕ್ಷರ ಬೇಸರ

ಪ್ರಮಾಣ ಸ್ವೀಕರಿಸದ ಹದಿನಾರು ಶಾಸಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯ ನೂತನ ಶಾಸಕರ ಪ್ರಮಾಣ ವಚನ ಸ್ವೀಕಾರದ ಎರಡನೇ ದಿನವಾದ ಮಂಗಳವಾರ ಪ್ರಮಾಣ ಸ್ವೀಕರಿಸಬೇಕಾದ 43 ಮಂದಿಯಲ್ಲಿ 16 ಶಾಸಕರು ಹಾಜರಾಗಲೇ ಇಲ್ಲ. ಕಲಾಪದಲ್ಲಿ ಭಾಗವಹಿಸಿದವರ ಸಂಖ್ಯೆಯೂ ಕಡಿಮೆ ಇತ್ತು.

ಜೆಡಿಎಸ್ ನಾಯಕರಾದ ಎಚ್.ಡಿ. ಕುಮಾರಸ್ವಾಮಿ ಮತ್ತು ಎಚ್.ಡಿ.ರೇವಣ್ಣ ಅವರ ಗೈರು ಎರಡನೇ ದಿನವೂ ಎದ್ದು ಕಾಣುತ್ತಿತ್ತು. ಕಾರ್ಯದರ್ಶಿಯವರು ಗೈರಾದವರ ಹೆಸರುಗಳನ್ನು ಪದೇ ಪದೇ ಕರೆದರು. ಬಳಿಕ ಕಲಾಪ ಮುಂದೂಡಲು ಹಂಗಾಮಿ ಸಭಾಧ್ಯಕ್ಷರಿಗೆ ಸಲಹೆ ನೀಡಿದರು.

ಈ ಬಗ್ಗೆ ಬೇಸರ ವ್ಯಕ್ತಪಡಿಸಿದ ಹಂಗಾಮಿ ಸಭಾಧ್ಯಕ್ಷ ಆರ್.ವಿ.ದೇಶಪಾಂಡೆ, ಈವರೆಗೆ 16 ಶಾಸಕರು ಪ್ರಮಾಣ ಸ್ವೀಕರಿಸಿಲ್ಲ. ನಾಳೆ (ಬುಧವಾರ) ಸಭಾಧ್ಯಕ್ಷರ ಚುನಾವಣೆ ಇದೆ. ಇವತ್ತು ಸಂಜೆಯ ಒಳಗೆ ಪ್ರಮಾಣ ಸ್ವೀಕರಿಸದಿದ್ದರೆ, ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ಪ್ರಮಾಣ ಸ್ವೀಕರಿಸಿದ ಹರೀಶ್ ಪೂಂಜಾ ಶ್ರೀರಾಮಚಂದ್ರನ ಹೆಸರಿನಲ್ಲಿ, ಲಕ್ಷ್ಮಿ ಹೆಬ್ಬಾಳ್ಕರ್ ಅವರು ಬಸವಣ್ಣ, ಮಹೇಶ್ ಟೆಂಗಿನಕಾಯಿ– ಮಹಾಕೂಟೇಶ್ವರ, ಮಾನಪ್ಪ ಡಿ ವಜ್ಜಲ್– ವೀರನಾಗಮ್ಮ, ರಿಜ್ವಾನ್ ಅರ್ಷದ್– ಸಂವಿಧಾನ, ಶರಣು ಸಲಗರ ಅವರು ಬಸವಣ್ಣ ಮತ್ತು ಛತ್ರಪತಿ ಶಿವಾಜಿ, ಎನ್.ಎಚ್. ಕೋನರಡ್ಡಿ– ರೈತರು, ಬಿ.ವೈ.ವಿಜಯೇಂದ್ರ– ಹುಚ್ಚೂರಾಯಸ್ವಾಮಿ, ಯಶವಂತ ಸುವರ್ಣ ಅವರು ಉಡುಪಿ ಶ್ರೀಕೃಷ್ಣ, ಗೋಮಾತೆ ಮತ್ತು ವಿಭುದೇಶ ಸ್ವಾಮೀಜಿ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದರು.

ಹಂಗಾಮಿ ಸಭಾಧ್ಯಕ್ಷರ ಸೂಚನೆ ಮೇರೆಗೆ ಮಂಗಳವಾರ ಸಂಜೆಯೊಳಗೆ ಸಭಾಧ್ಯಕ್ಷರ ಕೊಠಡಿಯಲ್ಲಿ 7 ಶಾಸಕರು ಪ್ರಮಾಣ ಸ್ವೀಕರಿಸಿದರು. ಉಳಿದ 9 ಶಾಸಕರು ಬುಧವಾರ ಸಭಾಧ್ಯಕ್ಷರ ಚುನಾವಣೆ ಪ್ರಕ್ರಿಯೆ ಮೊದಲೇ ಪ್ರಮಾಣ ಸ್ವೀಕರಿಸಲು ಸೂಚನೆ ನೀಡಲಾಗಿದೆ.

ಒಳ್ಳೆ ಸಮಯಕ್ಕಾಗಿ ಕಾದ ಕೋನರಡ್ಡಿ: ನವಲಗುಂದ ಶಾಸಕ ಎನ್.ಎಚ್. ಕೋನರಡ್ಡಿ ಅವರನ್ನು ಪ್ರಮಾಣ ವಚನ ಸ್ವೀಕರಿಸಲು ಕಾರ್ಯದರ್ಶಿಯವರು ಕರೆದಾಗ ಅವರು ಬರಲಿಲ್ಲ. 'ಹತ್ತು ನಿಮಿಷದ ಬಳಿಕ ಪ್ರಮಾಣ ತೆಗೆದುಕೊಳ್ಳುತ್ತೇನೆ' ಎಂದು ಹೇಳಿದರು. 'ಎನ್ ಟೈಮ್ ನೋಡ್ತಿದ್ದೀಯಾ, ಎಲ್ಲರೂ ತಗೊಂಡಿದ್ದಾರೆ. ಎಲ್ಲವೂ ಟೈಮೂ ಒಳ್ಳೆಯದೆ' ಎಂದು ಸಿದ್ದರಾಮಯ್ಯ ಹೇಳಿದರು. ಆದರೂ ಕೋನರಡ್ಡಿ ತಡವಾಗಿಯೇ ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನಸೌಧಕ್ಕೆ ಮಂಗಳವಾರ ಆಗಮಿಸಿದ ನೂತನ ಶಾಸಕ ಮಧು ಬಂಗಾರಪ್ಪ ಅವರೊಂದಿಗೆ ಮಾತುಕತೆಯಲ್ಲಿ ತೊಡಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ –ಪ್ರಜಾವಾಣಿ ಚಿತ್ರ

ಸವದಿಗೆ ಶಹಬ್ಬಾಸ್

ಅಥಣಿ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಕೈತಪ್ಪಿದ ಬಳಿಕ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಗೆದ್ದು ಬಂದಿರುವ ಲಕ್ಷ್ಮಣ ಸವದಿ ಅವರ ಸಾಧನೆಯನ್ನು ಬಿಜೆಪಿ ಶಾಸಕರೇ ಕೊಂಡಾಡಿದರು. 'ನೀವು ನಾಯಕ...' ಎಂದು ಶಹಬ್ಬಾಸ್ ನೀಡಿದರು.

ಮಂಗಳವಾರ ವಿಧಾನಸಭೆಯ ಮೊಗಸಾಲೆಯಲ್ಲಿ ಸವದಿ ಅವರಿಗೆ ವಿ. ಸುನಿಲ್ ಕುಮಾರ್, ಬಾಲಚಂದ್ರ ಜಾರಕಿಹೊಳಿ ಸೇರಿದಂತೆ ಬಿಜೆಪಿಯ ಕೆಲವು ಶಾಸಕರು ಎದುರಾದರು. 'ನಾಯಕರೇ ಚಲೋ ಇದ್ದೀರಾ' ಎಂದು ಬಾಲಚಂದ್ರ ಕೇಳಿದರು. ಮಾತು ಅಥಣಿ ಕ್ಷೇತ್ರದ ಚುನಾವಣೆಯತ್ತ ಹೊರಳಿತು. 'ದೊಡ್ಡ ಗೆಲುವು. ನೀವು ನಿಜವಾದ ನಾಯಕ' ಎಂದು ಬಿಜೆಪಿ ಶಾಸಕರು ಹೇಳಿದರು.

ವಿಜಯೇಂದ್ರ ಬೆನ್ನು ತಟ್ಟಿದ ಸಿ.ಎಂ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಿಕಾರಿಪುರದ ನೂತನ ಶಾಸಕ ಬಿ.ವೈ. ವಿಜಯೇಂದ್ರ ಅವರ ಬೆನ್ನುತಟ್ಟಿ ಕುಶಲೋಪರಿ ವಿಚಾರಿಸಿದರು. ಪ್ರಮಾಣ ಸ್ವೀಕರಿಸಲು ಒಳಗೆ ಬರುವಾಗಲೇ ಎದುರಾದ ಸಿದ್ದರಾಮಯ್ಯ ಅವರ ಬಳಿಗೆ ಹೋದ ವಿಜಯೇಂದ್ರ, ಕೈ ಮುಗಿದರು.

ವಿಧಾನಸಭೆಯೊಳಗೂ ಅವರು ಆಡಳಿತ ಮತ್ತು ವಿರೋಧ ಪಕ್ಷದ ಸಾಲಿನಲ್ಲಿದ್ದ ಎಲ್ಲ ಹಿರಿಯರು ಮತ್ತು ಕಿರಿಯ ಶಾಸಕರ ಬಳಿಗೆ ಹೋಗಿ ಮಾತನಾಡಿಸಿ, ಅಭಿನಂದಿಸಿದರು. ವಿಧಾನಸಭೆಗೆ ಬರುವಾಗ ಮೆಟ್ಟಿಲುಗಳಿಗೆ ನಮಸ್ಕರಿಸಿದರು.

ಸುಧಾಕರ್ ಸೋಲಿನದ್ದೇ ಚರ್ಚೆ

ಮಾಜಿ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಈ ವಿಧಾನಸಭಾ ಚುನಾವಣೆಯಲ್ಲಿ ಸೋತಿರುವ ಕುರಿತು ವಿಧಾನಸಭೆಯ ವಿರೋಧ ಪಕ್ಷದ ಮೊಗಸಾಲೆಯಲ್ಲಿ ಮಂಗಳವಾರ ಹೆಚ್ಚು ಚರ್ಚೆಯಾಗುತ್ತಿತ್ತು.

ಬಿಜೆಪಿ ಶಾಸಕರಲ್ಲೇ ಸುಧಾಕರ್ ಸೋಲಿನ ಕುರಿತು ವಿಶ್ಲೇಷಣೆ ನಡೆಯುತ್ತಿತ್ತು. ಆರೋಗ್ಯ ಇಲಾಖೆಯಲ್ಲಿನ ಆಡಳಿತ ವೈಖರಿ, ಕೋವಿಡ್ ಅವಧಿಯಲ್ಲಿನ ಭ್ರಷ್ಟಾಚಾರದ ಆರೋಪಗಳು ಮತ್ತಿತರ ಅಂಶಗಳೇ ಮಾಜಿ ಸಚಿವರ ಸೋಲಿಗೆ ಕಾರಣ ಎಂದು ಕೆಲವು ಶಾಸಕರು ಚರ್ಚೆಯಲ್ಲಿ ತೊಡಗಿದ್ದರು.

'ಈ ಚುನಾವಣೆಯಲ್ಲಿ ಬಿಜೆಪಿ ಭಾರಿ ಹಿನ್ನಡೆ ಅನುಭವಿಸಲು ಸುಧಾಕರ್ ಪ್ರಮುಖ ಕಾರಣ' ಎಂದು ಸಂಪುಟದಲ್ಲಿ ಅವರ ಒಡನಾಡಿಯಾಗಿದ್ದ ಶಾಸಕರೊಬ್ಬರು ಹೇಳಿದ್ದು ಕೇಳಿ ಬಂತು.

ಶಿವರಾಜ್ ಕುಮಾರ್ ದಂಪತಿ ಭೇಟಿಯಾದ ಸುರ್ಜೇವಾಲಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಶಿವರಾಜ್ ಕುಮಾರ್ ಅವರನ್ನು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮಂಗಳವಾರ ಬೆಳಿಗ್ಗೆ ಭೇಟಿ ಮಾಡಿ ಮಾತುಕತೆ ನಡೆಸಿದರು.

ಮಾನ್ಯತಾ ಟೆಕ್ ಪಾರ್ಕ್‌ನಲ್ಲಿರುವ ಶಿವರಾಜ್ ಕುಮಾರ್ ನಿವಾಸಕ್ಕೆ ತೆರಳಿದ ಸುರ್ಜೇವಾಲಾ, ಶಿವರಾಜ್ ಕುಮಾರ್–ಗೀತಾ ಶಿವರಾಜ್ ಕುಮಾರ್ ದಂಪತಿಗೆ ಶುಭಾಶಯ ಕೋರಿದರು.

ಸಿದ್ದರಾಮಯ್ಯ, ಜಗದೀಶ ಶೆಟ್ಟರ್ ಸೇರಿದಂತೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಪರ ಶಿವರಾಜ್ ಕುಮಾರ್ ದಂಪತಿ ಪ್ರಚಾರ ಮಾಡಿದ್ದರು.

ಸಂಪುಟ ಸೇರಿದ ಸಚಿವರ ಮೊದಲ ಪಟ್ಟಿಯಲ್ಲಿ ಸ್ಥಾನ ಸಿಗದ ಕಾರಣಕ್ಕೆ ಗೀತಾ ಶಿವರಾಜ್ ಕುಮಾರ್ ಸಹೋದರ, ಸೊರಬ ಕ್ಷೇತ್ರದ ಶಾಸಕ ಮಧು ಬಂಗಾರಪ್ಪ ಅವರು ತಮ್ಮ ಆಪ್ತರ ಬಳಿ ಅಸಮಾಧಾನ ವ್ಯಕ್ತಪಡಿಸಿದ್ದರು. ಅವರು ಹೊಸ ಸರ್ಕಾರದ ಪ್ರಮಾಣವಚನ ಕಾರ್ಯಕ್ರಮಕ್ಕೂ ಗೈರಾಗಿದ್ದರು. ಶಿವರಾಜ್ ಕುಮಾರ್ ಕೂಡಾ ಬೇಸರಗೊಂಡಿದ್ದರು ಎನ್ನಲಾಗಿತ್ತು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಮಧು ಬಂಗಾರಪ್ಪ, 'ಸಚಿವ ಸ್ಥಾನ ನೀಡುವುದು ವರಿಷ್ಠರಿಗೆ ಬಿಟ್ಟ ವಿಚಾರ. ಸಚಿವ ಸ್ಥಾನ ನಾನು ಕೇಳಿಯೂ ಇಲ್ಲ, ಅವರು (ವರಿಷ್ಠರು) ಹೇಳಿಯೂ ಇಲ್ಲ' ಎಂದರು.

'ನಾನು ಪ್ರಣಾಳಿಕೆ ಸಮಿತಿಯ ಉಪಾಧ್ಯಕ್ಷನಾಗಿದ್ದೆ. ನಾವು ಕೊಟ್ಟಿರುವ ಗ್ಯಾರಂಟಿಗಳನ್ನು ಈಡೇರಿಸುವುದು ಈಗ ನಮ್ಮ ಕರ್ತವ್ಯ' ಎಂದರು.

ಶಿವರಾಜ್ ಕುಮಾರ್ ದಂಪತಿಯನ್ನು ಭೇಟಿಯಾದ ರಣದೀಪ್ ಸಿಂಗ್ ಸುರ್ಜೇವಾಲಾ ಶುಭಾಶಯ ಕೋರಿದರು

ಐವರಿಗೆ ಸಚಿವ ಸ್ಥಾನ: ಪಂಚಮಸಾಲಿಗಳ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಮಸಾಲಿ ಮೀಸಲಾತಿಗಾಗಿ ಹೋರಾಟ ನಡೆಸಿದ ಐವರು ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಪಂಚಮಸಾಲಿ ರಾಜ್ಯ ಕಾರ್ಯಕಾರಿಣಿ ಸಭೆ ಒತ್ತಾಯಿಸಿದೆ.

ಮಂಗಳವಾರ ಇಲ್ಲಿ ನಡೆದ ಸಭೆಯಲ್ಲಿ ಶಾಸಕರಾದ ವಿಜಯಾನಂದ ಕಾಶಪ್ಪನವರ, ವಿನಯ ಕುಲಕರ್ಣಿ, ಲಕ್ಷ್ಮಿ ಹೆಬ್ಬಾಳ್ಕರ್ ಸೇರಿ ಒಟ್ಟು ಐವರು ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ನಿರ್ಣಯ ತೆಗೆದುಕೊಳ್ಳಲಾಯಿತು. ಅಲ್ಲದೆ, ರಾಜ್ಯ ಬಿಜೆಪಿಯಲ್ಲಿ ಅಧ್ಯಕ್ಷ ಅಥವಾ ವಿರೋಧ ಪಕ್ಷದ ಸ್ಥಾನಕ್ಕೆ ಪಂಚಮಸಾಲಿ ಶಾಸಕರಿಗೆ ಅವಕಾಶ ನೀಡಬೇಕು ಎಂದು ಸಭೆ ಒತ್ತಾಯಿಸಿದೆ.

ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಜಯಮೃತ್ಯುಂಜಯ ಸ್ವಾಮೀಜಿ, ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಮತ್ತು ಶಾಸಕ ವಿಜಯಾನಂದ ಕಾಶಪ್ಪನವರ, ಶಾಸಕರಾದ ವಿನಯ ಕುಲಕರ್ಣಿ, ಲಕ್ಷ್ಮಿ ಹೆಬ್ಬಾಳ್ಕರ್, ರಾಜುಕಾಗೆ, ರಾಜುಗೌಡ ಪಾಟೀಲ, ಅಶೋಕ ಮನಗೂಳಿ, ಬಾಬಾ ಸಾಹೇಬ್ ಪಾಟೀಲ, ನಂದಿಹಳ್ಳಿ ಹಾಲಪ್ಪ ಭಾಗವಹಿಸಿದ್ದರು.

ಪ್ರವಾಸೋದ್ಯಮ: ಕಾಶ್ಮೀರದಲ್ಲಿ ಜಿ 20 ಸಭೆ ಆರಂಭ

ಶ್ರೀನಗರ (ಪಿಟಿಐ): 'ಆರ್ಥಿಕತೆ, ಪರಿಸರ ಮತ್ತು ಸಮಾಜವನ್ನು ಕೇಂದ್ರವಾಗಿಸಿ ಜಾಗತಿಕ ಹೊಣೆ ನಿಭಾಯಿಸಲು ಭಾರತ ಸನ್ನದ್ಧವಾಗಿದೆ' ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಮಂಗಳವಾರ ಹೇಳಿದರು.

ಜಿ 20 ಶೃಂಗದ ಸದಸ್ಯ ರಾಷ್ಟ್ರಗಳ ಪ್ರವಾಸೋದ್ಯಮ ಕುರಿತ ಮೂರನೇ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಾಂಪ್ರದಾಯಿಕ ಪರಂಪರೆ, ಮತ್ತು ಆಧುನಿಕ ತಂತ್ರಜ್ಞಾನ, ಮೂಲಸೌಕರ್ಯಗಳಿರುವ ವಿಶೇಷ ಸ್ಥಳವಾಗಿರುವ ಕಾರಣ ಶ್ರೀನಗರದಲ್ಲಿ ಜಿ 20 ಶೃಂಗಸಭೆ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

'ರಮಣೀಯ ತಾಣವಾಗಿರುವ ಶ್ರೀನಗರದಲ್ಲಿ ನಾವುಗಳು ಇಂದು ಭೇಟಿಯಾಗುತ್ತಿರುವ ಈ ಹೊತ್ತಿನಲ್ಲಿ, ನಾವುಗಳೆಲ್ಲರೂ ಈ ಜಗತ್ತಿನ ಭಾಗ ಎಂಬುದನ್ನು ಆಳವಾಗಿ ಅರಿತುಕೊಳ್ಳಬೇಕಾಗಿದೆ. ಪ್ರಧಾನಿ ಮೋದಿ ನೇತೃತ್ವದಲ್ಲಿ ಭಾರತದ ನಿಲುವು ಈ ವಿಷಯದಲ್ಲಿ ಸ್ಪಷ್ಟವಾಗಿದೆ' ಎಂದರು.

ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮಾತನಾಡಿ, ಜಮ್ಮುಕಾಶ್ಮೀರವು ಈಗ ಹೊಸ ಯುಗಕ್ಕೆ ಸಾಕ್ಷಿಯಾಗಿದೆ' ಎಂದರು.

ಪರಿಸರ ಸಂರಕ್ಷಣೆಗೆ 'ಆಲ್ಟರ್ನೇಟಿವ್'

ವಿನಯ್ ಶಿಂಧೆ

ಬೆಂಗಳೂರು: ವಿಶ್ವ ಪರಿಸರ ದಿನದ ಪ್ರಯುಕ್ತ ನಗರದ ವಿ ಮೊವ್ ಫೌಂಡೇಷನ್ ಜೂನ್ 5ರಂದು ಬೆಳಿಗ್ಗೆ 11 ಗಂಟೆಗೆ ನ್ಯೂ ಹಾರಿಜನ್ ಎಂಜಿನಿಯರಿಂಗ್ ಕಾಲೇಜಿನಲ್ಲಿ 'ಆಲ್ಟರ್ನೇಟಿವ್ 23' (ಪರ್ಯಾಯ) ಶೀರ್ಷಿಕೆಯಡಿ ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಈ ಕಾರ್ಯಕ್ರಮಗಳು ಫೌಂಡೇಷನ್‌ನ ಸಂಸ್ಥಾಪಕ ವಿನಯ್ ಶಿಂಧೆ ನೇತೃತ್ವದಲ್ಲಿ ನಡೆಯಲಿವೆ. ಆನ್‌ಲೈನ್‌ನಲ್ಲಿಯೂ ಕಾರ್ಯಕ್ರಮದ ನೇರ ಪ್ರಸಾರ ಇರಲಿದೆ.

'ಯುವಜನರಲ್ಲಿ ಪರಿಸರ ಕಾಳಜಿ ದೇಶೀಯ ಉತ್ಪನ್ನಗಳನ್ನು ಪ್ರೋತ್ಸಾಹಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶ. ಸಾವಿರಕ್ಕೂ ಅಧಿಕ ಯುವಜನರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಪರಿಸರವಾದಿಗಳು, ಸೆಲೆಬ್ರಿಟಿಗಳು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುತ್ತಾರೆ' ಎಂದು ವಿನಯ್ ಶಿಂಧೆ ತಿಳಿಸಿದ್ದಾರೆ.

ಲೋಕ ಕಲ್ಯಾಣಾರ್ಥ ಶತಚಂಡಿಕಾ ಯಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರದ ದಿನೇಶ್ ಗುರೂಜಿ ಅವರು ಲೋಕ ಕಲ್ಯಾಣಾರ್ಥ ಹೊಸಕೆರೆ ಹಳ್ಳಿಯಲ್ಲಿರುವ ಭೈರಪ್ಪ ಬಡಾವಣೆಯ ಶ್ರೀ ವಿಜಯಶ್ರೀ ಯಾಗಶಾಲೆಯಲ್ಲಿ ಶತಚಂಡಿಕಾ ಮಹಾಯಾಗ ಹಮ್ಮಿಕೊಂಡಿದ್ದಾರೆ.

ಈ ಯಾಗ ಇದೇ 21ರಿಂದ ಪ್ರಾರಂಭವಾಗಿದ್ದು, 28ರವರೆಗೆ ನಡೆಯಲಿದೆ. ಪ್ರತಿ ದಿನ ಬೆಳಿಗ್ಗೆ 7 ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಮಧ್ಯಾಹ್ನ 1 ಗಂಟೆಗೆ ತೀರ್ಥ ಪ್ರಸಾದ ವಿತರಣೆ ನಡೆಯಲಿದೆ. ಸಂಜೆ 5 ಗಂಟೆಯಿಂದ ಜಪ, ಮಹಾಪೂಜೆ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಂಕಲ್ಪ, ಅನ್ನದಾನ, ಕಲಶ ಸೇರಿ ವಿವಿಧ ಸೇವೆ ಮಾಡಬಹುದಾಗಿದೆ. ದಿನೇಶ್ ಗುರೂಜಿ ಅವರು ಪಟ್ಟಣಗೆರೆಯ 'ಶ್ರೀಸನ್ನಿಧಾನ–ಆತ್ಮೀಯರ ಅರಮನೆ' ವಿಜಯಾದುರ್ಗಾ ಪರಮೇಶ್ವರಿ ಅಮ್ಮನವರ ಆರಾಧಕರಾಗಿದ್ದಾರೆ. ಎಲ್ಲ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರು ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ನಿಲುವು' ರಾಜ್ಯಮಟ್ಟದ ವಿಚಾರಸಂಕಿರಣ: ಅತಿಥಿಗಳು: ಅಮರೇಶ ನುಗಡೋಣಿ, ಮಮತಾ ಜಿ. ಸಾಗರ್, ಅಧ್ಯಕ್ಷತೆ: ಆರ್. ಉಪೇಂದ್ರ ಶೆಟ್ಟಿ, ಉಪಸ್ಥಿತಿ: ಸರಸ್ವತಿ ಕುಂಬಾಳೆ, ಆಯೋಜನೆ ಮತ್ತು ಸ್ಥಳ: ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಶನ್, ಕೋಲೂರು ಗ್ರಾಮ, ತಾವರೆಕೆರೆ ಹೋಬಳಿ, ಬೆಳಿಗ್ಗೆ 10ರಿಂದ

'ರುಕ್ಮಿಣೀಶ ವಿಜಯ' ಪ್ರವಚನ: ಬ್ರಹ್ಮಣ್ಯಾಚಾರ್ ಭಾವೀಸಮೀರ, ಆಯೋಜನೆ ಮತ್ತು ಸ್ಥಳ: ಗೀತಾ ಮಂದಿರ ಟ್ರಸ್ಟ್, ಶ್ರೀರಾಮಪುರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಹಿಂದಿನ ಹೆಸರು ಕರ್ನಾಟಕ ಭೂ ಸೇನಾ ನಿಗಮ ನಿಯಮಿತ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು, ಕರ್ನಾಟಕ – 560 009

ಕೆಆರ್‌ಐಡಿಎಲ್ ಸಂಸ್ಥೆಯು ಸಾರ್ವಜನಿಕ ವಲಯದ ಬ್ಯಾಂಕ್ / ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ / ಖಾಸಗಿ ವಲಯದ ಬ್ಯಾಂಕ್‌ಗಳಿಂದ ಒಂದು ವರ್ಷದ ಅವಧಿಗೆ ಸುಮಾರು **ರೂ.435.00 ಕೋಟಿಗಳನ್ನು** ನಿಶ್ಚಿತ ಠೇವಣಿಯಲ್ಲಿ ಹೂಡಲು ಇ–ಬಿಡ್ ಮೂಲಕ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **www.kppp.karnataka.gov.in** ರಲ್ಲಿ **22–05–2023** ರಿಂದ ಪಡೆಯಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
(ಸಂಚಾರ ಶಾಖೆ) ತುಮಕೂರು ವಿಭಾಗ: ತುಮಕೂರು – 572106

ಸಂ: ಕರಾಸಾ/ತುವಿ/ಸಂ/ವಾ/ಇ–ಟೆಂ/ಹ&ಟೆಂ/398/399/400/2023–24 ದಿನಾಂಕ:19.05.2023

ಇ–ಟೆಂಡರ್ & ಸಂಧಾನ ಪ್ರಕಟಣೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ತುಮಕೂರು ವಿಭಾಗದ ವ್ಯಾಪ್ತಿಗೆ ಬರುವ **ಗುಬ್ಬಿ, ಕುಣಿಗಲ್, ಅಮೃತೂರು, ತುರುವೇಕೆರೆ, ಸಿ.ಎಸ್.ಪುರ, ಕಡಬ, ತಿಪಟೂರು, ಕೊರಟಗೆರೆ, ಸಿರಾ, ಮಧುಗಿರಿ ಮತ್ತು ತುಮಕೂರು** ತಾತ್ಕಾಲಿಕ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ / ಖಾಲಿಯಾಗಲಿರುವ ಮತ್ತು ಹೊಸ ವಾಣಿಜ್ಯ ಮಳಿಗೆಗಳಿಗೆ ಹಾಗೂ ಜಾಹೀರಾತು ಪ್ಯಾಕೇಜ್‌ಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು **"ಇ–ಟೆಂಡರ್ ಮತ್ತು ಸಂಧಾನ"** ಪ್ರಕಟಣೆಗಳನ್ನು ಹೊರಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು **ದಿನಾಂಕ: 12.06.2023ರ ಸಂಜೆ 5:00 ಗಂಟೆಯೊಳಗಾಗಿ** ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ತುಮಕೂರು ವಿಭಾಗ, ಮಧುಗಿರಿ ಮುಖ್ಯರಸ್ತೆ, ಎ.ಪಿ.ಎಂ.ಸಿ ಮಾರ್ಕೆಟ್ ಹತ್ತಿರ, ಅಂತರಸನಹಳ್ಳಿ, ತುಮಕೂರು–572106**ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ಮೊಬೈಲ್ ಸಂಖ್ಯೆ: **7760990902 (ವಿಭಾಗೀಯ ಸಂಚಲನಾಧಿಕಾರಿಗಳು).**

ಸಹಿ/–
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ
ತುಮಕೂರು ವಿಭಾಗ, ತುಮಕೂರು.

ವಾಸಾಸಂಇ/ವಾಪ್ರ/ಜೆಎ/100/2023–24

ಸಂಕ್ಷಿಪ್ತ ಸುದ್ದಿ

ರಸಪ್ರಶ್ನೆ: ಪಿಇಎಸ್ ವಿದ್ಯಾರ್ಥಿ ಪ್ರಥಮ

ಚಂದ್ರಚೂಡ್

ಬೆಂಗಳೂರು: ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ನಡೆಸಿದ ತಂತ್ರಜ್ಞಾನ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಪಿಇಎಸ್ ವಿಶ್ವವಿದ್ಯಾಲಯದ ಚಂದ್ರಚೂಡ್ ಜೆ. ಪ್ರಥಮ ಸ್ಥಾನ ಪಡೆದಿದ್ದಾರೆ. ಇದರೊಂದಿಗೆ ಒಟ್ಟು ₹ 1 ಲಕ್ಷ ಶಿಷ್ಯ ವೇತನ ಪಡೆದುಕೊಂಡಿದ್ದಾರೆ.

ಈ ಸ್ಪರ್ಧೆ ಎರಡು ವಿಭಾಗದಲ್ಲಿ ನಡೆದಿತ್ತು. ಬೆಂಗಳೂರು ಪ್ರಾದೇಶಿಕ ಸುತ್ತಿನಲ್ಲಿ ನಗರದ ವಿವಿಧ ಕಾಲೇಜುಗಳಿಂದ 400ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇವರಿಗೆ 20 ಪ್ರಶ್ನೆಗಳನ್ನು ಒಳಗೊಂಡ ಲಿಖಿತ ಪರೀಕ್ಷೆಯನ್ನು ನಡೆಸಲಾಗಿತ್ತು. ಅಧಿಕ ಅಂಕ ಪಡೆದ 8 ಮಂದಿಯನ್ನು ಅಂತಿಮ ಸುತ್ತಿಗೆ ಆಯ್ಕೆ ಮಾಡಲಾಗಿತ್ತು. ಇವರಲ್ಲಿ ಪಿಇಎಸ್ ವಿಶ್ವವಿದ್ಯಾಲಯದ ಎಲೆಕ್ಟ್ರಾನಿಕ್ಸ್ ವಿಭಾಗದ 8ನೇ ಸೆಮಿಸ್ಟರ್ ವಿದ್ಯಾರ್ಥಿ ಚಂದ್ರಚೂಡ್ ಪ್ರಥಮ ಸ್ಥಾನ ಪಡೆದರು ಎಂದು ಆಯೋಜಕರು ತಿಳಿಸಿದ್ದಾರೆ.

ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ವಿವಿಧ ನಗರಗಳಿಂದ ವಿಜೇತ ಅಭ್ಯರ್ಥಿಗಳು ಪಾಲ್ಗೊಂಡಿದ್ದರು. ಅಂತಿಮ ಸುತ್ತಿನಲ್ಲಿ ಚಂದ್ರಚೂಡ್ ಪ್ರಥಮ ಸ್ಥಾನ ಪಡೆದುಕೊಂಡರು. ಪ್ರಾದೇಶಿಕ ಸುತ್ತಿನಲ್ಲಿ ಪ್ರಥಮ ಸ್ಥಾನ ಪಡೆದಿದ್ದಕ್ಕೆ ₹ 15 ಸಾವಿರ ಹಾಗೂ ರಾಜ್ಯ ಮಟ್ಟದಲ್ಲಿ ಮೊದಲ ಸ್ಥಾನ ಪಡೆದಿದ್ದಕ್ಕೆ ₹ 85 ಸಾವಿರ ಶಿಷ್ಯ ವೇತನ ಪಡೆದಿದ್ದಾರೆ ಎಂದು ಆಯೋಜಕರು ಹೇಳಿದ್ದಾರೆ.

ವಿದ್ಯಾರ್ಥಿಯ ಸಾಧನೆಗೆ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಎಂ.ಆರ್.ದೊರೆಸ್ವಾಮಿ ಅಭಿನಂದಿಸಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬೆಸ್ಕಾಂ ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಹಿನ್ನೆಲೆಯಲ್ಲಿ ಇದೇ 24 ರಂದು ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಎಚ್.ಬಿ.ಆರ್ 1ನೇ ಬ್ಲಾಕ್, 2ನೇ ಬ್ಲಾಕ್, ಯಾಸಿನ್ ನಗರ, ಸುಭಾಶ್ ಲೇಔಟ್, ರಾಮದೇವಸ್ಥಾನದ ರಸ್ತೆ, ರಾಮದೇವ್ ಗಾರ್ಡನ್, ಕೃಷ್ಣ ರೆಡ್ಡಿ ಲೇಔಟ್, ಟೀಚರ್ಸ್ ಕಾಲೋನಿ, ಎಚ್.ಬಿ.ಆರ್ 3ನೇ ಬ್ಲಾಕ್, ಶಿವರಾಮಯ್ಯ ಲೇಔಟ್, ರಿಂಗ್ ರಸ್ತೆ, ಸರ್ವೀಸ್ ರಸ್ತೆ, ಕೆ.ಕೆ.ಹಳ್ಳಿ ಗ್ರಾಮ, ಜಾನಕೀರಾಮ್ ಲೇಔಟ್, ಕನಕದಾಸ ಲೇಔಟ್, ಫರೀದಾ ಶೂ ಫ್ಯಾಕ್ಟರಿ, ಕೆ.ಜಿ.ಹಳ್ಳಿ, ವಿನೋಬನಗರ, ಬಿ.ಎಂ. ಲೇಔಟ್, ಆರೋಗ್ಯಮ್ಮ ಲೇಔಟ್, ಕಾವೇರಿ ಗಾರ್ಡನ್, ಎಚ್.ಬಿ.ಆರ್ 4ನೇ ಬ್ಲಾಕ್, ಯಾಸಿನ್ ನಗರ, 5ನೇ ಬ್ಲಾಕ್, ಹೆಚ್.ಬಿ.ಆರ್, ನಾಗವಾರ ಮುಖ್ಯರಸ್ತೆ, ಎನ್.ಜೆ.ಕೆ.ಗಾರ್ಮೆಂಟ್ಸ್, ಥಣಿಸಂದ್ರ, ಆರ್.ಕೆ. ಹೆಗಡೆನಗರ, ಕೆ.ನಾರಾಯಣಪುರ, ಎನ್.ಎನ್. ಹಳ್ಳಿ, ರೈಲ್ವೆ ಮೆನ್ಸ್ ಲೇಔಟ್, ಬಿ.ಡಿ.ಎಸ್ ಲೇಔಟ್, ಹೆಣ್ಣೂರು ಮುಖ್ಯರಸ್ತೆಯಲ್ಲಿ ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅಂಡರ್‌ಪಾಸ್‌ಗಳಲ್ಲಿ ನೀರು ಸಂಗ್ರಹ • ಹೊಳೆಯಂತಾದ ರಸ್ತೆಗಳು • ಹಲವೆಡೆ ಮರಗಳು ಬಿದ್ದು ಸಂಚಾರ ಅಸ್ತವ್ಯಸ್ತ

ನಗರದಲ್ಲಿ ಮತ್ತೆ ಗಾಳಿ, ಮಳೆ ಅಬ್ಬರ

ಪ್ರಜಾವಾಣಿ ವಾರ್ತೆ

ನಗರದ ವಿಜಯಮಲ್ಯ ರಸ್ತೆಯಲ್ಲಿ ಮಂಗಳವಾರ ಸುರಿದ ಮಳೆಯಲ್ಲಿ ಸಾಗಿದ ವಾಹನಗಳು ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದಲ್ಲಿ ಮಂಗಳವಾರ ರಾತ್ರಿಯೂ ಬಿರುಗಾಳಿ ಸಹಿತ ಧಾರಾಕಾರ ಮಳೆಯಾಗಿದೆ. ಕೆಲವು ಭಾಗದಲ್ಲಿ ಮರಗಳು ಧರೆಗುರುಳಿದ್ದು ಸಂಚಾರ ಅಸ್ತವ್ಯಸ್ತಗೊಂಡಿತ್ತು. ರಾತ್ರಿ 7 ಗಂಟೆಯ ತನಕವೂ ಮಳೆ ಬರುವ ಮುನ್ಸೂಚನೆ ಇರಲಿಲ್ಲ. ರಾತ್ರಿ 8.30ರ ಸುಮಾರಿಗೆ ಧಾರಾಕಾರ ಮಳೆಯಾಗಿದೆ.

ರಸ್ತೆಯಲ್ಲಿದ್ದ ಬೈಕ್ ಸವಾರರು ಹಾಗೂ ಕಾರು ಚಾಲಕರು ಗಾಳಿಯ ಅಬ್ಬರಕ್ಕೆ ಬೆಚ್ಚಿಬಿದ್ದರು. ಬೈಕ್ ಸವಾರರು ಗಾಳಿಗೆ ಹೆದರಿ ಬೈಕ್‌ಗಳನ್ನು ರಸ್ತೆ ಬದಿಗೆ ನಿಲ್ಲಿಸಿ ಬಸ್ ಶೆಲ್ಟರ್, ಮಳಿಗೆ ಎದುರು ಆಶ್ರಯ ಪಡೆದುಕೊಂಡರು.

ದಿಢೀರ್ ಸುರಿದ ಮಳೆಯಿಂದ ರಸ್ತೆಗಳು, ಚರಂಡಿಗಳಲ್ಲಿ ಹೊಳೆಯಂತೆ ನೀರು ಹರಿಯಿತು. ಅಂಡರ್ ಪಾಸ್‌ಗಳಲ್ಲಿ ಮಂಗಳವಾರ ರಾತ್ರಿಯೂ ನೀರು ಸಂಗ್ರಹಗೊಂಡು ವಾಹನ ಸಂಚಾರಕ್ಕೆ ಅಡ್ಡಿ ಉಂಟಾಯಿತು.

ಚಾಮರಾಜಪೇಟೆ, ಅಶೋಕನಗರ, ಹಲಸೂರು, ದೊಡ್ಡಬೊಮ್ಮಸಂದ್ರ, ಕೆ.ಆರ್.ಮಾರುಕಟ್ಟೆ, ಚಿಕ್ಕಪೇಟೆ, ಮೆಜೆಸ್ಟಿಕ್, ಗಾಂಧಿನಗರ, ದೀಪಾಂಜಲಿ ನಗರ, ಕಾಮಾಕ್ಷಿಪಾಳ್ಯ, ಮಲ್ಲೇಶ್ವರ, ವಿಜಯನಗರ, ಎಂ.ಜಿ. ರಸ್ತೆ, ಗಿರಿನಗರ, ಹನುಮಂತನಗರ, ಜಯನಗರ, ಬನಶಂಕರಿ, ಶಿವಾಜಿನಗರ, ಕೋರಮಂಗಲ, ವಿವೇಕನಗರ, ಇಂದಿರಾನಗರ, ವಸಂತನಗರ, ಸಂಪಂಗಿ ರಾಮನಗರ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾಗಿದೆ.

ಮತ್ತಿಕೆರೆ, ವಿದ್ಯಾರಣ್ಯಪುರ, ಬಿಇಎಲ್ ವೃತ್ತದಲ್ಲಿ ಮರದ ಕೊಂಬೆಗಳು ಬಿದ್ದಿವೆ. ನಾಗಸಂದ್ರ, ಜಾಲಹಳ್ಳಿ, ಪೀಣ್ಯ, ಪೀಣ್ಯ ಕೈಗಾರಿಕಾ ಪ್ರದೇಶ, ಸುಂಕದಕಟ್ಟೆ, ಬ್ಯಾಡರಹಳ್ಳಿ, ಸುಮನಹಳ್ಳಿ, ಕೊಟ್ಟಿಗೆಪಾಳ್ಯ, ಹೇರೋಹಳ್ಳಿ, ಕೆಂಗೇರಿ ಭಾಗದಲ್ಲೂ ಜೋರು ಮಳೆಯಾಗಿದೆ. ಜಾಲಹಳ್ಳಿಯ ಎಸ್.ಎಂ. ರಸ್ತೆಯ ಪೆಟ್ರೋಲ್ ಬಂಕ್ ಸಮೀಪದ ಪುಸ್ತಕ ಅಂಗಡಿಯ ಮೇಲೆ ದೊಡ್ಡ ಮರವೊಂದು ಬಿದ್ದಿತ್ತು. ಬಿಬಿಎಂಪಿ ಅರಣ್ಯ ಸಂಚಾರ ಘಟಕದ ಸಿಬ್ಬಂದಿ ಸೋಮವಾರ ರಾತ್ರಿಯೇ ತೆರವುಗೊಳಿಸಿದ್ದರು.

ಅಂಡರ್‌ಪಾಸ್‌ನಲ್ಲಿ ಬೈಕ್ ಸವಾರ ಬಿದ್ದು ಸಾವು

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ನೈಸ್ ರಸ್ತೆಯ ಕಾಚೋಹಳ್ಳಿ ಅಂಡರ್‌ಪಾಸ್‌ನಲ್ಲಿ ಬೈಕ್ ನಿಯಂತ್ರಣ ತಪ್ಪಿ ಕೆಳಗೆ ಬಿದ್ದು ಸವಾರ ಫಕ್ರುದ್ದೀನ್ ಎಂಬುವವರು ಮೃತಪಟ್ಟಿದ್ದಾರೆ.

ರಾಮನಗರದ ಫಕ್ರುದ್ದೀನ್ ಅವರು ನೆಲಮಂಗಲದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು.

‘ಸೋಮವಾರ ರಾತ್ರಿ 8 ಗಂಟೆಗೆ ಕೆಲಸ ಮುಗಿಸಿಕೊಂಡು ಕಾಚೋಹಳ್ಳಿ ಅಂಡರ್‌ಪಾಸ್ ಮೂಲಕ ರಾಮನಗರದ ಕಡೆಗೆ ತೆರಳುತ್ತಿದ್ದರು. ಅದೇ ಸಮಯದಲ್ಲಿ ಧಾರಾಕಾರ ಮಳೆಯಾಗುತ್ತಿತ್ತು. ಅಂಡರ್‌ಪಾಸ್‌ನಲ್ಲಿ ಮಳೆ ನೀರು ತುಂಬಿತ್ತು. ಬೈಕ್ ನಿಯಂತ್ರಣ ತಪ್ಪಿ ಸವಾರ ಕೆಳಗೆ ಬಿದ್ದಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದರು. ಮಾರ್ಗ ಮಧ್ಯದಲ್ಲಿ ಮೃತಪಟ್ಟರು’ ಎಂದು ಪೊಲೀಸರು ತಿಳಿಸಿದರು.

ಧರೆಗುರುಳಿದ ವಿದ್ಯುತ್ ಕಂಬಗಳು

ಪೀಣ್ಯ ದಾಸರಹಳ್ಳಿ: ನಗರದಲ್ಲಿ ಸೋಮವಾರ ರಾತ್ರಿ ಸುರಿದ ಭಾರಿ ಮಳೆಗೆ ಶೋಭಾ ಅಪಾರ್ಟ್‌ಮೆಂಟ್ ಹಿಂಭಾಗದ ನಾಗಸಂದ್ರ ಕಾಲೊನಿಯ ಆರು ವಿದ್ಯುತ್ ಕಂಬಗಳು ಧರೆಗುರುಳಿವೆ.

ಎಚ್.ಎಂ.ಟಿ ಬಡಾವಣೆ, ವಿಕಾಸ ನಗರದಲ್ಲಿ ಒಂದೊಂದು ವಿದ್ಯುತ್ ಕಂಬಗಳು ಬಿದ್ದಿವೆ. ಇದರಿಂದ, ವಿದ್ಯುತ್ ಇಲ್ಲದೆ ಜನರು ಪರದಾಡುವಂತಾಯಿತು. ವಿದ್ಯುತ್ ಕಂಬಗಳು ಮತ್ತು ಬೃಹತ್ ಮರಗಳು ಉರುಳಿಬಿದ್ದು ವಿದ್ಯುತ್ ಇಲ್ಲದೆ ಕಗ್ಗತ್ತಲಲ್ಲಿ ಮುಳುಗಿದ್ದು ಜನಜೀವನ ಅಸ್ತವ್ಯಸ್ತಗೊಂಡಿದೆ. ಒಂದು ವಿದ್ಯುತ್ ಕಂಬ ನಿಂತಿದ್ದ ಆಟೋ ಮೇಲೆ ಬಿದ್ದಿದ್ದು, ಯಾವುದೇ ಪ್ರಾಣ ಹಾನಿ ಆಗಿಲ್ಲ.

‘ಎಚ್‌ಎಂಟಿ ಬಡಾವಣೆ, ವಿಕಾಸನಗರದ ಬಿದ್ದಿದ್ದ ವಿದ್ಯುತ್ ಕಂಬಗಳನ್ನು ಸರಿಪಡಿಸಲಾಯಿತು. ವಿದ್ಯುತ್ ಕಂಬಗಳು ಬಿದ್ದಿರುವ ಸುತ್ತಮುತ್ತಲಿನ ಹದಿನೈದು ಮನೆಗಳಿಗೆ ಮಾತ್ರ ವಿದ್ಯುತ್ ಇಲ್ಲ. ಉಳಿದ ಎಲ್ಲಾ ಮನೆಗಳಿಗೂ ವಿದ್ಯುತ್ ಇದೆ. ಮಂಗಳವಾರ ಬೆಳಿಗ್ಗೆ ಕ್ರೇನ್ ಮೂಲಕ ಮರದ ದಿಮ್ಮಿಗಳನ್ನು ತೆರವುಗೊಳಿಸಿ ವಿದ್ಯುತ್ ನೀಡಲಾಗುವುದು’ ಎಂದು ಚೊಕ್ಕಸಂದ್ರ ಬೆಸ್ಕಾಂ ಸಹಾಯಕ ಎಂಜಿನಿಯರ್ ಸುರೇಶ್ ತಿಳಿಸಿದರು.

ಅಂಡರ್‌ಪಾಸ್- ವರದಿ ಬಳಿಕ ನಿರ್ಧಾರ: ತುಷಾರ್ ಗಿರಿನಾಥ್

ಅಂಡರ್ ಪಾಸ್‌ಗಳ ಸ್ಥಿತಿಗತಿ ಮೌಲ್ಯಮಾಪನ ನಡೆಸಲಾಗುತ್ತಿದ್ದು, ಅಪಾಯದಲ್ಲಿದ್ದರೆ ಅಂತಹ ಅಂಡರ್ ಪಾಸ್‌ಗಳಲ್ಲಿ ಸಂಚಾರ ನಿರ್ಬಂಧಿಸಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಅವರಿಂದ ವರದಿ ಕೇಳಲಾಗಿದೆ. ವರದಿ ಬಂದ ಬಳಿಕ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಕೆ.ಆರ್.ರಸ್ತೆ ಅಂಡರ್ ಪಾಸ್‌ನಲ್ಲಿ ನೀರು ನಿಲ್ಲದಂತೆ ಕಾಮಗಾರಿ ಆರಂಭಿಸಲಾಗುತ್ತಿದೆ. ಸಂಚಾರ ಪೊಲೀಸರ ಸಲಹೆ ಮೇರೆಗೆ ರಾತ್ರಿ ವೇಳೆ ಕೆಲಸ ನಿರ್ವಹಿಸಲಾಗುವುದು. 15 ದಿನಗಳಲ್ಲಿ ದುರಸ್ತಿ ಕಾರ್ಯ ಪೂರ್ಣಗೊಳ್ಳಲಿದೆ ಎಂದರು.

ಮೈಕೊ ಲೇಔಟ್‌ನಲ್ಲಿ ಕುಸಿದ ರಸ್ತೆ

ಮೈಕೊ ಲೇಔಟ್‌ನಲ್ಲಿ ಇತ್ತೀಚೆಗೆ ನಿರ್ಮಾಣವಾಗಿದ್ದ ರಸ್ತೆ ಕುಸಿದಿದ್ದು, ಬಿಬಿಎಂಪಿ ಅಧಿಕಾರಿಗಳು ದುರಸ್ತಿ ಮಾಡಿದರು.

ಮೈಕೊ ಲೇಔಟ್ ಪೊಲೀಸ್ ಠಾಣೆ ಹಿಂಭಾಗದಲ್ಲಿ ಸೋಮವಾರ ರಾತ್ರಿ ಇದ್ದಕ್ಕಿಂದ್ದಂತೆ ಕುಸಿದಿದ್ದು, ಮಳೆ ನೀರು ಹರಿದು ಸುರಂಗದ ರೀತಿಯಲ್ಲಿ ಕೊರೆದಿದೆ. ಮಂಗಳವಾರ ಬೆಳಿಗ್ಗೆ ಬಿಬಿಎಂಪಿ ಸಿಬ್ಬಂದಿ ಗುಂಡಿ ಮುಚ್ಚಿದರು.

ಎ ಖಾತಾ ಅಕ್ರಮ: ವರದಿ ಕೇಳಿದ ಮುಖ್ಯ ಆಯುಕ್ತ

ನಗರದಲ್ಲಿ ನಡೆದಿರುವ ‘ಬಿ’ ಖಾತದಿಂದ ‘ಎ’ ಖಾತಾ ಬದಲಾವಣೆ ಅಕ್ರಮಕ್ಕೆ ಸಂಬಂಧಿಸಿದಂತೆ ಹಿರಿಯ ಅಧಿಕಾರಿಗಳಿಂದ ವರದಿ ಕೇಳಲಾಗಿದೆ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

‘ಬೆಂಗಳೂರು ದಕ್ಷಿಣ ಭಾಗದಲ್ಲಿ ಹೆಚ್ಚು ಅಕ್ರಮ ನಡೆದಿರುವ ಬಗ್ಗೆ ಮಾಹಿತಿ ಇದೆ. ಮಹದೇವಪುರ ಸೇರಿ ಹೊರ ವಲಯದ ಪ್ರದೇಶಗಳಲ್ಲೇ ಹೆಚ್ಚಿನ ಆರೋಪವಿದೆ. ವರದಿ ಬಂದ ನಂತರ ಸತ್ಯ ತಿಳಿಯಲಿದೆ. ಯಾವುದೇ ಅಧಿಕಾರಿ ಭಾಗಿಯಾಗಿದ್ದರೂ ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ಗೆದ್ದಾಗ ಬೀಗುವ ಮೋದಿ ಇಂದು ಮೌನ’

ಹೋರಾಟನಿರತ ಕುಸ್ತಿಪಟುಗಳೇ ನಿಮ್ಮೊಂದಿಗೆ ನಾವಿದ್ದೇವೆ: ನಟ ಕಿಶೋರ್

ಪ್ರಜಾವಾಣಿ ವಾರ್ತೆ

ಹೋರಾಟನಿರತ ಕುಸ್ತಿಪಟುಗಳೇ ನಿಮ್ಮೊಂದಿಗೆ ನಾವಿದ್ದೇವೆ ಸಮಾವೇಶದಲ್ಲಿ ಭಾರತೀಯ ಕುಸ್ತಿ ಫಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್‌ನನ್ನು ಬಂಧಿಸುವಂತೆ ಎಐಎಂಎಸ್‌ಎಸ್ ಸಂಘಟನೆ ಸದಸ್ಯರು ಆಗ್ರಹಿಸಿದರು

ಬೆಂಗಳೂರು: ‘ಮಹಿಳಾ ಕುಸ್ತಿಪಟುಗಳು ಪದಕಗಳನ್ನು ಗೆದ್ದಾಗ ಅಭಿನಂದಿಸುವ ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಮೌನವಾಗಿದ್ದಾರೆ' ಎಂದು ನಟ ಕಿಶೋರ್ ಹೇಳಿದರು.

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಮಂಗಳವಾರ ಆಯೋಜಿಸಿದ್ದ ‘ಹೋರಾಟ ನಿರತ ಕುಸ್ತಿಪಟುಗಳೇ ನಿಮ್ಮೊಂದಿಗೆ ನಾವಿದ್ದೇವೆ’ ಕುರಿತ ಸಮಾವೇಶದಲ್ಲಿ ಮಾತನಾಡಿದ ಅವರು, ‘ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿರುವ ಕುಸ್ತಿಪಟುಗಳು ಬೀದಿಯಲ್ಲಿರುವುದು ನೋವಿನ ಸಂಗತಿ. ದೇಶ ಅಪ್ಕೆ ಸಾಥ್ ಹೈ ಎಂಬ ಮಾತು ಸುಳ್ಳಾಗಿದೆ. ಈ ಹೋರಾಟ ಗೆಲ್ಲಬೇಕಾದರೆ ಮಹಾತ್ಮ ಗಾಂಧೀಜಿ ಅವರ ಮಾದರಿಯನ್ನು ನಾವೆಲ್ಲರೂ ಅಳವಡಿಸಿಕೊಂಡು ಸಂತ್ರಸ್ತರಿಗೆ ಬೆಂಬಲ ನೀಡಬೇಕು’ ಎಂದು ತಿಳಿಸಿದರು.

‘ಸ್ವಾರ್ಥದ, ಪ್ರತಿಷ್ಠೆಯ, ಅಧಿಕಾರ ಲಾಲಸೆಯ, ನಿರ್ಲಜ್ಜೆಯ ಹಿಂಸೆಯಿಂದ ಕೂಡಿದ ಈಗಿನ ಗುಜರಾತ್ ಮಾದರಿ ನಮಗೆ ಬೇಕಾಗಿಲ್ಲ. ಕುಸ್ತಿಪಟುಗಳ ನ್ಯಾಯಯುತ ಹೋರಾಟ ಗೆದ್ದೇ ಗೆಲ್ಲುತ್ತದೆ. ಏಕೆಂದರೆ ರೈತ ಚಳವಳಿಯ ಆದರ್ಶ ನಮ್ಮ ಮುಂದಿವೆ’ ಎಂದರು.

ಅಥ್ಲೀಟ್ ರೀತ್ ಅಬ್ರಹಾಂ ಮಾತನಾಡಿ, ‘ನಾನು ಕ್ರೀಡಾ ಕ್ಷೇತ್ರಕ್ಕೆ ಕಾಲಿಟ್ಟಾಗ ಹೆಣ್ಣುಮಕ್ಕಳ ಸಂಖ್ಯೆ ತೀರಾ ಕಡಿಮೆ ಇತ್ತು. ಈಗ ಕ್ರೀಡಾಕ್ಷೇತ್ರದಲ್ಲಿ ರಾಜಕೀಯ ಪ್ರವೇಶಿಸಿದ್ದರಿಂದ ಈಗಲೂ ಪರಿಸ್ಥಿತಿ ಬದಲಾಗಿಲ್ಲ’ ಎಂದರು.

ಎಐಎಂಎಸ್‌ಎಸ್ ರಾಜ್ಯ ಅಧ್ಯಕ್ಷೆ ಅಪರ್ಣ ಬಿ. ಆರ್. ಮಾತನಾಡಿ, ‘ದೆಹಲಿಯಲ್ಲಿ ನಡೆಯುತ್ತಿರುವ ಕುಸ್ತಿಪಟುಗಳ ಹೋರಾಟ ಒಂದು ತಿಂಗಳಿಗೆ ಕಾಲಿಟ್ಟಿದೆ. ಆದರೆ, ಆರೋಪಿ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಇದುವರೆಗೂ ಬಂಧಿಸಿಲ್ಲ’ ಎಂದು ಹೇಳಿದರು. ಮಧುಲತಾ ಗೌಡರ್, ಶೋಭಾ, ಎಂ.ಎನ್. ಮಂಜುಳಾ, ಮೇರಿ ಜಾನ್ ಇದ್ದರು.

‘ಲೈಂಗಿಕ ದೌರ್ಜನ್ಯ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ’

‘ಲೈಂಗಿಕ ದೌರ್ಜನ್ಯ ಕೇವಲ ಕ್ರೀಡಾ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ, ಅದು ಎಲ್ಲಾ ಕ್ಷೇತ್ರಗಳಿಗೂ ಹಬ್ಬಿದೆ’ ಎಂದು ಐಎಎಸ್ ಅಧಿಕಾರಿ ಪಲ್ಲವಿ ಆಕುರಾತಿ ಹೇಳಿದರು.

‘ಕಾನೂನಿನ ಮುಂದೆ ಎಲ್ಲರೂ ಸಮಾನರು ಆದರೆ, ಅದು ತಲೆಕೆಳಗಾಗಿದೆ. ಆರೋಪಿ ಪ್ರಭಾವಿ ವ್ಯಕ್ತಿಯಾಗಿದ್ದರೆ ಪ್ರಕರಣ ದಾಖಲಿಸಲು ಆರು ತಿಂಗಳು ಬೇಕಾಗುತ್ತದೆ. ಇನ್ನೂ ತನಿಖೆ, ಶಿಕ್ಷೆ, ನ್ಯಾಯ ದೂರದ ಮಾತು. ದೇಶಕ್ಕಾಗಿ ಬಂಗಾರದ ಪದಕಗಳನ್ನು ಗೆದ್ದ ಹೆಣ್ಣು ಮಕ್ಕಳ ಸ್ಥಿತಿ ಹೀಗಾದರೆ, ಇನ್ನೂ ಸಾಮಾನ್ಯ ಹೆಣ್ಣು ಮಕ್ಕಳ ಗತಿಯೇನು’ ಎಂದು ಪ್ರಶ್ನಿಸಿದರು.

ಮಾರ್ಗ ದುರಸ್ತಿ: ರೈಲು ಸಂಚಾರ ವ್ಯತ್ಯಯ

ತುಮಕೂರು: ನಗರದ ಕ್ಯಾತ್ಸಂದ್ರ ಬಳಿ ರೈಲು ಸಂಚಾರ ಮಾರ್ಗದ ದುರಸ್ತಿ ಕಾಮಗಾರಿ ಕೈಗೊಂಡಿರುವುದರಿಂದ ಈ ಮಾರ್ಗದಲ್ಲಿ ಸಂಚರಿಸುವ ಹಲವು ರೈಲುಗಳ ಸಂಚಾರದಲ್ಲಿ ವ್ಯತ್ಯಯವಾಗಲಿದೆ.

ಇದೇ 25 ಮತ್ತು 27 ರಂದು ಕೆಆರ್‌ಎಸ್ ಬೆಂಗಳೂರು– ತುಮಕೂರು ಮೆಮು ರೈಲು ದೊಡ್ಡಬೆಲೆ ರೈಲು ನಿಲ್ದಾಣದ ವರೆಗೆ ಮಾತ್ರ ಸಂಚರಿಸಲಿದೆ.

ತಾಳಗುಪ್ಪ– ಕೆಆರ್‌ಎಸ್ ಬೆಂಗಳೂರು ಡೈಲಿ ಎಕ್ಸ್‌ಪ್ರೆಸ್ ರೈಲು, ಕೆಆರ್‌ಎಸ್ ಬೆಂಗಳೂರು– ಧಾರವಾಡ ಸಿದ್ಧಗಂಗಾ ಡೈಲಿ ಎಕ್ಸ್‌ಪ್ರೆಸ್ ರೈಲು ತುಮಕೂರು– ಬೆಂಗಳೂರು ನಡುವೆ ಸಂಚರಿಸುವುದಿಲ್ಲ.

ಜತೆಗೆ ಇನ್ನೂ ಹಲವು ರೈಲುಗಳ ಸಂಚಾರದಲ್ಲಿ ಬದಲಾವಣೆ ಮಾಡಲಾಗಿದೆ ಪ್ರಕಟಣೆ ತಿಳಿಸಿದೆ.

ರಾಜಕಾಲುವೆ ಒತ್ತುವರಿ ತೆರವು ಆರಂಭಕ್ಕೆ ಸೂಚನೆ

ಬೆಂಗಳೂರು: ರಾಜಧಾನಿಯಲ್ಲಿ ಪ್ರವಾಹ ತಡೆಯಲು ರಾಜಕಾಲುವೆ ಒತ್ತುವರಿ ತೆರವು ಮಾಡುವ ಕಾರ್ಯಾಚರಣೆಯನ್ನು ಪುನರಾರಂಭಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮುಂಗಾರು ಸಿದ್ಧತೆ ಕುರಿತು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜತೆ ಮಂಗಳವಾರ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹಿಂದೆ ನಾವು ಅಧಿಕಾರದಲ್ಲಿದ್ದಾಗ ರಾಜಕಾಲುವೆ ಒತ್ತುವರಿಗಳನ್ನು ಶೇಕಡ 50ರಷ್ಟು ತೆರವು ಮಾಡಲಾಗಿತ್ತು. ಈಗ ಕಾರ್ಯಾಚರಣೆ ಪುನರಾರಂಭಿಸಲು ಸೂಚಿಸಿದ್ದೇನೆ’ ಎಂದರು.

ಒತ್ತುವರಿಗೆ ಸಂಬಂಧಿಸಿದ ಕೆಲವು ಪ್ರಕರಣಗಳು ನ್ಯಾಯಾಲಯಗಳಲ್ಲಿ ಬಾಕಿ ಇವೆ. ಅವುಗಳನ್ನೂ ತ್ವರಿತವಾಗಿ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಬೆಳ್ಳಂದೂರು ಕೆರೆಯಲ್ಲಿ ನಡಿಗೆ ಪಥ: ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಬೆಳ್ಳಂದೂರು ಕೆರೆಯಂಗಳದಲ್ಲಿ ನಡಿಗೆ ಪಥ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಚೆನ್ನೈ ಪೀಠ ನೋಟಿಸ್ ಜಾರಿ ಮಾಡಿದೆ.

ಬೆಂಗಳೂರಿನ ನಿವಾಸಿ ಹರಿಕೃಷ್ಣ ಪೈದಿ ಲಕ್ಷ್ಮಯ್ಯ ಎಂಬುವರು ದಾಖಲಿಸಿರುವ ಪ್ರಕರಣದ ವಿಚಾರಣೆ ನಡೆಸಿರುವ ನ್ಯಾಯಮೂರ್ತಿ ಪುಷ್ಪಾ ಸತ್ಯನಾರಾಯಣ ನೇತೃತ್ವದ ಪೀಠವು, ನಡಿಗೆ ಪಥ ಕಾಮಗಾರಿ ನಡೆಸುವ ಸಂದರ್ಭದಲ್ಲಿ ಕೆರೆಗೆ ಮಳೆ ನೀರು ಹರಿದು ಬರುವ ಕಾಲುವೆ ಮುಚ್ಚಿ ಹೋಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸೂಚಿಸಿತು.

RURASH®
INVEST WEALTH, BUILD A LEGACY
ನಿಮ್ಮ ಭೌತಿಕ ಷೇರುಗಳನ್ನು ಡಿಮ್ಯಾಟ್‌ಗೆ ಪರಿವರ್ತಿಸಲು, ಹಾಗೂ IEPF ನೊಂದಿಗೆ ನಿಮ್ಮ ಕಳೆದುಹೋದ ಹೂಡಿಕೆಯನ್ನು ಮರಳಿ ಪಡೆದು ಕೊಳ್ಳಲು
ಬಲವಾದ ಜಾರಿವ್ಯವಸ್ಥೆಗೆ, ಮನೆ ಬಾಗಿಲಲ್ಲಿ ಸೇವೆಗಳ ಒದಗಿಸುವಿಕೆ, ವೇಗದ ದಾಖಲಾತಿ ಮತ್ತು ಪ್ರಕ್ರಿಯೆಗಳಿಂದ ಬೆಂಬಲಿತವಾದ ಅತ್ಯಂತ ಸಂಕೀರ್ಣವಾದ ಡೀಮಟಿರಿಯಲೈಸೇಶನ್ ಪ್ರಕರಣಗಳನ್ನು ಪರಿಹಸುವ ವಿಶೇಷ ತಜ್ಞರ ತಂಡವನ್ನು ನಾವು ಹೊಂದಿದ್ದೇವೆ.
Address: 605 - 607, B Wing, Mittal Tower, M G Road, Bengaluru - 560001
Call: 89289 51744 | 89289 51746
demat@rurashfin.com | www.rurashfin.com

EAST WEST GROUP OF INSTITUTIONS
1968 EAST WEST
Over 50 Years of Academic Excellence
(Recognised by Govt. of Karnataka) (Approved by AICTE & INC, PCI, New Delhi)
(Affiliated to Bangalore University, Rajiv Gandhi University, Visveshwaraiah Technological University)
4000+ Faculty & Staff | 16000+ Students | Students from 15 Countries
CAMPUS - 1 MAGADI ROAD
63, Off Magadi Rd, Vishwaneedam P.O. Bengaluru - 560 091
Phone: 080-2328 8242, 2328 8245
Mobile: 94482 24779
CET CODE: E-106
COMED-K CODE: E-048
ARCH CET CODE: E-271
CAMPUS - 2 YELAHANKA NEW TOWN
13/A, 'A' Sector, Yelahanka New Town, Bengaluru-560 064
Phone: 080-2856 6115, 2856 6116
Mobile: 98446 71611
CET CODE: E-239
ADMISSIONS OPEN
PUC
PCMB-PCMC-PCME-HEBA-CEBA-HECA
POLYTECHNIC
E&C-IT-E&E-CS-Mech-Auto-Mechtronics-Civil
BE ENGINEERING
Aeronautical - E & C - E & E - CS - IS
CSE (IOT, CYS & BC)
Artificial Intelligence & Data Science
Artificial Intelligence & Machine Learning
Mechanical - Civil - Agriculture Engg.
ARCHITECTURE
MANAGEMENT
BBA - BCA - B.Com
MBA - MCA - M.Com
SCIENCE
B.Sc / M.Sc-Biotechnology
B.Sc / M.Sc-Microbiology
B.Sc-Genetics : M.Sc-Biochemistry
B.Sc-Forensic Science B.Ed
B.Sc-Interior Design & Decoration *
B.A-Journalism / Criminology / Psychology
PHARMACY - PHYSIOTHERAPY
NURSING - LAB TECHNICIAN
M.Tech - PhD - R&D
www.ewgi.edu.in
Placement assistance for Engineering and other courses
IN HOUSE HOSTEL & DINING FACILITY
EW-23409

velnik™ INDIA LIMITED
www.velnik.com
ಆರೋಗ್ಯವೇ ಸಮೃದ್ಧಿಯ ಆಧಾರ
Nutrigain Plus Smart Way to Healthy Life
ನ್ಯೂಟ್ರಿಗೇನ್ ಪ್ಲಸ್ ಮೂಲಕ ಸೂಕ್ತ ತೂಕ ಪಡೆಯಿರಿ*
Available in 500g MRP ₹ 990 (inclusive of all taxes)
Chocolate Flavor 500g POWDER
Nutrigain Shaker* FREE
ಆನ್‌ಲೈನ್‌ನಲ್ಲಿ ಕೂಡ ಲಭ್ಯ www.velnikstore.com
For Trade Enquiry:
Tel. No.: +91 7316669150 | Email: info@velnik.com
*offer available for limited period only. Results may vary person to person.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED TRAINED/ Untrained Experienced Lady TEACHERS for Florence Primary & High School, Sanjaynagar: 6361720478/ 9591569625

THIRUMALA VIDYA NIKETHAN SCHOOL
#29, G.D Park Extn, Vyalikaval, Bangalore-560003
Ph: 080-23447560 / 23447570
Email:-tvns1984@gmail.com

Requires
Trained Science & Arts Graduate/ Post Graduate with B.Ed teachers to teach the following subjects:-
Maths for High School English, Social Science & Science for Higher Primary
The applications with relevant qualification and good communication skill in English are required.
Please mail/submit the resume with recent photograph to the principal within 7 days from the date of advertisement.

NEW BALDWIN GROUP OF SCHOOLS

Principal
Candidates required experience in reputed institutions as HOD / Co - ordinator / Principal with leadership qualities.

Subject Experts (Masters) English, Social, Maths, French
Candidates with qualification Graduate/ P.G having relevant experience of teaching in reputed schools. (ICSE/ CBSE/ IGCSE)

Campus Manager & PT Teacher
Candidates required with relevant experience in the field.

Apply Immediately
Applying candidates should clearly specify the position applied for, Branch opted with updated resume.
+91 98860 84799 centralhr.nbgi@gmail.com
• Banaswadi • Mandur • TC Palya • Anekal • Anekal Town • Chandapur • Attibele

BANGALORE PUBLIC SCHOOL, ICSE
Domlur, HAL 2nd Stage Bangalore-560071
9481617879
9739593919
Require Suitably qualified Teachers for the following subjects
▸ MATHEMATICS
▸ PHYSICS
▸ P.T.
Resume to: bangalore publicschool22@gmail.com

REQUIRED TEACHERS FOR SJBSS PUBLIC SCHOOL (ICSE)
2nd Block, Rajajinagar, Bengaluru-560010
Trained Graduates/Post Graduates for Physics, PE, Yoga, Librarian, Art & Craft,
The Candidates should have good command over written and spoken English and Basic Computer skills.
Attend walk-in-Interview on 27/05/2023, at 10.00 am
With testimonials Contact No.: 080-23322455, 9606698876

Accounts & Finance

PHYSICALY HANDICAPPED required. Well versed in tally accounting for Rajajinagar and kumbulgodu. Contact: Bharat Electro Chem. Radhakrishna. 8792233339

WANTED COUNTER Sales men / women Ready made blouse shop in Chickpet. Contact : 9448121073

NEED COMPUTER Operators for Insurance Counter at petrol pumps in Bengaluru. Payment 12000/- to15000/-.p.m. Contact: 9742149598

Hospital & Medical Jobs

URGENTLY REQUIRED NURSES IN HOSPITAL
7th Cross Road, Dasarahalli Circle, 5th Main Road, 775, 8th Cross Road, Near Veeresh Theater, MC Layout, Vijayanagar, Bengaluru - 560 040

Post	No.of Post	Qualification	Experience Required	Salary
"Staff Nurse" in Govt. (BBMP Bengaluru) on Contract	62	B.Sc. Nursing Recognized from Karnataka Nursing Council	Freshers eligible (No Experience Required)	Monthly CTC Rs. 23, 500/- P.M.,

OTHER BENEFITS: Salary revisions every 6-months, Only 8-hours Shift, Overtime Extra, Date of Interview - 19-05-2023 to 31-05-2023, Contact (Call or Whatsapp): Santosh - 8884398469, Mohd Shuaib - 7090608608, Mohan - 8073905797, Email ID-madhavmac@yahoo.co.in. Contract on M/s GA Digital Web World Pvt.Ltd.(GAD), Bengaluru.

ST LAWRENCE SCHOOL Avalahalli Mysore Road (Near Satellite busstop/ Girinagar) Bangalore-26 Mob 97401-54959/ 80738-57671. Wanted HighSchool MATHS Salary 25K- 38K, DRAWING, PHYSICAL EDUCATION LADY 15K-25K. WALK-IN on 25/05/2023 Between 10- 3

'WANTED OT Staff (Male) with 2 to 5 years Experience in Prashanth Hospital BSK 1st Stage bengaluru-50 Contact:- 080 26728862/ 7619627287

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

ENGLISH, SOCIAL TEACHERS HIGH/ MIDDLE SCHOOL/ NURSERY TEACHERS English medium Yeshwantpur/ Madanayakanahalli Bengaluru. WhatsApp resume. 8088201545/ 9342816044.

WANTED LECTURERS in Physics, Computer Science. Economics, Commerce English, Kannada, Hindi and Librarian for Vidyavana PU and Degree College Tirumalashettyhalli cross, Whitefield, Bengaluru Email: vidyavanahr@gmail.com WhatsApp: 9663389388

C B BHANDARI JAIN HIGH SCHOOL & PU COLLEGE
No.9, Kilari Road, Bengaluru-53. Tel. 41323029 / 22287485
TEACHING STAFF REQUIRED

Post	Qualification
Principal	Post Graduate with B.Ed having the Knowledge of departmental work
Vice-principal	Post Graduate with B.Ed having the Knowledge of departmental work.
English Teacher	B.A, B.Ed in English to teach in Primary School
Hindi Teacher	B.A / M.A, B.Ed in Hindi or Shikshak trainning to teach in High School
Administrator	A well experienced academician with the knowledge of Financial Management & departmental work

Call or Mail to cbbjhs@gmail.com
Near Metro Stations & Mysore Bank Circle.

Jyoti Nivas College Autonomous
Koramangala, Bangalore-560 095
Ph: 25530137 Fax: 2553 3886. www.jyotinivas.org, Email: info@jyotinivas.org
REQUIRES
Assistant Professors in Kannada, Psychology, Commerce and Computer Science
Qualification: PG First Class with NET/KSET Ph.D from a reputed University.
NON-TEACHING STAFF:
Accounts Assistant: MBA/M.Com Finance, Computer knowledge with Tally and Taxation.
Liaison Officer (Male): Graduate with good communication skills Computer and Kannada knowledge.
Office Assistant: Graduate in Computer Science.
Attender: Diploma in Electronics/Media.
Supervisor (Female): PUC with experience in Housekeeping
Apply to the Principal, Jyoti Nivas College Autonomous info@jyotinivas.org on or before 06.06.2023.

THE MYSORE EDUCATION SOCIETY
"Brahmi", Kishora Kendra, 10th Main, 15th Cross, Malleshwaram, Bangalore-03
Website: www.mesinstitutions.in
Invites Applications for the following Post:
DANCE TEACHER:
Pay Scale: Rs. 14750-39850/-
Qualification: Bachelor's Degree in Performing Arts with a minimum of 55% marks/ Equivalent Academic qualification in Dance with one year Teaching experience at School level.
Desirable: Versatile in multiple dance forms.

Multiple Vacancy

KARNATAKA ANTIBIOTICS AND PHARMACEUTICALS LIMITED
[A Government of India Enterprise]
Registered & Corporate Office: KAPL House, Arka The Business Centre, Plot No. 37, NTTF Main Road, 2nd Phase, Peenya Industrial Area, Bengaluru – 560 058
Ph: 080-23571590, Website: www.kaplindia.com

We, a professionally managed Pharmaceuticals Company, recruiting following position on **Fixed Term Contract Basis [FTC] for a period of 5 Years. Further, it may be continued based on performance.**

1. Analyst-III-Quality Control Department [QC]-02 Posts [Gross Salary Rs.28810/-PM], Location: Dharwad.
2. Assistant-Stores-1 Post Stores department[Gross Salary Rs.28810/PM-] Location: Dharwad
3. Executive-Information Services Department-1Post[Gross Salary Rs.49410/-PM] Location: Peenya,Bangalore.
4. Co-ordinator-1 Post for QC department [Gross Salary Rs.34600/PM-] Location: Peenya, Bangalore.

For more details, visit our website **"www.kaplindia.com/job-postings"**. Interested candidates who fulfill the requirements for the above post may send their application as per the format available in our website on or before **12.06.2023** to the **DY. GENERAL MANAGER - HRD**

WANTED TEACHERS
Wanted trained and experienced teachers with good command of English for a reputed school in **WHITEFIELD.**
Primary - Social Science and English.
High School - Computer Science and English.
Send your resume to st.thomaswfd@gmail.com Ph: 080-28452484

WANTED TRAINED LADY TEACHERS to teach All Subjects in Lower Primary, MATHS and COMPUTER in English Medium Primary and High Schools. Wanted Trained Male/ Female PHYSICAL EDUCATION and SANSKRIT TEACHER for Primary and High School. Walk-in Interview on 25.05.2023. Thursday between 1.00PM and 3.00PM at PRATHIBHA SHIKSHANA SAMITHI, #9, 18th Main, BSK II Stage, Bangalore-70. Ph: 080- 26710170/ 74833-77387

REPUTED ENGLISH Medium School in Gandhinagar requires trained experienced LADY TEACHERS for teaching Maths, Science, Kannada, Hindi, P.E. (male) Higher Primary, High School. Salary 20,000/- above according to experience and efficiency. contact: 22261590/ 8884440214.

REQUIRED PHYSICAL Education Teacher with B.A.,B. P.Ed. or B.A. C.P.Ed.,for Higher Primary School. Contact immediately Hon. Secretary, SriVinayaka Education Society (R) #218, Banappa Park,Cubbonpet, Bengaluru-560002. Ph:22210459 / 7406222209.

ADITYA PUBLIC HIGH SCHOOL
#607, 19th Cross, Laxman Rao Nagar, Koramangala 1st Stage,Viveknagar (Post), Bengaluru - 47
REQUIRED
Required Teacher's to teach all subjects from **LKG to X Std** with English Fluency
Qualification : SSLC, NTT, D.Ed, B.Ed with Degree
Contact Immediately:
7892131659
9972931542
9481255196

REQUIRED EXPERIENCED Accounts Assistants/ Billing assistants/ Delivery Boys/ Helpers for Reputed Pharmaceutical Company at Nayandahalli off Mysore Road Bangalore. Contact: Prajwal 9845051220/ Divya 9019184151. Email: valmopharmaceuticals@gmail.com Valmo Pharmaceuticals Pvt Ltd No 2, Royal tower 3rd cross Aziz Sait industrial estate, Nanyandahalli. Bangalore -560039.

Engg/ Production Technical

SAFETY OFFICER/ENGINEER Having basic qualification Graduate(Science)/Diploma in any engineering Stream + industrial safety and firemanagement course from reputed /Govt Organization with 5-7 years workingexperience in plant/ industry and capable to lead group of 50/60 persons aterection work, in an industrial plant at JSW, Bellary, Karnataka. Interested candidates should email their resume with relevant documents of academic qualification, experience & exposure. To, VRINDA ENGINEERS PVT. LTD. Email:r.roy@vrindaengineers.com/punitneotia@yahoo.com/ vrindajsw.gasholder@gmail.com

HOLY ANGEL'S High School Hampinagar, Vijayanagar, Bengaluru-560104. Phone:23404465/ 23202042 holyangels.highschoolrpclayout@gmail.com Requires Experienced Trained Teachers to handle Kannada, English, Science for Primary & Higher Primary and Computer Teacher for High School for Academic year 2023-2024. STATE & ICSE. Qualification: B.A/B.Sc.,B.Ed, M.A/M.Sc.,M.Ed. Only English medium candidates need apply.

SHRI CHAITANYA EDUCATION SOCIETY, 33, Vivekananda Nagar Kathriguppe Main Road BSK 3rd Stage Bangalore-85, TEACHERS Required Primary: English, Hindi, High School: Maths, Social, Hindi. Call: 9739703039

BEST ENGLISH/ SOCIAL SCIENCE/ MATHS/ HINDI/ GENERAL SCIENCE/ MUSIC/ BP. Ed TEACHERS for CBSE SCHOOL, CHIKKABIDARAKALLU, BANGALORE. Best Salary. 9449835744/ 9535601743

RMS PU COLLEGE Invites application from applicants with 3 years experience for Mathematics & Basic Maths (Part time) Physics & Computer Science (Full time) rmspucollege@gmail.com CALL: 6361975098

SRI LAKSHMI PUBLIC SCHOOL (CBSE)
Sunkadakatte, Bengaluru-91.
REQUIRED
qualified, trained and experienced Teachers with fluency in English for **Science** (High School) **Social Science** (High School) **EVS** (Primary), **Maths** (Primary), **Hindi, Kinder Garten**
Mail resumes to slps1011@gmail.com
95385 99933

ENGLISH & MATH TEACHERS needed for CHITRAKOOTA CBSE School in Nagarbhavi, Kengeri Ring Road, with High Salary Immediately or for the academic year. Call: 7829647333.

WANTED EXPERIENCED High School Science Teacher and Computer knowledge with office work teachers, NEW CAMBRIDGE HIGH SCHOOL Bommanahalli, Bangalore-68. Salary- Upto 20000-25000/ 9448312549. 7899992107

"WANTED EXPERIENCED Subject Teachers for 1st to-10th Standard English Medium School at Kumarakrupa Road- Attractive Salary. Contact: 9900999528/ 9900096610"

ENGLISH, PT TEACHERS FOR A REPUTED SCHOOL NEAR YELLACHENAHALLI METRO STATION. APPLY WhatsApp CV 9980944566

WANTED EXPERIENCED HM and Academic co-ordinator,High School Social and English Teacher.SRI SHANTINIKETAN SCHOOL,Uttarahalli. Contact:9008709749

KLV EDUCATION & Rural Development Seva Trust (R) Bagalagunte, Bangalore Wanted: Kindergarten, Mother Teachers for Primary, English & Social Teacher for High-School. Apply with relevant qualifications. Call: 9611781163 Email: klveducation@gmail.com

GOODWILL PU COLLEGE, Bangalore-91 Wanted Experienced LECTURERS for Chemistry & Computer Science. Walk-in from 22/5/2023. Excellent Salary. Contact: 9449252533, 8747966822

WANTED TRAINED and EXPERIENCED TEACHERS For MATHS(PCM), SOCIAL STUDIES, PHYSICAL EDUCATION(Lady), K.R.L.S. PATEL RAMA REDDY ENGLISH HIGH SCHOOL, Domlur Layout, Bangalore-71. Phone:25350421. krlsschools@gmail.com

WANTED TEACHERS for High School. Sub: English, Maths, Science. Jyothi Vidyalaya, Hesaraghatta, Bangalore-88. Ph. No. 080- 28466379/ 9008802868.

REQUIRE ENGLISH Language Teacher with MA/ BA, B.Ed to teach in Primary school section. Librarian with M.L.Sc/ B.L.Sc. & Part time Music Teacher with Classical background. Apply immediately to Hon. Secretary, Poornaprajna Education Centre, CA Site No. 48, New Thippasandra, HAL 3rd Stage, Bangalore- 75. Ph: 080-25292930 poornaprajnants@gmail.com

ANTONY SCHOOL Mathikere, Bangalore. Wanted Female TEACHERS BA. B.Ed (English, Social) B.Sc B.Ed. 9663350140/ 23471952

NEW FLORENCE English School, 8th main, Shivanagar, Rajajinagar, Bengaluru-10, requires lady teachers to handle Nursery, Higher Primary (English, Science, Social), High school (Social, English), Ayahs: 9620396782 /9845346754

MIPRO FRESH Innovation Pvt.Ltd. Wanted 1.Marketing Assistance- 2.No's. (1 for Mysore & 1 for Bangalore) 2.Accountant Assistance-1 for Bangalore.Call: 9980317657. Email: anjali@miprofresh.com

Walk In Interview
Reputed Furniture Manufacturing Company Requires Front office executive, Supervisor, Designer, Machine operators for Modular kitchen. Fabrication Supervisor, Fitters, Co2 Welder, Store Keeper. Relevent Experienced Candidate may walk in to Eurosit Systems Furniture - Peenya Indl Area.
Phone :080-2837 7260/321
email: info@eurositfurniture.com

Factory

"WANTED DRIVER,COOK, MACHINE OPERATOR, HOUSEKEEPING HELPER, ELECTRICIAN for a Manufacturing company located in Bommanahalli, near BTM.Layout/ H.S.R.Layout, Bangalore-68. Send-CV-to: uppbangalore@gmail.com /Contact: 9449817703"

General

SOURCE TECHNOLOGI REQUIRES Marketing Executives (2) with 2-4 years of experience, System Operative Executives (2) Fresher's, QC-Electonics Background (1) with 7- 10 years of Experience. Contact: 8296964536/ 080-26571838/ 42103690 extn- 41. Email: pallavi@sourcetechnologi.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

MORE **Classifieds** Ads on Subsequent Pages

PUBLIC NOTICE

PUBLIC NOTICE
One World International School located at Sy No: 102/1,71/1, Goravigere Village, Bidarahalli Hobli, Banglore East Taluk 560067 has changed the name from Silver Oak International School to One World International School based on the circular bearing No.DPI-CP10C7-3/(SCNC) /3/2023 No.1015416 dated 24-2-2023 issued by Department of Public Instruction, Nrupathunga Road, Bangalore-01

PUBLIC NOTICE
This is to inform the General Public that my client **Mr.Khuthaija and others** intends to purchase the Residential Property mentioned in the Schedule hereunder from its owner **Mr.Ajaz Pasha, S/o.Mohammed Ibrahim and others.** Persons having any claim, objections etc., in respect of the said sale transaction, pertaining to the said property may lodge the same with documentary evidence, with the undersigned within **10 (Ten) days** from the date of publication of this Notice. Otherwise my client will proceed with the Purchase of the above mentioned property treating that there are no claims or objections.

SCHEDULE
All the piece and parcel of the property bearing **BDA No.1021, Katha No.2475/1021,** situated at 5th Block, 1st Stage, Hennur Bellary Road, (HBR Layout) , Bangalore, BBMP Ward No.24, **measuring East to West: 40-0 feet and North to South: 30-0 feet,** together with building thereon and bounded as follows: **East by:** Site No.1027 **West by :** Road, **North by :** Site No.1022, **South by:** Site No.1020.

(K.S. Vijaya) Advocate, Bangalore.
Place: Bangalore
Date: 24-05-2023 94486 13617, 93412 15599

ಪತ್ರಿಕಾ ಪ್ರಕಟಣೆ
ಕರ್ನಾಟಕ ಸರ್ಕಾರ, (ಸಹಕಾರ ಇಲಾಖೆ)
ಆಡಳಿತಾಧಿಕಾರಿಗಳು, ಅಲಂಕಾರ್ ಪರ್ಲ್ ಪ್ಲಾಜಾ ಅಂಗಡಿ ಮಾಲೀಕರ ಸಂಘ (ರಿ.) ಬೆಂಗಳೂರು-09 ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ
ನಂ.146, ಸಹಕಾರ ಸೌಧ, 3ನೇ ಮುಖ್ಯ ರಸ್ತೆ, 8ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3
ಸಂಖ್ಯೆ: ಎಆರ್ ಬಿ-4/ಅಲಂಕಾರ್ ಪ.ಅ.ಮಾಸಂ / 05/2021-22 ದಿನಾಂಕ: 10-05-2023

ಅಲಂಕಾರ್ ಪರ್ಲ್ ಪ್ಲಾಜಾ ಅಂಗಡಿ ಮಾಲೀಕರ ಸಂಘ (ರಿ) ಬೆಂಗಳೂರು ಈ ಸಂಘದಲ್ಲಿ ಲಭ್ಯವಿರುವ ದಾಖಲಾತಿಗಳ ಆಧಾರದ ಮೇಲೆ ಕ್ರಮ ಸಂಖ್ಯೆ 1 ರಿಂದ 360 ರವರೆಗಿನ ತಾತ್ಕಾಲಿಕ ಮತದಾರರ ಪಟ್ಟಿಯನ್ನು ತಯಾರಿಸಲಾಗಿದ್ದು, ಈ ಪಟ್ಟಿಯನ್ನು ಸಂಘದ ಸೂಚನಾ ಫಲಕದಲ್ಲಿ ಹಾಗೂ ಅಲಂಕಾರ್ ಪ್ಲಾಜಾದಲ್ಲಿ ಪ್ರಕಟಿಸಲಾಗಿದೆ. ಈ ತಾತ್ಕಾಲಿಕ ಮತದಾರರ ಪಟ್ಟಿಯ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರಿಕಾ ಪ್ರಕಟಣೆಯ 15 ದಿನಗಳೊಳಗಾಗಿ ಸಂಘದ ವ್ಯವಸ್ಥಾಪಕರಿಗೆ ಹಾಗೂ ಸಂಘದ ಆಡಳಿತಾಧಿಕಾರಿಗಳಿಗೆ ತಪ್ಪದೆ ಸಲ್ಲಿಸಲು ಸೂಚಿಸಲಾಗಿದೆ. ಒಂದು ವೇಳೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದಿದ್ದಲ್ಲಿ ಈ ತಾತ್ಕಾಲಿಕ ಮತದಾರರ ಪಟ್ಟಿಗೆ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಭಾವಿಸಿ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿ ಸಂಘದ ಚುನಾವಣೆಗೆ ಕ್ರಮ ಜರುಗಿಸಲಾಗುವುದೆಂದು ತಿಳಿಯತಕ್ಕದ್ದು.

ಸಹಿ/- ಆಡಳಿತಾಧಿಕಾರಿ
ಅಲಂಕಾರ್ ಪರ್ಲ್ ಪ್ಲಾಜಾ ಅಂಗಡಿ ಮಾಲೀಕರ ಸಂಘ (ರಿ.) ಬೆಂಗಳೂರು-09 ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ

यूनाइटेड इंडिया इंश्योरेन्स कं. लिमिटेड UNITED INDIA INSURANCE CO. LTD.
Regional Office, 5th& 6th Floor, Krishi Bhavan, Nrupathunga Road, Bangalore - 560001. Ph. No. 080-22534031
NOTICE INVITING TENDER
SERVICE PROVIDER REQUIRED FOR HOUSEKEEPING ACTIVITIES IN BANGALORE REGION
United India Insurance Co. Ltd, a PSU requires Service Provider for Housekeeping activities at various offices & Caretaker/ helper for Guest House under Bangalore Region. Sealed quotes are invited from the Competent Service Providers. For details and tender documents, please visit the 'Tenders / RFP' tab on our Company's Website www.uiic.co.in & completed bids should reach our Office at above address on or before 15.06.2023
Sd/-
Dy. General Manager

PUBLIC NOTICE
One World International School, located at Sy No: 188/3 & 188/4, Dommasandra Village, Sarjapura Road, Bangalore East, Bangalore - 562125 has changed the name from Silver Oak International School to One World International School based on the circular bearing No.929342 RPI CPIC7 3 (SC NC) /10/2022 dated 24-2-2023 issued by Department of Public Instruction, Nrupathunga Road, Bangalore-01

CONNECT

CADD Nest
Job Oriented Software Training for
• Full Stack Developer
• C, C++, Java / Python / Data Science / AI / ML
• Data Analytics • Tally Prime / Advanced Excel
• SAP FICO / MM / SD / Civil / Architectural CADD
• Mechanical CAD / Interior Design • Digital Marketing
• Spoken English • Hardware & Networking
• Animation / Graphic / Web Designing
• Handwriting / Calligraphy
Contact: 9740444363 / 9740442121 / 080-41608308
www.caddnest.org

GOODWILL CHRISTIAN COLLEGE FOR WOMEN
No.10, Promenade Road, Frazer Town (Opp. Coles Park) Bengaluru - 560 005
CSI Karnataka Central Diocese
Affiliated to Bengaluru North University
NAAC ACCREDITED
Phone: 080 - 41516793, 41100422, 7022905576
Website: www.goodwillchristiancollege.com
E-mail: goodwillchristiancollege@gmail.com
Instagram: goodwillchristiancollege
ADMISSIONS OPEN 2023 - 2024
COURSES OFFERED
B.Com | BBA | BCA | B.Sc | B.A.

APS Educational Trust®
N. R. Colony, Bangalore-560 019
OFFICE SPACE AVAILABLE FOR RENT
Total 62,710 Sq.ft. in 5 Floors-each Floor 10,500 Sq.ft. -
CENTRALIZED AIR CONDITIONING, PARKING FACILITY, PLUG & PLAY, GENERATOR etc.
Located on Bull Temple Main Road, Opp. BMS Engineering College
Note: Brokers are not entertained
Contact : 080 - 2660 2586 / 98864 46401

MATRIMONIAL

Grooms Wanted

Telugu

ALLIANCE INVITED from qualified, employed, unmarried bangalore settled boy for telugu yadava bangalore girl 42 yrs/ 5'4' MCA unmarried, nw, nv. whatsapp 9380397152.

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

Business to Business

Business

15 STUDIO Flats Sale- 4 floors on 32'*55' Site Builtup area 6400 sft. A Khata, nearer Bommanahalli Metro. Getting 1,40,000 Rent. Dr.Swamy- Owner- 9342247637.

PERSONAL

Change of Name

I,SUJATHA CHERIAN R/a No.10, Chaithra Nilaya, Kaveri Nagara Kathriguppe, BSK 3rd Stage, Bangalore-560 085 have changed my name from J.SUJATHA to SUJATHA CHERIAN vide affidavit dated 23-05-2023 before Notary Jayalingayya Mudenoormath, Bangalore.Henceforth I shall be called as SUJATHA CHERIAN only

I, MS. Samudyatha .S, D/o. Mr. Shamanna, aged Major, No.320/A, 2nd 'E' Cross, 1st Block, 3rd Stage, UVCE Layout Basaveshwaranagar Bangalore-560079 have changed my name from Samudhyatha S. Jha and Samudayatha S. Jha to Samudyatha .S vide Affidavit dated 23-05-2023 sworn before the Notary Manohar Jeerige Bangalore.

I, NAZEER AHMED, Residing at Islampur Mohalla Ganganamiddi Road, Near Masjeed, Chickballapur 562101 have changed my name to NAZEER AHMED SYED vide affidavit dated 20.05.2023 sworn to before Advocate and Notary K.H. Venkatappa, Chickballapur.

I, MOHAMED KALEEMULLA, Residing at 1763/A Ward No. 17, Muniyappa Road, Chickballapur 562101 have changed my name to MOHAMMED KALEEM ULLA vide affidavit dated 20.05.2023 sworn to before Advocate and Notary K.H. Venkatappa, Chickballapur.

I M S HARSHA VARDHAN r/a, #114/B 2nd Main Road, 9th Cross, Chamarajapet, Bengaluru-18 have change my name to M S HARSHA VARDHANA vide affidavit dated 23/05/2023 before Notary A.C.Subbu Swamy Bengaluru.

BUSINESS

Business Offers

Finance

WANTED BUSINESS PARTNERS GREEN HERBAL AYURVEDIC PRODUCTS, 10 LAKHS INVESTMENT ATTRACTIVE INCOME CONTACT: 8892501007/ 9606701007

ಸಂಕ್ಷಿಪ್ತ ಸುದ್ದಿ

ವ್ಹೀಲೆ: ಬೈಕ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಲಘಟ್ಟಪುರ ಸಂಚಾರ ಠಾಣಾ ಪೊಲೀಸರು ವ್ಹೀಲೆ ಮಾಡುತ್ತಿದ್ದ ಬಾಲಕನನ್ನು ವಶಕ್ಕೆ ಪಡೆದು ಬೈಕ್ ಜಪ್ತಿ ಮಾಡಿಕೊಂಡಿದ್ದಾರೆ.

ಬಾಲಕನೊಬ್ಬ ಭಾನುವಾರ ಡಿಯೊ ಸ್ಕೂಟರ್‌ನಲ್ಲಿ ಹಿಂಬದಿಯಲ್ಲಿ ಮತ್ತೊಬ್ಬ ಸವಾರನನ್ನು ಕೂರಿಸಿಕೊಂಡು ಬನಶಂಕರಿಯ 80 ಅಡಿ ರಸ್ತೆಯಲ್ಲಿ ವ್ಹೀಲೆ ಮಾಡುತ್ತಿದ್ದ. ಅದನ್ನು ಗಮನಿಸಿದ ನಾಗರಿಕರೊಬ್ಬರು ಆ ದೃಶ್ಯ ಸೆರೆ ಹಿಡಿದು ಸಂಚಾರ ಪೊಲೀಸರ ಟ್ವಿಟರ್ ಖಾತೆಗೆ ಟ್ಯಾಗ್ ಮಾಡಿದ್ದರು. ವಾಹನ ನೋಂದಣಿ ಸಂಖ್ಯೆ ಆಧರಿಸಿ ಆತನ ಮನೆ ಪತ್ತೆ ಮಾಡಿದ್ದರು. ಬಾಲಕನ ಪೋಷಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಚಿನ್ನ ಕಳ್ಳಸಾಗಣೆ: ಪ್ರಯಾಣಿಕ ಬಂಧನ

ಸಾಗಣೆ ಮಾಡುತ್ತಿದ್ದ ಚಿನ್ನ

ದೇವನಹಳ್ಳಿ: ಬ್ಯಾಂಕಾಕ್‌ನಿಂದ ಚಿನ್ನ ಕಳ್ಳಸಾಗಣೆಗೆ ಯತ್ನಿಸಿದ ಪ್ರಯಾಣಿಕನನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ ಬಂಧಿಸಲಾಗಿದೆ.

ಆತನಿಂದ ₹43.65 ಲಕ್ಷ ಮೌಲ್ಯದ 700 ಗ್ರಾಂ ಚಿನ್ನ ವಶಪಡಿಸಿಕೊಳ್ಳಲಾಗಿದೆ.

ಬ್ಯಾಂಕಾಕ್‌ನಿಂದ ಪ್ರಯಾಣಿಕರೊಬ್ಬರು ಚಿನ್ನ ಕಳ್ಳ ಸಾಗಾಣಿಕೆ ಮಾಡುತ್ತಿರುವ ಬಗ್ಗೆ ವೈಮಾನಿಕ ಗುಪ್ತಚರ ದಳ ಮತ್ತು ರೆವಿನ್ಯೂ ಇಂಟೆಲಿಜೆನ್ಸ್ ತಂಡದ ಅಧಿಕಾರಿಗಳಿಗೆ ಮುಂಚಿತವಾಗಿ ಸುಳಿವು ಸಿಕ್ಕಿತ್ತು.

502 ಗ್ರಾಂ ಚಿನ್ನದ ಒಂದು ತುಂಡನ್ನು ಲಗೇಜ್ ಸಾಗಿಸುವ ಟ್ರಾಲಿಯ ಹ್ಯಾಂಡಲ್‌ಗೆ ಮೆಡಿಕಲ್ ಬ್ಯಾಂಡೇಜ್‌ನಿಂದ ಸುತ್ತಿ ಗಮ್‌ಟೇಪ್ ಅಂಟಿಸಿ ಸಾಗಿಸುತ್ತಿದ್ದ. 197 ಗ್ರಾಂ ಚಿನ್ನದ ಮತ್ತೊಂದು ತುಂಡನ್ನು ಹ್ಯಾಂಡ್ ಬ್ಯಾಗ್‌ನಲ್ಲಿಟ್ಟು ಸಾಗಿಸುತ್ತಿದ್ದ. ಕಸ್ಟಮ್ಸ್ ಅಧಿಕಾರಿಗಳು ಪ್ರಯಾಣಿಕನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಕಳ್ಳ ಸಾಗಣೆ ಮಾಡಲು ಚಿನ್ನದ ಕಡಗಕ್ಕೆ ರೇಡಿಯಂ ಲೇಪಿಸಿದ್ದ ಆರೋಪಿ

ಚಿನ್ನದ ಕಡಗಕ್ಕೆ ರೇಡಿಯಂ ಲೇಪನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ರೇಡಿಯಂ ಲೇಪಿಸಿದ ಚಿನ್ನದ ಕಡಗ ಧರಿಸಿ ಬ್ಯಾಂಕಾಕ್‌ನಿಂದ ಬಂದಿಳಿದ ಪ್ರಯಾಣಿಕನನ್ನು ಅಧಿಕಾರಿಗಳು ಶನಿವಾರ ಬಂಧಿಸಿದ್ದಾರೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶನಿವಾರ ಬ್ಯಾಂಕಾಕ್‌ನಿಂದ ಬಂದಿಳಿದ ಪ್ರಯಾಣಿಕನನ್ನು ತಪಾಸಣೆಗೆ ಒಳಪಡಿಸಿದಾಗ ಚಿನ್ನ ಕಳ್ಳ ಸಾಗಣೆ ಮಾಡುತ್ತಿದ್ದ ಪ್ರಕರಣ ಬೆಳಕಿಗೆ ಬಂದಿದೆ.

ಕೈಗೆ ಧರಿಸುವ ಕಡಗದ ರೂಪದಲ್ಲಿದ್ದ 499 ಗ್ರಾಂ ತೂಕದ ಚಿನ್ನವನ್ನು ಚಿನ್ನ ಎಂದು ಗುರುತಿಸದಂತೆ ರೇಡಿಯಂ ಕೋಟಿಂಗ್ ಮಾಡಿ ಸಾಗಾಣೆ ಮಾಡುತ್ತಿದ್ದ.

ಪ್ರಯಾಣಿಕನ ಹಿಂದಿನ ಅಪರಾಧ ಕೃತ್ಯಗಳಿಂದ ಅನುಮಾನಗೊಂಡ ಕಸ್ಟಮ್ಸ್ ಅಧಿಕಾರಿಗಳು ಆತನನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಕೃತ್ಯ ಬೆಳಕಿಗೆ ಬಂದಿದೆ. ವಶಕ್ಕೆ ಪಡೆದ ಚಿನ್ನದ ಕಡಗದ ಒಟ್ಟು ಮೌಲ್ಯ ₹ 31.14 ಲಕ್ಷ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ.

ಪೋಕ್ಸೊ ಪ್ರಕರಣ: ಹೈಕೋರ್ಟ್ ವಿಭಾಗೀಯ ನ್ಯಾಯಪೀಠದ ಆದೇಶ

ಆರೋಪಿ ಖುಲಾಸೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪ್ರಾಪ್ತ ವಯಸ್ಸಿನ ಸೋದರ ಸಂಬಂಧಿಯ ಮೇಲೆ ಅತ್ಯಾಚಾರ ಎಸಗಿ, ಆಕೆಯನ್ನು ವಂಚಿಸಿದ ಪ್ರಕರಣವೊಂದರಲ್ಲಿ ಆರೋಪಿಯನ್ನು ಖುಲಾಸೆಗೊಳಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ) ಪ್ರಕರಣ ಎದುರಿಸುತ್ತಿದ್ದ ವಿಜಯ ಅಲಿಯಾಸ್ ವಿಜಯಕುಮಾರ್ ಎಂಬ ಆರೋಪಿಯನ್ನು ಕೊಡಗಿನ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 2016ರ ಮಾರ್ಚ್ 10ರಂದು ಖುಲಾಸೆಗೊಳಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ.ಎಸ್. ಮುದಗಲ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ. ಅಪರಾಧಿಗೆ

ಶಿಕ್ಷೆ ವಿಧಿಸುವಂತೆ ಆದೇಶಿಸಿದೆ.

'ಆರೋಪಿ ತನ್ನ ಸೋದರ ಸಂಬಂಧಿಯಾದ 15 ವರ್ಷದ ಬಾಲಕಿಯ ಜೊತೆ ಸಂಭೋಗ ನಡೆಸಿರುವುದಲ್ಲದೇ ಆಕೆಗೆ ವಂಚಿಸಿರುವುದನ್ನು ಪರಿಗಣಿಸುವಲ್ಲಿ ವಿಚಾರಣಾ ನ್ಯಾಯಾಲಯ ವಿಫಲವಾಗಿದೆ. ವಿಚಾರಣಾ ನ್ಯಾಯಾಲಯವು ದಾಖಲೆಯಲ್ಲಿರುವ ಸಾಕ್ಷ್ಯಗಳನ್ನು ಪರಿಗಣಿಸಿಲ್ಲ. ಹೀಗಾಗಿ, ಆರೋಪಿಯನ್ನು ಖುಲಾಸೆ ಮಾಡಿರುವ ಆದೇಶವು ನ್ಯಾಯದಾನಕ್ಕೆ ಮಾರಕವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: 'ಆರೋಪಿಯು ಸಂತ್ರಸ್ತ ಬಾಲಕಿಯ ಚಿಕ್ಕಪ್ಪನ ಮಗ.

ಮುಖ್ಯಾಂಶಗಳು

- ಅಪ್ರಾಪ್ತ ವಯಸ್ಸಿನ ಸೋದರ ಸಂಬಂಧಿಯ ಮೇಲೆ ಅತ್ಯಾಚಾರ
- ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಮೇಲ್ಮನವಿ
- ಅಪರಾಧಿಗೆ ಶಿಕ್ಷೆ ವಿಧಿಸುವಂತೆ ಆದೇಶ

ಕೂಲಿ ಕೆಲಸಕ್ಕೆ ಬಂದಿದ್ದ ಬಾಲಕಿಯನ್ನು ಮದುವೆಯಾಗುವುದಾಗಿ ನಂಬಿಸಿ ಆಕೆಯೊಂದಿಗೆ ಸಂಭೋಗ ನಡೆಸಿದ್ದ' ಎಂದು ಆರೋಪಿಸಲಾಗಿತ್ತು. ಈ ಘಟನೆ 2008ರಲ್ಲಿ ನಡೆದಿತ್ತು. ಬಾಲಕಿ ಗರ್ಭಿಣಿಯಾಗಿದ್ದು ಪೋಷಕರ ಗಮನಕ್ಕೆ ಬಂದಿತ್ತು. ಈ ಕುರಿತು ಗ್ರಾಮಸ್ಥರು ನಡೆಸಿದ ಪಂಚಾಯಿತಿಯಲ್ಲಿ ಆರೋಪಿಯನ್ನು ವಿಚಾರಿಸಿದಾಗ ಆತ, 'ಗರ್ಭದಲ್ಲಿರುವ ಮಗುವನ್ನು ತೆಗೆಸಿದರೆ ಆಕೆಯನ್ನು ಮದುವೆಯಾಗುವುದಾಗಿ' ಷರತ್ತು ವಿಧಿಸಿದ್ದ. ಆದರೆ, ನಂತರ ನಾಪತ್ತೆಯಾಗಿದ್ದ.

ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಆತನ ವಿರುದ್ಧ ಐಪಿಸಿಯ ಕಲಂ 376 ಮತ್ತು 420ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಏತನ್ಮಧ್ಯೆ, ಬಾಲಕಿ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಳು. ನಂತರ ಆಕೆ ಮತ್ತೊಂದು ಮದುವೆಯಾಗಿ, ಮತ್ತೊಂದು ಮಗುವನ್ನು ಹೆತ್ತಿದ್ದಳು.

ವಿಚಾರಣೆ ನಡೆಸಿದ್ದ ನ್ಯಾಯಾಲಯ, 'ಸಂತ್ರಸ್ತೆಯ ವಯಸ್ಸು ಸಾಬೀತಾಗಿಲ್ಲ. ಆರೋಪಿ ಮತ್ತು ಸಂತ್ರಸ್ತೆಯ ನಡುವಿನ ಸಂಬಂಧ ಒಪ್ಪಿತವಾಗಿತ್ತು. ಆರೋಪಿಯು ಸಂತ್ರಸ್ತೆಯ ಜೊತೆ ಸಂಭೋಗ ನಡೆಸಿದ ಕಾರಣದಿಂದಾಗಿಯೇ ಆಕೆ ಗರ್ಭಿಣಿಯಾಗಿದ್ದಳು ಎಂಬುದನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಪ್ರಾಸಿಕ್ಯೂಷನ್, ವಂಶವಾಹಿ ಪರೀಕ್ಷಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸುವ ಮೂಲಕ ಆರೋಪಿಯನ್ನು ಖುಲಾಸೆಗೊಳಿಸಿತ್ತು.

ಮನೆಯತ್ತ ಕೈದಿಗಳ ಹೆಜ್ಜೆ

ಪರಪ್ಪನ ಅಗ್ರಹಾರ ಕಾರಾಗೃಹದ 81 ಕೈದಿಗಳು ಬಂಧಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವಾವಧಿ ಶಿಕ್ಷೆಗೆ ಒಳಗಾಗಿ ಪರಪ್ಪನ ಅಗ್ರಹಾರದ ಕಾರಾಗೃಹ ಸೇರಿದ್ದ 81 ಕೈದಿಗಳಿಗೆ ಮಂಗಳವಾರ ಬಿಡುಗಡೆಯ ಭಾಗ್ಯ ಸಿಕ್ಕಿತು.

ಸನ್ನಡತೆ ಆಧಾರದಲ್ಲಿ ರಾಜ್ಯದ ವಿವಿಧ ಜೈಲುಗಳಲ್ಲಿ ಶಿಕ್ಷೆ ಅನುಭವಿಸುತ್ತಿದ್ದ 214 ಕೈದಿಗಳ ಬಿಡುಗಡೆಗೆ ರಾಜ್ಯ ಸರ್ಕಾರವು ಆದೇಶಿಸಿತ್ತು. ಇಲ್ಲಿನ ಪರಪ್ಪನ ಅಗ್ರಹಾರ ಜೈಲಿನಿಂದಲೂ ಕೈದಿಗಳು ಬಂಧಮುಕ್ತರಾದರು.

ಪರಪ್ಪನ ಅಗ್ರಹಾರದಲ್ಲಿದ್ದ ಇಬ್ಬರು ಮಹಿಳಾ ಕೈದಿಗಳು ಸೇರಿದಂತೆ ಒಟ್ಟು 79 ಮಂದಿಯನ್ನು ಬಿಡುಗಡೆ ಮಾಡಲಾಯಿತು. ಅನಾರೋಗ್ಯದ ಚಿಕಿತ್ಸೆಗೆಂದು ಮೈಸೂರು ಹಾಗೂ ವಿಜಯಪುರದ ತಲಾ ಒಬ್ಬರನ್ನು ಪರಪ್ಪನ ಅಗ್ರಹಾರ ಜೈಲಿಗೆ ಕರೆತರಲಾಗಿತ್ತು. ಅವರಿಬ್ಬರೂ ಸೇರಿ ಒಟ್ಟು 81 ಕೈದಿಗಳನ್ನು ಬಿಡುಗಡೆ ಮಾಡಲಾಯಿತು.

ಕೆಲವರನ್ನು ಕರೆದೊಯ್ಯಲು ಕುಟುಂಬಸ್ಥರು ಜೈಲಿನ ಬಳಿಗೆ ಬಂದಿದ್ದರು. ಗೇಟು ದಾಟಿ ಬರುತ್ತಿದ್ದಂತೆಯೇ ಸಂಬಂಧಿಕರು ತಬ್ಬಿಕೊಂಡು ಕಣ್ಣೀರು ಹಾಕಿದರು. ಸಂಭ್ರಮದಿಂದ ಸ್ವಾಗತಿಸಿ ಮನೆಗೆ ಕರೆದೊಯ್ದರು. ಇನ್ನು ಕೆಲವರು ತಾವೇ ಮನೆಯತ್ತ ಹೆಜ್ಜೆ ಹಾಕಿದರು. ತಮ್ಮ ಬಟ್ಟೆಯ ಬ್ಯಾಗ್‌ನೊಂದಿಗೆ ಹೊರಗೆ ಬಂದರು.

ಕೇಂದ್ರ ಕಾರಾಗೃಹದಿಂದ ಸನ್ನಡತೆ ಮೇಲೆ ಬಿಡುಗಡೆಯಾದ ಕೈದಿಗಳು ತಮ್ಮ ಆಪ್ತರೊಂದಿಗೆ ಸಂಭ್ರಮ ಹಂಚಿಕೊಂಡರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

'ಎಲ್ಲರಿಗೂ ಬಿಡುಗಡೆಯ ಪ್ರಮಾಣ ಪತ್ರ ನೀಡಿ ಕಳುಹಿಸಲಾಯಿತು. ಇನ್ಮುಂದೆ ಈ ರೀತಿಯ ಪ್ರಮಾದ ಎಸಗುವುದಿಲ್ಲ ಎಂಬುದಾಗಿ ಸಹಿ ಹಾಕಿಸಿಕೊಂಡು ಕಳುಹಿಸಲಾಯಿತು. ಅವರಿಗೆ ಹೂವು ನೀಡಿ ಬೀಳ್ಕೊಡಲಾಯಿತು. ಅವಧಿ ಪೂರ್ವ ಬಿಡುಗಡೆಯಾದ ಎಲ್ಲರೂ ರಾಜ್ಯದ ಕೈದಿಗಳು. ಜೈಲಿನಲ್ಲಿ ಉತ್ತಮ ನಡತೆ ತೋರಿದ್ದ ಅರ್ಹ ಕೈದಿಗಳ ಬಿಡುಗಡೆಗೆ ಕಾರಾಗೃಹಗಳ ಸ್ಥಾಯಿ ಸಲಹಾ ಮಂಡಳಿಗಳ ವರದಿ ಸಮೇತ ಸರ್ಕಾರಕ್ಕೆ ಪ್ರಸ್ತಾವ ಕಳುಹಿಸಿತ್ತು. ಈ ಹಿಂದೆಯೇ ಬಿಡುಗಡೆ ಆಗಬೇಕಿತ್ತು. ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಾಗಿದ್ದರಿಂದ ವಿಳಂಬವಾಗಿತ್ತು' ಎಂದು ಸಿಬ್ಬಂದಿ ಹೇಳಿದರು.

'ಅಪರಾಧ ಪ್ರಕರಣದಲ್ಲಿ ಭಾಗಿಯಾಗಿ ಜೈಲು ಸೇರಿದ್ದೆ. ಇನ್ನು ಆ ರೀತಿಯ ಕೃತ್ಯ ಎಸಗುವುದಿಲ್ಲ. ಕೆಟ್ಟವರ ಜೊತೆಗೂ ಸೇರುವುದಿಲ್ಲ' ಎಂದು ಹೇಳಿದ ಬಿಡುಗಡೆಯಾದವರು, ಖುಷಿಯಿಂದ ಹೊರಟರು.

ಶಶಿಕಲಾಗೆ ಜೈಲಿನಲ್ಲಿ ಸೌಲಭ್ಯ ಆರೋಪ

ಪೊಲೀಸ್ ಅಧಿಕಾರಿಗಳ ವಿರುದ್ಧದ ಪ್ರಕರಣ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ದಿವಂಗತ ಜೆ. ಜಯಲಲಿತಾರ ಆಪ್ತ ಸ್ನೇಹಿತೆ ವಿ.ಕೆ. ಶಶಿಕಲಾಗೆ ಜೈಲಿನಲ್ಲಿ ಐಷಾರಾಮಿ ಸೌಲಭ್ಯ ಕಲ್ಪಿಸಲು ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಬೆಳಗಾವಿ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಕೃಷ್ಣ ಕುಮಾರ್, ಕರ್ನಾಟಕ ಕಾರಾಗೃಹ ಅಕಾಡೆಮಿಯ ಉಪ ನಿರ್ದೇಶಕಿ ಡಾ.ಆರ್. ಅನಿತಾ ಮತ್ತು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಇನ್‌ಸ್ಪೆಕ್ಟರ್ ಗಜರಾಜ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಕುರಿತಂತೆ ಪೊಲೀಸ್ ಅಧಿಕಾರಿಗಳಾದ ಗಜರಾಜ ಮಾಕನೂರ್, ಆರ್. ಅನಿತಾ ಮತ್ತು ಕೃಷ್ಣಕುಮಾರ್ ಸಲ್ಲಿಸಿದ್ದ ಮೂರು ಪ್ರತ್ಯೇಕ ಅರ್ಜಿಗಳನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಈ ಪ್ರಕರಣದಲ್ಲಿ ಕಾರಾಗೃಹ ಇಲಾಖೆಯ ನಿವೃತ್ತ ಡಿಜಿಪಿ ಎಚ್‌. ಎನ್‌. ಸತ್ಯನಾರಾಯಣ ಪ್ರಮುಖ ಆರೋಪಿಯಾಗಿದ್ದು, ಅವರ ವಿರುದ್ಧದ ಆರೋಪಗಳನ್ನು ಕೈಬಿಡಲಾಗಿದೆ. ಆದರೆ, ಅನಿತಾ ಮತ್ತು ಇತರರನ್ನು ಪ್ರಕರಣದಲ್ಲಿ ಸಿಲುಕಿಸಲಾಗಿದೆ. ಅನಿತಾ ತಮ್ಮ ಮೇಲಧಿಕಾರಿಯಾಗಿದ್ದ ಮುಖ್ಯ ಜೈಲು ಅಧೀಕ್ಷಕ ಕೃಷ್ಣಕುಮಾರ ಸೂಚನೆಯಂತೆ ನಡೆದುಕೊಂಡಿದ್ದಾರೆ. ಆದರೆ, ಅನಿತಾ ವಿರುದ್ಧದ ವಿಚಾರಣೆಯನ್ನು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ರದ್ದುಪಡಿಸಿರುವುದು ಗಮನಾರ್ಹ. ಇದರ ಆಧಾರದಲ್ಲಿ ಅವರ ವಿರುದ್ಧದ ವಿಚಾರಣೆಯನ್ನು ಸರ್ಕಾರ ಕೈಬಿಟ್ಟಿದೆ. ಆದರೂ, ಇದೇ ಆರೋಪಕ್ಕೆ ಸಂಬಂಧಿಸಿದಂತೆ ಅನಿತಾ ವಿರುದ್ಧ ಕ್ರಮ ಜರುಗಿಸಲು ಮತ್ತೊಮ್ಮೆ ಪೂರ್ವಾನುಮತಿ ನೀಡಲಾಗಿದೆ. ಇದು ಕಾನೂನಿನ ದುರ್ಬಳಕೆಯಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಇದೇ ವೇಳೆ ನ್ಯಾಯಪೀಠ, 'ಪ್ರಕರಣದ ಮೊದಲನೇ ಆರೋಪಿಯಾದ ಕೃಷ್ಣಕುಮಾರ್ ವಿರುದ್ಧ ವಿವೇಚನೆ ಬಳಸಿ ಪೂರ್ವಾನುಮತಿ ನೀಡುವ ಕುರಿತಂತೆ ಕಾನೂನು ಪ್ರಕಾರ ಸೂಕ್ತ ಆದೇಶ ಹೊರಡಿಸಲು ಸಕ್ಷಮ ಪ್ರಾಧಿಕಾರ ಮುಕ್ತವಾಗಿದೆ' ಎಂದು ತಿಳಿಸಿದೆ.

ಪ್ರಕರಣವೇನು?

ಆದಾಯ ಮೀರಿದ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ 2017ರಲ್ಲಿ ಶಿಕ್ಷೆಗೆ ಒಳಗಾಗಿದ್ದ ಶಶಿಕಲಾ ಮತ್ತು ಅವರ ಸಂಬಂಧಿ ಇಳವರಸಿಗೆ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ವಿಶೇಷ ಸೌಲಭ್ಯ ಕಲ್ಪಿಸಲು ₹ 2 ಕೋಟಿ ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ವಿರುದ್ಧ ಆರೋಪ ಕೇಳಿಬಂದಿತ್ತು.

ಈ ಸಂಬಂಧ ನಿವೃತ್ತ ಐಎಎಸ್ ಅಧಿಕಾರಿ ವಿನಯ್ ಕುಮಾರ್ ನೇತೃತ್ವದಲ್ಲಿ ವಿಚಾರಣೆ ನಡೆಸಿ ವರದಿ ಸಲ್ಲಿಸಲಾಗಿತ್ತು. ನಂತರ ಸರ್ಕಾರ ತನಿಖೆಯನ್ನು ಎಸಿಬಿಗೆ ವರ್ಗಾಯಿಸಿತ್ತು. ತನಿಖೆ ಪೂರ್ಣಗೊಳಿಸಿದ್ದ ಎಸಿಬಿಗೆ, ಅರ್ಜಿದಾರರ ವಿರುದ್ಧ ಪ್ರಾಸಿಕ್ಯೂಷನ್‌ಗಾಗಿ ಪೂರ್ವಾನುಮತಿ ನೀಡಿ ರಾಜ್ಯ ಸರ್ಕಾರ ಆದೇಶಿಸಿತ್ತು.

ಹಳೇ ದ್ವೇಷ: ರೌಡಿ ಶೀಟರ್ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಪಿ. ಅಗ್ರಹಾರ ಪೊಲೀಸ್ ಠಾಣಾ ವ್ಯಾಪ್ತಿಯ ರೌಡಿ ಶೀಟರ್ ಸಾಗರ್ ಅಲಿಯಾಸ್ ಚಿನ್ನು (23) ಎಂಬಾತನನ್ನು ಪಾರ್ಟಿ ಮಾಡಲೆಂದು ಕರೆಸಿಕೊಂಡ ದುಷ್ಕರ್ಮಿಗಳು ಕೊಲೆ ಮಾಡಿ ಪರಾರಿ ಆಗಿದ್ದಾರೆ.

ಸಾಗರ್, ಕ್ಯಾಬ್ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದ. ಈತನ ವಿರುದ್ಧ ಕೆ.ಪಿ. ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಗಲಾಟೆ, ಕೊಲೆ ಯತ್ನ ಪ್ರಕರಣಗಳು ದಾಖಲಾಗಿದ್ದವು. ರೌಡಿ ಪಟ್ಟಿಗೂ ಸೇರಿಸಲಾಗಿತ್ತು ಎಂದು ಪೊಲೀಸರು ಹೇಳಿದರು.

'ಸೋಮವಾರ ಸಂಜೆ ಸಾಗರ್‌ಗೆ ನವೀನ್ ಕೆ. ವಾಲೆ ಹಾಗೂ ಇತರರು ಕರೆ ಮಾಡಿ ಕರೆಸಿಕೊಂಡಿದ್ದರು. ಚೆಲುವಪ್ಪ ಗಾರ್ಡನ್ ಬಳಿಯ ಮಹಾದೇಶ್ವರ ದೇವಸ್ಥಾನ ಬಳಿಯ ಖಾಲಿ ಪ್ರದೇಶದಲ್ಲಿ ಎಲ್ಲರೂ ಪಾರ್ಟಿ ಮಾಡುತ್ತಿದ್ದರು. ಹಳೇ ದ್ವೇಷದಿಂದ ಗಲಾಟೆ ನಡೆದು, ಲಾಂಗ್‌ನಿಂದ ಸಾಗರ್ ಮೇಲೆ ಹಲ್ಲೆ ನಡೆಸಲಾಗಿತ್ತು. ರಕ್ತಸ್ರಾವದಿಂದ ಬಿದ್ದಿದ್ದ ಆತನನ್ನು ಸ್ನೇಹಿತರು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲೇ ಮೃತಪಟ್ಟಿದ್ದರು' ಎಂದರು.

ಸಾಗರ್ ತಾಯಿ ಯಶೋದಾ ದೂರು ನೀಡಿದ್ದಾರೆ.

ಮಹಿಳಾ ಉದ್ಯೋಗಿಗಳ ನಗ್ನ ದೃಶ್ಯ ಸೆರೆ ಹಿಡಿದ ಹೋಟೆಲ್ ಉದ್ಯಮಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಹೋಟೆಲ್‌ನಲ್ಲಿ ಕೆಲಸಕ್ಕಿದ್ದ ಇಬ್ಬರು ಮಹಿಳಾ ಉದ್ಯೋಗಿಗಳ ಸ್ನಾನ ಮಾಡುತ್ತಿದ್ದ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಮಾಧ್ಯಮದಲ್ಲಿ ಹರಿಯಬಿಡುವ ಬೆದರಿಕೆ ಒಡ್ಡುತ್ತಿದ್ದ ಹೋಟೆಲ್ ಉದ್ಯಮಿಯನ್ನು ಎಚ್‌ಎಎಲ್ ಪೊಲೀಸರು ಬಂಧಿಸಿದ್ದಾರೆ.

ನಿಸರ್ಗ ಲೇಔಟ್ ನಿವಾಸಿ, ಹೋಟೆಲ್ ಉದ್ಯಮಿ ರಘುರಾಮ್ (42) ಬಂಧಿತ ಆರೋಪಿ.

ಇಬ್ಬರು ಮಹಿಳಾ ಉದ್ಯೋಗಿಗಳಿಗೆ ವಿಡಿಯೊ ತೋರಿಸಿ ಲೈಂಗಿಕ ಕ್ರಿಯೆಗೆ ಒತ್ತಾಯಿಸುತ್ತಿದ್ದ. 22 ವರ್ಷದ ಯುವತಿ ಕ್ಯಾಶಿಯರ್ ಆಗಿ, 23 ವರ್ಷದ ಯುವತಿ ವ್ಯವಸ್ಥಾಪಕಿಯಾಗಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನಿಸರ್ಗ ಲೇಔಟ್‌ನ 5ನೇ ಕ್ರಾಸ್‌ನಲ್ಲಿರುವ ಕಟ್ಟಡದ ಕೆಳ ಅಂತಸ್ತಿನಲ್ಲಿ ಮಹಿಳಾ ಉದ್ಯೋಗಿಗಳು ವಾಸಕ್ಕಿದ್ದರು. ಸ್ನಾನಗೃಹದ ವೆಂಟಿಲೇಟರ್ ಬಳಿ ಮೊಬೈಲ್ ಇರುವುದನ್ನು ಯುವತಿಯರಿಬ್ಬರು ಗಮನಿಸಿದ್ದರು. ಆರಂಭದಲ್ಲಿ ಹೋಟೆಲ್‌ನ ಸಿಬ್ಬಂದಿಯ ಮೊಬೈಲ್ ಇರಬಹುದೆಂದು ಭಾವಿಸಿದ್ದರು. ಅನುಮಾನಬಂದು ಪರಿಶೀಲಿಸಿದಾಗ ನಗ್ನದೃಶ್ಯವನ್ನು ಚಿತ್ರೀಕರಿಸಿರುವುದು ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

'ಆ ವಿಡಿಯೊಗಳನ್ನು ಡಿಲೀಟ್ ಮಾಡುವಂತೆ ಮನವಿ ಮಾಡಲಾಯಿತು. ಆದರೂ ಆತ ಡಿಲೀಟ್ ಮಾಡದೇ ಲೈಂಗಿಕ ಕ್ರಿಯೆಗೆ ಸಹಕರಿಸುವಂತೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಆರೋಪಿಯ ಮೊಬೈಲ್ ವಶಕ್ಕೆ ಪಡೆದು ಎಫ್‌ಎಸ್‌ಎಲ್‌ಗೆ ರವಾನಿಸಲಾಗಿದೆ ಎಂದು ಪೊಲೀಸರು ಹೇಳಿದರು.

₹ 1.20 ಕೋಟಿ ಮೌಲ್ಯದ 72 ಬೈಕ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ, ತಮಿಳುನಾಡು ಹಾಗೂ ಆಂಧ್ರ ಪ್ರದೇಶದಲ್ಲಿ ಐಷಾರಾಮಿ ಬೈಕ್‌ಗಳನ್ನು ಕಳವು ಮಾಡಿ ಮಾರಾಟ ಮಾಡುತ್ತಿದ್ದ ತಮಿಳುನಾಡಿನ ದಿನೇಶ್, ಶಂಕರ್, ಅರುಣ್, ರಾಜೇಶ್, ಪೂವರಸನ್, ವಿನೋದ್‌ಕುಮಾರ್, ಕಾರ್ತಿಕ್ ಅವರನ್ನು ಬೊಮ್ಮನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಆರೋಪಿಗಳಿಂದ ರಾಯಲ್ ಎನ್‌ಫೀಲ್ಡ್ -13, ಯಮಹಾ ಆರ್ (15)- 6, ಪಲ್ಸರ್ ಎನ್‌ಎಸ್ (200)-8, ಪಲ್ಸರ್ ಎನ್‌ಎಸ್ (160)-2, ಬಜಾಜ್ ಪಲ್ಸರ್ (150)-22, ಹೀರೊ ಹೊಂಡಾ ಸ್ಪ್ಲೆಂಡರ್ -10, ಹೋಂಡಾ ಡಿಯೋ -9, ಟಿವಿಎಸ್ ಎನ್‌ಟಾರ್ಕ್ -1, ಟಿವಿಎಸ್ ಅಪ್ಪಾಚೆ-1, ಹೋಂಡಾ ಆಕ್ಟಿವಾ-1 ಸೇರಿ ಒಟ್ಟು 72 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹1.20 ಕೋಟಿಯಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಗಳು ಮೂರು ತಂಡಗಳಾಗಿ ಬೈಕ್ ಕಳವು ಮಾಡುತ್ತಿದ್ದರು. ತಮಿಳುನಾಡಿನಿಂದ ಬಸ್‌ನಲ್ಲಿ ಬಂದು ಅತ್ತಿಬೆಲೆ, ಹೆಬ್ಬಗೋಡಿ, ಹೊಸ ರೋಡ್, ಗಾರ್ವೆಬಾವಿ ಪಾಳ್ಯ ಬಸ್‌ನಿಲ್ದಾಣದಲ್ಲಿ ಇಳಿಯುತ್ತಿದ್ದರು. ಅಲ್ಲಿಂದ ಬೊಮ್ಮನಹಳ್ಳಿ, ಬೇಗೂರು, ಮೈಕೋಲೇಔಟ್, ಹೆಬ್ಬಗೋಡಿ, ಅತ್ತಿಬೆಲೆ, ಸೂರ್ಯಸಿಟಿ ಠಾಣೆ ವ್ಯಾಪ್ತಿಯಲ್ಲಿ ಬೈಕ್‌ಗಳನ್ನು ಕದಿಯುತ್ತಿದ್ದರು' ಎಂದು ಮಾಹಿತಿ ನೀಡಿವೆ.

ಅಖಿಲ ಕುಂಚಿಟಿಗರ ಮಹಾಮಂಡಲ ಇತ್ತೀಚೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕಗಳಿಸಿದ ಶ್ರೀಗಂಧದ ವಿದ್ಯೋದಯ ಶಾಲೆಯ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಮಹಾಮಂಡಲದ ಅಧ್ಯಕ್ಷ ರಂಗಹನುಮಯ್ಯ, ಟ್ರಸ್ಟ್ ಕಾರ್ಯಾಧ್ಯಕ್ಷ ಚಿಕ್ಕಿರಪ್ಪ ಇದ್ದರು.

ಬೆದರಿಸಿ ಪಿ.ಜಿ ಮಾಲೀಕರ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿ.ಜಿ ಮಾಲೀಕರನ್ನು ನಿರ್ಮಾಣ ಹಂತದ ಕಟ್ಟಡಕ್ಕೆ ಕರೆಸಿಕೊಂಡು ಅವರಿಗೆ ಚುಚ್ಚುಮದ್ದು ನೀಡುವ ಬೆದರಿಕೆ ಹಾಕಿ ಚಿನ್ನಾಭರಣ ಹಾಗೂ ನಗದು ಸುಲಿಗೆ ಮಾಡುತ್ತಿದ್ದ ಇಬ್ಬರು ಎಂಜಿನಿಯರಿಂಗ್ ಪದವೀಧರರು ಹಾಗೂ ಒಬ್ಬ ವಕೀಲನನ್ನು ಕುಮಾರಸ್ವಾಮಿ ಲೇಔಟ್ ಪೊಲೀಸರು ಬಂಧಿಸಿದ್ದಾರೆ.

ಬಿ.ಆರ್.ಸ್ವರೂಪ್ (27), ಆತ್ಮಾನಂದ ಜಂಬಗಿ (27)ಹಾಗೂ ಶಾಲಿಂ ರಾಜ ಬಂಧಿತರು. ಮತ್ತೊಬ್ಬ ಆರೋಪಿ ಆದಿಮೂರ್ತಿ ತಲೆ ಮರೆಸಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

'ತಮಗೆ ಗೊತ್ತಿರುವ ವ್ಯಕ್ತಿಗಳನ್ನೇ ನಾಲ್ವರು ಗುರಿಯಾಗಿಸಿಕೊಂಡು ದರೋಡೆ ನಡೆಸುತ್ತಿದ್ದರು. ನಾಲ್ವರು ಆರೋಪಿಗಳು ಪಿ.ಜಿಯಲ್ಲಿ ಉಳಿದುಕೊಂಡು ಮಾಲೀಕರ ದಿನನಿತ್ಯದ ವ್ಯವಹಾರಗಳನ್ನು ಗಮನಿಸುತ್ತಿದ್ದರು. ಅವರ ಎಲ್ಲ ಮಾಹಿತಿ ತಿಳಿದುಕೊಂಡು ದರೋಡೆಗೆ ಯೋಜನೆ ರೂಪಿಸುತ್ತಿದ್ದರು. ಪಿ.ಜಿ ನಡೆಸಲು ಸೂಕ್ತ ಸ್ಥಳದಲ್ಲಿ ಹೊಸ ಮನೆಯನ್ನು ಬಾಡಿಗೆಗೆ ಕೊಡಿಸುತ್ತೇವೆ ಎಂದು ಮಾಲೀಕರನ್ನು ನಿರ್ಮಾಣ ಹಂತದ ಕಟ್ಟಡಕ್ಕೆ ಕರೆಸಿಕೊಳ್ಳುತ್ತಿದ್ದರು. ಅಲ್ಲಿ ಅವರನ್ನು ಅಕ್ರಮವಾಗಿ ಕೂಡಿಟ್ಟು ಚುಚ್ಚುಮದ್ದು ನೀಡಿ ಪ್ಯಾರಾಲಿಸೀಸ್ ಬರುವಂತೆ ಮಾಡುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದರು. ಅವರ ಮೈಮೇಲಿದ್ದ ಚಿನ್ನಾಭರಣ ಹಾಗೂ ನಗದು, ಮನೆಯಲ್ಲಿದ್ದ ಚಿನ್ನಾಭರಣ ದೋಚಿ ಪರಾರಿಯಾಗುತ್ತಿದ್ದರು' ಎಂದು ಪೊಲೀಸರು ಹೇಳಿದರು.

'15 ದಿನಗಳ ಹಿಂದೆ ನಾಲ್ವರು ಆರೋಪಿಗಳೂ, ಕೆಎಸ್ ಲೇಔಟ್‌ನ ಟೀಚರ್ಸ್ ಕಾಲೊನಿಯ ಗುತ್ತಿಗೆದಾರರ ಮನೆಗೆ ವೀಸಾ ತಪಾಸಣೆಗೆಂದು ಅಧಿಕಾರಿಗಳ ಸೋಗಿನಲ್ಲಿ ತೆರಳಿದ್ದರು. ಮೊದಲೇ ಗುತ್ತಿಗೆದಾರರ ಪರಿಚಯ ಇತ್ತು. ಅವರಿಗೆ ತಿಳಿಯದಂತೆ ಮಾಸ್ಕ್ ಧರಿಸಿದ್ದರು. ನಗದು ಹಾಗೂ ಚಿನ್ನಾಭರಣ ದೋಚಿ ಪರಾರಿಯಾಗಿದ್ದರು. ಬಂಧಿತರಿಂದ ₹ 13 ಲಕ್ಷದ ವಜ್ರ ಹಾಗೂ ಚಿನ್ನಾಭರಣ, ₹ 1.5 ಲಕ್ಷದ ಬೆಳ್ಳಿ ಆಭರಣ, ₹ 2.20 ಲಕ್ಷ ನಗದು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದರು.

ಕೈಲಾಸಾಶ್ರಮದ ಜಯೇಂದ್ರಪುರಿ ಸ್ವಾಮೀಜಿ ಗಾಣಿಗರಿಗೆ ಕಿವಿಮಾತು

'ಸಂಪಾದನೆಯ ಶೇ 10 ರಷ್ಟು ಸಮಾಜಕ್ಕೆ'

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಸಾಮಾಜಿಕ ಕಾರ್ಯಗಳಿಗಾಗಿ ಸಂಪಾದನೆಯ ಶೇ 10ರಷ್ಟನ್ನು ಮಠಕ್ಕೆ ಮೀಸಲಿಡುವ ಜತೆಗೆ ಜನ ಬೆಂಬಲವನ್ನೂ ನೀಡಬೇಕು' ಎಂದು ಕೈಲಾಸಾಶ್ರಮದ ಜಯೇಂದ್ರಪುರಿ ಸ್ವಾಮೀಜಿ ಗಾಣಿಗರಿಗೆ ಕಿವಿಮಾತು ಹೇಳಿದರು.

ನಗರೂರಿನ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಪೂರ್ಣಾನಂದಪುರಿ ಸ್ವಾಮೀಜಿ ಅವರ ಪೀಠಾರೋಹಣದ ಮೊದಲ ವಾರ್ಷಿಕೋತ್ಸವದಲ್ಲಿ ಆಶೀರ್ವಚನ ನೀಡಿದರು.

'ಗಾಣಿಗ ಜನಾಂಗಕ್ಕೆ ಈವರೆಗೂ ಗುರುಪೀಠ ಇರಲಿಲ್ಲ. ಪೂರ್ಣಾನಂದಪುರಿ ಸ್ವಾಮೀಜಿ ಶ್ರಮದ ಫಲವಾಗಿ ಪೀಠ ಸ್ಥಾಪನೆಯಾಗಿದೆ. ಇದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಜನಾಂಗದವರ ಮೇಲಿದೆ. ಪೂರ್ಣಾನಂದಪುರಿ

ಪೂರ್ಣಾನಂದಪುರಿ ಸ್ವಾಮೀಜಿ ಅವರು ಜಯೇಂದ್ರಪುರಿ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು

ಸ್ವಾಮೀಜಿ ಅವರು ಪೂರ್ವಾಶ್ರಮದ ಎಲ್ಲವನ್ನೂ ತ್ಯಾಗ ಮಾಡಿ, ತಮಗೆ ಬರುವ ಪಿಂಚಣಿ ಹಣವನ್ನೂ ಮಠ ನಡೆಸಲು ಮೀಸಲಿಟ್ಟಿದ್ದಾರೆ. ವೃದ್ಧಾಪ್ಯದಲ್ಲಿ ಬೇರೆಯವರ ಆಸರೆ ಬೇಕಿರುತ್ತದೆ. ಆದರೆ, ಇವರು ಇಳಿ ವಯಸ್ಸಿನಲ್ಲಿಯೂ ಗಾಣಿಗ ಜನಾಂಗಕ್ಕೆ ಆಸರೆಯಾಗಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪೂರ್ಣಾನಂದಪುರಿ ಸ್ವಾಮೀಜಿ, 'ಗಾಣಿಗರಿಗೆ ಗುರುಪೀಠ ಸ್ಥಾಪನೆಯ ನನ್ನ ಗುರಿ ಈಡೇರಿದೆ. ಬಡವರಿಗೆ, ಅನಾಥರಿಗೆ ಉಚಿತ ವಸತಿ ಹಾಗೂ ಶಿಕ್ಷಣ ನೀಡಲು ಶಾಲೆ ತೆರೆಯಲಾಗುತ್ತಿದ್ದು, ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದೆ. ಕಟ್ಟಡ ಪೂರ್ಣಗೊಳ್ಳಲು ದಾನಿಗಳು ಸಹಕರಿಸಬೇಕು. ಇದು ನನಗಾಗಿ ಅಲ್ಲ, ಸಮಾಜಕ್ಕಾಗಿ' ಎಂದರು.

ತೊಗಟವೀರ ಕ್ಷತ್ರಿಯ ನೇಕಾರ ಪುಷ್ಪಾಂಡಜ ಮಹರ್ಷಿ ಆಶ್ರಮದ ದಿವ್ಯಜ್ಞಾನಾನಂದಗಿರಿ ಸ್ವಾಮೀಜಿ, 'ವ್ಯಕ್ತಿ ಏನನ್ನಾದರು ಮಾಡುತ್ತಿದ್ದಾನೆ ಎಂದರೆ ಅಸೂಯೆ ಪಡದೆ ಪ್ರೋತ್ಸಾಹಿಸಬೇಕು. ಗುರುಗಳಿಂದ ಸಂಸ್ಕಾರ ಪಡೆದಾಗ ಬೆಳಕು ಮೂಡುತ್ತದೆ' ಎಂದರು.

ಕಾಂಗ್ರೆಸ್ ಮುಖಂಡ ವಿ.ಆರ್. ಸುದರ್ಶನ್, 'ನಿವೃತ್ತಿಯಾದವರು ಮಠದ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಕೋಲಾರದ ಜ್ಯೋತಿ ಎಜುಕೇಷನಲ್ ಟ್ರಸ್ಟ್ ಮೂಲಕ ಪ್ರತಿವರ್ಷ ಮಠಕ್ಕೆ ₹ 1 ಲಕ್ಷ ದೇಣಿಗೆ ನೀಡಲಾಗುವುದು' ಎಂದು ಘೋಷಿಸಿದರು.

ಮಠದ ಟ್ರಸ್ಟಿ ಟಿ.ರಂಗರಾಜು, ಷಣ್ಮುಗಂ, ಅಶೋಕ್, ಮುಖಂಡ ದೇವರಾಜ್ ಮುರಾರಯ್ಯ ಇದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

RENTAL PROPERTIES

Accommodation Available

Commercial

COMMERCIAL PREMISES FOR RENT
484 sqft - S2 and 352 sqft - S3 Ground Floor, Manipal Centre, M.G.Road, 1550 sqft Ground Floor, 1550 sqft First Floor, West of Chord Road, in front of Giriyas, Bengaluru.
Contact: 97402 70590, 94487 85006

REAL ESTATE SELLING

House

BTM Layout

15'X40' BBMP 'A' Khata,3Floor Tenanted Building for Sale in BTM Layout 2nd Stage,Direct Registration 8884152641,98L

Residential/ Commercial

Vijayanagar

DUPLEX HOUSE 1608 SQFT Sale Near Attiguppe Metro 2.81 Crores Negotiable Chandrasekharan 9449064047

Sites

Yelahanka

IMMEDIATE SALE 7000 sqft converted land near Ardeshanhalli toll gate. Contact 9036656567

EDUCATION CORNER
ಕ್ಲಾಸಿಫೈಡ್ಸ್

ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಕಳೆದ ವರ್ಷ ನಡೆಸಿದ್ದ ನಾಗರಿಕ ಸೇವಾ ಪರೀಕ್ಷೆಗಳ ಫಲಿತಾಂಶ ಪ್ರಕಟಸಿದ್ದು, ರಾಜ್ಯದ ಹಲವು ಪ್ರತಿಭಾವಂತರು ಸಾಧನೆ ಮೆರೆದು ‘ಲೋಕಸೇವೆ’ಗೆ ಸಜ್ಜಾಗಿದ್ದಾರೆ. ಈ ಸಾಧಕರು ಕಂಡ ಕನಸು, ಅದನ್ನು ನನಸು ಮಾಡಿಕೊಳ್ಳಲು ನಡೆಸಿದ ಪ್ರಯತ್ನದ ಇಣುಕು ನೋಟವೊಂದು ಇಲ್ಲಿದೆ...

ಸೇವೆಯಲ್ಲಿದ್ದುಕೊಂಡೇ ಯಶಸ್ಸು

55

ಬೆಂಗಳೂರು: ಸೊಲ್ಲಾಪುರದಲ್ಲಿ ಭಾರತೀಯ ರೈಲ್ವೆ ಸಂಚಾರ ಸೇವೆಯಲ್ಲಿ ಸಹಾಯಕ ಕಾರ್ಯಾಚರಣೆ ವ್ಯವಸ್ಥಾಪಕಿಯಾಗಿ ಕಾರ್ಯನಿರ್ವಹಿಸುತ್ತಿರುವ ಇಲ್ಲಿನ ಎಚ್‌.ಎಸ್‌. ಭಾವನಾ, ಕೇಂದ್ರ ನಾಗರಿಕ ಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆಯಲ್ಲಿ 55ನೇ ರ‍್ಯಾಂಕ್ ಪಡೆದಿದ್ದಾರೆ.

ಅವರು ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ ವಿಷಯದಲ್ಲಿ ಎಂಜಿನಿಯರಿಂಗ್ ಪದವೀಧರೆ ಆಗಿದ್ದು, ಬನಶಂಕರಿಯ ನಿವಾಸಿ. ಪ್ರಾಥಮಿಕ ಹಾಗೂ ಉನ್ನತ ಶಿಕ್ಷಣವನ್ನು ಅವರು ಇಲ್ಲಿಯೇ ಪೂರೈಸಿದ್ದಾರೆ. ಸೇವೆಯಲ್ಲಿದ್ದುಕೊಂಡೇ ಪರೀಕ್ಷೆ ಬರೆದು, 6ನೇ ಪ್ರಯತ್ನದಲ್ಲಿ ಯಶಸ್ಸು ಸಾಧಿಸಿದ್ದಾರೆ.

‘ಕೆಲಸಕ್ಕೆ ಸೇರಿದ ಮೇಲೆ ಓದುವುದು ಕಷ್ಟವಾಯಿತು. ಆದರೂ ದಿನಕ್ಕೆ 6ರಿಂದ 7 ಗಂಟೆ ಓದುತ್ತಿದ್ದೆ. ಕೆಲಸಕ್ಕೆ ಸೇರುವ ಮೊದಲು 10ರಿಂದ 11 ಗಂಟೆ ಓದುತ್ತಿದ್ದೆ. ಇದರಿಂದ ಯಶಸ್ಸು ಸಾಧ್ಯವಾಯಿತು. ಇನ್ನಷ್ಟು ಓದಬೇಕು ಎಂಬ ಆಸೆಯಿದೆ. ಜನರಿಗೆ ನೇರ ಸಂಪರ್ಕ ಹೊಂದಿರುವ ಗ್ರಾಮೀಣಾಭಿವೃದ್ಧಿ, ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಕೆಲಸ ಮಾಡಬೇಕು ಅಂದುಕೊಂಡಿದ್ದೇನೆ’ ಎಂದರು.

ಎಚ್‌.ಎಸ್‌. ಭಾವನಾ

‘ಪ್ರಯತ್ನಕ್ಕೆ ತಕ್ಕ ಪ್ರತಿಫಲ ಸಿಕ್ಕಿದೆ’

198

ಧಾರವಾಡ: ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯ ಸಾಧನೆಯ ಆಧಾರದಲ್ಲಿ 2021ರಲ್ಲಿ ಭಾರತೀಯ ಕ್ರೀಡಾ ಪ್ರಾಧಿಕಾರದ ಸಹಾಯಕ ನಿರ್ದೇಶಕರಾಗಿರುವ ನಗರದ ಉಳವಿ ಚನ್ನಬಸವೇಶ್ವರ ಬಡಾವಣೆಯ ಸೌರಭ್ ನರೇಂದ್ರ ಅವರು, 2022ರ ಪರೀಕ್ಷೆಯಲ್ಲಿ 198ನೇ ರ‍್ಯಾಂಕ್ ಪಡೆದಿದ್ದಾರೆ.

ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಹೊಂದಿರುವ ಸೌರಭ್, ಖಾಸಗಿ ವಲಯದಲ್ಲೂ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. 2018ರಿಂದ ನಿರಂತರವಾಗಿ ಲೋಕಸೇವಾ ಆಯೋಗ ಪರೀಕ್ಷೆ ಎದುರಿಸಿರುವ ಇವರು, 2019ರಲ್ಲಿ ಮುಖ್ಯ ಪರೀಕ್ಷೆ ಪಾಸು ಮಾಡಿದ್ದರು. 2021ರಲ್ಲಿ ಏಳು ಅಂಕಗಳಲ್ಲಿ ಅವಕಾಶ ವಂಚಿತರಾದ ಇವರಿಗೆ, ಭಾರತೀಯ ಕ್ರೀಡಾ ಪ್ರಾಧಿಕಾರದ ಸಂದರ್ಶನದಲ್ಲಿ ಸಹಾಯಕ ನಿರ್ದೇಶಕ ಹುದ್ದೆ ಪಡೆದಿದ್ದರು. ಸದ್ಯ ಪುದುಚೇರಿಯಲ್ಲಿ ಕರ್ತವ್ಯದಲ್ಲಿದ್ದಾರೆ.

ತಂದೆ ಅಮೃತ ನರೇಂದ್ರ ಅವರು ವಿಮಾ ಏಜೆಂಟ್ ಆಗಿದ್ದಾರೆ. ತಾಯಿ ಸುನೀತಾ ಹಾಗೂ ತಮ್ಮ ಅಮೋಘ ಇದ್ದಾರೆ. ‘ಇಲ್ಲಿಯವರೆಗೂ ಪಟ್ಟ ಪ್ರಯತ್ನಕ್ಕೆ ತಕ್ಕ ಫಲ ದೊರೆತಿದೆ’ ಎಂದು ತಿಳಿಸಿದರು.

ಸೌರಭ್ ನರೇಂದ್ರ

ಛಲ ಬಿಡದ ಕಲ್ಲೂರಿನ ಸಾಧಕ

222

ರಾಯಚೂರು: ಜಿಲ್ಲೆಯ ಸಿರವಾರ ತಾಲ್ಲೂಕು ಕಲ್ಲೂರು ಗ್ರಾಮದ ಪಿ.ಶ್ರವಣಕುಮಾರ್ ಅವರು ಈ ಬಾರಿ ಲೋಕಸೇವಾ ಆಯೋಗ (ಯುಪಿಎಸ್‌ಸಿ) ದ ಪರೀಕ್ಷೆಯಲ್ಲಿ 222ನೇ ರ‍್ಯಾಂಕ್ ಗಿಟ್ಟಿಸಿದ್ದಾರೆ.

ತಂದೆ ರಾಘವೇಂದ್ರರಾವ್ ಪೂಜಾರಿ ಅವರು ಹೈದರಾಬಾದ್‌ನಲ್ಲಿ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರಿಗೆ ಬೇರೆ ಬೇರೆ ರಾಜ್ಯಗಳಿಗೆ ವರ್ಗಾವಣೆ ಆಗುವುದರಿಂದ ಶ್ರವಣ್ ಒಂದೇ ಕಡೆಗೆ ಆರಂಭಿಕ ಶಿಕ್ಷಣ ಮುಗಿಸಿಲ್ಲ.

ಬೆಂಗಳೂರಿನ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಟೆಕ್ ಪದವಿ ಪಡೆದಿದ್ದಾರೆ. 2021ರಲ್ಲಿ ಯುಪಿಎಸ್‌ಸಿ ಪರೀಕ್ಷೆ ಬರೆದಾಗ 521ನೇ ರ‍್ಯಾಂಕಿಂಗ್ ಪಡೆದು ಇಂಡಿಯನ್ ರೆವಿನ್ಯೂ ಸರ್ವಿಸ್ (ಐಆರ್‌ಎಸ್)ನಲ್ಲಿ ಆಯ್ಕೆ ಆಗಿ ಈಗಾಗಲೇ ಐಆರ್‌ಎಸ್ ತರಬೇತಿ ಪಡೆಯುತ್ತಿದ್ದಾರೆ. ರ‍್ಯಾಂಕಿಂಗ್ ಹೆಚ್ಚಿಸಿಕೊಳ್ಳಲು ಈ ಬಾರಿ ಯುಪಿಎಸ್‌ಸಿ ಪರೀಕ್ಷೆ ಬರೆದಿದ್ದರು. ತಾಂತ್ರಿಕ ಶಿಕ್ಷಣ ಪಡೆದರೂ ಯುಪಿಎಸ್‌ಸಿ ಪರೀಕ್ಷೆಗಾಗಿ ರಾಜ್ಯಶಾಸ್ತ್ರ ವಿಷಯ ಆಯ್ಕೆ ಮಾಡಿಕೊಂಡಿದ್ದರು.

ಪಿ.ಶ್ರವಣಕುಮಾರ್

ಹಳ್ಳಿ ಹುಡುಗನ ‘ಚೆಲುವ’ ಸಾಧನೆ

238

ರಾಮನಗರ: ಹಳ್ಳಿಗಾಡಿನ ಸರ್ಕಾರಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲೇ ಓದಿ, ಐಎಎಸ್ ಕನಸು ನನಸಾಗಿಸಿಕೊಂಡ ಕೀರ್ತಿ ಚೆಲುವರಾಜು ಅವರದ್ದು.

ರಾಮನಗರ ಜಿಲ್ಲೆಯ ಹಾರೋಹಳ್ಳಿ ತಾಲ್ಲೂಕಿನ ದೊಡ್ಡಬಾದಿಗೆರೆಯವರಾದ ಚೆಲುವರಾಜು ಈ ಬಾರಿಯ ಯುಪಿಎಸ್‌ಸಿ ಪರೀಕ್ಷೆಯಲ್ಲಿ 238ನೇ ರ‍್ಯಾಂಕ್ ಪಡೆದಿದ್ದಾರೆ. ಒಟ್ಟು ಐದು ಬಾರಿ ಪರೀಕ್ಷೆ ಎದುರಿಸಿರುವ ಅವರು 2020ರಿಂದ ಸತತ ಮೂರು ಬಾರಿ ಸಂದರ್ಶನಕ್ಕೆ ಆಯ್ಕೆಯಾಗಿದ್ದು, ಮೂರನೇ ಪ್ರಯತ್ನದಲ್ಲಿ ಯಶಸ್ಸು ಕೈ ಹಿಡಿದಿದೆ.

27 ವರ್ಷದ ಚೆಲುವರಾಜು ಅವರದ್ದು ರೈತ ಕುಟುಂಬ. ಐಎಎಸ್ ಅಧಿಕಾರಿಯೇ ಆಗಬೇಕು ಎನ್ನುವ ಅವರ ಕನಸಿಗೆ ತಾಯಿ ಹಾಗೂ ಸಹೋದರ ಪ್ರೋತ್ಸಾಹ ನೀಡಿದ್ದಾರೆ. ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಪ್ರೌಢಶಾಲೆ ಶಿಕ್ಷಣ ಪೂರೈಸಿದ ಅವರು, ಬೆಂಗಳೂರಿನ ಆರ್‌ಎನ್‌ಎಸ್ ಐ.ಟಿ. ಕಾಲೇಜಿನಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ. ‘ಐಎಎಸ್ ಅಧಿಕಾರಿ ಆಗಬೇಕು ಎನ್ನುವುದು ನನ್ನ ಕನಸು. ದೇಶದ ಎಲ್ಲಿಯಾದರೂ ಸೇವೆ ಸಲ್ಲಿಸಲು ಸಿದ್ಧ’ ಎಂದು ತಿಳಿಸಿದರು.

ಚೆಲುವರಾಜು

ಸೌರಭ್‌ಗೆ ‘ಪೃಥ್ವಿ’ ಸಿನಿಮಾ ಪ್ರೇರಣೆ

260

ಮೈಸೂರು: ಯುಪಿಎಸ್‌ಸಿ ನಾಗರಿಕ ಸೇವಾ ಪರೀಕ್ಷೆಯಲ್ಲಿ 260ನೇ ರ‍್ಯಾಂಕ್ ಪಡೆದಿರುವ ಇಲ್ಲಿನ ವಿಜಯನಗರದ ಕೆ.ಸೌರಭ್ ಅವರಿಗೆ ಪುನೀತ್ ರಾಜ್ ಕುಮಾರ್ ಅವರ ‘ಪೃಥ್ವಿ’ ಸಿನಿಮಾ ಪ್ರೇರಣೆ ನೀಡಿದೆ! ಡೆಹ್ರಾಡೂನ್‌ನ ಇಂದಿರಾಗಾಂಧಿ ರಾಷ್ಟ್ರೀಯ ಅರಣ್ಯ ಅಕಾಡೆಮಿಯಲ್ಲಿ ಭಾರತೀಯ ಅರಣ್ಯ ಸೇವೆ ತರಬೇತಿಯಲ್ಲಿರುವ ಅವರು, ನಾಗರಿಕ ಸೇವಾ ಪರೀಕ್ಷೆಗೆ ತಯಾರಿ ಮುಂದುವರಿಸಿ ವಿದೇಶಾಂಗ ಸೇವೆ ಸೇರುವ ಕನಸನ್ನು ನನಸು ಮಾಡಿಕೊಂಡಿದ್ದಾರೆ.

‘2021ರಲ್ಲಿ ಭಾರತೀಯ ಅರಣ್ಯ ಸೇವೆ ಹಾಗೂ ನಾಗರಿಕ ಸೇವಾ ಪರೀಕ್ಷೆಗಳೆರಡಲ್ಲೂ ಉತ್ತೀರ್ಣನಾದೆ. ಅರಣ್ಯ ಸೇವಾ ಪರೀಕ್ಷೆಯಲ್ಲಿ 45ನೇ ರ‍್ಯಾಂಕ್ ಪಡೆದಿದ್ದರಿಂದ, ಅದನ್ನೇ ಆಯ್ಕೆ ಮಾಡಿಕೊಂಡೆ. ಇದೀಗ ವಿದೇಶಾಂಗ ಸೇವೆ ಸಿಗುವ ನಿರೀಕ್ಷೆಯಿದೆ’ ಎಂದು ಸೌರಭ್ ಸಂತಸ ಹಂಚಿಕೊಂಡರು. ‘ಪದವಿ ಓದುವಾಗ, ಪುನೀತ್ ಅವರ ಪೃಥ್ವಿ ಸಿನಿಮಾ ಆಕರ್ಷಿಸಿತ್ತು. ಈಗಲೂ ಸಿನಿಮಾವನ್ನು ನೆನೆದರೆ ರೋಮಾಂಚನವಾಗುತ್ತದೆ. ದೆಹಲಿಗೆ ಹೋಗಿ ವಾಜಿರಾಮ್ ಅಂಡ್ ರವಿಯಲ್ಲಿ ಕೋಚಿಂಗ್ ಪಡೆದೆ. ನಂತರ ಮನೆಯಲ್ಲಿ ತಯಾರಿ ನಡೆಸಿದೆ’ ಎಂದು ಸ್ಮರಿಸಿದರು.


ಕೆ.ಸೌರಭ್

‘ನಿರಂತರ ಪ್ರಯತ್ನಪಟ್ಟರೆ ಯಶಸ್ಸು’

345

ರಾಮನಗರ: ಎರಡನೇ ಪ್ರಯತ್ನದಲ್ಲೇ ಯುಪಿಎಸ್‌ಸಿ ಪರೀಕ್ಷೆಯಲ್ಲಿ 345ನೇ ರ‍್ಯಾಂಕ್‌ನ ಸಾಧನೆ ಮಾಡಿದ್ದಾರೆ ಚನ್ನಪಟ್ಟಣ ತಾಲ್ಲೂಕಿನ ಮಳೂರು ಪಟ್ಟಣದ ದಾಮಿನಿ ದಾಸ್.

ಕೃಷಿಕ ಕುಟುಂಬದ ಹಿನ್ನೆಲೆಯ ದಾಮಿನಿ ಕಂಪ್ಯೂಟರ್ ಸೈನ್ಸ್ ಪದವೀಧರೆ. ಮೊದಲ ಪ್ರಯತ್ನದಲ್ಲಿ ಯಶಸ್ಸುಸಿಗದಿದ್ದರೂ, ಎರಡನೇ ಪ್ರಯತ್ನದಲ್ಲಿ ಪರೀಕ್ಷೆ ಬರೆದು ಮೊದಲ ಬಾರಿಗೆ ಸಂದರ್ಶನಕ್ಕೆ ಆಯ್ಕೆಯಾಗಿ ಯಶಸ್ಸು ಕಂಡಿದ್ದಾರೆ. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಕನ್ನಡ ಸಾಹಿತ್ಯವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡಿರುವುದು ವಿಶೇಷ.

‘ದಿನದ ಹತ್ತು ಗಂಟೆ ಓದಿಗೆ ಮೀಸಲಿಟ್ಟಿದ್ದೆ. ಆನ್‌ಲೈನ್ ಕೋಚಿಂಗ್ ಜೊತೆಗೆ ಹಲವು ಪರಿಣಿತರ ಮಾರ್ಗದರ್ಶನ ಪಡೆದಿದ್ದೆ. ಸತತ ಅಧ್ಯಯನದಿಂದ ಎರಡನೇ ಪ್ರಯತ್ನದಲ್ಲೇ ಯಶಸ್ಸು ಸಾಧ್ಯವಾಗಿದೆ’ ಎಂದು ದಾಮಿನಿ ಹರ್ಷ ವ್ಯಕ್ತಪಡಿಸಿದರು. ಮುಂದೆ ಆರೋಗ್ಯ ಅಥವಾ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವ ಇರಾದೆ ಅವರದ್ದು.

ದಾಮಿನಿ ದಾಸ್

ಆರನೇ ಯತ್ನದಲ್ಲಿ ಸಾಧಿಸಿದ ಸಾಫಲ್ಯ

362

ಬೆಳಗಾವಿ: ‘ನನಗೆ ಬಾಲ್ಯದಿಂದಲೂ ಐಎಎಸ್ ಅಧಿಕಾರಿಯಾಗಬೇಕೆಂಬ ಕನಸಿತ್ತು. ಹಾಗಾಗಿ ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯದೆ, ಬಿ.ಎಸ್ಸಿ ವ್ಯಾಸಂಗ ಮಾಡಿದ್ದೆ. ಐದು ಬಾರಿ ಪ್ರಯತ್ನ ಕೈಗೂಡದಿದ್ದರೂ, ನಿರಾಸೆಗೊಳ್ಳದೆ ಅಧ್ಯಯನ ಮುಂದುವರಿಸಿದ್ದೆ. ಇಷ್ಟು ವರ್ಷಗಳ ಪ್ರಯತ್ನಕ್ಕೆ ಈಗ ಫಲ ಸಿಕ್ಕಿದೆ’ ಎಂದು 2022ನೇ ಸಾಲಿನಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ 362ನೇ ರ‍್ಯಾಂಕ್ ಪಡೆದಿರುವ ಶ್ರುತಿ ಯರಗಟ್ಟಿ ಸಂತಸ ವ್ಯಕ್ತಪಡಿಸಿದರು.

ಮೂಲತಃ ಯರಗಟ್ಟಿ ತಾಲ್ಲೂಕಿನ ತಲ್ಲೂರ ಗ್ರಾಮದವರಾದ ಶ್ರುತಿ, 6ನೇ ಪ್ರಯತ್ನದಲ್ಲಿ ಸಫಲರಾಗಿದ್ದಾರೆ. ಸದ್ಯ ಮೂಡಲಗಿ ತಾಲ್ಲೂಕಿನ ಅರಭಾವಿಯಲ್ಲಿ ಶ್ರುತಿ ಕುಟುಂಬ ನೆಲೆಸಿದೆ. ತಂದೆ ಶಿವಾನಂದ ಯರಗಟ್ಟಿ ಸರ್ಕಾರಿ ಶಾಲೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

‘ಮೊದಲ ಮೂರು ಪರೀಕ್ಷೆಗಳಲ್ಲಿ ಪಾಸ್ ಮಾಡಲಾಗಿರಲಿಲ್ಲ. ಆದರೆ, 4 ಮತ್ತು 5ನೇ ಬಾರಿ ಪರೀಕ್ಷೆಯಲ್ಲಿ ಸಂದರ್ಶನ ಹಂತದವರೆಗೆ ಹೋಗಿದ್ದೆ. ಸ್ವಲ್ಪದರಲ್ಲೇ ಅವಕಾಶ ಕೈತಪ್ಪಿತ್ತು. ಆರನೇ ಬಾರಿ ಗುರಿ ಮುಟ್ಟಿದೆ’ ಎಂದರು.

ಶ್ರುತಿ ಯರಗಟ್ಟಿ

ಕೋಚಿಂಗ್ ಪಡೆಯದ ಪೂಜಾ

390

ಮೈಸೂರು: ಕುವೆಂಪುನಗರದ ಎಂ.ಪೂಜಾ, ಕೇಂದ್ರ ಲೋಕಸೇವಾ ಆಯೋಗ ನಡೆಸಿದ 2022ರ ಸಾಲಿನ ನಾಗರಿಕ ಸೇವಾ ಪರೀಕ್ಷೆಯಲ್ಲಿ 390ನೇ ರ‍್ಯಾಂಕ್ ಪಡೆದಿದ್ದಾರೆ. ಎಲ್ಲಿಯೂ ಕೋಚಿಂಗ್ ಪಡೆಯದೇ ಉತ್ತೀರ್ಣರಾಗಿರುವುದು ವಿಶೇಷ.

ಕಳೆದ ಬಾರಿ ಯಶ ಕಂಡಿರಲಿಲ್ಲ. ಎರಡನೇ ಬಾರಿ ಯಶಸ್ಸು ಗಳಿಸಿದ್ದಾರೆ. ಅವರು ಮುಕುಂದ ರಾವ್ ಬೇದ್ರೆ ಹಾಗೂ ಎಂ.ಪದ್ಮಾವತಿ ದಂಪತಿ ಪುತ್ರಿ.

ಕುವೆಂಪುನಗರದ ಕಾವೇರಿ ಶಾಲೆಯಲ್ಲಿ 1ರಿಂದ 10ನೇ ತರಗತಿವರೆಗೆ, ಮರಿಮಲ್ಲಪ್ಪ ಪಿಯು ಕಾಲೇಜಿನಲ್ಲಿ ಪಿಯು ಹಾಗೂ ಗೋಕುಲಂನ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪಡೆದಿದ್ದಾರೆ.

‘2019ರಲ್ಲಿ ಪದವಿ ಮುಗಿಸಿದೆ. 2020 ಡಿಸೆಂಬರ್‌ನಿಂದ ತಯಾರಿ ಆರಂಭಿಸಿದೆ. ಅಣಕು ಪರೀಕ್ಷೆಗಳನ್ನು ತೆಗೆದುಕೊಂಡಿದ್ದೆ. ಈ ಬಾರಿ ಸಂದರ್ಶನ ತರಬೇತಿಯನ್ನು ಮಾತ್ರ ಬೆಂಗಳೂರಿನ ಇನ್‌ಸೈಟ್ಸ್ ಆನ್ ಇಂಡಿಯಾದಲ್ಲಿ ಪಡೆದೆ. ಐಎಎಸ್ ಅಥವಾ ಐಪಿಎಸ್ ಹುದ್ದೆ ಸಿಗುವ ನಿರೀಕ್ಷೆ ಇದೆ’ ಎಂದು ಪೂಜಾ ‘ಪ್ರಜಾವಾಣಿ’ ಜೊತೆ ಸಂತಸ ಹಂಚಿಕೊಂಡರು.

ಎಂ.ಪೂಜಾ

‘ಮಗ ಹುಟ್ಟಿದ ನಂತರ ತಯಾರಿ’

448

ಮೈಸೂರು: ‘2019ರಲ್ಲಿ ಮದುವೆಯಾದೆ, ಮಗ ಅಥರ್ವ 2020ರ ಜುಲೈನಲ್ಲಿ ಹುಟ್ಟಿದ. ಜವಾಬ್ದಾರಿಗಳು ಹೆಚ್ಚಿದ್ದ ವೇಳೆಯೇ ಯುಪಿಎಸ್‌ಸಿ ನಾಗರಿಕ ಸೇವಾ ಪರೀಕ್ಷೆ ಬರೆಯುವ ಕನಸು ಹುಟ್ಟಿತ್ತು. ತಯಾರಿ ಆರಂಭಿಸಿದೆ. ಈಗ 448ನೇ ರ‍್ಯಾಂಕ್ ಸಿಕ್ಕಿದೆ. ಖುಷಿಯಾಗಿದೆ’

ತಾಲ್ಲೂಕಿನ ಬೆಳವಾಡಿ ಗ್ರಾಮದ ಜೆ.ಭಾನುಪ್ರಕಾಶ್ ‘ಪೋಷಕರು ಹಾಗೂ ವೈದ್ಯೆ, ಪತ್ನಿ ಡಾ.ಚೈತ್ರಾ ಅವರ ಪ್ರೋತ್ಸಾಹವೇ ಸಾಧನೆಗೆ ಪ್ರೇರಣೆ’ ಎನ್ನುತ್ತಾರೆ. ಕಳೆದೆರಡು ಬಾರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಲಿಲ್ಲ. ಮೂರನೇ ಬಾರಿಗೆ, ತಮ್ಮ ಮೂವತ್ತೆರಡೂವರೆ ವರ್ಷಕ್ಕೆ ತೇರ್ಗಡೆಯಾಗಿದ್ದಾರೆ.

ಕೆ.ಆರ್.ನಗರ ತಾಲ್ಲೂಕಿನ ಕೆಸ್ತೂರು ಕೊಪ್ಪಲು ಗ್ರಾಮದ ಭಾನುಪ್ರಕಾಶ್ ಅವರ ತಂದೆ ಜಯರಾಮೇಗೌಡರು ಕೃಷಿಕರು. ತಾಯಿ ಗಿರಿಜಮ್ಮ ಅಂಗನವಾಡಿ ಶಿಕ್ಷಕಿ.

‘ಕೋವಿಡ್ ಸಂದರ್ಭದಲ್ಲಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದೆ. ಆಗ, ನಾಗರಿಕ ಸೇವಾ ಅಧಿಕಾರಿಯಾಗಬೇಕು, ಸಮಾಜಕ್ಕೆ ಇನ್ನಷ್ಟು ಸೇವೆ ಮಾಡಬೇಕೆಂಬ ಕನಸು ಮೂಡಿತ್ತು’ ಎಂದು ಹೇಳಿದರು.

ಜೆ.ಭಾನುಪ್ರಕಾಶ್

ಹಳ್ಳಿ ಹುಡುಗನ ಸಾಧನೆ

588

ವಿಜಯಪುರ: ತಂದೆ ಗೂಡಂಗಡಿ ಮಾಲೀಕ, ತಾಯಿ ಗೃಹಿಣಿ, ಬಡತನ ಬೆನ್ನಿಗಂಟಿದ್ದರೂ ಸಾಧನೆಗೆ ಬಡತನದ ಹಂಗಿಲ್ಲ ಎಂಬುದಕ್ಕೆ ಯುಪಿಎಸ್‌ಸಿ ಪಾಸ್ ಮಾಡಿದ ಈ ಹಳ್ಳಿ ಹುಡುಗನ ಸಾಧನೆಯೇ ಸಾಕ್ಷಿ!

ಹೌದು, ಇಂಡಿ ತಾಲ್ಲೂಕಿನ ಹಿರೇಮಸಳಿ ಗ್ರಾಮದಲ್ಲಿ ಪುಟ್ಟ ಗೂಡಂಗಡಿ ಇರಿಸಿಕೊಂಡು ಜೀವನ ಸಾಗಿಸುತ್ತಿರುವ ಶ್ರೀಶೈಲ ಸೋಮಜಾಳ ಅವರ ಪುತ್ರ ಸತೀಶ ಈಗ ಯುಪಿಎಸ್‌ಸಿ ಪಾಸ್ ಮಾಡಿದ್ದು, ಗ್ರಾಮದಲ್ಲಿ ಸಂಭ್ರಮದ ವಾತಾವರಣ ನಿರ್ಮಾಣವಾಗಿದೆ. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಸತೀಶ 588ನೇ ರ‍್ಯಾಂಕ್ ಪಡೆದಿದ್ದು, ಆ ಕುಟುಂಬದಲ್ಲೀಗ ಸಂತಸ ಮನೆಮಾಡಿದೆ.

ಸತೀಶ ಹುಟ್ಟೂರು ಹಿರೇಮಸಳಿ, ಬಾಲ್ಯ ಕಳೆದಿದ್ದು, ಸಿಂದಗಿ ತಾಲ್ಲೂಕಿನ ದೇವಣಗಾಂವ ಮತ್ತು ವಿಜಯಪುರ ನಗರದಲ್ಲಿ. ದೇವಣಗಾಂವದಲ್ಲಿ ಪೂರ್ವ ಪ್ರಾಥಮಿಕ ಮುಗಿಸಿದ್ದು, 5ರಿಂದ ದ್ವಿತೀಯ ಪಿಯುಸಿ ವರೆಗೆ ಸೈನಿಕ ಶಾಲೆಯಲ್ಲಿ ಓದಿದ್ದಾರೆ. ‘ಸೈನಿಕ ಶಾಲೆಯ ವಾತಾವರಣವೇ ಯುಪಿಎಸ್‌ಸಿ ತೇರ್ಗಡೆಯಾಗಲು ಪ್ರೇರಣೆ’ ಎನ್ನುತ್ತಾರೆ ಸತೀಶ. ಸೈನಿಕ ಶಾಲೆಯಲ್ಲಿ ಕಲಿತ ಅನೇಕರು ಪ್ರಸ್ತುತ ಜಿಲ್ಲಾಧಿಕಾರಿ ಹುದ್ದೆಯಲ್ಲಿದ್ದಾರೆ. ಅವರಿಂದ ಪ್ರೇರಣೆ ಪಡೆದಿದ್ದಲ್ಲದೇ, ಬೆಳೆದು ಬಂದ ಬಗೆಯೇ ಯುಪಿಎಸ್‌ಸಿ ತೇರ್ಗಡೆಯಾಗಬೇಕೆಂಬ ಛಲ ಮೂಡಿಸಿತ್ತು ಎನ್ನುತ್ತಾರೆ.

ಸತೀಶ

ಯಶಸ್ಸು ಸಾಧಿಸಿದ ಕನ್ನಡಪ್ರೇಮಿ

589

ಧಾರವಾಡ: ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ಪೂರೈಸಿ, ಕನ್ನಡ ವಿಷಯವನ್ನೇ ಮುಖ್ಯ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡ ಅಣ್ಣಿಗೇರಿಯ ಎಂಜಿನಿಯರ್ ಸಿದ್ಧಲಿಂಗಪ್ಪ ಕೆ. ಪೂಜಾರ ಅವರು ಕೇಂದ್ರ ಲೋಕಸೇವಾ ಆಯೋಗ 2022ರಲ್ಲಿ ನಡೆಸಿದ ಪರೀಕ್ಷೆಯಲ್ಲಿ 589ನೇ ರ‍್ಯಾಂಕ್ ಪಡೆದಿದ್ದಾರೆ.

ತಂದೆ ಕರಿಸಿದ್ದಪ್ಪ ಪೂಜಾರ ಅವರು ಹುಬ್ಬಳ್ಳಿಯಲ್ಲಿ ಕೆಎಸ್‌ಆರ್‌ಟಿಸಿ ನಿರ್ವಾಹಕರಾಗಿದ್ದಾರೆ. ತಾಯಿ ಶಾಂತವ್ವ ಹೊಲದ ಕೆಲಸ ನೋಡಿಕೊಳ್ಳುತ್ತಿದ್ದಾರೆ. ಅಣ್ಣಿಗೇರಿಯಲ್ಲಿ ಮೂರು ಎಕರೆ ಜಮೀನು ಹೊಂದಿದ್ದಾರೆ.

ಕನ್ನಡ ವಿಷಯದಲ್ಲಿ ಅಪಾರ ಆಸಕ್ತಿ ಹೊಂದಿರುವ ಸಿದ್ಧಲಿಂಗಪ್ಪ ಬೆಂಗಳೂರಿನ ಯುವಿಸಿಇ ಕಾಲೇಜಿನಲ್ಲಿ 2015ರಲ್ಲಿ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಷಯದಲ್ಲಿ ಎಂಜಿನಿಯರಿಂಗ್ ಪೂರ್ಣಗೊಳಿಸಿದ್ದಾರೆ. ಬಳಿಕ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಗೆ ನಿರಂತರ ಸಿದ್ಧತೆ ನಡೆಸಿದ್ದರು. ಅವರು ಒಂದು ಬಾರಿ ಯುಪಿಎಸ್‌ಸಿ ಸಂದರ್ಶನವನ್ನೂ ನೀಡಿದ್ದರು.

‘ಬೆಂಗಳೂರಿನ ಇನ್‌ಸೈಟ್, ಐಎಎಸ್ ಬಾಬಾ, ಇಂಡಿಯಾ ಫಾರ್ ಐಎಎಸ್ ಸಂಸ್ಥೆಯಲ್ಲಿ ತರಬೇತಿ ಪಡೆದಿದ್ದೇನೆ. ಅದರ ಮುಖ್ಯಸ್ಥರು ನನ್ನ ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರೆ’ ಎಂದು ತಿಳಿಸಿದರು.


ಸಿದ್ಧಲಿಂಗಪ್ಪ ಪೂಜಾರ

ಹತ್ತು ರೂಪಾಯಿ ವೈದ್ಯನ ಸಾಧನೆ

686

ಬೆಂಗಳೂರು: ರೋಗಿಗಳಿಗೆ ನೀಡುವ ಚಿಕಿತ್ಸೆಗೆ ₹10 ಮಾತ್ರ ಪಡೆಯುತ್ತಿದ್ದ ವೈದ್ಯ ಡಾ. ರಾಹುಲ್ ಆರ್. ಅವರು ಈಗ ಯುಪಿಎಸ್‌ಸಿ ಪರೀಕ್ಷೆಯಲ್ಲಿ 686ನೇ ರ‍್ಯಾಂಕ್ ಪಡೆದಿದ್ದಾರೆ.

ಕರ್ನಾಟಕ ಮಾಹಿತಿ ಆಯೋಗದ ಆಯುಕ್ತರಾಗಿದ್ದ ಎನ್.ಪಿ.ರಮೇಶ್ ಮತ್ತು ಎ.ಆರ್.ಮಂಗಳಾ ಅವರ ಪುತ್ರ ರಾಹುಲ್, ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ(ಬಿಎಂಸಿ) ಎಂಬಿಬಿಎಸ್ ಓದಿದ್ದಾರೆ. ಅದಕ್ಕೂ ಮುನ್ನ ಎಂಇಎಸ್ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಓದಿದ್ದರು. ಸಿಇಟಿ ಪರೀಕ್ಷೆಯಲ್ಲಿ 71ನೇ ರ‍್ಯಾಂಕ್ ಗಳಿಸಿ ಸರ್ಕಾರಿ ಕೋಟಾದಲ್ಲಿ ಸೀಟು ಪಡೆದಿದ್ದರು.

ಸದ್ಯ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವೈದ್ಯರಾಗಿ ಕೆಲಸ ಮಾಡುವ ಜತೆಗೆ ಸಂಜಯನಗರದಲ್ಲಿ ಬಿಡುವಿನ ವೇಳೆ ಕ್ಲಿನಿಕ್ ನಡೆಸುತ್ತಿದ್ದರು. ಚಿಕಿತ್ಸೆಗೆ ಬರುವ ರೋಗಿಗಳಿಂದ ₹10 ಮಾತ್ರ ಶುಲ್ಕ ಪಡೆದು ಸೇವೆ ಒದಗಿಸುತ್ತಿದ್ದಾರೆ. ‘ಗೆಳೆಯರೊಂದಿಗೆ ಸೇರಿ ಪರೀಕ್ಷೆಗೆ ತಯಾರಾಗುತ್ತಿದ್ದೆ. ಐದು ಬಾರಿ ಯುಪಿಎಸ್‌ಸಿ ಮುಖ್ಯ ಪರೀಕ್ಷೆ ಎದುರಿಸಿದ್ದು, ಎರಡು ಬಾರಿ ಸಂದರ್ಶನಕ್ಕೂ ಹಾಜರಾಗಿದ್ದೆ. ಈ ಬಾರಿ ಯಶಸ್ವಿಯಾಗಿದ್ದೇನೆ. ಭಾರತೀಯ ರೆವಿನ್ಯೂ ಸೇವೆಯಲ್ಲಿ (ಐಆರ್‌ಎಸ್) ಅವಕಾಶ ಸಿಗುವ ಸಾಧ್ಯತೆ ಇದೆ. ಮುಂದಿನ ದಿನಗಳಲ್ಲಿ ಐಎಎಸ್‌ಗೆ ಪ್ರಯತ್ನ ಮಾಡುತ್ತೇನೆ’ ಎಂದು ರಾಹುಲ್ ‘ಪ್ರಜಾವಾಣಿ’ಗೆ ವಿವರಿಸಿದರು.

ರಾಹುಲ್ ಆರ್.

‘ಇನ್‌ಸೈಟ್ಸ್ ಐಎಎಸ್’ಗೆ ಸಾಧನೆ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸಿದ 2022ನೇ ಸಾಲಿನ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ದೇಶದಾದ್ಯಂತ ‘ಇನ್‌ಸೈಟ್ಸ್ ಐಎಎಸ್’ನಲ್ಲಿ ತರಬೇತಿ ಪಡೆದ 210ಕ್ಕೂ ಹೆಚ್ಚು ಅಭ್ಯರ್ಥಿಗಳು ಯಶಸ್ವಿಯಾಗಿದ್ದಾರೆ.

ಕರ್ನಾಟಕದಿಂದ ಈ ಬಾರಿ 30ಕ್ಕಿಂತಲೂ ಹೆಚ್ಚು ಅಭ್ಯರ್ಥಿಗಳು ಉತ್ತೀರ್ಣಗೊಂಡಿದ್ದು, ಇದರಲ್ಲಿ ಉತ್ತಮ ರ‍್ಯಾಂಕಿಂಗ್ ಪಡೆದ 23 ಅಭ್ಯರ್ಥಿಗಳಿಗೆ ತರಬೇತಿ, ಮಾರ್ಗದರ್ಶನ ನೀಡಿರುವುದು ಬೆಂಗಳೂರಿನ ‘ಇನ್‌ಸೈಟ್ಸ್ ಐಎಎಸ್’ ಎಂದು ಸಂಸ್ಥೆಯ ಸಂಸ್ಥಾಪಕರಾದ ವಿನಯ್ ಕುಮಾರ್ ಜಿ.ಬಿ. ಹರ್ಷ ವ್ಯಕ್ತಪಡಿಸಿದ್ದಾರೆ.

ಜಿ.ಬಿ.ವಿನಯ್‌ಕುಮಾರ್

ಉತ್ತಮ ಶ್ರೇಯಾಂಕದೊಂದಿಗೆ ತೇರ್ಗಡೆಯಾದ ಈ ಅಭ್ಯರ್ಥಿಗಳಲ್ಲಿ ಹಲವರು ‘ಇನ್‌ಸೈಟ್ಸ್ ಐಎಎಸ್ನ’ ನೇರವಾದ ಬೋಧನಾ ತರಗತಿಗೆ (ಒಜಿಪಿ, ಕೋರ್ ಬ್ಯಾಚ್) ಹಾಜರಾಗಿದ್ದರು. ಬಹಳಷ್ಟು ಅಭ್ಯರ್ಥಿಗಳು ಪೂರ್ವಭಾವಿ ಹಾಗೂ ಮುಖ್ಯ ಪರೀಕ್ಷಾ ಸರಣಿ ಮತ್ತು ಅಣಕು ಸಂದರ್ಶನಗಳಂತಹ ಹಲವಾರು ಕಾರ್ಯಕ್ರಮಗಳ ವಿದ್ಯಾರ್ಥಿಗಳಾಗಿದ್ದಾರೆ ಎಂದು ವಿವರಿಸಿದ್ದಾರೆ.

ಅಭ್ಯರ್ಥಿಗಳಿಗೆ ಬೋಧನೆ ಮತ್ತು ಉತ್ತರ ಬರೆಯುವುದು ಸೇರಿದಂತೆ ಕೌಶಲವೃದ್ಧಿಯ ಬಗ್ಗೆ ಇನ್‌ಸೈಟ್ಸ್ ಐಎಎಸ್ ಕೇಂದ್ರದಲ್ಲಿ ಮಾರ್ಗದರ್ಶನ ನೀಡಲಾಗುತ್ತಿದ್ದು, ಒಟ್ಟಾರೆಯಾಗಿ ‘ಇಂಟೆಗ್ರೇಟೆಡ್ ಕೋಚಿಂಗ್ ಮಾದರಿ’ಯಲ್ಲಿ ಅಭ್ಯರ್ಥಿಗಳನ್ನು ಪರೀಕ್ಷೆಗೆ ಸಜ್ಜುಗೊಳಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

‘ಅಭ್ಯರ್ಥಿಗಳು ಸಂವಹನ ಕೌಶಲ್ಯ ಉತ್ತಮಗೊಳಿಸಿಕೊಳ್ಳುವುದು ಕಡ್ಡಾಯ. ಇದಕ್ಕೆ ಪೂರಕವಾಗಿ ವಿದ್ಯಾರ್ಥಿಗಳಿಗೆ ಯುಪಿಎಸ್‌ಸಿ ಪರೀಕ್ಷಾ ತಯಾರಿಯನ್ನು ಸರಳೀಕರಿಸಲು ಮತ್ತು ಯಶಸ್ಸು ಸಾಧಿಸುವುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ‘ಇನ್‌ಸೈಟ್ಸ್ ಐಎಎಸ್’ ಸಂಸ್ಥೆಯು ಸತತವಾಗಿ ಶ್ರಮಿಸುತ್ತಿದೆ’ ಎಂದು ತಿಳಿಸಿದ್ದಾರೆ.

2014ರಿಂದ ಯುಪಿಎಸ್‌ಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿರುವ ಕನ್ನಡಿಗರ ಸಂಸ್ಥೆ ‘ಇನ್‌ಸೈಟ್ಸ್ ಐಎಎಸ್’ ಬೆಂಗಳೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದ್ದು, ದೆಹಲಿ, ಶ್ರೀನಗರ, ಲಖನೌ ಹೈದರಾಬಾದ್, ಧಾರವಾಡ, ಮೈಸೂರು ಸೇರಿದಂತೆ ಭಾರತದಾದ್ಯಂತ ಶಾಖೆಗಳನ್ನು ಹೊಂದಿದೆ.

ಐಎಎಸ್ ಬಾಬಾ: 16 ಮಂದಿ ಆಯ್ಕೆ

ಬೆಂಗಳೂರು: ಐಎಎಸ್ ಬಾಬಾ ಸಂಸ್ಥೆಯಲ್ಲಿ ತರಬೇತಿ ಪಡೆದವರಲ್ಲಿ 16ಕ್ಕೂ ಹೆಚ್ಚು ಅಭ್ಯರ್ಥಿಗಳು ಯುಪಿಎಸ್‌ಸಿ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದಿದ್ದಾರೆ.

ಇಲ್ಲಿ ತರಬೇತಿ ಪಡೆದವರಲ್ಲಿ ಗರಿಮಾ ಲೋಹಿಯಾ (2ನೇ ರ‍್ಯಾಂಕ್), ಕನಿಕಾ ಗೋಯಲ್ (9ನೇ ರ‍್ಯಾಂಕ್), ಅಭಿನವ್ ಸಿವಾಚ್ (12ನೇ ರ‍್ಯಾಂಕ್) ಉತ್ತಮ ಸಾಧನೆ ಮಾಡಿದ್ದಾರೆ. ರಾಜ್ಯದಿಂದ ರ‍್ಯಾಂಕ್ ಪಡೆದವರಲ್ಲಿ ಹೆಚ್ಚಿನವರು ಇಲ್ಲಿಯವರಾಗಿದ್ದಾರೆ ಎಂದು ಸಂಸ್ಥೆ ತಿಳಿಸಿದೆ.

‘ದೇಶದ ಯಾವುದೇ ಮೂಲೆಯಲ್ಲಿರುವ ಐಎಎಸ್ ಆಕಾಂಕ್ಷಿಗಳಿಗೆ ತರಬೇತಿ ನೀಡಿ, ರ‍್ಯಾಂಕ್ ದೊರೆಯುವಂತೆ ಮಾಡುವುದು ಸಂಸ್ಥೆಯ ಗುರಿ. ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನಕ್ಕೆ ಹೊಸ ರೀತಿಯ ತರಬೇತಿ ನೀಡಲಾಗುವುದು. ಇದರಿಂದಾಗಿ ಈ ವರ್ಷವೂ ಇಲ್ಲಿನ ಅಭ್ಯರ್ಥಿಗಳು ಉತ್ತಮ ಫಲಿತಾಂಶ ನೀಡಿದ್ದಾರೆ’ ಎಂದು ಸಂಸ್ಥೆ ಹೇಳಿದೆ.

‘ಸಂಸ್ಥೆಯ ಪಿಇಪಿ ಆನ್‌ಲೈನ್ ತರಗತಿ ಕಾರ್ಯಕ್ರಮವು ಪೂರ್ವಭಾವಿ ಪರೀಕ್ಷೆಗೆ ಸಂಬಂಧಿಸಿದೆ. ಅಣಕು ಸಂದರ್ಶನಗಳನ್ನು ಮಾಡಲಾಗುತ್ತದೆ. ತರಗತಿಗಳ ಹೊರತಾಗಿ ಮಾರ್ಗದರ್ಶನ ಮತ್ತು ಪರೀಕ್ಷೆಗಳನ್ನು ಕೇಂದ್ರೀಕರಿಸಲಾಗುತ್ತದೆ. ಪ್ರತಿ ಬ್ಯಾಚ್‌ನಲ್ಲಿ ಸೀಮಿತ ಸಂಖ್ಯೆಯ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ’ ಎಂದು ಸಂಸ್ಥೆ ತಿಳಿಸಿದೆ.

ರ‍್ಯಾಂಕ್	ಹೆಸರು
55	ಎಚ್‌.ಎಸ್‌. ಭಾವನಾ,
197	ಸೂರಜ್ ಡಿ
198	ಸೌರಭ ಎ. ನರೇಂದ್ರ
210	ಆಕಾಶ ಎ.ಎಲ್.
222	ಪಿ. ಶ್ರವಣ್ ಕುಮಾರ್,
238	ಚಲುವರಾಜು ಆರ್.
260	ಸೌರಭ ಕೆ.
345	ದಾಮಿನಿ ಎಂ. ದಾಸ್
362	ಶೃತಿ ಯರಗಟ್ಟಿ ಎಸ್.
390	ಪೂಜಾ ಎಂ.
448	ಭಾನು ಪ್ರಕಾಶ್ ಜೆ.
464	ಸಿ.ಸಮೀರ್ ರಾಜ
465	ಕೈಲಾಶ್ ಟಿ.
501	ಧನುಷ್ ಕುಮಾರ್ ಬಿ.
525	ಶ್ರೀದೇವಿ ಬಿ.ವಿ.
566	ಆದಿನಾಥ್ ಪದ್ಮಣ್ಣ ತಮದಡ್ಡಿ
588	ಸತೀಶ್ ಸೋಮಜಾಳ್
589	ಸಿದ್ಧಲಿಂಗಪ್ಪ ಕೆ. ಪೂಜಾರ
590	ಜೋಶಿ ವಿಕ್ರಮ್ ನರಸಿನ್ಹಾ
617	ಮೇಘನಾ ಐ.ಎನ್.
659	ನಿಮಿಷಾಂಭಾ ಸಿ.ಪಿ.
686	ರಾಹುಲ್ ಆರ್.
690	ತನ್ಮಯ್ ಎಂ.ಎಸ್.
745	ಮೊಹಮ್ಮದ ಸಿದ್ದಿಕ್ ಷರೀಫ್
746	ಅಕ್ಷಯಕುಮಾರ್ ರಾಜಗೌಡ ಪಾಟೀಲ
866	ನಗುಲಾ ಕೃಪಾಕರ್
890	ಯಲಗೂರೇಶ್ ಅರ್ಜುನ್ ನಾಯಕ್
923	ಪದ್ಮನಾಭ್

ಬಳ್ಳಾರಿ ನಿರ್ಮಿತಿ ಕೇಂದ್ರ, ಬಳ್ಳಾರಿ.
bellarynirmithikendra@yahoo.com, ದೂ.ಸಂ:9945494157
ಸಂ:ಬನಿಕೇಬ/ಆಡಳಿತ/ಮೂ.ತ.ಪ.ಧರಪಟ್ಟಿ/2023-24/ ದಿನಾಂಕ: 23/05/2023
ಪ್ರಕಟಣೆ
ಬಳ್ಳಾರಿ ನಿರ್ಮಿತಿ ಕೇಂದ್ರ, ಬಳ್ಳಾರಿ ವತಿಯಿಂದ ನಿರ್ವಹಿಸುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾಮಗಾರಿಗಳ ಗುಣಮಟ್ಟ ಮತ್ತು ಮೂರನೇ ವ್ಯಕ್ತಿ ತಪಾಸಣೆ ವರದಿ (Third Party) ನೊಂದಾಯಿತ ಸಂಸ್ಥೆಗಳಿಂದ/ವ್ಯಕ್ತಿಗಳಿಂದ ಟೆಂಡರ್ ಮುಖಾಂತರ ಧರಪಟ್ಟಿಗಳನ್ನು ಸಲ್ಲಿಸಲು ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರಿಗೆ ಸಂಬಂಧಿಸಿದ ಅನುಬಂಧಗಳನ್ನು (Annexure) ಗಳನ್ನು https://ballari.nic.in ನಲ್ಲಿ ಪಡೆದು, ಅನುಬಂಧ (Annexure) ಗಳನ್ನು ಭರ್ತಿ ಮಾಡಿ ಕೇಂದ್ರದ ಇ-ಮೇಲ್ nirmithikendratender@gmail.com ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ:31/05/2023 ರ ಸಂಜೆ 4.00 ಗಂಟೆಯೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ತಡವಾಗಿ ಸ್ವೀಕೃತವಾಗುವ ಧರಪಟ್ಟಿಗಳನ್ನು ತಿರಸ್ಕರಿಸಲಾಗುವುದು. ಸ್ವೀಕೃತವಾದ ಧರಪಟ್ಟಿಗಳನ್ನು ಅಂಗೀಕರಿಸುವ / ತಿರಸ್ಕರಿಸುವ ಹಕ್ಕನ್ನು ಅಧ್ಯಕ್ಷರು, ನಿರ್ಮಿತಿ ಕೇಂದ್ರ ಹಾಗೂ ಜಿಲ್ಲಾಧಿಕಾರಿಗಳು, ಬಳ್ಳಾರಿ ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಮೊ.ನಂ.9900750740 ಪಡೆಯಬಹುದಾಗಿರುತ್ತದೆ.
ಸಹಿ/-ಯೋಜನಾ ನಿರ್ದೇಶಕರು, ಬಳ್ಳಾರಿ ನಿರ್ಮಿತಿ ಕೇಂದ್ರ, ಬಳ್ಳಾರಿ
ಡಿಐಪಿಆರ್/ಬಳ್ಳಾರಿ/25/ಕೆಎಸ್‌ಎಂಸಿಎ/2023-24

KEONICS
ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ
2ನೇ ಮಹಡಿ, ಟಿಟಿಎಂಸಿ 'ಎ' ಬ್ಲಾಕ್, ಬಿಎಂಟಿಸಿ ಕಾಂಪ್ಲೆಕ್ಸ್, ಶಾಂತಿನಗರ, ಕೆ.ಹೆಚ್ ರಸ್ತೆ, ಬೆಂಗಳೂರು-27.
ಫ್ಯಾಕ್ಸ್: 080-2223 2652, 080-2222 5645 www.keonics.in
ಸಂಖ್ಯೆ: ಕಿಯೋನಿಕ್ಸ್/ಐಟಿಎಸ್-1/ಇ.ಪಿ.ಪಿ/ಐ.ಪಿ.ಎ/002/2022-23 ದಿನಾಂಕ: 24-05-2023
ಐಟಿ ಸೇವೆಗಳನ್ನು / ಸರಬರಾಜುಗಳನ್ನು ಪೂರೈಸಲು ಮಧ್ಯವರ್ತಿ ಸಹವರ್ತಿಗಳ ಸ್ಟಾರ್ಟ್‌ಅಪ್‌ಗಳನ್ನು (ಬ್ಯುಸಿನೆಸ್ ಅಸೋಸಿಯೇಟ್ - ಸ್ಟಾರ್ಟ್‌ಅಪ್‌ಗಳು) (ಸ್ಟಾರ್ಟ್‌ಅಪ್‌ಗಳು ಮತ್ತು) ಪೂರ್ವಭಾವಿ ಅರ್ಹತೆಗಾಗಿ - ಪ್ರಕಟಣೆ - ಎಕ ಲಕೋಟೆ ಪದ್ಧತಿ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಐಟಿ ಸೇವೆಗಳನ್ನು / ಸರಬರಾಜುಗಳನ್ನು ಪೂರೈಸಲು ವಹಿವಾಟು ಸಹವರ್ತಿಗಳ-ಸ್ಟಾರ್ಟ್‌ಅಪ್‌ಗಳು (ಬ್ಯುಸಿನೆಸ್ ಅಸೋಸಿಯೇಟ್-ಸ್ಟಾರ್ಟ್‌ಅಪ್‌ಗಳು) (ಸ್ಟಾರ್ಟ್‌ಅಪ್‌ಗಳು ಮತ್ತು) ಪೂರ್ವಭಾವಿ ಅರ್ಹತೆಗಾಗಿ ಮಾಲೀಕತ್ವ, ಪಾಲುದಾರಿಕೆ, ಎಲ್.ಎಲ್.ಪಿ. ಸಾರ್ವಜನಿಕ / ಖಾಸಗಿ ನಿಯಮಿತ ಕಂಪನಿಗಳಿಂದ ಆಸಕ್ತ ವ್ಯಕ್ತಿಗಳು/ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತ ವ್ಯಕ್ತಿಗಳು/ಸಂಸ್ಥೆಗಳು ಸಲ್ಲಿಸಲು ಕೊನೆಯ ದಿನಾಂಕ : 07.06.2023, ಮಧ್ಯಾಹ್ನ 4.00 ಗಂಟೆಯವರೆಗೆ, ಹೆಚ್ಚಿನ ವಿವರಗಳನ್ನು: www.eproc.karnataka.gov.in ದ ಪೋರ್ಟ್‌ಲ್ ಅಥವಾ ಸಂಪರ್ಕಿಸುವವರು: ಸಂ: 080-25501216/25501227 ನಲ್ಲಿ ಅಥವಾ ಶ್ರೀಮತಿ: ಪವಿತ್ರ ಪಿ.ಎಸ್., ವ್ಯವಸ್ಥಾಪಕರು-ವಾಣಿಜ್ಯ (ತಾಂತ್ರಿಕ), ದೂ. 080: 22225645 ಮತ್ತು ದೂ: 9740966332 ಗೆ ಸಂಪರ್ಕಿಸ ಪಡೆಯಬಹುದು.
DIPR/CP/RO107/AAPL/2023-24 ಸಹಿ/- ನಿರ್ದೇಶಕರು (ನಿರ್ವಹಣೆ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ ದಕ್ಷಿಣ, ದಕ್ಷಿಣ ವಲಯ ಕಛೇರಿ ಸಂಕೀರ್ಣ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು - 560011.
ಸಂಖ್ಯೆ: ಕಾಇಯೋ(ದ)/ಇ-ಪ್ರೊಕ್/02/2023-24 (ಕರೆ-2) ದಿನಾಂಕ: 23-05-2023
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಸೇವೆ ಟೆಂಡರ್)
(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು (ಯೋಜನೆ – ದಕ್ಷಿಣ), ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಸೇವೆಗಳಿಗಾಗಿ ಸುಪ್ರಸಿದ್ಧರಾದ ಸೇವೆ ಪೂರೈಕೆದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)
1	ಹೊರಗುತ್ತಿಗೆ ಆಧಾರದಲ್ಲಿ ದಕ್ಷಿಣ ವಲಯ ಮತ್ತು ರಾಜರಾಜೇಶ್ವರಿನಗರ ವಲಯದ ಬಿಬಿಎಂಪಿ ಶಾಲೆಗಳು ಮತ್ತು ಕಾಲೇಜುಗಳಿಗೆ ಶಿಕ್ಷಕರನ್ನು ಪೂರೈಸುವುದು. (2ನೇ ಕರೆ)	3,41,98,066.00	5,12,971.00

ದಕ್ಷಿಣ ವಲಯದ ಶಾಲೆಗಳು ಮತ್ತು ಕಾಲೇಜುಗಳ ಪಟ್ಟಿ

ಕ್ರ. ಸಂ.	ಶಾಲೆಗಳು ಮತ್ತು ಕಾಲೇಜುಗಳ ಹೆಸರು	ಶಾಲೆಗಳು ಮತ್ತು ಕಾಲೇಜುಗಳು (ಸಂಖ್ಯೆಗಳು)	ಅಗತ್ಯವಿರುವ ಶಿಕ್ಷಕರು/ಉಪನ್ಯಾಸಕರು (ಸಂಖ್ಯೆಗಳು)	ಅವಧಿ
1	ನರ್ಸರಿ ಶಾಲೆಗಳು	13	13	11 ತಿಂಗಳು
2	ಪ್ರಾಥಮಿಕ ಶಾಲೆಗಳು	02	10	
3	ಪ್ರೌಢ ಶಾಲೆಗಳು	04	31	
4	ಪಿಯು ಕಾಲೇಜುಗಳು	01	22	
	ಒಟ್ಟು	20	76	

ರಾಜರಾಜೇಶ್ವರಿನಗರ ವಲಯದ ಶಾಲೆಗಳು ಮತ್ತು ಕಾಲೇಜುಗಳ ಪಟ್ಟಿ

ಕ್ರ. ಸಂ.	ಶಾಲೆಗಳು ಮತ್ತು ಕಾಲೇಜುಗಳ ಹೆಸರು	ಶಾಲೆಗಳು ಮತ್ತು ಕಾಲೇಜುಗಳು (ಸಂಖ್ಯೆಗಳು)	ಅಗತ್ಯವಿರುವ ಶಿಕ್ಷಕರು/ಉಪನ್ಯಾಸಕರು (ಸಂಖ್ಯೆಗಳು)	ಅವಧಿ
1	ನರ್ಸರಿ ಶಾಲೆಗಳು	13	19	11 ತಿಂಗಳು
2	ಪ್ರೌಢ ಶಾಲೆಗಳು	02	29	
3	ಪಿಯು ಕಾಲೇಜುಗಳು	01	14	
	ಒಟ್ಟು	16	62	

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ದಿನಾಂಕ: 01-06-2023 ರಿಂದ ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: www.eproc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಿಬಿಡ್ ಸಭೆ ದಿನಾಂಕ ಮತ್ತು ಸಮಯ: 19-06-2023 ರಂದು ಸಂಜೆ 4.00 ಗಂಟೆವರೆಗೆ. 3) ಬಿಡ್ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ: 09-06-2023 ರಂದು ಸಂಜೆ 4.00 ಗಂಟೆಗೆ. 4) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: 19-06-2023 ರಂದು ಸಂಜೆ 4.00 ಗಂಟೆವರೆಗೆ. 5) ಇ-ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 22-06-2023 ರಂದು ಸಂಜೆ 4.30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ದಕ್ಷಿಣ ವಲಯ, ಬಿಬಿಎಂಪಿ.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ. ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029
ಫೋನ್: 25536567/26096832/910/854 ಫ್ಯಾಕ್ಸ್: 080–25536105, Email: purchase@kmf.coop
ಟೆಂಡರ್ ಪ್ರಕಟಣೆ
ಕರ್ನಾಟಕ ಹಾಲು ಮಹಾಮಂಡಳ ಬೆಂಗಳೂರು ವತಿಯಿಂದ ಈ ಕೆಳಗೆ ತಿಳಿಸಿರುವ ಸರಕು ಮತ್ತು ಸೇವೆಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ಸಾಮಗ್ರಿಗಳ ವಿವರ	ಅಂದಾಜು ಪರಿಮಾಣ ಮತ್ತು ಇ.ಎಂ.ಡಿ ಮೊತ್ತ ರೂ	Kppp ಇಂಡೆಂಟ್ ನಂ
1	ಕಹಾಮ/ ಖರೀದಿ/ ಟೆಂಡರ್–535/ 2023–24	ಕಹಾಮದ ವಿವಿಧ ಘಟಕಗಳಿಗೆ ಅವಶ್ಯಕವಿರುವ ವಿವಿಧ ಪ್ಯಾಂಟ್ ಸಾಮಗ್ರಿಗಳು ಮತ್ತು ದಿನ ಬಳಕೆ ವಸ್ತುಗಳನ್ನು ಖರೀದಿಸುವ ಬಗ್ಗೆ	*ಸಾಮಗ್ರಿವಾರು ಬೇಡಿಕೆ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲೆಯಲ್ಲಿ ಪಡೆಯಬಹುದು.	KMF/2023-24/ IND0014
2		ಮಾತೃ ಡೇರಿಗೆ ಅವಶ್ಯಕವಿರುವ ಇ.ಟಿ.ಪಿ ಪ್ಲಾಂಟ್ ಏರಿಯಾದಲ್ಲಿ ಸಾಗಾಣಿಕಾ ಸೇವೆಯನ್ನು ಪಡೆಯುವ ಬಗ್ಗೆ		KMF/2023-24/ SE0008

ಟೆಂಡರ್ ದಾಖಲಾತಿಯನ್ನು E-Proc ವೆಬ್‌ಸೈಟ್ https://www.kppp.karnataka.gov.in ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, ಸಹಾಯವಾಣಿ ನಂ.8046010000/ 8068948777.
ಟೆಂಡರ್ ಶುರುವಾಗುವ ದಿನಾಂಕ –22.05.2023, ಪೂರ್ವಭಾವಿ ಸಭೆ –26.05.2023 ಬೆಳಗ್ಗೆ 11.00 ಗಂಟೆಗೆ, ಟೆಂಡರ್ ಅಪ್‌ಲೋಡಿಂಗ್ ಮಾಡಲು ಕಡೆಯ ದಿನಾಂಕ – 05.06.2023 ಸಂಜೆ 5.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ–06.06.2023 ಸಂಜೆ 05.05 ಗಂಟೆಗೆ, ವಾಣಿಜ್ಯ ಬಿಡ್ ತೆರೆಯುವ ದಿನಾಂಕ– ತಾಂತ್ರಿಕ ಟೆಂಡರ್ ವಿಶ್ಲೇಷಣೆಯ ನಂತರ.
ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ಪರವಾಗಿ
ಸಹಿ/-
ನಿರ್ದೇಶಕರು (ಖರೀದಿ)

ಸಂಚಾರ, ಜನಜೀವನ ಅಸ್ತವ್ಯಸ್ತ • ಮುಳುಗಿದ ಮೀನುಗಾರಿಕೆ ದೋಣಿ, 12 ಜನರ ರಕ್ಷಣೆ

ಬಿರುಗಾಳಿ, ಮಳೆ: ಸಿಡಿಲಿಗೆ ಕುರಿಗಾಹಿ ಸಾವು

ಪ್ರಜಾವಾಣಿ ವಾರ್ತೆ

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಚಿಮ್ಮನಚೋಡ ರಸ್ತೆಯಲ್ಲಿ ಮರ ಉರುಳಿರುವುದು (ಎಡಚಿತ್ರ). ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಮುತ್ತುಗದಹಳ್ಳಿಯಲ್ಲಿ ಮರ ಬಿದ್ದು ಕಾರು ಜಖಂಗೊಂಡಿರುವುದು

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಂಗಳವಾರವೂ ಬಿರುಗಾಳಿ ಸಹಿತ ಮಳೆ ಮುಂದುವರಿದಿದ್ದು, ಹಲವೆಡೆ ಮರಗಳು ಉರುಳಿವೆ. ಹಾನಗಲ್ ತಾಲ್ಲೂಕಿನಲ್ಲಿ ಸಿಡಿಲು ಬಡಿದು ವ್ಯಕ್ತಿ ಮೃತಪಟ್ಟಿದ್ದು, ಅಂಕೋಲದಲ್ಲಿ ಸಮುದ್ರದಲ್ಲಿ ಮೀನುಗಾರಿಕೆ ದೋಣಿ ಮುಳುಗಿದ್ದು, ಅದರಲ್ಲಿದ್ದ 12 ಜನರನ್ನು ರಕ್ಷಿಸಲಾಗಿದೆ.

ಕಲಬುರಗಿ, ಉತ್ತರ ಕನ್ನಡ, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಉತ್ತಮ, ಕೆಲವೆಡೆ ಧಾರಾಕಾರ ಮಳೆಯಾಗಿದೆ. ಹಲವೆಡೆ ಮರಗಳು ಉರುಳಿದ್ದು, ವಿದ್ಯುತ್ ತಂತಿಗಳ ಮೇಲೆ ಬಿದ್ದಿದ್ದರಿಂದ ಕಂಬಗಳು ಉರುಳಿದ್ದು, ಕೆಲವೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ.

ಕುರಿಗಾಹಿ ಸಾವು, ದೋಣಿ ಮುಳುಗಡೆ (ಹಾನಗಲ್ ವರದಿ): ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಮಹಾರಾಜಪೇಟೆಯಲ್ಲಿ ಮಂಗಳವಾರ ಸಂಜೆ ಹೊಲಕ್ಕೆ ಕುರಿ ಮೇಯಿಸಲು ಹೋಗಿದ್ದ ಕುರಿಗಾಹಿ ನಾಗರಾಜ ಲಕ್ಷ್ಮಪ್ಪ ಮುತ್ತಾಳ (22) ಸಿಡಿಲು ಬಡಿದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಉತ್ತರ ಕನ್ನಡ ಜಿಲ್ಲೆ ಅಂಕೋಲಾ ತಾಲ್ಲೂಕಿನ ಬೇಲೆಕೇರಿ ಸಮೀಪ ಅರಬ್ಬಿ ಸಮುದ್ರದಲ್ಲಿ ಬಿರುಗಾಳಿ ರಭಸಕ್ಕೆ ಮೀನುಗಾರಿಕಾ ದೋಣಿಯೊಂದು ಮುಳುಗಿದ್ದು ಅದರಲ್ಲಿದ್ದ 12 ಮೀನುಗಾರರನ್ನು ರಕ್ಷಿಸಲಾಯಿತು.

ಧಾರವಾಡ ಜಿಲ್ಲೆಯ ಹುಬ್ಬಳ್ಳಿಯಲ್ಲಿ ಹಾಗೂ ಗದಗ ಜಿಲ್ಲೆ ರೋಣ ತಾಲ್ಲೂಕಿನ ಹಲವೆಡೆ ಗುಡುಗು ಸಹಿತ ಭಾರಿ ಮಳೆ ಸುರಿಯಿತು. ಗದಗ ಬೆಟಗೇರಿ ಅವಳಿ ನಗರದಲ್ಲಿಯೂ ಮಳೆಯಾಗಿದೆ.

ರಸ್ತೆಗುರುಳಿದ ಮರ, ಹೆದ್ದಾರಿ ಬಂದ್ (ಕಲಬುರಗಿ ವರದಿ): ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಬಿರುಗಾಳಿ ಮಳೆಯಿಂದ ರಸ್ತೆ ಬದಿಯ ಮರಗಳು ಉರುಳಿದ ಕಾರಣ ರಾಜ್ಯ ಹೆದ್ದಾರಿ 75ರಲ್ಲಿ ಬರುವ ಗಾರಂಪಳ್ಳಿ-ಕನಕಪುರ ಮಧ್ಯೆ ವಾಹನಗಳ ಸಂಚಾರ ಸುಮಾರು ಎರಡು ಗಂಟೆ ಬಂದ್ ಆಗಿತ್ತು.

ಚಿಂಚೋಳಿಯಿಂದ ಚಿಮ್ಮನ ಚೋಡ, ಐನಾಪುರ ಹೋಗುವ ಹಾಗೂ ಚಿಮ್ಮನಚೋಡ, ಐನಾಪುರ ಕಡೆಯಿಂದ ಚಿಂಚೋಳಿ ಕಡೆ ಬರಲು ತೊಂದರೆಯಾಯಿತು. ಚಂದ್ರಶೇಖರ ಗುತ್ತೇದಾರ ಅವರ ಹೊಲದ ಬಳಿ ಉರುಳಿದ್ದ ಮರಗಳ ತೆರವು ನಂತರ ಸಂಚಾರ ಪುನರಾರಂಭವಾಯಿತು.

ಕಾಳಗಿ ಪಟ್ಟಣದಲ್ಲಿ ಟಪ್ಪರ್ ಮೇಲೆ ವಿದ್ಯುತ್ ಕಂಬವೊಂದು ಉರುಳಿದ್ದು, ವಿದ್ಯುತ್ ತಂತಿ ರಸ್ತೆಗೆ ಬಿದ್ದು ಕೆಲಕಾಲ ವಾಹನ ಸಂಚಾರ ವ್ಯತ್ಯಯವಾಯಿತು.

ಬೆಳಗಾವಿ ವರದಿ: ನಗರ ಹಾಗೂ ಜಿಲ್ಲೆಯ ವಿವಿಧೆಡೆ ಸೋಮವಾರ ರಾತ್ರಿ ಮಳೆ, ಬಿರುಗಾಳಿಯಿಂದ ಕೆಲವು ಮನೆಗಳಿಗೆ ಹಾನಿ ಉಂಟಾಗಿದೆ. ಕೆಲವೆಡೆ ಮರಗಳು ಹಾಗೂ ವಿದ್ಯುತ್ ಕಂಬಗಳು ಉರುಳಿದ್ದು, ಜನ ರಾತ್ರಿಯಿಡೀ ಕತ್ತಲಲ್ಲಿ ಕಳೆಯುವಂತಾಯಿತು.

ಬೆಳಗಾವಿಯಲ್ಲಿ ಎಂಟು ಕಡೆಗಳಲ್ಲಿ ವಿದ್ಯುತ್ ಕಂಬಗಳು ತುಂಡಾಗಿ ಬಿದ್ದಿವೆ. ಸದಾರ್ ಮೈದಾನದಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹವಾಗಿ ಕೆರೆ ರೂಪ ಪಡೆಯಿತು.

ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ, ಚಿಕ್ಕೋಡಿ ತಾಲ್ಲೂಕಿನ ಕಾಡಾಪುರದಲ್ಲಿ ತಲಾ 2 ಮನೆಗಳ ಚಾವಣಿ ಕುಸಿದಿದೆ.

ಚಿಕ್ಕಮಗಳೂರು ವರದಿ: ಜಿಲ್ಲೆಯ ವಿವಿಧೆಡೆ ವಿರಾಮ ಮಳೆಯಾಯಿತು. ಕೊಪ್ಪ ತಾಲ್ಲೂಕಿನ ಹರಿಹರಪುರದಲ್ಲಿ ಕೊಟ್ಟಿಗೆ ಮೇಲೆ ಮರ ಬಿದ್ದು ನಾಲ್ಕು ಜಾನುವಾರು ಗಾಯಗೊಂಡಿವೆ.

ಕಡೂರು-ಬೀರೂರು ಮಾರ್ಗದಲ್ಲಿ ವಿವಿಧೆಡೆ ಮರ, ವಿದ್ಯುತ್ ಕಂಬಗಳು ಉರುಳಿದ್ದು, ಕುಂಚೇಬೈಲಿನಲ್ಲಿ ಮರ ಬಿದ್ದು ವ್ಯಾನ್, ಹೊಸನಗರದಲ್ಲಿ ವಿದ್ಯುತ್ ಕಂಬ ಜಖಂಗೊಂಡಿದೆ. ಮೂಡಿಗೆರೆ, ಕೊಟ್ಟಿಗೆಹಾರ, ಶೃಂಗೇರಿ, ಕೊಪ್ಪ, ಜಯಪುರ, ಬಾಳೆಹೊನ್ನೂರು, ತರೀಕೆರೆ ಭಾಗದಲ್ಲಿ ಮಳೆಯಾಗಿದೆ.

ಶಾಮಿಯಾನ ಕುಸಿದು 15 ಜನರಿಗೆ ಗಾಯ (ಹಾಸನ ವರದಿ): ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ದುಮ್ಮಿಯಲ್ಲಿ ಬೀಗರ ಊಟ ಕಾರ್ಯಕ್ರಮಕ್ಕಾಗಿ ಹಾಕಿದ್ದ ಶಾಮಿಯಾನ ಕುಸಿದು 15 ಮಂದಿ ಗಾಯಗೊಂಡರು. ಮೂವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಜಿಲ್ಲೆಯ ಅರಸೀಕೆರೆ, ಜಾವಗಲ್, ಹಳೇಬೀಡು, ಹಾಸನ, ಸಕಲೇಶಪುರದಲ್ಲಿ ಸಾಧಾರಣ ಮಳೆಯಾಗಿದೆ.

ದಕ್ಷಿಣ ಒಳನಾಡು, ಕರಾವಳಿ ಭಾಗದಲ್ಲಿ 28ರವರೆಗೆ ಮಳೆ

ಬೆಂಗಳೂರು: ರಾಜ್ಯದ ಹಲವೆಡೆ ಬುಧವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ಹಾಗೂ ದಕ್ಷಿಣ ಒಳನಾಡಿನ ವಿವಿಧ ಜಿಲ್ಲೆಗಳಲ್ಲಿ ಇದೇ 28ರ ವರೆಗೂ ಮಳೆಯಾಗುವ ಸಾಧ್ಯತೆ ಇದೆ. ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಎರಡು ದಿನ ಮಳೆಯ ತೀವ್ರತೆ ಹೆಚ್ಚಬಹುದು ಎಂದು ಇಲಾಖೆ ಹೇಳಿದೆ.

ಬುಧವಾರ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆ ಪ್ರಮಾಣ ಹೆಚ್ಚಳವಾಗುವ ಸಾಧ್ಯತೆಯಿದೆ. ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳಲ್ಲಿಯೂ ಕೆಲವೆಡೆ ಗುಡುಗು ಸಹಿತ ಮಳೆಯಾಗಬಹುದು. ರಾಜ್ಯದಾದ್ಯಂತ ಒಂದೆರಡು ಕಡೆ ಬಿರುಗಾಳಿ ಸಹಿತ ಗುಡುಗು ಸಾಧ್ಯತೆಯಿದ್ದು, ಗಾಳಿಯ ವೇಗವು ಗಂಟೆಗೆ 40 ಕಿ.ಮೀ.ನಿಂದ 50 ಕಿ.ಮೀ. ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಗರಿಷ್ಠ ಉಷ್ಣಾಂಶವು ರಾಜ್ಯದ ಕೆಲವೆಡೆ ಸಾಮಾನ್ಯಕ್ಕಿಂತ 2-3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗುವ ಸಾಧ್ಯತೆಯಿದೆ. ಮಂಗಳವಾರ ಬೆಳಿಗ್ಗೆ 8.30ಕ್ಕೆ ಅಂತ್ಯವಾದಂತೆ ಹಿಂದಿನ 24 ಗಂಟೆಯ ಅವಧಿಯಲ್ಲಿ ಬೆಳಗಾವಿಯ ಕಣಬರ್ಗಿ ಹಾಗೂ ಮಂಡ್ಯದ ವಿಸಿ ಫಾರಂನಲ್ಲಿ ಗರಿಷ್ಠ (6 ಸೆಂ.ಮೀ.) ಮಳೆಯಾಗಿದೆ. ವಿಜಯಪುರದಲ್ಲಿ ಗರಿಷ್ಠ ಉಷ್ಣಾಂಶ (40.2 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ.

‘ಮೀಯಾ ಜಾಕಿ’ ಮಾವು ಕೆ.ಜಿ. ಹಣ್ಣಿಗೆ ₹ 2.50 ಲಕ್ಷ!

ಪ್ರಜಾವಾಣಿ ವಾರ್ತೆ

ಕೊಪ್ಪಳ: ದೇಶಿಯವಾಗಿ ಹತ್ತಾರು ತಳಿಗಳ ಹಣ್ಣುಗಳಿದ್ದರೂ ಮಾವಿನ ಮೇಳಕ್ಕೆ ಬಂದಿದ್ದ ಜನರಿಗೆ ಜಪಾನ್‌ನ ಮೀಯಾ ಜಾಕಿ ಹಣ್ಣಿನ ಮೇಲೇ ಕಣ್ಣು. ರುಚಿಗಿಂತಲೂ ಹೆಚ್ಚಾಗಿಅದರ ಬೆಲೆಯೇ ಕಣ್ಣು ಕುಕ್ಕುವಂತೆ ಮಾಡಿತ್ತು.

ತೋಟಗಾರಿಕೆ ಇಲಾಖೆಯು ಏರ್ಪಡಿಸಿರುವ ಮಾವು ಮೇಳದಲ್ಲಿ ಜಗತ್ತಿನ ದುಬಾರಿ ಮಾವಿನ ತಳಿಗಳಲ್ಲಿ ಒಂದಾದ ‘ಮೀಯಾ ಜಾಕಿ’ ಮಾವು ಸಭಿಕರ ಗಮನಸೆಳೆಯಿತು. ಅಸಾಧಾರಣ ರುಚಿ, ಗುಣಮಟ್ಟ ಮತ್ತು ವಿಶಿಷ್ಟ ಗುಣಲಕ್ಷಣಗಳಿಂದ ಈ ತಳಿಯು ಹೆಸರಾಗಿದೆ. ದರ ಒಂದು ಕೆ.ಜಿ.ಗೆ ₹ 2.50 ಲಕ್ಷ!

ಜಿಲ್ಲೆಯ ರೈತರಿಗೆ ಈ ತಳಿಯನ್ನು ಪರಿಚಯಿಸಲು ಇಲಾಖೆ ಜಪಾನ್‌ನಿಂದ ಮೀಯಾ ಜಾಕಿಯನ್ನು ತರಿಸಿತ್ತು. ಒಂದು ಕೆ.ಜಿ.ಗೆ ಐದರಿಂದ ಆರು ಹಣ್ಣು ಬರುತ್ತವೆ. ₹ 40 ಸಾವಿರಕ್ಕೆ ಖರೀದಿಸಿ ಒಂದು ಹಣ್ಣು ತಂದು ಇಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ. ಹಣ್ಣಿನ ವೈಶಿಷ್ಟ್ಯ ಕುರಿತು ಮಾಹಿತಿ ಫಲಕ ಹಾಕಿದ್ದು, ಹಣ್ಣು ಹಿಡಿದುಕೊಂಡು ಫೋಟೊ ತೆಗೆಯಿಸಿಕೊಳ್ಳುವುದು ಸಾಮಾನ್ಯವಾಗಿತ್ತು. ಹಣ್ಣಿನ ಪರಿಮಳಭರಿತ ವಾಸನೆಯನ್ನಾದರೂ ಸವಿಯಲು ಸಿಕ್ಕಿದ್ದು ಗ್ರಾಹಕರ ಖುಷಿ ಹೆಚ್ಚಿಸಿತು.

ಕೊಪ್ಪಳದಲ್ಲಿ ನಡೆದ ಮಾವುಮೇಳದಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದ ‘ಮೀಯಾ ಜಾಕಿ’ ತಳಿಯ ಹಣ್ಣು

> **ದುಬಾರಿಯಾದ ಮೀಯಾ ಜಾಕಿ ತಳಿಯ ಹಣ್ಣುಗಳಿಗೆ ಸ್ಥಳೀಯವಾಗಿ ಮಾರುಕಟ್ಟೆ ಕಷ್ಟ. ಈ ತಳಿ ಬೆಳೆಯಲು ಕೃಷಿಯಲ್ಲಿ ಪ್ರಯೋಗ ಮಾಡಲಾಗುವುದು**
> **ಕೃಷ್ಣ ಸಿ. ಉಕ್ಕುಂದ**
> ಉಪನಿರ್ದೇಶಕ, ತೋಟಗಾರಿಕೆ ಇಲಾಖೆ

‘ಕಿತ್ತಳೆ ಬಣ್ಣದ ಮೀಯಾ ಜಾಕಿ ತಳಿ ಹಣ್ಣನ್ನು ಜಪಾನ್‌ನಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ. ಹಣ್ಣಿನಲ್ಲಿರುವ ಸಿಹಿ ಅಂಶವನ್ನು ಬ್ರಿಕ್ಸ್ ಮಟ್ಟದಿಂದ ಅಳೆಯಲಾಗುತ್ತದೆ. ಈ ತಳಿಯ ಒಂದು ಸಸಿಯ ಬೆಲೆ ₹ 15 ಸಾವಿರ’ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಮರಣೋತ್ತರ ಪರೀಕ್ಷೆ ವರದಿಗೆ ಲಂಚ: ವೈದ್ಯ ಸೆರೆ

ಚಿತ್ರದುರ್ಗ: ಹಸುವಿನ ಮರಣೋತ್ತರ ಪರೀಕ್ಷೆಯ ವರದಿ ನೀಡಲು ರೈತರೊಬ್ಬರಿಂದ ₹ 6,000 ಲಂಚ ಪಡೆಯುತ್ತಿದ್ದ ಜಿಲ್ಲೆಯ ಹೊಳಲ್ಕೆರೆಯ ತಾಲ್ಲೂಕಿನ ಚಿಕ್ಕಜಾಜೂರು ಪಶು ವೈದ್ಯ ಡಾ.ಪಿ. ಆರ್.ತಿಪ್ಪೇಸ್ವಾಮಿ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

ಡಾ.ತಿಪ್ಪೇಸ್ವಾಮಿ

ಕಾಗಳಗೇರಿ ಗ್ರಾಮದ ರೈತ ಎಸ್.ಸ್ವಾಮಿ ಈ ಬಗ್ಗೆ ದೂರು ನೀಡಿದ್ದರು. ಸ್ವಾಮಿ ಅವರ ಎಚ್.ಎಫ್ ತಳಿಯ ಹಸು ಮೇ 19ರಂದು ಮೃತಪಟ್ಟಿತ್ತು. ವಿಮೆ ಪರಿಹಾರ ಪಡೆಯಲು ಮರಣೋತ್ತರ ಪರೀಕ್ಷೆ ವರದಿ ಅಗತ್ಯವಿತ್ತು. ಪರೀಕ್ಷೆ ನಡೆಸಿದ್ದ ಪಶು ವೈದ್ಯಾಧಿಕಾರಿ ಡಾ.ತಿಪ್ಪೇಸ್ವಾಮಿ, ₹ 7,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

₹ 1,000 ಪಡೆದಿದ್ದ ಅವರು, ವರದಿ ನೀಡುವಾಗ ₹ 6,000 ಪಾವತಿಸುವಂತೆ ತಾಕೀತು ಮಾಡಿದ್ದರು. ರೈತ ನೀಡಿದ್ದ ದೂರು ಆಧರಿಸಿ ದಾಳಿ ನಡೆಯಿತು. ಪೊಲೀಸ್ ಇನ್‌ಸ್ಪೆಕ್ಟರ್ ಬಿ.ಕೆ. ಲತಾ ತನಿಖೆ ಮುಂದುವರಿಸಿದ್ದಾರೆ ಎಂದು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎನ್.ವಾಸುದೇವರಾಮ ತಿಳಿಸಿದ್ದಾರೆ.

ವಿಜಯಪುರ: 27ರಿಂದ ‘ಮೇ ಸಾಹಿತ್ಯ ಮೇಳ’

ಪ್ರಜಾವಾಣಿ ವಾರ್ತೆ

ವಿಜಯಪುರ: ಗದುಗಿನ ಲಡಾಯಿ ಪ್ರಕಾಶನ, ಕವಿ ಪ್ರಕಾಶನ, ಚಿತ್ತಾರ ಕಲಾ ಬಳಗದ ಸಹಯೋಗದೊಂದಿಗೆ ನಗರದ ಕಂದಗಲ್ ಹನುಮಂತರಾಯ ರಂಗ-ಮಂದಿರದಲ್ಲಿ ಇದೇ 27 ಮತ್ತು 28ರಂದು ‘ಮೇ ಸಾಹಿತ್ಯ ಮೇಳ’ ಆಯೋಜಿಸಲಾಗಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಾಹಿತಿ ಬಸವರಾಜ ಸೂಳಿಭಾವಿ, ‘ಭಾರತೀಯ ಪ್ರಜಾಪ್ರಭುತ್ವ ಸವಾಲು; ಮೀರುವ ದಾರಿಗಳು’ ಎನ್ನುವ ವಿಚಾರದ ಕುರಿತು ಪ್ರಸ್ತುತ ಸಮ್ಮೇಳನವನ್ನು ಆಯೋಜಿಸಲಾಗಿದೆ ಎಂದರು.

27ರಂದು ಬೆಳಿಗ್ಗೆ 10ಕ್ಕೆ ಹೋರಾಟದ ಹಾಡುಗಳ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ಪ್ರೊ.ರಾಜೇಂದ್ರ ಚೆನ್ನಿ ದಿಕ್ಸೂಚಿ ಭಾಷಣ ಮಾಡುವರು. ಹೋರಾಟಗಾರ ಡಾ.ಪ್ರಕಾಶ ಅಂಬೇಡ್ಕರ್, ಹೋರಾಟಗಾರ್ತಿ ತೀಸ್ತಾ ಸೆಟಲ್‌ವಾಡ, ನವದೆಹಲಿಯ ಹರ್ಷ ಮೆಂದರ್, ಪ್ರಕಾಶ ಹಿಟ್ನಳ್ಳಿ, ನಜ್ಮಾ ಬಾಂಗಿ, ಭೀಮಶಿ ಕಲಾದಗಿ, ತುಕಾರಾಮ ಚಂಚಲಕರ, ಉಮಾ ಕಲಬುರ್ಗಿ, ವಿಹಾನ್ ಉದ್ಘಾಟನಾ ಗೋಷ್ಠಿಯಲ್ಲಿ ವಿಚಾರ ಮಂಡಿಸುವರು.

‘ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅಪಮೌಲ್ಯಗೊಳಿಸುವ, ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವ ವ್ಯವಸ್ಥಿತ ಸಂಚುಗಳ ವಿರುದ್ಧ ಚಿಂತನೆಗೆ ಒತ್ತು ನೀಡಲು ಸಾಹಿತ್ಯ ಮೇಳ ಆಯೋಜಿಸಲಾಗಿದೆ. ಎರಡು ದಿನದ ಮೇಳದಲ್ಲಿ ಆರು ಗೋಷ್ಠಿಗಳನ್ನು ಏರ್ಪಡಿಸಲಾಗುತ್ತದೆ’ ಎಂದು ಅವರು ತಿಳಿಸಿದರು.

ಪ್ರಶಸ್ತಿ ಪ್ರದಾನ: ಸಮಾರೋಪ ಭಾಷಣವನ್ನು ಪುಣೆಯ ನೀರಜ್ ಜೈನ್ ಮಾಡಲಿದ್ದಾರೆ. ಅಧ್ಯಕ್ಷತೆ ಕಾಳೇಗೌಡ ನಾಗವಾರ ವಹಿಸಲಿದ್ದಾರೆ ಎಂದು ತಿಳಿಸಿದರು.

ಸಮಾರೋಪ ಸಮಾರಂಭದಲ್ಲಿ ಭಾಗ್ಯಜ್ಯೋತಿ ಹಿರೇಮಠ ಅವರಿಗೆ ವಿಭಾ ಸಾಹಿತ್ಯ ಪ್ರಶಸ್ತಿ, ಎನ್ ವೆಂಕಟೇಶ ಅವರಿಗೆ ‘ಬಂಡ್ರಿ ನರಸಪ್ಪ ಸಮಾಜವಾದಿ ಶ್ರಮಜೀವಿ’ ಪ್ರಶಸ್ತಿ, ಮಾಲತಿ ಪಟ್ಟಣಶೆಟ್ಟಿ ಅವರಿಗೆ ‘ನವಲಕಲ್ ಶಾಂತವೀರಮ್ಮ ಮಹಾತಾಯಿ’ ಪ್ರಶಸ್ತಿ, ಜೆ. ಎಂ. ವೀರಸಂಗಯ್ಯ ಅವರಿಗೆ ‘ಸಂಶಿ ನಿಂಗಪ್ಪ ರೈತ ಚೇತನ’ ಪ್ರಶಸ್ತಿ, ಸಿ. ಬಸಲಿಂಗಯ್ಯ ಅವರಿಗೆ ‘ಪಂಚಪ್ಪ ಸಮುದಾಯ ಮಾರ್ಗಿ’ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು ಎಂದು ಅವರು ಹೇಳಿದರು.

ಉದ್ಯೋಗ ವಾಣಿ

ಅಕ್ರಮ ಖಾತೆ: ಎಂಟು ಮಂದಿ ಅಮಾನತು

ಪ್ರಜಾವಾಣಿ ವಾರ್ತೆ

ಬೀದರ್: 358 ನಿವೇಶನಗಳಿಗೆ ಖಾತಾ ನೀಡಿದ್ದ ಹಾಗೂ ನಗರಸಭೆ ಮಳಿಗೆಗಳ ಹಂಚಿಕೆಯಲ್ಲಿ ಅಕ್ರಮವೆಸಗಿದ್ದ ಆರೋಪದಡಿ ಬೀದರ್ ನಗರಸಭೆಯ ಹಿಂದಿನ ಪೌರಾಯುಕ್ತ, ಕಂದಾಯ ಅಧಿಕಾರಿ ಸೇರಿ ಎಂಟು ಸಿಬ್ಬಂದಿಯನ್ನು ಅಮಾನತುಗೊಳಿಸಲಾಗಿದೆ.

ಹಿಂದಿನ ಪೌರಾಯುಕ್ತ ರವೀಂದ್ರ ಅಂಗಡಿ, ಹಿಂದಿನ ಕಂದಾಯ ಅಧಿಕಾರಿ ಸವಿತಾ, ಕಂದಾಯ ನಿರೀಕ್ಷಕರಾದ ರಾಜಕುಮಾರ, ಸಂಗಮೇಶ, ತೆರಿಗೆ ವಸೂಲಿಗಾರ ರಮೇಶ ಎಲ್.ರಾವ್, ಹಿರಿಯ ಆರೋಗ್ಯ ನಿರೀಕ್ಷಕ ಸೈಯದ್ ಶಾಹಾ ಅಶ್ಫಾಕ್ ಅಲಿ, ದ್ವಿತೀಯ ದರ್ಜೆ ಸಹಾಯಕ ಫರೀದ್ ಚಂದಾ ಅಮಾನತುಗೊಂಡವರು.

ಜಿಲ್ಲಾ ಎಸ್ಸಿ, ಎಸ್ಟಿ ಕೈಗಾರಿಕೋದ್ಯಮಿಗಳ ಸಂಘದ ಅಧ್ಯಕ್ಷ ವಿಜಯಕುಮಾರ ಅವರು ಅನಧಿಕೃತವಾಗಿ ಡಿಜಿಟಲ್ ಖಾತೆ ಹಾಗೂ ಮುಟೇಶನ್ ಮಾಡಿರುವ ಕುರಿತು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದರು. ದೂರು ನೀಡಿ ತಪ್ಪಿತಸ್ಥರ ವಿರುದ್ಧ ಶಿಸ್ತುಕ್ರಮಕ್ಕೆ ಒತ್ತಾಯಿಸಿದ್ದರು.

ತನಿಖೆ ನಡೆಸಿದ್ದ ಪೌರಾಡಳಿತ ಇಲಾಖೆಯ ತನಿಖಾ ತಂಡದ ವರದಿ ಆಧರಿಸಿ ಇಲಾಖೆಯ ನಿರ್ದೇಶಕಿ ಎನ್.ಮಂಜುಶ್ರೀ ಅವರು ಅಮಾನತು ಆದೇಶ ಹೊರಡಿಸಿದ್ದಾರೆ.

₹ 18 ಕೋಟಿಯ ತಿಮಿಂಗಿಲ ವಾಂತಿ ವಶ

ಮೈಸೂರು: ‘ಜಿಲ್ಲೆಯ ಎಚ್.ಡಿ ಕೋಟೆ ತಾಲ್ಲೂಕಿನ ಹ್ಯಾಂಡ್ ಪೋಸ್ಟ್ ಬಳಿ 18 ಕೋಟಿಯ 8.12 ಕೆ.ಜಿ ತಿಮಿಂಗಲ ವಾಂತಿ ವಶಪಡಿಸಿಕೊಂಡು, ಮೂವರನ್ನು ಬಂಧಿಸಲಾಗಿದೆ. ಆರೋಪಿಗಳು ಹೋಟೆಲೊಂದರಲ್ಲಿದ್ದಾಗ ದಾಳಿ ನಡೆಸಲಾಯಿತು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ತಿಳಿಸಿದರು.

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2023-24 **NOTICE FOR PRIVATE SALE OF GOLD** 23/05/2023

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-06-2023 as shown below:

Br. Belthangadi: Suvarna Arcade, Belthangadi, Dakshina Kannada, Karnataka- 574 214, Ph no. 08256-232404 :-
19016400067158,19016400068982,19016400064890,19016400068586,19016400058579,19016400046244,19016400066424,19016400059973,19016400047127,19016400060146,19016400067901,19016400065624,19016400068875,19016400058132,19016400057241,19016400045840,19016400072968,19016400046152,19016400054701,19016400068966,19016400046426,19016400073404,19016400054107,19016400068339,19016400047283,19016400067596,19016400013004,19016400045857,19016400043795,19016400069279,19016400037193,19016400058355.19016400063561,19016400065632.

Br. B C Road : Ground floor, Hindusthan Towers, Oppo LIC office, Santhi Angadi Kaikamba, BC Road, Dakshina Kannada- 574 219 :-
20716400057920,20716400058167,20716400047889,20716400058910.

Br. Bhatkal: Misbah Chambers, Ranginkatta, NH 17, Bhatkal, Uttar Kannada, Karnataka- 581 320
19866400038322,19866400061167,19866400070309,19866400045863,19866400065416,19866400073089,19866400045871,19866400067529,19866400074632,19866400045889,19866400068139,19866400080647,19866400051440,19866400068154,19866400081488,19866400054394,19866400069954,19866400081538,19866400081546,19866400084383.

Br. Chikmagalur: P B No 157, Bm Buildings, Thogarihenkal Circle, K M Road, Chikmagaluru- 577 101, Ph no. 08262-233024 :-
13566400167461,13566400184946,13566400169194,13566400186974,13566400186487,13566400184698,13566400186925,13566400164625,13566400169681,13566400184029,13566400187014,13566400184961,13566400185042,13566400186107,13566400185471,13566400177585,13566400182841,13566400184557,13566400182064,13566400186115,13566400164575,13566400165556,13566400170309,13566400165606,13566400164583,13566400185166,13566400166729,13566400185307,13566400168071,13566400180266,13566400186867,13566400170432,13566400164591,13566400174434,13566400185372,13566400185257,13566400169467,13566400186164,13566400185380.

Br. Channarayapatna: Ground Floor, Madhu Complex, Mysore Road, Channarayapatna, Hassan- 573116 Ph No. 08176-252438 :-
19876400098267,19876400099265,19876400108587,19876400119212,19876400098077,19876400106110,19876400107001,19876400103190,19875500001940,19876400109148,19876400106755,19876400099489,19876400061166,19876400108744,19876400100295,19876400108975,19876400098135,19876400097475,19876400118503,19876400111649,19876400106433,19876400108900.

Br. Gonikopal: Sudharma Building,Near Masjid, Ponnampet Road Jn, Main Road, Gonikoppal, Kodagu- 571 213 :-
19616400094779,19616400094761,19616400066462,19616400070860,19616400072874,19616400054955,19616400092369,19616400089134,19616400078582,19616400093557,19616400095008,19616400068039,19616400070019,19616400069797,19616400057735,19616400079499,19616400074573,19616100044074,19616400090157,19616400090140,19616400092773,19616400094241,19616400094233,19616400094258,19616400094225,19616400066215,19616400065894,19616400094167,19616400074714,19616400093540,19616400094183,19616400093433,19616400090561,19616400018208,19616400091585,19616400087005,19616400093961,19616400088136,19616400088128,19616400094589,19616400093417,19616400093425,19616400020964,19616400015857,19616400091171,19616400090686,19616400089225,19616400089951,19616400089225.

Br. Hebri: Spatika Plaza, Kuchoor Road, Hebri, Karkala Taluk, Udupi- 576 112, Ph No. 08253-250045 :- 18965500002609,18966400015832,18966400015840,18966400016483,18966400017804,18966400017796,18966400017770,18966400019339,18966400017150,18966400017861,18966400019701.

Br. Kadur: Dr Vishwanath Building, Maravanji Circle, BH Road, Kadur, Chikmagalur- 577 548 Ph no. 08267-221244 :-
18936400037276,18936400034141,18936400032913,18936400030206,18936400034521,18936400039181.

Br. Kadaba: Ground Floor, Anugraha Complex, Main Road, Kadaba, Dakshina Kannada District- 574 221 :-
20126400029483, 20126400030648, 20126400024153, 20126400023874, 20126400024930, 20126400029491, 20126400029525, 20126400029368, 20126400024922, 20126400029509, 20126400031810, 20126400032974, 20126400033402, 20126400033493.

Br. Kundapura: Shivram Complex, Municipal Main Road, Kundapura, Udupi- 576201 Ph No. 08254 233144 :-
20146400077860,20146400087059,20146400087695,20146400078496,20146400044936,20146400086119,20146400087190, 20146400086671.

Br. Kushalnagar: HRS Mansion, BM Road, Kushal Nagar, Kodagu District- 571 234, Ph No. 08276 274084 :-
19316400067012,19316400066055,19316400056163,19316400054788,19316400032404,19316400041801,19316400033782,19316400058714,19316400065156,19316400067152,19316400066949,19316400055199,19316400043138,19316400056122,19316400056098,19316400056114.

Br. Karkala: Opp Bundimatt Bus Stand, Karkala, Udupi District- 574104 :- 19636400028452,19636400029278,19636400026597,19636400021879.

Br. Moodabidri: Next to Hotel Pancharatna Buidling,Moodabidri, Dakshin Kannada Dist.- 574 227 :-
19626400048915,19626400053659,19626400054319,19626400054939,19626400049103,19626400053634,19626400046885,19626400054434,19626400053097,19626400046422,19626400054459,19626400057684,19626400045374,19626400046588,19626400054491,19626400057700,19626400049822,19626400046802,19626400054897,19626400057718,19626400045952,19626400054335,19626400054855,19626400057767,19626400057825.

Br. Mangalore: P B No. 775, Near PVS Circle, Manasa Towers, M G Road, Kodialbail, Mangalore, Dakshin Kannad- 575 003, Ph No. 08242497883 :-
11756400031880,11756400032169,11756400025429,11756400033530,11756400031385,11756400031997,11756400032003,11756400031377,11756400031898.

Br. Mangalore/Kankanady: The Vintage, Kankanady, Dakshina Kannad, Mangalore- 575 002, Ph No. 08242430152 :-
17706400021310,17706400021716,17706400022482,17706400024231,17706400024249,17706400024256.

Br. Nellyadi: Elite Plaza, Nh 48, Near St.George P U College, Nellyadi, Dakshin Kannad- 574 229, Ph No.08251-256100 :-
16446400059892,16446400062516,16446400081151,16446400081532, 16446400081540.

Br. Puttur: Meenar Complex, Main Road, Puttur, Dakshin Kannad- 574 201, Ph No. 08251-233544 :- 18946400047639,18946400051557,18946400061382,18946400061390,18946400061663,18946400062679,18946400068049,18946400068098,18946400068825,18946400069351,18946400069955,18946400070417,18946400070631,18946400071118,18946400071159,18946400071183,18946400071431,18946400071720,18946400071894.

Br. Shimoga: Haranahalli Manjappa Complex,, Park Extension Road, Durgigudi, Shimoga District- 577 201, Ph No. 08182-271998 :-
15906400062569,15906400036142,15906400049855,15906400052925,15906400057833,15906400060589,15906400058757,15906400052008,15906400065810,15906400065364,15906400065612.

Br. Sullia: Ganesh Complex, Main Road, Sullia, Dakshina Kannada- 574 239, Ph no. 08257 230818 :- 19006400027526,19006400028235,19006400027971,19006400010191,19006400016412,19006400030728,19006400030082,19006400023632,19006400031189,19006400028524.

Br. Thokottu: R E B Complex, Opp.Thokottu Bus stand, NH17, Permannur Po, Thokkottu Jn, Dakshin Kannada – 575 017, Ph no. 0824246201З :-
20136400059976,20136400062558,20136400045512,20136400050033, 20136400052740.

Br. Udupi: Mahalasa Towers, Court Road, Udupi, Karnataka- 576 101, Ph no. 08202521562 :- 15746400046992, 15746400046984, 15746400046976, 15746400046398, 15746400046414, 15746400046422, 15746400046430, 15746400046232, 15746400046240, 15746400046554, 15746400046562, 15746400045960, 15746400046919, 15746400047479, 15746400046836, 15746400045861, 15746400047503, 15746400047586, 15746400051802, 15746400051828, 15746400035318, 15746400036142, 15746400036605, 15746400045432, 15746400050507, 15746400050515, 15746400045747, 15746400046505, 15746400046372, 15746400046356, 15746400046364, 15746400045275, 15746400045556, 15746400043296, 15746400043338, 15746400045580, 15746400045598, 15746400045309, 15746400041837, 15746400024569, 15746400047255, 15746400047263, 15746400046570, 15746400046596, 15746400051547, 15746400049764, 15746400049368, 15746400049541, 15746400049590, 15746400049533, 15746400049525, 15746400049582, 15746400049558, 15746400049566, 15746400049574.

Br. Narasimharajapura: No.794, Dayasagar Complex, Near IOC Petrol Pump, Nagalapura, B H Kaimara, Chikmagalur- 577 134 Ph. No. 08266-228055 :-
18956400021369, 18956400021286.

Br. Karwar : 451/G-1, Suprabha, Green Street, Karwar, Uttar Kannad - 581 301 Ph: 91-8382-222842 :- 16286400025752,16286400028855,16286400024102,16286400028939,16286400023500,16286400024094,16286400028194,16286400024482,16286400028434,1628640002447416286400030257,16286400025125.

Br. Hassan: Ground Floor, St. Antony's Church Complex, NR Circle, HN Pura Road, Hassan, Karnataka- 573 201 :-
13546400156219,13546400138357,13546400109275,13546400162563,13546400199219,13546400220759,13546400244940,13546400221930,13546400217011,13546400225642,13546400223449,13546400114440,13546400205107,13546400236110,13546400244965,13546400177835,13546400219637,13546400245103,13546400159189,13546400223167,13546400176829,13546400223837,13546400244577,13546400226103,13546400088230,13546400223399,13546400243850,13546400226111,13546101011135,13546400225204,13546400221880,13546400222953,13546400108657,13546400063050,13546400220015,13546400162902,13546400088222,13546400226418,13546400225402,13546400246374,13546400223118,13546400174782,13546400221971,13546400195423,13546400244346,13546400223563,13546400226384,13546400131501,13546400188600,13546400178007,13546400224322,13546400225782,13546400235724,13546400222458,13546400063530,13546400225584,13546400104847,13546400221278,13546400226095,13546400169691,13546400134067.13546400224256

Br. Kinnigoli : C4 and C5, Pintos Golden Castle, Talipady Road, Next to BSNL office, Kinnigoli, Dakshin Kannad Dist - 574 150 Ph : 0824-2295690 :-
20076400020174,20076400028011,20076400028029.

Bangalore 23-05-2023 Vice President & Zonal Head

ಪ್ರಜಾವಾಣಿ ಬುಧವಾರ, 24 ಮೇ 2023

ತಂತ್ರಜ್ಞಾನ



ವಯಸ್ಸಿನ ಲೆಕ್ಕಕ್ಕೆ ಕಾರ್ಬನ್ ಡೇಟಿಂಗ್

ಅವಿನಾಶ್ ಬಿ.

> ಯಾವುದೇ ಅವಶೇಷ ಅಥವಾ ಪಳೆಯುಳಿಕೆ ಪತ್ತೆಯಾದರೆ ಅದು ಎಷ್ಟು ವರ್ಷದ ಹಿಂದಿನದು ಎಂದು ಲೆಕ್ಕಾಚಾರ ಹಾಕುವ ವೈಜ್ಞಾನಿಕ ವಿಧಾನವೇ ಕಾರ್ಬನ್ ಡೇಟಿಂಗ್

ಮನುಷ್ಯರು, ಪ್ರಾಣಿಗಳ ವಯಸ್ಸನ್ನು ಅವರು ಹುಟ್ಟಿದ ದಿನದ ಆಧಾರದಲ್ಲಿ ಪತ್ತೆ ಮಾಡಬಹುದು. ಆದರೆ ಆದರೆ ಪ್ರಾಚೀನ ಪಳೆಯುಳಿಕೆಗಳ ಅಥವಾ ಹಿಂದೆ ಇದ್ದ ಡೈನೋಸಾರ್ ಮುಂತಾದವುಗಳ, ಯಾವುದೇ ಜೈವಿಕ ವಸ್ತುಗಳ ಅವಶೇಷಗಳ ಕಾಲಮಾನ ಹೇಗೆ ಕಂಡುಹಿಡಿಯಬಹುದು? ಇದಕ್ಕಾಗಿ ಇರುವ ವಿಧಾನವೇ 'ಕಾರ್ಬನ್ ಡೇಟಿಂಗ್'. ಇತ್ತೀಚೆಗೆ ವಾರಾಣಸಿಯ ಜ್ಞಾನವಾಪಿ ಮಸೀದಿಯ ಶಿವಲಿಂಗದ ಕಾಲಮಾನ ತಿಳಿಯಲು ಕಾರ್ಬನ್ ಡೇಟಿಂಗ್ ಬಳಸಬೇಕೆಂಬ ಆಗ್ರಹವು ಬಹುಚರ್ಚಿತ ವಿಷಯ. ಏನಿದು ಕಾರ್ಬನ್ ಡೇಟಿಂಗ್ ಪ್ರಕ್ರಿಯೆ? ಇಲ್ಲಿದೆ ಒಂದಿಷ್ಟು ಮಾಹಿತಿ.

ಪಳೆಯುಳಿಕೆಗಳ ಕಾಲಮಾನ ತಿಳಿಯುವ ಕುರಿತು 1946ರಲ್ಲಿ ಅಧ್ಯಯನ ನಡೆಸಿದ ಅಮೆರಿಕನ್ ಭೌತ-ರಸಾಯನ ವಿಜ್ಞಾನಿ ಡಾ. ವಿಲಾರ್ಡ್ ಎಫ್. ಲಿಬಿ ಎಂಬವರು, ಪ್ರತಿಯೊಂದು ವಸ್ತುವಿನಲ್ಲಿ ಇರುವ ಇಂಗಾಲ (ಕಾರ್ಬನ್) ಎಂಬ ಧಾತುವಿನ ರಾಸಾಯನಿಕ ಕ್ರಿಯೆಯ ಜಾಡನ್ನು ಹಿಡಿದು, ಆ ವಸ್ತುವಿನ ಕಾಲಮಾನ ನಿರ್ಧರಿಸುವ ವಿಧಾನವನ್ನು ಕಂಡುಹಿಡಿದು, ಅದಕ್ಕೆ 'ಕಾರ್ಬನ್ ಡೇಟಿಂಗ್' ಎಂಬ ಹೆಸರಿಟ್ಟರು. ಈ ಸಂಶೋಧನೆಗಾಗಿಯೇ 1960ರಲ್ಲಿ ಅವರಿಗೆ ರಸಾಯನ ಶಾಸ್ತ್ರದ ನೊಬೆಲ್ ಪುರಸ್ಕಾರ ದೊರೆತಿತ್ತು.

ಕಾರ್ಬನ್ ಡೇಟಿಂಗ್ ಬಳಸಿರುವ ಕುರಿತಾಗಿ ಕರ್ನಾಟಕದ್ದೇ ಒಂದು ಉದಾಹರಣೆಯನ್ನು ಗಮನಿಸಬಹುದಾದರೆ, 2010ರ ಆಗಸ್ಟ್ ತಿಂಗಳಲ್ಲಿ ಧಾರವಾಡದ ಅಣ್ಣಿಗೇರಿಯಲ್ಲಿ 601 ತಲೆಬುರುಡೆಗಳು ಪತ್ತೆಯಾಗಿದ್ದುದು ನಿಮಗೆ ನೆನಪಿರಬಹುದು. ಅಷ್ಟೊಂದು ತಲೆಬುರುಡೆಗಳು ಎಲ್ಲಿಂದ ಬಂದವು? ಇದು ಸಾಮೂಹಿಕ ಹತ್ಯಾಕಾಂಡವಾಗಿತ್ತೇ? ಅಥವಾ ಇದಕ್ಕೆ ಯುದ್ಧ, ಕ್ಷಾಮ, ರೋಗ ರುಜಿನ ಕಾರಣವಾಗಿದ್ದಿರಬಹುದೇ ಎಂಬ ಕುತೂಹಲ ಎಲ್ಲರಿಗೂ. ಹೀಗಾಗಿ ಕಾರ್ಬನ್ ಡೇಟಿಂಗ್ ಮೂಲಕ ಈ ತಲೆಬುರುಡೆಗಳ ಕಾಲವನ್ನು ಪತ್ತೆ ಹಚ್ಚಿದಾಗ, ಅವು 18ನೇ ಶತಮಾನದ ಅಂತ್ಯಭಾಗದ್ದು ಎಂಬುದು ತಿಳಿಯಿತು. ಅದೇ ಸಮಯದಲ್ಲಿ ಎಂದರೆ 1792ರಿಂದ 1796ರವರೆಗಿನ ನಾಲ್ಕು ವರ್ಷ ತೀವ್ರವಾದ 'ಕ್ಷಾಮ' ಕಾಡಿತ್ತು. ಇದನ್ನು 'ಡೋಗಿ ಬರ' ಎಂದೂ ಕರೆಯಲಾಗುತ್ತಿತ್ತು. 6 ವರ್ಷದ ಮಕ್ಕಳಿಂದ ಹಿಡಿದು 60ವರೆಗಿನ ವಯಸ್ಕರವರೆಗೆ ನೂರಾರು ಮಂದಿ ಸಾವನ್ನಪ್ಪಿದ್ದರು. ಅಂದಿನ ಬಾಂಬೆ ಪ್ರೆಸಿಡೆನ್ಸಿಗೆ ಸೇರಿದ ಅಣ್ಣಿಗೇರಿ, ಗದಗ, ಬಾಗಲಕೋಟೆ ಪ್ರದೇಶಗಳಲ್ಲಿ ಕ್ಷಾಮ ಉಂಟಾಗಿರುವ ಸಂಗತಿಯು ಬಾಂಬೆ ಗೆಜೆಟ್‌ನಲ್ಲಿ ದಾಖಲಾಗಿತ್ತು. ಅದನ್ನು ತಾಳೆ ನೋಡಿದಾಗ ಈ ತಲೆಬುರುಡೆಗಳು ಬರದಿಂದ ಸತ್ತವರದ್ದು ಎಂಬುದು ದೃಢವಾಗುತ್ತದೆಂದು ಹಿರಿಯ ಸಂಶೋಧಕ ಡಾ. ಎಂ. ಎಂ. ಕಲಬುರ್ಗಿ ಹೇಳಿದ್ದರು.

ಏನಿದು ಕಾರ್ಬನ್ ಡೇಟಿಂಗ್?

ಯಾವುದೇ ಅವಶೇಷ ಅಥವಾ ಪಳೆಯುಳಿಕೆ ಪತ್ತೆಯಾದರೆ ಅದು ಎಷ್ಟು ವರ್ಷದಹಿಂದಿನದು ಎಂದು ಲೆಕ್ಕಾಚಾರ ಹಾಕುವ ವೈಜ್ಞಾನಿಕ ವಿಧಾನವೇ ಕಾರ್ಬನ್ ಡೇಟಿಂಗ್. ಕಾರ್ಬನ್ ಡೇಟಿಂಗ್ ಪ್ರಕ್ರಿಯೆಯಿಂದ ಆ ವಸ್ತುವಿನ ವಯೋಮಾನದ ಅಂದಾಜು ಮಾಡಬಹುದಾದರೆ, ಆ ಪ್ರದೇಶದಲ್ಲಿ ತತ್ಸಂಬಂಧಿತವಾಗಿ ಸಂಭವಿಸಿರಬಹುದಾದ ಯುದ್ಧ, ಕ್ಷಾಮ ಮುಂತಾದ ಘಟನೆಗಳ ಇತಿಹಾಸವನ್ನು ತಾಳೆ ನೋಡಿ, ಕಾರಣ ಪತ್ತೆ ಹಚ್ಚುವುದು ಸಾಧ್ಯ. ಕಾರ್ಬನ್ ಡೇಟಿಂಗ್ ವಿಧಾನವನ್ನು ಭೂವಿಜ್ಞಾನಿಗಳು, ಮಾನವಶಾಸ್ತ್ರಜ್ಞರು, ಭೂಗರ್ಭಶಾಸ್ತ್ರಜ್ಞರು ಹಾಗೂ ಸಂಬಂಧಿತ ಕ್ಷೇತ್ರದ ತನಿಖಾ ಸಂಸ್ಥೆಗಳು ಬಳಸಿಕೊಂಡಿದ್ದಾರೆ.

ಕಾರ್ಬನ್-14 ಡೇಟಿಂಗ್ ಅಥವಾ ರೇಡಿಯೋ ಕಾರ್ಬನ್ ಡೇಟಿಂಗ್‌ನಲ್ಲಿ ಕಾರ್ಬನ್‌ನ ಐಸೋಟೋಪ್‌ಗಳ ಇರುವಿಕೆಯ ಅನುಪಾತದ ಆಧಾರದಲ್ಲಿ ಕಾಲಮಾನ ಕಂಡುಹಿಡಿಯಲಾಗುತ್ತದೆ. ಮೂಲ ಧಾತು ಹಾಗೂ ರಾಸಾಯನಿಕ ಗುಣಗಳು ಒಂದೇ ರೀತಿಯಾಗಿರುವ, ಆದರೆ ಪರಮಾಣು ತೂಕದಲ್ಲಿ ವ್ಯತ್ಯಾಸವಿರುವ ಪರಮಾಣು ರೂಪಗಳನ್ನು ಐಸೋಟೋಪು ಎನ್ನುತ್ತಾರೆ. ಇಂಗಾಲ (ಕಾರ್ಬನ್) ಬಗ್ಗೆ ಹೇಳುವುದಾದರೆ, ಸಿ-12 ಹಾಗೂ ಸಿ–14 ಎಂಬವು ಎಲ್ಲ ಜೀವಿಗಳಲ್ಲಿರುವ ಕಾರ್ಬನ್‌ನ ಐಸೋಟೋಪುಗಳು.

ರೇಡಿಯೋ ಕಾರ್ಬನ್‌ನಲ್ಲಿರುವ (ಕಾರ್ಬನ್-14) ನೈಟ್ರೋಜನ್ (ಸಾರಜನಕ) ಅಂಶವು ಕರಗುವುದರ ಆಧಾರದಲ್ಲಿ ನಿರ್ದಿಷ್ಟ ವಸ್ತುವಿನ ವಯೋಮಾನವನ್ನು ನಿರ್ಣಯಿಸಲಾಗುತ್ತದೆ. ಭೂಮಿಯ ವಾತಾವರಣದಲ್ಲಿರುವ ನೈಟ್ರೋಜನ್-14 ಎಂಬ ಸಾರಜನಕದ ಐಸೋಟೋಪಿನ ಜೊತೆಗೆ, ಕಾಸ್ಮಿಕ್ ಕಿರಣಗಳಿಂದ ಸಹಜವಾಗಿ ಉತ್ಪತ್ತಿಯಾಗುವ ನ್ಯೂಟ್ರಾನ್‌ಗಳ ನಿರಂತರವಾದ ನೈಸರ್ಗಿಕ ಸಂಯೋಗದಿಂದಾಗಿ ಪ್ರತಿ ಜೀವಿಯಲ್ಲಿ ಕಾರ್ಬನ್-14 ಉತ್ಪತ್ತಿಯಾಗುತ್ತದೆ. ಆದರೆ ಜೀವಿಯು ಸತ್ತ ಬಳಿಕ ಸಿ–14 ರಚನೆಯ ಕ್ರಿಯೆಯು ನಿಂತುಹೋಗಿ ಅದರಲ್ಲಿರುವ ನೈಟ್ರೋಜನ್‌ನ ಕರಗುವಿಕೆ ಪ್ರಕ್ರಿಯೆ ಆರಂಭವಾಗುತ್ತದೆ. ಪ್ರತೀ ಜೀವವಸ್ತುವಿನಲ್ಲಿ ಇರಬಹುದಾದ ಕಾರ್ಬನ್–12 (ಸಿ–12) ಐಸೋಟೋಪು ನಶಿಸದೆ ಸುಸ್ಥಿರವಾಗಿಯೇ ಉಳಿದುಕೊಳ್ಳುತ್ತದೆ. ಇದು ಅದರ ಗುಣಸ್ವಭಾವ.

ಹೀಗೆ ನಿರ್ದಿಷ್ಟ ವಸ್ತುವಿನಲ್ಲಿ ಇರುವ ಕಾರ್ಬನ್–12 ಹಾಗೂ ಕಾರ್ಬನ್–14 ಐಸೋಟೋಪುಗಳ ಅನುಪಾತದ ಆಧಾರದಲ್ಲಿ ಪಳೆಯುಳಿಕೆಯ ಆಯುಸ್ಸನ್ನು ಕಂಡುಹಿಡಿಯಲು ಪ್ರಧಾನ ಅಂಶವೊಂದಿದೆ. ಅದುವೇ ಈ ರಾಸಾಯನಿಕ ಮೂಲಧಾತುಗಳಿಗೆ ಇರುವ ಅರ್ಧಾಯುಷ್ಯ. ಅರ್ಧಾಯುಷ್ಯ ಎಂದರೆ, ಅದರ ಸಾಂದ್ರತೆಯು ಅರ್ಧಕ್ಕೆ ನಶಿಸುವುದಕ್ಕೆ ಬೇಕಾದ ಅವಧಿ. ಕಾರ್ಬನ್-14 ಐಸೋಟೋಪಿನ ಸಾಂದ್ರತೆಯು ಅರ್ಧಭಾಗದಷ್ಟು ಆಗಲು ಬೇಕಾದ ಅವಧಿ 5739 ವರ್ಷಗಳು.

ಸಿ–12 ಹಾಗೂ ಸಿ–14 ನಡುವಣ ಅನುಪಾತ ವ್ಯತ್ಯಾಸವಾದಾಗ (ಸಿ–14 ಕರಗಲು ಆರಂಭಿಸಿದಾಗ) ಜೀವಿಯೊಂದು ಅವಸಾನವಾಗಿದೆ ಎಂದು ತಿಳಿಯಬಹುದಾಗಿದ್ದು, ಅದರ ಕಾಲಮಾನವನ್ನು ಗುರುತಿಸುವುದು ಸಾಧ್ಯವಾಗುತ್ತದೆ. ಅಂದರೆ, ಸಿ–12 ಹಾಗೂ ಸಿ–14 ಇರುವಿಕೆಯ ಅನುಪಾತವು 2:1 ಆದಾಗ ಆ ಜೀವಿಯು ಸರಿಸುಮಾರು 5739 ವರ್ಷಗಳ ಹಿಂದೆ (ಸುಮಾರು 40 ವರ್ಷ ಹೆಚ್ಚುಕಡಿಮೆಯಾಗಬಹುದು) ಅವಸಾನಗೊಂಡಿತ್ತು ಎಂದು ತೀರ್ಮಾನಿಸಬಹುದು.

ಒಟ್ಟಾರೆಯಾಗಿ ಹೇಳುವುದಾದರೆ, ಪ್ರತಿಯೊಂದು ಜೀವಿಯ ಅಂಗಾಂಶವೂ ಕಾರ್ಬನ್-14 ಅನ್ನು ವಾತಾವರಣದಿಂದ ಹೀರಿಕೊಳ್ಳುತ್ತಿರುತ್ತದೆ. ಅದು ಸತ್ತಾಗ, ಈ ಹೀರಿಕೊಳ್ಳುವಿಕೆ ನಿಂತುಹೋಗುತ್ತದೆ ಮತ್ತು ಕಾರ್ಬನ್-14 ನಿಧಾನವಾಗಿ ಬೇರೆ ಪರಮಾಣುಗಳಾಗಿ ಪರಿವರ್ತನೆಗೊಳ್ಳತೊಡಗುತ್ತದೆ. ಎಷ್ಟು ಕಾರ್ಬನ್-14 ಉಳಿದುಕೊಂಡಿದೆ ಎಂಬುದನ್ನು ಅಳತೆ ಮಾಡಿದಾಗ, ಆ ಜೀವಿಯು ಅವಸಾನ ಹೊಂದಿ ಎಷ್ಟು ಸಮಯವಾಯಿತು ಎಂಬುದನ್ನು ವಿಜ್ಞಾನಿಗಳು ನಿರ್ಧರಿಸುತ್ತಾರೆ.

ಆದರೆ ಕಾರ್ಬನ್ ಡೇಟಿಂಗ್ ವಿಧಾನಕ್ಕೆ ಒಂದು ಮಿತಿ ಇದೆ. ಈ ವಿಧಾನದಿಂದ 50 ಸಾವಿರ ವರ್ಷದೊಳಗಿನ ವಸ್ತುಗಳ ಕಾಲಮಾನವನ್ನಷ್ಟೇ ನಿರ್ಧರಿಸಬಹುದಾಗಿದೆ. ಅದಕ್ಕೂ ಹಿಂದಿನ ಜೀವಿಗಳ ಕಾಲಮಾನ ನಿರ್ಧರಿಸಬೇಕೆಂದಾದರೆ, ಕಾರ್ಬನ್‌ಗಿಂತಲೂ ಹೆಚ್ಚು ಅರ್ಧಾಯುಷ್ಯ ಅವಧಿ ಹೊಂದಿರುವ ಥೋರಿಯಂ, ಯುರೇನಿಯಂ, ಪೊಟ್ಯಾಷಿಯಂ ಮುಂತಾದ ಧಾತುಗಳನ್ನು ಬಳಸಬಹುದಾಗಿದೆ. ❖

ಬಟ್ಟೆಗೂ ಬಂದೀತೆ ಬುದ್ಧಿ!

ನೇಸರ ಕಾಡನಕುಪ್ಪೆ

ಹೀಗೊಂದು ಸನ್ನಿವೇಶವನ್ನು ಕಲ್ಪಿಸಿಕೊಳ್ಳಿ: ನೀವು ನಿಮ್ಮ ಕಾರಿನಿಂದ ಕೆಳಗಿಳಿದ ಕೂಡಲೇ ತಣ್ಣನೆಯ ಗಾಳಿ ನಿಮಗೆ ಅಪ್ಪಳಿಸುತ್ತದೆ. ಆಗ ನೀವು ಧರಿಸಿರುವ ಬಟ್ಟೆ ತನಗೆ ತಾನೇ ಬೆಚ್ಚಗಾದರೆ ಎಷ್ಟು ಚೆನ್ನ ಅಲ್ಲವೇ? ಅಥವಾ ಸುಡು ಬೇಸಿಗೆಗೆ ನೀವು ಬೆವರುತ್ತಿರುತ್ತೀರ ಎಂದುಕೊಳ್ಳಿ. ಆಗ ಬಟ್ಟೆಯು ತನಗೆ ತಾನೇ ತಣ್ಣಗಾದರೆ ಎಷ್ಟು ಅನುಕೂಲಕರ ಅಲ್ಲವೇ? ಈ ರೀತಿಯ ಕಲ್ಪನೆಯು ಕೇವಲ ಕಲ್ಪನೆಯಾಗೇ ಇರದೇ, ನಿಜಜೀವನದಲ್ಲೂ ಇಂಥ ಬಟ್ಟೆಗಳು ಸಿಗುವ ದಿನಗಳು ದೂರವಿಲ್ಲ!

ಈ ಬಗೆಯ ಬಟ್ಟೆಯನ್ನು ಕೆನಡಾದ ವಾಟರ್ಲೂ ವಿಶ್ವವಿದ್ಯಾಲಯದ ಕೆಮಿಕಲ್ ಎಂಜಿನಿಯರ್‌ಗಳು ಸಂಶೋಧಿಸಿದ್ದಾರೆ. ಇಂಥ ಬಟ್ಟೆಯು ಮಾರುಕಟ್ಟೆಗೆ ಬಂದಿದ್ದೇ ಆದಲ್ಲಿ ಬಹುತೇಕ ನಾವು ಬಳಸುತ್ತಿರುವ ಹವಾನಿಯಂತ್ರಣ ವ್ಯವಸ್ಥೆಯ ಅಗತ್ಯವೇ ಇಲ್ಲದಂತೆ ಆಗಿಬಿಡುತ್ತದೆ ಎನ್ನುತ್ತಿದ್ದಾರೆ, ಈ ಸಂಶೋಧಕರು!

ಅದರಲ್ಲೂ ಬಳಸಿ ಬಿಸಾಡಿದ ಪ್ಲಾಸ್ಟಿಕ್ ಸಾಮಗ್ರಿಗಳಲ್ಲಿರುವ ನ್ಯಾನೋ ಪಾಲಿಮರ್ ನಾರುಗಳನ್ನು ಬೇರ್ಪಡಿಸಿ ಈ ಬಟ್ಟೆಯನ್ನು ತಯಾರಿಸಲಾಗಿದೆ. ಹಾಗಾಗಿ, ಇದು ಪರಿಸರ ಪ್ರಿಯವೂ ಹೌದು. ನೈಸರ್ಗಿಕ ಸಂಪನ್ಮೂಲಗಳು ಖಾಲಿಯಾಗುತ್ತಿರುವ ಈ ಸಂದರ್ಭದಲ್ಲಿ ಮರುಬಳಕೆಯ ಅಗತ್ಯ ಅತಿ ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ಈ ಬಟ್ಟೆಯು ಕಸವನ್ನು ರವನ್ನಾಗಿಸಿ ಪರಿಸರವನ್ನು ಸ್ವಚ್ಛಗೊಳಿಸುವ ಆಂದೋಲನವೂ ಆಗಲಿದೆ ಎಂದು ಸಂಶೋಧಕರು ವಿಶ್ಲೇಷಿಸಿದ್ದಾರೆ.

> **ಜೈವಿಕ ಮಿಮಿಕ್ರಿ ಪ್ರೇರಣೆ**
>
> ಮುಟ್ಟಿದರೆ ಮುನಿ ಸೊಪ್ಪು, ಬಣ್ಣ ಬದಲಿಸುವ ಗೋಸುಂಬೆಯಂತೆ ಪ್ರಕೃತಿಯಲ್ಲಿ ಅನೇಕ ಮಾದರಿಗಳು ಸಿಗುತ್ತವೆ. ಈ ಮಾದರಿಗಳು ಪ್ರಕೃತಿಯ ಏರಿಳಿತಗಳಿಗೆ ಸ್ಪಂದಿಸುತ್ತವೆ. ಸ್ಪರ್ಶ, ತಾಪಮಾನ, ವಿವಿಧ ಸಂದರ್ಭ ಹಾಗೂ ಸನ್ನಿವೇಶಗಳಿಗೆ ತಕ್ಕಂತೆ ಅವು ವರ್ತಿಸುತ್ತವೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಸಂಶೋಧಕರು ಈ ಬುದ್ಧಿವಂತ ಬಟ್ಟೆಯನ್ನು ತಯಾರಿಸಿದ್ದಾರೆ. 'ಪ್ರಕೃತಿಯಲ್ಲಿ ಈಗಾಗಲೇ ನಮಗೆ ಸಿದ್ಧ ಮಾದರಿಗಳು ಇರುವಾಗ ನಾವು ಅವನ್ನು ಕೃತಕವಾಗಿ ತಯಾರಿಸಲು ಸಾಧ್ಯವೇ ಇಲ್ಲವೇ ಎಂಬುದಷ್ಟೇ ನಮ್ಮ ಮುಂದಿರುವ ಪ್ರಶ್ನೆ' ಎಂದು ಸಂಶೋಧಕ ಡಾ. ಮಿಲಾಸ್ ಕಾಮ್ಕರ್ ಹೇಳಿದ್ದಾರೆ.

ಏನಿದು ಬಟ್ಟೆ?

ಇದು ಬುದ್ಧಿವಂತ ಬಟ್ಟೆ. ಈ ಬಟ್ಟೆಯು ಶಾಖಕ್ಕೆ ಸ್ಪಂದಿಸುವ ಗುಣವನ್ನು ಹೊಂದಿದೆ. ಅಂದರೆ, ಶಾಖ ಹೆಚ್ಚಿದ್ದಲ್ಲಿ ತಣ್ಣಗಾಗುವ, ಶಾಖ ಕಡಿಮೆಯಿದ್ದಲ್ಲಿ ಬೆಚ್ಚಗಾಗುವ ಗುಣ ಇದಕ್ಕೆ ಇರುತ್ತದೆ. ಶಾಖದ ಪ್ರಮಾಣವನ್ನು ನಿಯಂತ್ರಿಸಲು ಒಂದು ಸಣ್ಣ ಸಂವೇದನಾ ಸಾಧನವನ್ನು ಈ ಬಟ್ಟೆಯಲ್ಲಿ ಅಳವಡಿಸಬಹುದು. 'ಇದು ಮಾನವದೇಹದ ಶಾಖವನ್ನು ಗಮನಿಸುತ್ತ, ಪರಿಸರದಲ್ಲಾಗುವ ಶಾಖದ ಏರುಪೇರುಗಳನ್ನು ಗಮನಿಸಿ, ದೇಹಕ್ಕೆ ಹಿತಕರವಾದ ಶಾಖವನ್ನು ಬಟ್ಟೆಯ ಮೂಲಕ ನೀಡುತ್ತದೆ. ಹಾಗಾಗಿ, ಇದು ಹವಾನಿಯಂತ್ರಣ ಸಾಧನದಂತೆ ಕಾರ್ಯನಿರ್ವಹಿಸುತ್ತದೆ' ಎಂದು ಸಂಶೋಧಕ ಡಾ. ಮಿಲಾದ್ ಕಾಮ್ಕರ್ ವಿವರಿಸಿದ್ದಾರೆ.

ಈ ಬಟ್ಟೆಯ ರಚನೆ ಕೊಂಚ ಸಂಕೀರ್ಣವಾಗೇ ಇದೆ. ಪ್ಲಾಸ್ಟಿಕ್ ಶಾಖವಾಹಕವಲ್ಲ. ಹಾಗಾಗಿ, ಪಾಲಿಮರ್ ನಾರುಗಳಿಂದ ಶಾಖವನ್ನು ನಿಯಂತ್ರಿಸಲಾಗದು. ಶಾಖವನ್ನು ಏರಿಳಿತಗೊಳಿಸಲು ಲೋಹದ ಅಗತ್ಯ ಇದ್ದೇ ಇದೆ. ಅದಕ್ಕಾಗಿ ತುಕ್ಕುರಹಿತ ಉಕ್ಕನ್ನು ಈ ಬಟ್ಟೆಯಲ್ಲಿ ಬಳಸುವ ಎಳೆಗಳಲ್ಲಿ ಬೆರೆಸಲಾಗುತ್ತದೆ. ಹಾಗಾಗಿ, ಬಟ್ಟೆಯನ್ನು ಬೇಕಾದ ತಾಪಮಾನಕ್ಕೆ ಹೊಂದಿಸಬಹುದು ಎಂದಿದ್ದಾರೆ.

ಎಲ್ಲೆಲ್ಲಿ ಬಳಕೆ?

ಇದನ್ನು ನಾಗರಿಕ ಬಳಕೆಯೂ ಸೇರಿದಂತೆ ಸೈನ್ಯ ಹಾಗೂ ಅಂತರಿಕ್ಷದಲ್ಲಿ ಬಳಸಬಹುದು ಎಂದು ಡಾ. ಮಿಲಾದ್ ಅವರ ತಂಡ ಹೇಳಿದೆ. ಜನಸಾಮಾನ್ಯರು ಈ ಬಟ್ಟೆಯನ್ನು ಧರಿಸಿ ಚಳಿ ಅಥವಾ ಸೆಖೆಯಿಂದ ರಕ್ಷಿಸಿಕೊಳ್ಳಬಹುದು. ಸೈನಿಕರು ಅತಿ ಕ್ಲಿಷ್ಟಕರ ವಾತಾವರಣಗಳಲ್ಲಿ ಕಾರ್ಯನಿರ್ವಹಿಸುವುದರಿಂದ ಅವರಿಗೆ ಇದು ವರದಾನವಾಗಲಿದೆ. ಮುಖ್ಯವಾಗಿ ಗಗನಯಾತ್ರಿಗಳು ವಿಭಿನ್ನ ಹಾಗೂ ಕ್ಲಿಷ್ಟಕರ ವಾತಾವರಣಗಳಲ್ಲಿ ವಾಸಿಸಬೇಕಾದ ಕಾರಣ, ತಾಪಮಾನ ನಿಯಂತ್ರಣಕ್ಕೆ ಈ ಬಟ್ಟೆಯು ಸಹಾಯ ಮಾಡುತ್ತದೆ ಎಂದು ಸಂಶೋಧನಾ ತಂಡ ಹೇಳಿದೆ. ಅಲ್ಲದೇ, ಇದು ಮರುಬಳಕೆಯಾಗಿರುವ ಸಾಮಗ್ರಿಗಳಿಂದ ತಯಾರಾಗುವ ಕಾರಣ ಉತ್ಪಾದನಾ ವೆಚ್ಚವೂ ಅತಿ ಕಡಿಮೆ.

ಇತ್ತೀಚಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯ ಅಭಿವೃದ್ಧಿ ಹಾಗೂ ರೋಬಾಟ್‌ಗಳ ತಯಾರಿಗೆ ಆದ್ಯತೆ ನೀಡುತ್ತಿರುವ ಹಿನ್ನೆಲೆಯಲ್ಲಿ ಬಾಹ್ಯಾಕಾಶ ಯಾತ್ರೆಗಳಿಗೆ ರೋಬಾಟ್‌ಗಳನ್ನು ಕಳುಹಿಸಬೇಕಾದ ಸಂದರ್ಭಗಳು ಬಂದಾಗ ಈ ಬಟ್ಟೆಯು ಗುರಾಣಿಯಂತೆ ಕೆಲಸ ಮಾಡಬಲ್ಲದು ಎಂದು ಸಂಶೋಧಕರು ಹೇಳಿದ್ದಾರೆ. ❖



ಕೃತಕ ಬುದ್ಧಿಮತ್ತೆಯ ಕಥೆ

ಶರತ್ ಭಟ್ ಸೇರಾಜೆ

ಗಿಳಿಗಳು ನಮ್ಮಂತೆ ಮಾತಾಡುವುದನ್ನು ನೋಡಿ, 'ಏನೇ ಶುಕಭಾಷಿಣೀ' ಎಂಬ ಉದ್ಗಾರ ತೆಗೆದಾಗಿದೆ; ನಾಯಿಗಳಿಗೆ ಬುದ್ಧಿ ಕಲಿಸುವುದನ್ನು ಕಂಡಿದ್ದೇವೆ, ಡಾಲ್ಫಿನ್ನುಗಳ ಚುರುಕು, ಚಿಂಪಾಂಜಿಗಳೆಲ್ಲ ಜಾಣ್ಮೆ, ಕಲಿಯುವ ಬಲ್ಮೆ ಎಲ್ಲವನ್ನು ವಿಜ್ಞಾನಿಗಳು ಹೊರಗೆಳೆದಿದ್ದಾರೆ, ನಾವದನ್ನು ಗಮನಿಸಿದ್ದೇವೆ. ಹಕ್ಕಿ ಹಾರುವುದನ್ನು ನೋಡಿ ಸಿಕ್ಕಿದ ಪ್ರೇರಣೆ, ಉತ್ತೇಜನಗಳಿಂದ ವಿಮಾನ ಎತ್ತರೆತ್ತರ ಹಾರಿತು. ಕುದುರೆ, ಕತ್ತೆ, ಒಂಟೆಗಳ ಜಾಗಕ್ಕೆ ಬಸ್ಸು ಕಾರುಗಳು ಹಾರ್ನು ಮೊಳಗಿಸುತ್ತಾ ಗತ್ತಿನಿಂದ ಬಂದವು; ಎತ್ತುಗಳಿದ್ದಲ್ಲಿ ಟ್ರ್ಯಾಕ್ಟರ್ ಗದ್ದೆಗಿಳಿಯಿತು; ಬಾವಲಿಯನ್ನು ಮೀರಿಸುವಂತಹಾ ರಾಡಾರ್‌ಗಳು ತಯಾರಾದವು. ಪ್ರಾಣಿಗಳಿಗೆ ಬುದ್ಧಿ ಇಲ್ಲವೆಂದು ನಾವು ಭಾವಿಸಿಲ್ಲ; ಅವಕ್ಕೆ ಬುದ್ಧಿ ನಮ್ಮಷ್ಟಿಲ್ಲ ಎಂದು ಮಾತ್ರ ನಮ್ಮ ತಿಳಿವಳಿಕೆ. ಇದೇನೋ ಸರಿ. ಪ್ರಾಣಿಗಳಿಗೆ ಬುದ್ಧಿಯಿದೆ, ಯಂತ್ರಗಳಿಗೆ? ಯಂತ್ರಗಳಿಗೆ ಅದೆಲ್ಲಿಯ ಬುದ್ಧಿ?! ಇದೀಗ ಹೊಸದಾದ ಕಲ್ಪನೆ. ಎಪ್ಪತ್ತು ಎಂಬತ್ತು ವರ್ಷಗಳಷ್ಟು ಹಿಂದೆ ಚಾಲ್ತಿಗೆ ಬಂದ ಕೃತಕ ಬುದ್ಧಿಮತ್ತೆ ಎಂಬ ಕಲ್ಪನೆ. ಆ ಕಲ್ಪನೆಯೀಗ ಬೆಳೆದು ಗಣಕಯಂತ್ರದಂತಹ ನಿರ್ಜೀವಿಗಳಿಗೂ ಬುದ್ಧಿಯನ್ನು ಹೇಳಿಕೊಡುವ, ಅವು ಅದನ್ನು ಕಲಿಯುತ್ತಿರುವ ಕಲಿಗಾಲದಲ್ಲಿ ಈಗ ನಾವಿದ್ದೇವೆ.

ಈ ಕೃತಕ ಬುದ್ಧಿಮತ್ತೆ ಎಂಬ ವಿಜ್ಞಾನ, ತಂತ್ರಜ್ಞಾನದ ಕ್ಷೇತ್ರದ ಬೀಜಾವಾಪವು ದೊಡ್ಡ ಮಟ್ಟದಲ್ಲಿ ಆದದ್ದು ಅಮೆರಿಕಾದ ಡಾರ್ಟ್ಮೌತ್ ಕಾಲೇಜಿನಲ್ಲಿ. ಅಲ್ಲಿ ಜಾನ್ ಮೆಕ್ಕಾರ್ತಿ ಮತ್ತು ಮಾರ್ವಿನ್ ಮಿಂಸ್ಕಿ ಎಂಬ ಗಣಿತಜ್ಞರು ಆಯೋಜಿಸಿದ್ದ ವಿಜ್ಞಾನಿಗಳ, ಗಣಿತಜ್ಞರ ಗೋಷ್ಠಿಯೊಂದರಲ್ಲಿ ಎಂದು ಹೇಳಲಾಗುತ್ತದೆ. ಆದರೆ ಇದಕ್ಕೂ ಮೊದಲೇ ಈ ನಿಟ್ಟಿನಲ್ಲಿ ಯೋಚನೆ ಮಾಡಿದವರಿದ್ದಾರೆ. ಅಂಥವರಲ್ಲಿ ಮುಖ್ಯನಾದವನು ಅಲನ್ ಟ್ಯೂರಿಂಗ್ ಎಂಬ ಮಹಾಮೇಧಾವಿ ವಿಜ್ಞಾನಿ. ಅದು ಎರಡನೆಯ ಮಹಾಯುದ್ಧದ ಕಾಲ. ಜರ್ಮನರು ಗೂಢ ಲಿಪಿಗಳಲ್ಲಿ ಕಲಿಸುತ್ತಿದ್ದ ರಹಸ್ಯ ಸಂದೇಶಗಳನ್ನು ಭೇದಿಸಿದರೆ ಯುದ್ಧವನ್ನೇ ಗೆಲ್ಲಬಹುದು ಎಂದು ಇಂಗ್ಲೆಂಡಿಗೆ ತೋರಿತು. ಆದರೆ ಸಂಕೇತ ಲಿಪಿಯ ಗುಟ್ಟು ಬಿಡಿಸುವುದಕ್ಕೆ ಕೋಟಿಗಟ್ಟಲೆ ಲೆಕ್ಕ ಮಾಡಬೇಕಾಗುತ್ತದೆ ಎಂಬ ವಾಸ್ತವ ಗಮನಕ್ಕೆ ಬಂತು. ಆಗ ಬಂದವನು ಅಲನ್ ಟ್ಯೂರಿಂಗ್. ಈ ಕೆಲಸಕ್ಕೆ ಯಂತ್ರಗಳನ್ನು ಯಾಕೆ ಬಳಸಬಾರದು, ಆ ಯಂತ್ರಗಳು ಯಾಕೆ ಬುದ್ಧಿಶಾಲಿಗಳಾಗಬಾರದು ಎಂಬ ದಿಕ್ಕಿನಲ್ಲಿ ಯೋಚಿಸಿದ್ದು ಅವನು. ಅವನು ಹಾಗೆ ರಚಿಸಿದ ಯಂತ್ರ ಯಶಸ್ವಿಯೂ ಆಯಿತು (ಇದರ ಬಗ್ಗೆ The Imitation Game ಎಂಬ ಹೃದಯಸ್ಪರ್ಶಿ ಎಂಬ ಚಲನಚಿತ್ರವೊಂದು ಬಂದಿದೆ, ಆಸಕ್ತರು ನೋಡಿ). ಈ ಕ್ಷೇತ್ರದ ಮೊದಲ ಅಂಬೆಗಾಲು ಆ ಯಂತ್ರದ್ದೇ ಎನ್ನಬಹುದು.

> ಎಪ್ಪತ್ತು ಎಂಬತ್ತು ವರ್ಷಗಳಷ್ಟು ಹಿಂದೆ ಚಾಲ್ತಿಗೆ ಬಂದದ್ದು ಕೃತಕ ಬುದ್ಧಿಮತ್ತೆ ಎಂಬ ಕಲ್ಪನೆ.

ಬುದ್ಧಿಶಾಲಿ ಗಣಕಯಂತ್ರಗಳು ಅಂತಲೋ ಕೃತಕ ಬುದ್ಧಿಮತ್ತೆ ಎಂದೋ ಹೇಳುವಾಗ, ಜಾಣ್ಮೆಯನ್ನು ಕಟ್ಟಲಾಗುತ್ತಿದೆ ಅನ್ನುವಾಗ, ಬುದ್ಧಿ ಎಂದರೇನು, ಅದರ ಸ್ವರೂಪನಿರ್ಣಯ ಹೇಗೆ? ಆ ಪದದ ವ್ಯಾಪ್ತಿಯೆಷ್ಟು ಎಂದು ನೋಡಿಕೊಂಡರೆ, ಗಣಕಯಂತ್ರಗಳು ಬುದ್ಧಿಯ ಪ್ರಕಾರಗಳಲ್ಲಿ ಎಷ್ಟನ್ನು ಕಲಿಯಬಲ್ಲವು ಎಂಬುದರ ವಿವೇಚನೆ ಸಾಧ್ಯವಾದೀತು. ತದನಂತರ ಈ ಕೃತಕ ಬುದ್ಧಿಯನ್ನು ಉಳ್ಳ ಕಂಪ್ಯೂಟರು ನಮ್ಮಂತೆ ಆದೀತೇ ಎಂಬ ಪ್ರಶ್ನೆಯ ವಿಮರ್ಶೆಗೆ ತೊಡಗಬಹುದು. ಇಂಥ ಚಿಂತನೆಯನ್ನೂ ಟ್ಯೂರಿಂಗ್ ಮಾಡಿದ. ಯಂತ್ರವು ಬುದ್ಧಿಶಾಲಿಯಾಯಿತೇ ಎಂದು ನಿರ್ಣಯಿಸಲು 'ಟ್ಯೂರಿಂಗ್ ಟೆಸ್ಟ್' ಎಂಬ ಪರೀಕ್ಷೆಯನ್ನೂ ಆತ ರೂಪಿಸಿದ. ಅವನ ಯೋಜನೆಯನ್ನು ಇವತ್ತಿಗೆ ಅನ್ವಯಿಸಿ ಹೇಳುವುದಾದರೆ, ಹೀಗೆ ಹೇಳಬಹುದು:

ನೀವು ವಾಟ್ಸಪ್ಪಿನಲ್ಲೋ, ಇನ್ನಾವುದೋ ಚಾಟಿನಲ್ಲೋ ನಿಮ್ಮ ಕಣ್ಣಿಗೆ ಕಾಣದ ಯಾರೊಟ್ಟಿಗೋ ಮಾತಾಡುತ್ತೀರಿ ಅಂತಿಟ್ಟುಕೊಳ್ಳಿ, ಹಾಗೆ ಮಾತಾಡುವಾಗ ಆ ಕಡೆ ಇರುವುದು ನಿಜವಾದ ವ್ಯಕ್ತಿ ಅಲ್ಲ ಅಂತಾದರೆ, ಆ ಸಂವಾದದ ಗುಣಮಟ್ಟವನ್ನು ಮಾತ್ರ ನೋಡಿ, 'ನಾನೊಂದು ಯಂತ್ರದ ಜೊತೆ ಮಾತಾಡುತ್ತಿದ್ದೇನೆ' ಎಂದು ನಿಮಗೆ ಕಂಡುಹಿಡಿಯಲು ಸಾಧ್ಯವೇ? ಸಾಧ್ಯವಿಲ್ಲವಾದರೆ, ಒಂದು ವೇಳೆ ನಿಮ್ಮನ್ನು ಆ ಯಂತ್ರ ಯಶಸ್ವಿಯಾಗಿ ಮನವೊಪ್ಪುವಂತೆ ಮಾಡಬಲ್ಲದು ಅಂತಾದರೆ, ಟ್ಯೂರಿಂಗ್ ಟೆಸ್ಟಿನಲ್ಲಿ ಅದು ಪಾಸಾದಂತೆ, ಅದನ್ನೊಂದು ಬುದ್ಧಿವಂತ ಗಣಕಯಂತ್ರ ಅನ್ನುವುದಕ್ಕೆ ಟ್ಯೂರಿಂಗನದೇನೂ ಅಡ್ಡಿಯಿಲ್ಲ.

ಇದಕ್ಕೆ ಪ್ರತಿಯಾಗಿ ಜಾನ್ ಸರ್ಲ್ (John Searle) ಎಂಬವನು ಇನ್ನೊಂದು ವಾದವನ್ನೂ ಹೂಡಿದ: ಒಂದು ಕೋಣೆಯಲ್ಲೊಬ್ಬ ಬಾಗಿಲು ಹಾಕಿ ಕೂತಿದ್ದಾನೆ ಅಂದುಕೊಳ್ಳಿ, ಅವನಿಗೆ ಚೀನೀ ಭಾಷೆ ಬರುವುದಿಲ್ಲ. ಆದರೆ ಚೀನೀ ಭಾಷೆಯ ಯಾವ ಅಕ್ಷರ ಕಂಡರೆ ಏನು ಮಾಡಬೇಕು ಎಂಬುದರ ಸೂಚನೆಯನ್ನು ಅವನಿಗೆ ಇಂಗ್ಲಿಷಿನಲ್ಲಿ ಬರೆದು ಕೊಡಲಾಗಿದೆ. ಬಾಗಿಲಿನ ಅಡಿಯಿಂದ ಅವನಿಗೆ ಚೀನೀ ಭಾಷೆಯ ಪ್ರಶ್ನೆಯೊಂದಿರುವ ಚೀಟಿಯನ್ನು ಕೊಡಲಾಗುತ್ತದೆ. ಇಂಗ್ಲಿಷಿನ ಸೂಚನೆಯನ್ನು ಓದಿ, ಅದರ ಪ್ರಕಾರ ಚೀನೀ ಅಕ್ಷರಗಳನ್ನು ಯಾಂತ್ರಿಕವಾಗಿ ಜೋಡಿಸಿ ಉತ್ತರವನ್ನು ತಯಾರು ಮಾಡಿ ಆತ ಕೊಡುತ್ತಾನೆ. ಉತ್ತರ ಸರಿಯಾಗಿಯೇ ಇರುತ್ತದೆ. ಆದರೆ ಆತ ಪಾಲಿಸಿದ್ದು ಇಂಗ್ಲಿಷಿನಲ್ಲಿದ್ದ ಸೂಚನೆಗಳನ್ನು ಮಾತ್ರ. ಹೊರಗೆ ಇರುವವರಿಗೆ ಅವರ ಪ್ರಶ್ನೆಗೆ ಸರಿಯಾದ ಉತ್ತರವೇ ಸಿಕ್ಕಿದೆ (ಉತ್ತರವನ್ನು ತಯಾರಿಸಿದವನಿಗೆ ಅದರ ತಲೆಬುಡ ಗೊತ್ತಿಲ್ಲದಿದ್ದರೂ). ಈಗ ಈ ವ್ಯಕ್ತಿಗೆ ಚೀನೀ ಭಾಷೆ ಬರುತ್ತದೆ ಎಂದು ಹೇಳಲಾದೀತೇ? ಕೃತಕ ಬುದ್ಧಿಮತ್ತೆ ಇರುವ ಯಂತ್ರಗಳ ವರ್ತನೆಯೂ ಹೀಗೆಯೇ ಅಲ್ಲವೇ? ಇದು ಜಾನ್ ಸರ್ಲ್‌ನ ತಾತ್ತ್ವಿಕ ವಾದದ ತಿರುಳು.



ಅಲನ್ ಟ್ಯೂರಿಂಗ್

ಇದೆಲ್ಲ ಏನೇ ಇದ್ದರೂ ಅಮೆರಿಕಾದ ಡಾರ್ಟ್ಮೌತ್ ಕಾಲೇಜಿನ ಗೋಷ್ಠಿಯಾದ ಮೇಲೆ ಇದಕ್ಕೆ ವಿಶೇಷ ಪ್ರಚಾರ ಸಿಕ್ಕಿತು. ದುಡ್ಡೂ ಬಂತು, ಮನುಷ್ಯನ ಮೆದುಳು, ನರಮಂಡಲ ಇವುಗಳನ್ನು ಅನುಕರಣೆ ಮಾಡುವ ವಿಧಾನಗಳೆಲ್ಲ ಹುಟ್ಟಿಕೊಂಡವು. ಸ್ವಲ್ಪ ಪ್ರಗತಿಯಾಗುವುದು, ಅದಾದ ಮೇಲೆ ಎಲ್ಲ ಇಳಿಮುಖವಾಗುವುದು, ಪ್ರಗತಿಯಾಗುತ್ತಿಲ್ಲ ಅನ್ನಿಸುವಾಗ ಮತ್ತೆ ಏನಾದರೂ ಹೊಸತು ಹುಟ್ಟುವುದುವ– ಹೀಗೆ ಎರಡು ಮೂರು ದಶಕ ಏರಿಳಿತಗಳನ್ನು ಈ ಕ್ಷೇತ್ರ ಕಂಡಿತು.

ಐಬಿಎಂನವರು ತಯಾರಿಸಿದ ಗಣಕಯಂತ್ರವೊಂದು ಕಾಸ್ಪರೋವನನ್ನು ಚೆಸ್ಸಲ್ಲಿ ಒಮ್ಮೆ ಸೋಲಿಸಿದಾಗ ಅದು ದೊಡ್ಡ ಪ್ರಮಾಣದಲ್ಲಿ ಸುದ್ದಿಯನ್ನು ಉಂಟು ಮಾಡಿ ಈ ಕ್ಷೇತ್ರ ಮತ್ತೆ ಗರಿಗೆದರುವ ಹಾಗೆ ಮಾಡಿತು. ಅಲ್ಲಿಂದ ಹೊರಟದ್ದು ಈಗ ಚಾಟ್ ಜಿಪಿಟಿಯವರೆಗೆ ಬಂದು ನಿಂತಿದೆ. ಮುಂದೇನಾಗುವುದೋ ಎಂಬ ಕುತೂಹಲ ಎಲ್ಲರಿಗೂ ಇದ್ದದ್ದೇ. ❖

ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು

ಕಚೇರಿ ಬಿಡಿ ಹಳ್ಳಿಗೆ ನಡೆಯಿರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಸೇರಿದಂತೆ ಹಿರಿಯ ಅಧಿಕಾರಿಗಳು ಹಳ್ಳಿಗಳಿಗೆ ತೆರಳಬೇಕು. ಕಚೇರಿಗಳಲ್ಲಿ ಕುಳಿತು ನಿರ್ಣಯ ಕೈಗೊಳ್ಳುವಂತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು ಮಾಡಿದ್ದಾರೆ.

ಮುಂಗಾರು ಸಿದ್ಧತೆ ಹಾಗೂ ವಿಪತ್ತು ನಿರ್ವಹಣಾ ಸಿದ್ಧತೆ ಕುರಿತು ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಸಿಇಒಗಳ ಜತೆ ವಿಡಿಯೊ ಕಾನ್ಫರೆನ್ಸ್ ನಡೆಸಿದ ಅವರು, ಸ್ಥಳಕ್ಕೆ ತೆರಳಿ ವಾಸ್ತವಿಕ ಸ್ಥಿತಿ ಅರಿಯದೇ ಕಚೇರಿಗಳಲ್ಲಿ ಕುಳಿತು ನಿರ್ಣಯ ತೆಗೆದುಕೊಳ್ಳಕೂಡದು ಎಂದು ಎಚ್ಚರಿಕೆ ನೀಡಿದರು.

ಸಭೆ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 'ಹೊಸ ಸರ್ಕಾರದ ಮೇಲೆ ಜನರ ನಿರೀಕ್ಷೆ ದೊಡ್ಡದಿದೆ. ಆ ನಿರೀಕ್ಷೆಗೆ ತಕ್ಕಂತೆ ಸರ್ಕಾರ ಸ್ಪಂದಿಸಿ, ಕೆಲಸ ಮಾಡಬೇಕು. ಅಧಿಕಾರಿಗಳು ಕೂಡ ಚುರುಕಾಗಬೇಕು. ತಾವು ಬಯಸಿದ ರೀತಿಯ ಬದಲಾವಣೆ ಆಡಳಿತದಲ್ಲಿ ಆಗಿದೆ ಎಂಬುದು ಸಾಮಾನ್ಯ ಜನರಿಗೆ ಅರಿವಿಗೆ ಬರಬೇಕು. ಅದಕ್ಕಾಗಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆಗಳನ್ನು ನೀಡಿದ್ದೇನೆ' ಎಂದರು.

ಕೆಲವು ಕಡೆ ಮುಂಗಾರು ಪೂರ್ವ ಮಳೆ ಬಿದ್ದಿದೆ. ಏಪ್ರಿಲ್, ಮೇ, ಜೂನ್‌ವರೆಗೆ ಮುಂಗಾರು ಪೂರ್ವ ಮಳೆ ಬರುತ್ತದೆ. ಈ ಬಾರಿ ವಾಡಿಕೆಗಿಂತ ಶೇಕಡ 10ರಷ್ಟು ಹೆಚ್ಚು ಮಳೆ ಬಿದ್ದಿದೆ. ಜೂನ್ 9ರಿಂದ ಮಳೆ ಆರಂಭವಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಈಗಾಗಲೇ ಕೃಷಿ ಚಟುವಟಿಕೆಗಳು ಆರಂಭವಾಗಿವೆ. ಮುಂಗಾರು ಪೂರ್ವದಲ್ಲಿ 2.95 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಬೇಕಿತ್ತು. ಈವರೆಗೆ 2 ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಿದೆ. ಮುಂಗಾರು ಹಂಗಾಮಿಗೆ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಕೊರತೆ ಆಗದಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದು ತಿಳಿಸಿದರು.

ರಸಗೊಬ್ಬರ, ಬಿತ್ತನೆ ಬೀಜ, ಕೀಟನಾಶಕಗಳಿಲ್ಲ ಎಂಬ ದೂರು ರೈತರಿಂದ ಬರಬಾರದು. ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲವಾದ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ತ್ವರಿತ ಪರಿಹಾರ: ಜಿಲ್ಲಾಧಿಕಾರಿಗಳ ವೈಯಕ್ತಿಕ ಖಾತೆಗಳಲ್ಲಿ (ಪಿಡಿ) ಬಳಿ ₹ 540 ಕೋಟಿ ಇದೆ. ವಸ್ತುಸ್ಥಿತಿ ಆಧಾರದಲ್ಲಿ ಹೆಚ್ಚುವರಿ ಹಣ ಬೇಕಿದ್ದರೆ ನೀಡುವುದಾಗಿ ತಿಳಿಸಲಾಗಿದೆ. ವಿಪತ್ತು ಪರಿಹಾರ ನಿಧಿಯಲ್ಲಿ ₹ 331 ಕೋಟಿ ಲಭ್ಯವಿದೆ. ಯಾವುದೇ ಕಾರಣಕ್ಕೂ ಪರಿಹಾರ ವಿಳಂಬ ಆಗಬಾರದು ಎಂದು ನಿರ್ದೇಶನ ನೀಡಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಪ್ರವಾಹ ಹಾನಿ ತಡೆಗೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಶಿಥಿಲವಾಗಿರುವ ಸೇತುವೆ, ಕೆರೆಕಟ್ಟೆ, ಶಾಲಾ ಕಟ್ಟಡಗಳನ್ನು ಗುರುತಿಸಿ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಕರ್ತವ್ಯಲೋಪ ಇದ್ದರೆ, ಬೇಜವಾಬ್ದಾರಿತನದಿಂದ ವರ್ತಿಸಿದರೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಲಿದೆ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಜಿ. ಪರಮೇಶ್ವರ, ರಾಮಲಿಂಗಾ ರೆಡ್ಡಿ, ಕೆ.ಜೆ. ಜಾರ್ಜ್, ಪ್ರಿಯಾಂಕ್ ಖರ್ಗೆ, ಕೆ.ಎಚ್. ಮುನಿಯಪ್ಪ, ಎಂ.ಬಿ. ಪಾಟೀಲ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

'ಭ್ರಷ್ಟಾಚಾರ ತೊಡೆದು ಹಾಕಿ'

ಬೆಂಗಳೂರು: 'ಆಡಳಿತದಲ್ಲಿ ಭ್ರಷ್ಟಾಚಾರ ನಿಯಂತ್ರಿಸಲು ಬಿಗಿ ಕ್ರಮ ಕೈಗೊಳ್ಳಬೇಕು. ಕಣ್ಣು ಮುಚ್ಚಿಕೊಂಡು ಕಡತಗಳಿಗೆ ಸಹಿ ಹಾಕುವುದನ್ನು ನಿಲ್ಲಿಸಬೇಕು' ಎಂದು ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಮುಖ್ಯ ಕಾರ್ಯದರ್ಶಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳ ಜತೆ ಮಂಗಳವಾರ ಸಭೆ ನಡೆಸಿದ ಅವರು, 'ಹಿಂದಿನ ಸರ್ಕಾರದಲ್ಲಿ ಭ್ರಷ್ಟಾಚಾರವಿತ್ತು ಎಂಬ ಭಾವನೆ ಜನರಲ್ಲಿ ಇತ್ತು. ಅದನ್ನು ಹೋಗಲಾಡಿಸಲು ಅಧಿಕಾರಿಗಳು ಕೈಜೋಡಿಸಬೇಕು' ಎಂದರು.

ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು. ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳಿಸಬೇಕು. ಕಡತ ವಿಲೇವಾರಿಯಲ್ಲಿ ವಿಳಂಬ ಧೋರಣೆ ಇರಬಾರದು. ಆದರೆ, ಕಡತಗಳನ್ನು ಪರಿಶೀಲಿಸದೇ ಸಹಿ ಮಾಡುವ ಪ್ರವೃತ್ತಿಯನ್ನೂ ಕೈಬಿಡಬೇಕು ಎಂದು ಸೂಚನೆ ನೀಡಿದರು.

ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳು ಅರ್ಹರಿಗೆ ತಲುಪುವಂತೆ ಎಚ್ಚರಿಕೆ ವಹಿಸಬೇಕು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಈ ಕುರಿತು ಮೇಲ್ವಿಚಾರಣೆ ಮಾಡಬೇಕು. ಕಚೇರಿಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಬೇಕು ಎಂದರು.

'ತಕ್ಷಣ ಪರಿಹಾರ ವಿತರಣೆಗೆ ಆದೇಶ'

'ನೆಟೆ ರೋಗದಿಂದ ತೊಗರಿ ಬೆಳೆ ಹಾನಿಯಾದ ಪ್ರಕರಣಗಳಲ್ಲಿ ಗರಿಷ್ಠ ಎರಡು ಎಕರೆವರೆಗೆ ಎಕರೆಗೆ ₹ 10,000ದಂತೆ ಪರಿಹಾರ ನೀಡುವುದಾಗಿ ಹಿಂದಿನ ಬಿಜೆಪಿ ಸರ್ಕಾರ ಘೋಷಿಸಿತ್ತು. ಆದರೆ, ಈವರೆಗೆ ಪರಿಹಾರ ವಿತರಣೆ ಆಗಿಲ್ಲ. ತಕ್ಷಣದಿಂದಲೇ ತೊಗರಿ ಬೆಳೆಗಾರರಿಗೆ ಪರಿಹಾರ ವಿತರಿಸುವಂತೆ ಆದೇಶ ನೀಡಿದ್ದೇನೆ' ಎಂದು ಸಿದ್ದರಾಮಯ್ಯ ತಿಳಿಸಿದರು.

ಈವರೆಗಿನ ಮಳೆ ಹಾನಿ ವಿವರ	
ಪ್ರಾಣ ಹಾನಿ	52
ಜಾನುವಾರುಗಳ ಸಾವು	338
ಬೆಳೆಹಾನಿ	20,000 ಹೆಕ್ಟೇರ್
ಮನೆಹಾನಿ	814
ರಸಗೊಬ್ಬರ ದಾಸ್ತಾನು	
ಕಾಂಪ್ಲೆಕ್ಸ್	5.97 ಲಕ್ಷ ಟನ್
ಯೂರಿಯಾ	4.42 ಲಕ್ಷ ಟನ್
ಡಿಎಪಿ	2.61 ಲಕ್ಷ ಟನ್
ಎಂಒಪಿ	22,952 ಟನ್
ಎಸ್‌ಎಸ್‌ಪಿ	22,780 ಟನ್

ಡಿಕೆಶಿಗೆ ನಾಲ್ಕು ಕೊಠಡಿ ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿ ನಾಲ್ಕು ಕೊಠಡಿಗಳನ್ನು ಹಂಚಿಕೆ ಮಾಡಲಾಗಿದೆ.

ಕೊಠಡಿ ಸಂಖ್ಯೆ 335, 336, 337 ಮತ್ತು 337 ಎ ಹಂಚಿಕೆಯಾಗಿದೆ. ಜ್ಯೋತಿಷಿ ಬಿ.ಬಿ. ಆರಾಧ್ಯ ಅವರ ಸಲಹೆಯಂತೆ 'ಅದೃಷ್ಟದ ಸಂಖ್ಯೆ'ಯ ಕೊಠಡಿಗಳನ್ನೇ ಪಡೆದುಕೊಳ್ಳುವಲ್ಲಿ ಶಿವಕುಮಾರ್ ಯಶಸ್ವಿಯಾಗಿದ್ದಾರೆ. ಅಲ್ಲದೆ, ಸಿದ್ದರಾಮಯ್ಯ ಹಾಲಿ ವಾಸ್ತವ್ಯ ಹೂಡಿರುವ ಶಿವಾನಂದ ವೃತ್ತದ ಬಳಿ ಇರುವ ಸರ್ಕಾರಿ ನಿವಾಸ ಆಯ್ಕೆ ಮಾಡಿಕೊಳ್ಳುವಂತೆಯೂ ಶಿವಕುಮಾರ್ ಅವರಿಗೆ ಆರಾಧ್ಯ ಸೂಚಿಸಿದ್ದರು.

ಆರಾಧ್ಯ ಅವರ ಸಲಹೆಯಂತೆ ಗುರುವಾರ (ಮೇ 25) ಮಧ್ಯಾಹ್ನ ಅಭಿಜಿನ್ ಲಗ್ನದಲ್ಲಿ ತಮಗೆ ಹಂಚಿಕೆಯಾದ ಕೊಠಡಿ 336 ರಲ್ಲಿ ಶಿವಕುಮಾರ್ ಅವರು ಪೂಜೆ ನೆರವೇರಿಸಲಿದ್ದಾರೆ. ಹೀಗಾಗಿ, ಕೊಠಡಿಗೆ ಸುಣ್ಣ-ಬಣ್ಣ ಬಳಿಯುವ ಕಾರ್ಯವೂ ನಡೆದಿದೆ.

ಸುದ್ದಿಗಾರರ ಜೊತೆ ಮಾತನಾಡಿದ ಆರಾಧ್ಯ, 'ಎರಡು ವರ್ಷಗಳ ಬಳಿಕ ಎಂಟು ವರ್ಷಗಳ ಕಾಲ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಿರುತ್ತಾರೆ. ಶಿವಕುಮಾರ್ ಅವರಿಗೆ ಇದೇ ಸಂಖ್ಯೆ ಕೊಠಡಿ ತೆಗೆದುಕೊಳ್ಳುವಂತೆ ಹೇಳಿದ್ದೆ. ಅಲ್ಲದೇ ಸಿದ್ದರಾಮಯ್ಯ ವಾಸವಿರುವ ನಿವಾಸವನ್ನು ತೆಗೆದುಕೊಳ್ಳುವಂತೆ ಸಲಹೆ ನೀಡಿದ್ದೇನೆ' ಎಂದರು.

ಇಬ್ಬರು ಸಚಿವರಿಗೆ ತಲಾ ಎರಡು ಕೊಠಡಿ

ಸಚಿವರಾದ ಜಿ.ಪರಮೇಶ್ವರ ಅವರಿಗೆ ವಿಧಾನಸೌಧದ ಮೂರನೇ ಮಹಡಿಯ ಕೊಠಡಿ ಸಂಖ್ಯೆ 327 ಮತ್ತು 327 ಎ ಹಂಚಿಕೆ ಮಾಡಲಾಗಿದೆ.

ರಾಮಲಿಂಗಾರೆಡ್ಡಿ ಅವರಿಗೆ ಮೂರನೇ ಮಹಡಿಯಲ್ಲಿನ ಕೊಠಡಿ ಸಂಖ್ಯೆ 329 ಮತ್ತು 329 ಎ ಹಂಚಿಕೆ ಮಾಡಿ ಆದೇಶ ಹೊರಡಿಸಲಾಗಿದೆ.

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು ಹಾಗೂ ಸಕ್ಷಮ ಪ್ರಾಧಿಕಾರಿಗಳು

2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು–27 ದೂ: 080 –22109665,
ಇ–ಮೇಲ್: competentauthoritysdg2023@gmail.com

ಸಂಖ್ಯೆ: ಕೆ.ಪಿ.ಐ.ಡಿ–2(7)/ಶ್ರೀವಸಿಷ್ಠ/2022–23 ದಿನಾಂಕ: 19.05.2023

ಸಾರ್ವಜನಿಕ ಪ್ರಕಟಣೆ

'ಶ್ರೀ ವಸಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು, ದೂಷಿತ ಸಹಕಾರಿಯ ಠೇವಣಿದಾರರು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ (ಕೆ.ಪಿ.ಐ.ಡಿ.ಎಫ್.ಇ) ಕಾಯ್ದೆ,2004 ರ ಕಲಂ 7(2) ರ ಅನ್ವಯ ಠೇವಣಿದಾರರಿಂದ ಕ್ಲೇಮು ಅರ್ಜಿಗಳನ್ನು ಆಹ್ವಾನಿಸಲು ಸಾರ್ವಜನಿಕ ತಿಳಿವಳಿಕೆ.

ಕೆ.ಪಿ.ಐ.ಡಿ.ಎಫ್.ಇ ಕಾಯ್ದೆ 2004 ರ ಕಲಂ 5(1) ರ ಅನ್ವಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಕೇಂದ್ರ ಕಛೇರಿ, ಬೆಂಗಳೂರು ಇವರನ್ನು 'ಶ್ರೀ ವಸಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು' ದೂಷಿತ ಸಹಕಾರಿಯ ಸಕ್ಷಮ ಪ್ರಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ಕ್ಲೇಮು ಅರ್ಜಿಗಳನ್ನು ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು, ಐ.ಎಂ.ಎ ಹಾಗೂ ಇತರೆ ವಂಚನೆ ಪ್ರಕರಣಗಳು, 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ। ಬಿ.ಆರ್.ಅಂಬೇಡ್ಕರ್ ರಸ್ತೆ, ಬೆಂಗಳೂರು ರವರ ಕಛೇರಿಯಲ್ಲಿ ವಿತರಿಸಲಾಗುವುದು ಹಾಗೂ ಠೇವಣಿದಾರರು/ಅಧಿಕೃತ ಪ್ರತಿನಿಧಿ/ನಾಮಿನಿದಾರರು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಅಧಿಕೃತ ಗುರುತಿನ ಚೀಟಿ ಹಾಗೂ ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್/ಎಂ.ಓ.ಯು) ಮತ್ತು ಅಧಿಕೃತ ಪತ್ರ /ಪಿ.ಓ.ಎ ದಾಖಲೆಗಳ ಮೂಲ ಪ್ರತಿಗಳನ್ನು ಸಂದರ್ಭಾನುಸಾರ ಹಾಜರುಪಡಿಸಿ ಕ್ಲೇಮ್ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ. ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ: 25.05.2023 (ಗುರುವಾರ) ಈ ಪ್ರಾರಂಭಿಕ ದಿನಾಂಕದಿಂದ ಒಂದು ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಲು ಕಡೆಯ ದಿನಾಂಕ: 23.06.2023 (ಶುಕ್ರವಾರ) ಸಂಜೆ 05.30 ರೊಳಗಾಗಿ ಅಥವಾ ಅದಕ್ಕಿಂತ ಮುಂಚಿತವಾಗಿ ತಮ್ಮ ಕ್ಲೇಮು ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಠೇವಣಿದಾರರು ಮರಣ ಹೊಂದಿದ್ದರೆ ಅಥವಾ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಅವರ ನಾಮ ನಿರ್ದೇಶಿತರು/ವಾರಸುದಾರರು ಅರ್ಜಿ ಸಲ್ಲಿಸುವಾಗ ಅದಕ್ಕೆ ಪುರಾವೆಯಾಗಿರುವ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ.

ಕ್ರ. ಸಂ.	ಠೇವಣಿದಾರರು/ ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಠೇವಣಿದಾರರು (Depositor)	ಠೇವಣಿದಾರರು ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿ/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2	ನಾಮಿನಿದಾರರು (Nominee)	1. ಠೇವಣಿದಾರರ ಮರಣ ಪ್ರಮಾಣಪತ್ರ 2. ವಂಶವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು) 3. ನಾಮಿನಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು
3	ವಾರಸುದಾರರು (Legal heirs)	1. ಠೇವಣಿದಾರರ ಮರಣ ಪ್ರಮಾಣ ಪತ್ರ 2. ವಂಶ ವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು) 3. ನಿರ್ದಿಷ್ಟನಾಮಿನಿ (Nominee) ರವರ ಮರಣ ಪ್ರಮಾಣ ಪತ್ರ 4. ವಾರಸುದಾರರ ಪ್ರಮಾಣ ಪತ್ರ – ನ್ಯಾಯಾಲಯದ ಆದೇಶ 5. ವಾರಸುದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. 6. ಉಳಿದ ವಾರಸುದಾರರ ಒಪ್ಪಿಗೆ (Consent from other legal heirs)
4	PoA – Power of Attorney	1. ಠೇವಣಿದಾರರು ಆಸ್ಪತ್ರೆಗೆ ದಾಖಲಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳು. (ಗಂಭೀರ ಆರೋಗ್ಯ ಸಮಸ್ಯೆ ಇರುವವರು) ವೈದ್ಯರಿಂದ ವರದಿ ಪಡೆದು ಸಲ್ಲಿಸುವುದು. 2. ಹೊರದೇಶದಲ್ಲಿ ವಾಸಿಸುತ್ತಿರುವವರು Apostalised copy citizen card + Passport 3. ಮೇಲಿನ ಕ್ರ. ಸಂ. 1 ಮತ್ತು 2ಕ್ಕೆ ಸಂಬಂಧಪಟ್ಟವರು ಕಡ್ಡಾಯವಾಗಿ Notarized Power of Attorney certificate ಸಲ್ಲಿಸತಕ್ಕದ್ದು. 4. PoA. ಹೊಂದಿರುವವರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
5	ಅಪ್ರಾಪ್ತರ ಗಾರ್ಡಿಯನ್ (ಪೋಷಕರು)	1. ಠೇವಣಿದಾರರ ಮರಣ ಪತ್ರ 2. ಗಾರ್ಡಿಯನ್ ನೇಮಕದ ದಾಖಲೆ 3. ಸ್ವಯಂ ದೃಢೀಕೃತ ದಾಖಲೆ

ಕ್ಲೇಮು ಅರ್ಜಿಯನ್ನು ಸಲ್ಲಿಸುವ ಅರ್ಜಿದಾರರು ಪ್ರತಿ ಸಹಕಾರಿಯ ಹೂಡಿಕೆಗೆ ಸಂಬಂಧಿಸಿದ ಈ ಕೆಳಕಂಡ ಎಲ್ಲಾ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.

ಕ್ರ. ಸಂ.	ಠೇವಣಿದಾರರು/ ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಉಳಿತಾಯ ಠೇವಣಿ (Savings Deposit)	1.ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2.ಸಹಕಾರಿಯು ನೀಡಿರುವ ಉಳಿತಾಯ ಠೇವಣಿ ಪಾಸ್ ಪುಸ್ತಕ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) *ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2	ನಿಶ್ಚಿತ ಠೇವಣಿ (Fixed Deposit)	1.ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2.ಬಾಂಡ್ ಪ್ರಮಾಣ ಪತ್ರ/ನಿಶ್ಚಿತ ಠೇವಣಿ ಪ್ರಮಾಣ ಪತ್ರ/ಇತರೆ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) *ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
3	ಸಂಚಿತಠೇವಣಿ (Cumulative Deposit)	1.ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2. ಸಂಚಿತ ಠೇವಣಿ ಪ್ರಮಾಣ ಪತ್ರ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) *ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
4	ಆವರ್ತ ಠೇವಣಿ (Recurring Deposit)	1.ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2. ಸಹಕಾರಿಯು ನೀಡಿರುವ ಆವರ್ತ ಠೇವಣಿ ಪಾಸ್ ಪುಸ್ತಕ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) *ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
5	ವಸಿಷ್ಠ ವಿಶೇಷ ಹೂಡಿಕೆ (Vasista Special Investment)	1.ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2. ವಸಿಷ್ಠ ವಿಶೇಷ ಹೂಡಿಕೆ ಪ್ರಮಾಣ ಪತ್ರ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) *ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
6	ಪೂರಕ ದಾಖಲೆಗಳು (Supporting documents)	1.ಭಾವಚಿತ್ರಇರುವ ಪಾಸ್ ಪುಸ್ತಕದ ಮುಖಪುಟ (Front page) ನಕಲು 2.ಠೇವಣಿದಾರರ ಹೆಸರು ನಮೂದಿಸಿ ರದ್ದು ಮಾಡಿರುವ ಚೆಕ್ ಪ್ರತಿ (Cancelled Cheque leaf) *ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
7	ಮೂಲ ಬಾಂಡ್/ಇತರೆ ಪಡೆದು ಬದಲಿ ನೀಡಿದ ದಾಖಲೆಗಳು	1.ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖಪುಟ (Front page) ನಕಲು 2. 3.

* ಮೇಲಿನ ಕ್ರಮ ಸಂಖ್ಯೆ 1 ರಿಂದ 7 ರಲ್ಲಿ ತಿಳಿಸಿರುವ 'ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖಪುಟ (Front page) ನಕಲು' ಅಂದರೆ ಶ್ರೀ ವಸಿಷ್ಠ ಸೌಹಾರ್ದ ಸಹಕಾರಿಗೆ ಹೂಡಿಕೆ ಉದ್ದೇಶಕ್ಕಾಗಿ ಯಾವ ಬ್ಯಾಂಕಿನಿಂದ ಹಣ ವರ್ಗಾವಣೆ ಮಾಡಲಾಗಿದೆಯೋ ಆ ಬ್ಯಾಂಕಿನ ಪಾಸ್ ಪುಸ್ತಕ. * ಕೆ.ಪಿ.ಐ.ಡಿ ಕಾಯ್ದೆಯ ಕಲಂ 7(3)ರ ಅನ್ವಯ ಕ್ಲೇಮು ಅರ್ಜಿ ಸಲ್ಲಿಸುವುದಕ್ಕೆ ನಿಗದಿಪಡಿಸಿರುವ ಕಡೆಯ ದಿನಾಂಕದ ನಂತರ ಬರುವ ಯಾವುದೇ ಅರ್ಜಿಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಸ್ವೀಕರಿಸಲಾಗುವುದಿಲ್ಲ. * ಸುಳ್ಳು ದಾಖಲೆಗಳ ಆಧಾರದ ಅರ್ಜಿ ಅಥವಾ ಸ್ವಯಂ–ಸೃಷ್ಟಿತ ಕ್ಲೇಮು ಅರ್ಜಿಗಳನ್ನು ಸಲ್ಲಿಸಿದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದರೊಂದಿಗೆ ಅಂತಹ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸಲಾಗುವುದು. * ಕೆ.ಪಿ.ಐ.ಡಿ ಕಾಯ್ದೆಯ ಕಲಂ 7(3)ರ ಅನ್ವಯ ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಅವಧಿ ಅಂದರೆ ದಿನಾಂಕ : 25.05.2023 (ಗುರುವಾರ) ರಿಂದ 23.06.2023 (ಶುಕ್ರವಾರ)ರೊಳಗಾಗಿ, ಸಮಯ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 05.30 ರವರೆಗೆ ಮಾತ್ರ ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ. * ಅರ್ಜಿಗಳನ್ನು ಸಲ್ಲಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು (ಐ.ಎಂ.ಎ. ಹಾಗೂ ಇತರೆ ವಂಚನೆ ಪ್ರಕರಣಗಳು) ರವರ ಕಛೇರಿ, 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ। ಬಿ.ಆರ್.ಅಂಬೇಡ್ಕರ್ ರಸ್ತೆ, ಬೆಂಗಳೂರು ಕಛೇರಿಗೆ ಖುದ್ದು ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿರುತ್ತದೆ ಅಲ್ಲದೇ https://sploca.karnataka.gov.in ವೆಬ್ ಸೈಟ್‌ನಿಂದ ಮಾಹಿತಿಯನ್ನು ಪಡೆಯುವುದು. ದೂರವಾಣಿ : 080–22109665, 080–22109670 – ಬೆಳಿಗ್ಗೆ 10.00 ರಿಂದ ಸಂಜೆ 05.30ರವರೆಗೆ ಸಂಪರ್ಕಿಸಲು ಸೂಚಿಸಿದೆ. * ಠೇವಣಿದಾರರು/ಅಧಿಕೃತ ಪ್ರತಿನಿಧಿ/ ನಾಮಿನಿದಾರರು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಸ್ಪಷ್ಟವಾದ ಪಬ್ಲಿಕ್ ಭಾವಚಿತ್ರ ಹೊಂದಿರುವ ಗುರ್ತಿನಚೀಟಿ/ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್/ಎಂ.ಓ.ಯು) ಮತ್ತು ಅಧಿಕೃತ ಪತ್ರ /ಪಿ.ಓ.ಎ ದಾಖಲೆಗಳ ಮೂಲ ಪ್ರತಿಗಳನ್ನು ಸಂದರ್ಭಾನುಸಾರ ಹಾಜರುಪಡಿಸಿದ್ದಲ್ಲಿ ಕ್ಲೇಮ್ ಅರ್ಜಿಗಳನ್ನು ವಿತರಿಸಲಾಗುವುದು. ಠೇವಣಿದಾರರು ಅಥವಾ ನಾಮಿನಿದಾರರು ಅಥವಾ PoA ಹೊಂದಿರುವವರು ಮಾತ್ರ ಖುದ್ದಾಗಿ ಅರ್ಜಿ ಸಲ್ಲಿಸತಕ್ಕದ್ದು. * ಅರ್ಜಿ ಪಡೆಯುವ/ಸಲ್ಲಿಸುವ ಸ್ಥಳ : ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು, (ಐ.ಎಂ.ಎ. ಹಾಗೂ ಇತರೆ ವಂಚನೆ ಪ್ರಕರಣಗಳು) ರವರ ಕಛೇರಿ, 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ। ಬಿ.ಆರ್.ಅಂಬೇಡ್ಕರ್ ರಸ್ತೆ, ಬೆಂಗಳೂರು. * ಅರ್ಜಿದಾರರು 'ಶ್ರೀವಸಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿ, ಬೆಂಗಳೂರು', ಇದರಲ್ಲಿ ಒಂದಕ್ಕಿಂತ ಹೆಚ್ಚಿನ ಸ್ಕೀಮ್‌ಗಳಲ್ಲಿ ಹೂಡಿಕೆ ಮಾಡಿದ್ದಲ್ಲಿ, ಕಡ್ಡಾಯವಾಗಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಸಹಿ/–
ಸಕ್ಷಮ ಪ್ರಾಧಿಕಾರಿಗಳು,
ಶ್ರೀ ವಸಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು ಹಾಗೂ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಕೇಂದ್ರ ಕಛೇರಿ, ಬೆಂಗಳೂರು

ಕೆ.ಪಿ.ಐ.ಡಿ–2(7)/ಶ್ರೀವಸಿಷ್ಠ/2022–23
DIPR/CP/097/Zen/2023-24

ವಿದ್ಯಾರ್ಥಿ ದೆಸೆಯಲ್ಲೇ ಭರವಸೆ ಮೂಡಿಸಿದ್ದ ಖಾದರ್

ಮಂಗಳೂರು: ವಿಧಾನಸಭಾಧ್ಯಕ್ಷರ ಪೀಠ ಅಲಂಕರಿಸಲು ಸಜ್ಜಾಗಿರುವ ಶಾಸಕ ಯು.ಟಿ. ಖಾದರ್, ವಿದ್ಯಾರ್ಥಿ ದೆಸೆಯಲ್ಲೇ ಭರವಸೆ ಮೂಡಿಸಿದ್ದ ನಾಯಕ. ರಾಜಕೀಯ ಕುಟುಂಬದ ಹಿನ್ನೆಲೆ ಇದ್ದರೂ ಸ್ವಂತ ಪರಿಶ್ರಮದಿಂದ ಬೆಳೆದವರು.

ಇಲ್ಲಿನ ಎಸ್‌ಡಿಎಂ ಕಾನೂನು ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಲೇ ಖಾದರ್ ಎನ್‌ಎಸ್‌ಯುಐನ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಕಾರ್ಯದರ್ಶಿಯಾಗಿ, ಬಳಿಕ ಅಧ್ಯಕ್ಷರಾಗಿ ವಿದ್ಯಾರ್ಥಿ ಹೋರಾಟಗಳಲ್ಲಿ ಸಕ್ರಿಯರಾಗಿದ್ದರು ಎಂದು ಮೆಲುಕು ಹಾಕುತ್ತಾರೆ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಬಿ.ಕೆ.ರವೀಂದ್ರ.

'ಮಾಜಿ ಶಾಸಕರ (ಯು.ಟಿ.ಫರೀದ್) ಮಗನಾಗಿದ್ದರೂ ತಮ್ಮ ನಡವಳಿಕೆಯಲ್ಲಿ ತೋರಿಸಿಕೊಂಡವರಲ್ಲ. ಜಾತ್ಯತೀತ ಮನೋಭಾವದಿಂದ ಗಮನ ಸೆಳೆದಿದ್ದರು. ಜಾಣ ವಿದ್ಯಾರ್ಥಿಯಾಗಿರಲಿಲ್ಲ. ವಿಧೇಯ ವಿದ್ಯಾರ್ಥಿಯಾಗಿದ್ದರು. ವಿಧೇಯತೆಯನ್ನು ಈಗಲೂ ಉಳಿಸಿಕೊಂಡಿದ್ದಾರೆ' ಎಂದು ರವೀಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ಖಾದರ್, ಅಧ್ಯಾಪಕರ ನೆನಪಿನಲ್ಲಿ ಉಳಿಯುವಂತಹ ವಿದ್ಯಾರ್ಥಿ' ಎಂದು ಅವರಿಗೆ ಅಧ್ಯಾಪಕರಾಗಿದ್ದ ಪ್ರೊ.ಉದಯ್ ಕುಮಾರ್ ಹೇಳಿದರು.

'ಕಾಲೇಜಿನಲ್ಲಿ ಅವರು ನನಗಿಂತ ಒಂದು ವರ್ಷ ಕಿರಿಯರು. ವಿದ್ಯಾರ್ಥಿ ಸಂಘದ ನಾಯಕನಾಗಿ ಸಕ್ರಿಯವಾಗಿದ್ದರು. ಎತ್ತರದ ಸ್ಥಾನಕ್ಕೇರಿದರೂ ವಿದ್ಯಾಸಂಸ್ಥೆಯ ಮೇಲಿನ ಪ್ರೀತಿಯನ್ನು ಉಳಿಸಿಕೊಂಡಿದ್ದಾರೆ' ಎಂದು ಎಸ್‌ಡಿಎಂ ಕಾನೂನು ಕಾಲೇಜಿನ ಈಗಿನ ಪ್ರಾಂಶುಪಾಲ ಡಾ.ತಾರಾನಾಥ ತಿಳಿಸಿದರು.

ತಂದೆಯ ರಾಜಕೀಯ ಪುನರ್ಜನ್ಮಕ್ಕೆ ಕೊಡುಗೆ: ಖಾದರ್ ಅವರ ತಂದೆ ಯು.ಟಿ.ಫರೀದ್ ಉಳ್ಳಾಲ ಕ್ಷೇತ್ರದಿಂದ 1972 ಮತ್ತು 1978ರಲ್ಲಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಎರಡು ದಶಕಗಳ ಬಳಿಕ 1999, 2004ರಲ್ಲಿ ಶಾಸಕರಾಗುವುದರ ಹಿಂದೆ ಖಾದರ್ ಅವರ ಪರಿಶ್ರಮವಿದೆ ಎನ್ನುತ್ತಾರೆ ಅವರ ಒಡನಾಡಿಗಳು.

ತಂದೆಯ ನಿಧನದ ನಂತರ 2007ರಲ್ಲಿ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಖಾದರ್ ಅವರನ್ನು ಕಣಕ್ಕಿಳಿಸಿತ್ತು. ಆ ಚುನಾವಣೆಯಲ್ಲಿ ಬಿಜೆಪಿಯ ಚಂದ್ರಹಾಸ್ ಉಚ್ಚಿಲ್ ವಿರುದ್ಧ 8,032 ಮತಗಳಿಂದ ಗೆದ್ದಿದ್ದರು. ಆ ಬಳಿಕ ಒಮ್ಮೆಯೂ ಸೋತಿಲ್ಲ. ಸತತ ಐದನೇ ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ವಿಧಾನಮಂಡಲ ಅಧಿವೇಶನದಲ್ಲಿ ಅತಿ ಹೆಚ್ಚು ಪ್ರಶ್ನೆಗಳನ್ನು ಕೇಳಿದ್ದಕ್ಕಾಗಿ ಖಾದರ್ 2012ರಲ್ಲಿ 'ಸದನ ವೀರ' ಪ್ರಶಸ್ತಿಗೂ ಭಾಜನರಾಗಿದ್ದರು. ರಾಜ್ಯದ ಮೊದಲ ಮುಸ್ಲಿಂ ಸ್ಪೀಕರ್ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಲಿದ್ದಾರೆ.

ಪರಿಚಯ
ಹೆಸರು: ಯು.ಟಿ.ಖಾದರ್
ಪತ್ನಿ: ಲಮೀಸಾ
ಮಗಳು: ಹವ್ವಾ ನಸೀಮಾ
ಶಿಕ್ಷಣ: ಬಿಎ.ಎಲ್‌ಎಲ್‌ಬಿ
ವಯಸ್ಸು: 54

ಬೈಕ್ ರೇಸ್ ಹುಚ್ಚು

ಬೈಕ್ ರೇಸ್ ಯು.ಟಿ.ಖಾದರ್ ಅವರ ಹವ್ಯಾಸ ಗಳಲ್ಲೊಂದು. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಬೈಕ್ ರೇಸ್‌ಗಳಲ್ಲಿ ಅನೇಕ ಬಹುಮಾನವನ್ನೂ ಗೆದ್ದಿದ್ದರು. ಮಂಗಳೂರು ರೈಡರ್ಸ್ ಕ್ಲಬ್‌ನ ಸಂಸ್ಥಾಪಕ ಅಧ್ಯಕ್ಷರೂ ಆಗಿದ್ದಾರೆ.

ಅಲಂಕರಿಸಿದ ಪ್ರಮುಖ ಹುದ್ದೆಗಳು

- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ (2013–2016)
- ಆಹಾರ, ನಾಗರಿಕ ಪೂರೈಕೆ ಮತ್ತು ಗ್ರಾಹಕರ ವ್ಯವಹಾರಗಳ ಸಚಿವ (2016–18)
- ನಗರಾಭಿವೃದ್ಧಿ ಸಚಿವ (2018–19)
- ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ (2022–23)

ಮತೀಯ ಗೂಂಡಾಗಿರಿ ಹತ್ತಿಕ್ಕಿ

ಒಂದನೇ ಪುಟದಿಂದ...

ಮತೀಯ ಗೂಂಡಾಗಿರಿ ನಡೆಸುವವರನ್ನು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಬೆಂಬಲಿಸಬಾರದು. ಯಾವುದೇ ಅಧಿಕಾರಿ ಅಥವಾ ಸಿಬ್ಬಂದಿ ಅಂತಹ ಚಟುವಟಿಕೆಗಳಿಗೆ ಬೆಂಬಲ ನೀಡಿರುವುದು ಕಂಡು ಬಂದರೆ ಕಠಿಣ ಕ್ರಮ ಜರುಗಿಸಲಾಗುವುದು. ಹಿರಿಯ ಪೊಲೀಸ್ ಅಧಿಕಾರಿಗಳನ್ನೂ ಹೊಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಎಚ್ಚರಿಕೆ ನೀಡಿದ್ದಾರೆ.

ತೀವ್ರ ನಿಗಾಕ್ಕೆ ಸೂಚನೆ: ಸಾಮಾಜಿಕ ಮಾಧ್ಯಮಗಳ ಮೇಲೆ ತೀವ್ರ ನಿಗಾ ಇಡಬೇಕು. ಸಮಾಜದ ಸಾಮರಸ್ಯ ಕದಡುವಂತಹ ಪೋಸ್ಟ್‌ಗಳನ್ನು ಹಾಕುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ವ್ಯಕ್ತಿಗಳ ತೇಜೋವಧೆ ಮತ್ತು ಅಶಾಂತಿ ಸೃಷ್ಟಿಸುವುದಕ್ಕೆ ಪೂರಕವಾದ ಪ್ರಚೋದನಕಾರಿ ಸಂದೇಶ ಹಾಕುವವರ ವಿರುದ್ಧವೂ ಕ್ರಮ ಜರುಗಿಸುವಂತೆ ತಾಕೀತು ಮಾಡಿದ್ದಾರೆ.

ಕೇಸರೀಕರಣ: ಉಪಮುಖ್ಯಮಂತ್ರಿ ಡಿಕೆಶಿ ಎಚ್ಚರಿಕೆ

- ಇಡೀ ದೇಶದಲ್ಲೇ ಅತ್ಯುತ್ತಮ ಪೊಲೀಸ್ ಇಲಾಖೆ ಎಂಬ ಘನತೆಯನ್ನು ನೀವು ಹಾಳು ಮಾಡಿದ್ದೀರಿ.
- ನಮ್ಮ ಸರ್ಕಾರದಲ್ಲಿ ಎಲ್ಲವೂ ಸ್ವಚ್ಛ ಆಗಬೇಕು.
- ನಿಮ್ಮಿಂದ ನಮಗೆ ನಯಾಪೈಸೆ ಬೇಡ. ನೀವು ಕೂಡ ಯಾರಿಗೂ ಹಣ ಕೊಡುವುದು ಬೇಡ.
- ಪೇಸಿಎಂ ಅಭಿಯಾನ ಮಾಡಿದಾಗ ನನ್ನ ಹಾಗೂ ಸಿದ್ದರಾಮಯ್ಯ ಜತೆ ಹೇಗೆ ನಡೆದುಕೊಂಡಿದ್ದಿರಿ ಎಂಬುದು ಗೊತ್ತಿದೆ.
- ನನ್ನನ್ನು, ಸಿದ್ದರಾಮಯ್ಯ ಅವರನ್ನು ಬಿಡದವರು ಸಾಮಾನ್ಯ ಜನರನ್ನು ಬಿಡುತ್ತೀರಾ?
- ಎದುರು ಪಕ್ಷದವರ ವಿರುದ್ಧ ಪ್ರಕರಣವನ್ನೇ ದಾಖಲಿಸಲಿಲ್ಲ. ಅವರ ಜತೆ ಶಾಮೀಲಾಗಿ ಕುಣಿದಿರಿ.
- ಟಿಪ್ಪು ಸುಲ್ತಾನ್ ಅವರನ್ನು ಹೊಡೆದು ಹಾಕಿದಂತೆ ಸಿದ್ದರಾಮಯ್ಯ ಅವರನ್ನು ಹೊಡೆದು ಹಾಕಬೇಕು ಎಂದು ಕರೆ ನೀಡಿದವರ ವಿರುದ್ಧ ಏಕೆ ಪ್ರಕರಣ ದಾಖಲಿಸಲಿಲ್ಲ? ಅದು ಅಪರಾಧ ಅಲ್ಲವೆ?
- ನೀವು ಏನೇನು ಮಾಡಿದ್ದೀರಿ ಎಂಬುದಕ್ಕೆ ಸಾಕ್ಷ್ಯ ಇವೆ. ಎಲ್ಲವನ್ನೂ ಗಮನಿಸುತ್ತಾ ಇರುತ್ತೇವೆ.
- ಹಳೆಯದನ್ನು ಬಿಟ್ಟುಬಿಡಿ, ಇನ್ನು ಬದಲಾಗಿ. ಜನರ ನೆಮ್ಮದಿಯನ್ನು ಕಾಪಾಡಿ.
- ಈ ಸರ್ಕಾರದ ಮೇಲೆ ಜನರು ನಂಬಿಕೆ ಇಟ್ಟಿದ್ದಾರೆ. ಅದನ್ನು ಉಳಿಸಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡುವವರ ಜತೆ ನಾವು ಇರುತ್ತೇವೆ.

ಎಂ.ಬಿ. ಪಾಟೀಲ 'ಕಿಡಿ': 'ಕೈ' ಉರಿ

ಒಂದನೇ ಪುಟದಿಂದ...

ಸಂಪುಟ ಸೇರಿದ ಎಂಟು ಸಚಿವರ ಜೊತೆ ಮೊದಲ ಪಟ್ಟಿಯಲ್ಲಿಯೇ ಅವರೂ ಪ್ರಮಾಣವಚನ ಸ್ವೀಕರಿಸಲು ಸಿದ್ದರಾಮಯ್ಯ ಬೆನ್ನಿಗೆ ನಿಂತಿರುವುದೂ ಕಾರಣ. ಇದೀಗ, ಸಿದ್ದರಾಮಯ್ಯ ಅವರು ಪಾಟೀಲರಿಂದ ಈ ರೀತಿ ಹೇಳಿಕೆ ಕೊಡಿಸುವ ಮೂಲಕ, ಅಧಿಕಾರ ಹಂಚಿಕೆ ಸೂತ್ರ ಎನ್ನುವುದೇ ಇಲ್ಲ ಎಂಬ ಸಂದೇಶ ರವಾನಿಸಿದ್ದಾರೆ ಎಂದೂ ವ್ಯಾಖ್ಯಾನಿಸಲಾಗಿದೆ.

ಪಾಟೀಲರ ಹೇಳಿಕೆ ಡಿ.ಕೆ. ಶಿವಕುಮಾರ್ ಅವರನ್ನು ಕೆರಳಿಸಿದೆ. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಜೊತೆ ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಅವರು, 'ಎಂ.ಬಿ. ಪಾಟೀಲರಿಗೆ ಆ ಹೇಳಿಕೆ ನೀಡಲು ಅಧಿಕಾರ ಕೊಟ್ಟವರು ಯಾರು? ಅವರೇನು ಪಕ್ಷದ ಹೈಕಮಾಂಡೇ? ಎಂದು ಪ್ರಶ್ನಿಸಿದ್ದಾರೆ. ಅಷ್ಟೇ ಅಲ್ಲ, 'ಈ ರೀತಿ ವರ್ತನೆ ಮುಂದುವರಿದರೆ ಪಕ್ಷದ ಅಧ್ಯಕ್ಷನಾಗಿ ಮುಂದುವರಿಯುವುದು ನನಗೆ ಕಷ್ಟವಾಗಲಿದೆ' ಎಂದಿದ್ದಾರೆ ಎಂದೂ ಗೊತ್ತಾಗಿದೆ. ಶಿವಕುಮಾರ್ ಸಹೋದರ, ಸಂಸದ ಡಿ.ಕೆ. ಸುರೇಶ್ ಕೂಡಾ ಕೆಂಡಾಮಂಡಲವಾಗಿದ್ದಾರೆ.

ಪಾಟೀಲರ ಹೇಳಿಕೆ ಇನ್ನೇನು ವಿವಾದದ ಸ್ವರೂಪ ಪಡೆದುಕೊಳ್ಳುತ್ತಿದೆ ಎಂದು ಗೊತ್ತಾಗುತ್ತಿದ್ದಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ, ಪಕ್ಷದ ನಾಯಕರು ಪರಸ್ಪರ ಹೇಳಿಕೆಗಳನ್ನು ನೀಡದಂತೆ ಕಡಿವಾಣ ಹಾಕಿದ್ದಾರೆ.

'ಈ ವಿಚಾರ ಮಲ್ಲಿಕಾರ್ಜುನ ಖರ್ಗೆ, ವೇಣುಗೋಪಾಲ್, ಸುರ್ಜೇವಾಲಾ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರಿಗೆ ಮಾತ್ರ ಗೊತ್ತಿದೆ. ಇದು ಆಂತರಿಕವಾಗಿ ನಡೆದಿರುವ ಚರ್ಚೆ. ಅವರನ್ನು ಬಿಟ್ಟು ಬೇರೆಯವರಿಗೆ ಈ ವಿಚಾರ ಗೊತ್ತಿಲ್ಲ. ಶಾಸಕಾಂಗ ಪಕ್ಷದ ಸಭೆಯಲ್ಲೂ ಈ ವಿಚಾರ ಚರ್ಚೆ ಆಗಿಲ್ಲ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

'ಈಗ ನಮ್ಮ ಮುಂದಿರುವುದು ಉತ್ತಮ ಆಡಳಿತ ನೀಡುವ ವಿಚಾರ. ಅಧಿಕಾರ ಹಂಚಿಕೆ ವಿಚಾರವನ್ನು ಹೈಕಮಾಂಡ್ ನೋಡಿಕೊಳ್ಳಲಿದೆ. ಈ ಬಗ್ಗೆ ಯಾರು ಗೊಂದಲ ಸೃಷ್ಟಿಸಬಾರದು. ಎಂ.ಬಿ. ಪಾಟೀಲರಿಗೆ ಏನು ಮಾಹಿತಿ ಇದೆಯೋ ನನಗೆ ಗೊತ್ತಿಲ್ಲ. ನನಗೆ ಗೊತ್ತಿರುವುದನ್ನು ಹೇಳಿದ್ದೇನೆ' ಎಂದೂ ಪ್ರತಿಪಾದಿಸಿದರು.

'ಎಐಸಿಸಿ ನಾಯಕರು ಸುದ್ದಿಗೋಷ್ಠಿ ನಡೆಸಿ ಸಿದ್ದರಾಮಯ್ಯ ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಉಪ ಮುಖ್ಯಮಂತ್ರಿ ಎಂದು ಹೇಳಿದರು. ಅದಷ್ಟು ನಮಗೆ ಗೊತ್ತು. ಈಗ ಅಧಿಕಾರ ಹಂಚಿಕೆ ವಿಚಾರ ಏಕೆ? ಆ ಬಗ್ಗೆ ಏನು ಚರ್ಚೆ ಆಗಿದೆಯೆಂದು ಗೊತ್ತಿಲ್ಲ. 2013ರಲ್ಲಿ ಈ ಬಗ್ಗೆ ಚರ್ಚೆ ಆಗಿದೆಯೇ? ಈಗ ಚರ್ಚೆ ಏಕೆ' ಎಂದು ಕೆಪಿಸಿಸಿ ಮಾಜಿ ಅಧ್ಯಕ್ಷರೂ ಆಗಿರುವ ಶಾಸಕ ದಿನೇಶ್ ಗುಂಡೂರಾವ್ ಪ್ರಶ್ನಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, 'ಅಧಿಕಾರ ಹಂಚಿಕೆ ಕುರಿತು ಏನೇ ಮಾತುಕತೆ ಆಗಿದ್ದರೂ, ಎಐಸಿಸಿ ಅಧ್ಯಕ್ಷರು, ಉಸ್ತುವಾರಿ ಮತ್ತು ಇಬ್ಬರು ನಾಯಕರ ನಡುವೆ ಮಾತ್ರ ಆಗಿದೆ. ಏನೇ ಇದ್ದರೂ ಈ ನಾಲ್ವರಿಗೆ ಮಾತ್ರ ಗೊತ್ತಿದೆ. ವರಿಷ್ಠರ ತೀರ್ಮಾನದಂತೆ ಎಲ್ಲವೂ ನಡೆಯುತ್ತದೆ' ಎಂದರು.

'ಅನಗತ್ಯ ಹೇಳಿಕೆ ನೀಡಬಾರದು'

ಯಾರೂ ಕೂಡ ಅನಗತ್ಯ ಹೇಳಿಕೆಗಳನ್ನು ನೀಡಬಾರದು. ಒಳ್ಳೆಯ ಆಡಳಿತ ನೀಡುವುದಷ್ಟೇ ಈಗ ನಮ್ಮ ಆದ್ಯತೆ. ಇದರ ಕಡೆ ಗಮನ ಕೊಡಬೇಕಿದೆ. ಇದರ ಹೊರತಾಗಿ ಯಾವುದೇ ಗೊಂದಲದ ಹೇಳಿಕೆಗಳನ್ನು ನೀಡಬಾರದು. ಗೊಂದಲ ಮೂಡಿಸುವ ಹೇಳಿಕೆಗಳೂ ಸೇರಿದಂತೆ ಎಲ್ಲವನ್ನೂ ಎಐಸಿಸಿ ಗಮನಿಸುತ್ತದೆ. ಯಾವುದೇ ವಿಷಯಗಳಿದ್ದರೂ ಎಐಸಿಸಿ ನಾಯಕರು ತೀರ್ಮಾನ ಕೈಗೊಳ್ಳುತ್ತಾರೆ.

ರಣದೀಪ್ ಸಿಂಗ್ ಸುರ್ಜೇವಾಲಾ, ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ

'ಪಾಟೀಲರ ಮೂಲಕ ಸಂದೇಶ'

'ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುವುದಿಲ್ಲ. ಅವರನ್ನು ಆಗಲು ಸಿದ್ದರಾಮಯ್ಯ ಬಿಡುವುದಿಲ್ಲ. ಸಿದ್ದರಾಮಯ್ಯ ಅವರು ಪಾಟೀಲರ ಹೇಳಿಕೆಯ ಮೂಲಕ ಸಂದೇಶ ರವಾನಿಸಿದ್ದಾರೆ. ಇದು ಡಿಕೆಶಿಗೆ ನೇರವಾದ ಎಚ್ಚರಿಕೆ. ಬಹುಮತ ಸಿಕ್ಕಿದ ನಂತರವೂ ಈವರೆಗಿನ ಬೆಳವಣಿಗೆಗಳನ್ನು ಗಮನಿಸಿದಾಗ ಈ ಸರ್ಕಾರ ಸ್ಥಿರವಾಗಿರಲಿದೆ ಎಂಬ ಯಾವ ಲಕ್ಷಣವೂ ಕಾಣುತ್ತಿಲ್ಲ. ಗ್ಯಾರಂಟಿಯೂ ಇಲ್ಲ. ದೆಹಲಿಯ ತಮ್ಮ ಹೈಕಮಾಂಡಿಗೆ ಕಪ್ಪ ಪೂರೈಸಬೇಕಾದ ಏಕೈಕ ಮಾನದಂಡದಲ್ಲಿ ಎಟಿಎಂ ಸರ್ಕಾರ ರಚನೆಯಾಗಿದೆ. ಅದಷ್ಟೇ ಈ ಸರ್ಕಾರದ ಆದ್ಯತೆಯಾಗಿರುವುದು ರಾಜ್ಯದ ದುರಂತ.

ಬಿಜೆಪಿ ಟ್ವೀಟ್

ಸುಭಾಷಿತ

ಹೃದಯದಲ್ಲಿ ಏನಿದೆಯೋ ನಾಲಿಗೆಯೂ ಅದನ್ನೇ ಹೇಳಬೇಕು.

-ದಯಾನಂದ ಸರಸ್ವತಿ

ಕೇಂದ್ರದಿಂದ ಅವಸರದ ಸುಗ್ರೀವಾಜ್ಞೆ ದೆಹಲಿಯ ಜನರ ಇಚ್ಛೆಗೆ ವಿರುದ್ಧ

ಸಾರ್ವಜನಿಕ ಭದ್ರತೆ, ಪೊಲೀಸ್ (ಕಾನೂನು ಮತ್ತು ಸುವ್ಯವಸ್ಥೆ) ಹಾಗೂ ಭೂಮಿಗೆ ಸಂಬಂಧಿಸಿದ ವಿಷಯಗಳನ್ನು ಹೊರತುಪಡಿಸಿ ಇತರ ಎಲ್ಲ ಸೇವೆಗಳ ವಿಚಾರದಲ್ಲಿ ರಾಷ್ಟ್ರ ರಾಜಧಾನಿ ವ್ಯಾಪ್ತಿಯಲ್ಲಿ (ಎನ್‌ಸಿಟಿ) ದೆಹಲಿ ಸರ್ಕಾರವು ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರವನ್ನು ಹೊಂದಿದೆ ಎಂದು ಸುಪ್ರೀಂ ಕೋರ್ಟ್ ಈಚೆಗೆ ನೀಡಿದ್ದ ತೀರ್ಪನ್ನು ಅಪ್ರಸ್ತುತಗೊಳಿಸುವ ರೀತಿಯಲ್ಲಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಶುಕ್ರವಾರ ಸುಗ್ರೀವಾಜ್ಞೆಯೊಂದನ್ನು ಹೊರಡಿಸಿದೆ. ಈ ಮೂಲಕ ಅದು ಎನ್‌ಸಿಟಿ ಪ್ರದೇಶದಲ್ಲಿನ ಸೇವೆಗಳಿಗೆ ಸಂಬಂಧಿಸಿದ ಅಧಿಕಾರವನ್ನು ತನ್ನಲ್ಲಿಯೇ ಉಳಿಸಿಕೊಂಡಿದೆ. ವಿರೋಧ ಪಕ್ಷವೊಂದರ ನೇತೃತ್ವದಲ್ಲಿ ನಡೆಯುತ್ತಿರುವ, ಜನರಿಂದ ಆಯ್ಕೆಯಾಗಿರುವ ಸರ್ಕಾರದ ಅಧಿಕಾರವನ್ನು ಇಲ್ಲವಾಗಿಸಲು ಕೇಂದ್ರವು ತನ್ನ ಅಧಿಕಾರವನ್ನು ಬಳಸಿಕೊಳ್ಳುತ್ತಿರುವುದರ ಸ್ಪಷ್ಟ ನಿದರ್ಶನ ಇದು. ಒಕ್ಕೂಟ ವ್ಯವಸ್ಥೆಯ ತತ್ವಗಳಿಗೆ ವಿರುದ್ಧವಾದ ನಡೆ ಇದು.

2015ರಲ್ಲಿ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು ಎಎಪಿ ವಿರುದ್ಧ ಭಾರಿ ಸೋಲು ಕಂಡ ನಂತರದಲ್ಲಿ ಕೇಂದ್ರ ಸರ್ಕಾರವು ದೆಹಲಿಯ ಸರ್ಕಾರದ ಜೊತೆ ನಿರಂತರವಾಗಿ ಸಂಘರ್ಷ ನಡೆಸಿಕೊಂಡು ಬಂದಿದೆ. ಆ ವರ್ಷ ಅಧಿಸೂಚನೆಯೊಂದನ್ನು ಹೊರಡಿಸಿದ್ದ ಕೇಂದ್ರ ಗೃಹ ಸಚಿವಾಲಯವು ದೆಹಲಿಯ ಲೆಫ್ಟಿನೆಂಟ್ ಗವರ್ನರ್‌ಗೆ ಅಲ್ಲಿನ ಸೇವೆಗಳ ಮೇಲೆ ನಿಯಂತ್ರಣ ಇದೆ ಎಂದು ಹೇಳಿತ್ತು. ಇದನ್ನು ಎಎಪಿ ಪ್ರಶ್ನಿಸಿತ್ತು. ಇದರ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಸಂವಿಧಾನ ಪೀಠವು ಮೇ 11ರಂದು ನೀಡಿದ ತೀರ್ಪಿನಲ್ಲಿ, ಎನ್‌ಸಿಟಿ ಪ್ರದೇಶದಲ್ಲಿ ಸೇವೆಗಳನ್ನು ಒದಗಿಸುವ ವಿಚಾರದಲ್ಲಿ ದೆಹಲಿ ಸರ್ಕಾರಕ್ಕೆ ಶಾಸಕಾಂಗದ ಅಧಿಕಾರ ಮತ್ತು ಆಡಳಿತಾತ್ಮಕ ಅಧಿಕಾರ ಇದೆ ಎಂದು ಸಾರಿತು. ಇದು ಒಕ್ಕೂಟ ವ್ಯವಸ್ಥೆಗೆ ಹಾಗೂ ಪ್ರಾತಿನಿಧ್ಯದ ಆಧಾರದಲ್ಲಿ ಕೆಲಸ ಮಾಡುವ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನರ ತೀರ್ಮಾನಕ್ಕೆ ಗೌರವ ಕೊಡಬೇಕು ಎಂಬ ತಾತ್ವಿಕತೆಗೆ ಸಿಕ್ಕ ಜಯವಾಗಿತ್ತು. ಅರವಿಂದ ಕೇಜ್ರಿವಾಲ್ ನೇತೃತ್ವದ ದೆಹಲಿ ಸರ್ಕಾರ ಹಾಗೂ ಅಲ್ಲಿ ಕೇಂದ್ರದ ಪ್ರತಿನಿಧಿಯಾಗಿರುವ ಲೆಫ್ಟಿನೆಂಟ್ ಗವರ್ನರ್ ನಡುವಿನ ನಿರಂತರ ಸಂಘರ್ಷಕ್ಕೆ ಈ ತೀರ್ಪು ಅಂತ್ಯ ಹೇಳಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಕೇಂದ್ರ ಸರ್ಕಾರವು ಅವಸರದಲ್ಲಿ ಸುಗ್ರೀವಾಜ್ಞೆ ತಂದಿರುವ ಬಗೆಯನ್ನು ಕಂಡರೆ, ಸುಪ್ರೀಂ ಕೋರ್ಟ್‌ನ ತೀರ್ಪಿನ ಬಗ್ಗೆ, ಒಕ್ಕೂಟ ವ್ಯವಸ್ಥೆಯ ಬಗ್ಗೆ ಅದಕ್ಕಿರುವ ಗೌರವ ಬಹಳ ಕಡಿಮೆ ಎಂಬುದು ಗೊತ್ತಾಗುತ್ತದೆ.

ದೆಹಲಿಯ ಚುನಾಯಿತ ಸರ್ಕಾರದ ಸುಪರ್ದಿಯಲ್ಲಿ ಇರಬೇಕಿರುವ ಆಡಳಿತದ ಕೆಲಸಗಳನ್ನು ಕೇಂದ್ರವು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿರುವ ಸ್ಪಷ್ಟ ನಿದರ್ಶನ ಇದು

ಪೊಲೀಸ್ ವ್ಯವಸ್ಥೆ, ಸಾರ್ವಜನಿಕ ಭದ್ರತೆ ಮತ್ತು ಭೂಮಿಗೆ ಸಂಬಂಧಿಸಿದ ವಿಷಯಗಳನ್ನು ಹೊರತುಪಡಿಸಿ ಇತರ ವಿಷಯಗಳಲ್ಲಿ ಅಧಿಕಾರಿಗಳು ಉತ್ತರದಾಯಿ ಆಗಬೇಕಿರುವುದು ದೆಹಲಿಯ ಚುನಾಯಿತ ಸರ್ಕಾರಕ್ಕೆ ಎಂದು ಕೋರ್ಟ್ ಸ್ಪಷ್ಟಪಡಿಸಿತ್ತು. ಎನ್‌ಸಿಟಿ ಪ್ರದೇಶದಲ್ಲಿ ಪೊಲೀಸ್ ವ್ಯವಸ್ಥೆ, ಸಾರ್ವಜನಿಕ ಭದ್ರತೆ ಮತ್ತು ಭೂಮಿಗೆ ಸಂಬಂಧಿಸಿದ ವಿಷಯಗಳು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತವೆ. ದೆಹಲಿಯ ಚುನಾಯಿತ ಸರ್ಕಾರ ಹೊಂದಿರುವ ಕಾರ್ಯಾಂಗದ ಅಧಿಕಾರವನ್ನು ಕೇಂದ್ರ ಸರ್ಕಾರವು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡರೆ ಒಕ್ಕೂಟ ವ್ಯವಸ್ಥೆ ಹಾಗೂ ಪ್ರಾತಿನಿಧ್ಯ ಆಧಾರಿತ ಪ್ರಜಾತಂತ್ರದ ತತ್ವವು ನೆಲೆ ಕಳೆದುಕೊಳ್ಳುತ್ತದೆ ಎಂದು ಕೋರ್ಟ್ ಎಚ್ಚರಿಸಿತ್ತು. ಆದರೆ, ಕೋರ್ಟ್‌ನ ಎಚ್ಚರಿಕೆಯನ್ನು ಗೌರವದಿಂದ ಕಾಣದೇ ಇರುವ ಮೂಲಕ ಕೇಂದ್ರ ಸರ್ಕಾರವು ರಾಜಕೀಯವಾಗಿ ಬಹಳ ಮಹತ್ವದ್ದಾದ ಅಧಿಕಾರವನ್ನು ತನ್ನಲ್ಲಿ ಇರಿಸಿಕೊಳ್ಳಲು, ಕೋರ್ಟ್ ಬೇಡ ಎಂದಿದ್ದನ್ನೂ ತಾನು ಮಾಡಲು ಸಿದ್ಧ ಎಂದು ತೋರಿಸಿದಂತಾಗಿದೆ. ವಾಸ್ತವದಲ್ಲಿ ಎನ್‌ಸಿಟಿ ಪ್ರದೇಶದಲ್ಲಿ ನಾಗರಿಕ ಸೇವೆಗಳ ಗುಣಮಟ್ಟ ಕೂಡ ಬಹಳ ಕಳಪೆಯಾಗಿದೆ. ಎನ್‌ಸಿಟಿ ಪ್ರದೇಶದ ಸ್ಥಳೀಯ ಸಂಸ್ಥೆಗಳ ಆಡಳಿತವು 2022ರ ಡಿಸೆಂಬರ್‌ವರೆಗೆ ಬಿಜೆಪಿಯ ನಿಯಂತ್ರಣದಲ್ಲಿತ್ತು. ದೆಹಲಿ ಪೊಲೀಸರ ಮೇಲೆ ತನಗೆ ನಿಯಂತ್ರಣ ಇದ್ದರೂ, ಅಮೆರಿಕದ ಅಧ್ಯಕ್ಷರಾಗಿದ್ದ ಡೊನಾಲ್ಡ್ ಟ್ರಂಪ್ ಅವರ ಭೇಟಿ ಸಂದರ್ಭದಲ್ಲಿ ದೆಹಲಿಯಲ್ಲಿ ಕೋಮು ಗಲಭೆ ನಡೆದ ಪ್ರಸಂಗವು ಅಲ್ಲಿ ಸಾರ್ವಜನಿಕರಿಗೆ ಭದ್ರತೆ ಕಲ್ಪಿಸುವ ಕೆಲಸದಲ್ಲಿ ತಾನು ವಿಫಲವಾಗಿದ್ದನ್ನು ಕೇಂದ್ರವು ತೋರಿಸಿಕೊಂಡಾಗಿತ್ತು. ಹೀಗಿದ್ದರೂ, ದೆಹಲಿಯ ಚುನಾಯಿತ ಸರ್ಕಾರದ ಸುಪರ್ದಿಯಲ್ಲಿ ಇರಬೇಕಿರುವ ಆಡಳಿತದ ಕೆಲಸಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಮೂಲಕ ಕೇಂದ್ರವು ದೆಹಲಿಯ ಜನರ ಇಚ್ಛೆಯನ್ನು ಹೊಸಕಿದಂತೆ ಆಗಿದೆ.

ದಿನದ ಟ್ವೀಟ್

ಕನ್ನಡ ಕಲಿಯಲಿ

ಕನ್ನಡ ಆಡಳಿತ ಭಾಷೆಯಾಗಿರುವ ವ್ಯವಸ್ಥೆಯಲ್ಲಿ ಕನ್ನಡ ಗೊತ್ತಿಲ್ಲದೇ ಹೇಗೆ ಇವರೆಲ್ಲ ಜನರ ಕೆಲಸ ಮಾಡಿಸಬಲ್ಲರು? ಯಾವ ಪಕ್ಷದವರೇ ಆಗಲಿ, ಕನ್ನಡ ಬಳಸಿದರೇನೆ ಪರಿಣಾಮಕಾರಿಯಾಗಿ ಆಡಳಿತ ನೀಡಲು ಸಾಧ್ಯ. ಎಲ್ಲ ಪಕ್ಷಗಳೂ ಕನ್ನಡ ಬಾರದ ಶಾಸಕರಿಗೆ ಕನ್ನಡ ಕಲಿಯಲು ಹೇಳಬೇಕು.

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ



ಮಣಿಪುರ ಮತ್ತೆ ಹೊತ್ತಿ ಉರಿಯುತ್ತಿದೆ. ಕೆಲ ದಿನಗಳ ಹಿಂದೆ ನಡೆದ ಘರ್ಷಣೆಯಲ್ಲಿ 70 ಮಂದಿ ಸತ್ತು, 200 ಜನ ಗಾಯಗೊಂಡಿದ್ದರು. ಕೊರೊನಾ ವೈರಸ್ ಮನುಷ್ಯನ ದೇಹದ ಮೇಲೆ ಮಾತ್ರ ದುಷ್ಪರಿಣಾಮ ಬೀರಿದರೆ, ಕೋಮು ವೈರಾಣು ಇಡೀ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಅದು ಪಸರಿಸಿದರೆ ಆಗುವ ಪರಿಣಾಮ ಊಹಿಸಲು ಅಸಾಧ್ಯ. ವಿವೇಚನಾರಹಿತ ರಾಜಕಾರಣದಿಂದ ಸಿಗುವ ಲಾಭ ಅಲ್ಪಕಾಲದ್ದು. ಆದರೆ ಅದರಿಂದಾಗುವ ಹಾನಿ ಶಾಶ್ವತ.

ಕಪಿಲ್ ಸಿಬಲ್, ವಕೀಲ

25 ವರ್ಷಗಳ ಹಿಂದೆ

ಭಾನುವಾರ, 24-5-1998

- **ಕೆಪಿಎಸ್‌ಸಿ ಫಲಿತಾಂಶ ಸೃಷ್ಟಿಸಿದ ಹೊಸ ಸಮಸ್ಯೆ**

ಬೆಂಗಳೂರು, ಮೇ 23– ನಿರುದ್ಯೋಗಿಗಳಿಗೆ ಹುದ್ದೆ ಕೊಡಲು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿದ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಈಗ ಬಿಕ್ಕಟ್ಟಿಗೆ ಸಿಲುಕಿದ್ದು, ತಾನು ನಡೆಸಿದ ಈ ಪರೀಕ್ಷೆಯ ಬಗ್ಗೆಯೇ ಮತ್ತೊಂದು ಪರೀಕ್ಷೆ ನಡೆಸುವಂತಾಗಿದೆ.

ಆಯೋಗ ಕಳೆದ ವರ್ಷ ನವೆಂಬರ್ 2ರಂದು 1,000 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿತು. ಈ ಪರೀಕ್ಷೆಗೆ ಕುಳಿತವರು 1.5 ಲಕ್ಷ ಮಂದಿ ನಿರುದ್ಯೋಗಿಗಳು. ಫಲಿತಾಂಶ ಪ್ರಕಟವಾಗಿದೆ. ಈ ಫಲಿತಾಂಶದಿಂದಾಗಿ ಈಗ ಸಮಸ್ಯೆಗಳು ಉದ್ಭವಿಸಿವೆ.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 300 ಅಂಕಗಳಿಗೆ ಕನಿಷ್ಠ 240 ಅಥವಾ 230 ಅಂಕಗಳನ್ನು ನಿರೀಕ್ಷಿಸಿದ್ದ ಹಲವು ಮಂದಿ ಪರೀಕ್ಷಾರ್ಥಿಗಳು, ತಮಗೆ ಕೇವಲ 70–80 ಅಂಕಗಳು ಬಂದಿವೆ ಎಂದು ತಮಗಾಗಿರುವ ಅನ್ಯಾಯದ ಬಗ್ಗೆ ಆಯೋಗಕ್ಕೆ ಈಗಾಗಲೇ ಪತ್ರಗಳನ್ನು ರವಾನಿಸಿ, ನ್ಯಾಯಕ್ಕಾಗಿ ಮೊರೆ ಹೋಗಿದ್ದಾರೆ.

- **ಕೊರಟಗೆರೆ ಬಳಿ ಮನೆಗೆ ನುಗ್ಗಿ ದರೋಡೆ**

ತುಮಕೂರು, ಮೇ 23– ಕೊರಟಗೆರೆ ತಾಲ್ಲೂಕಿನ ಹೊಳವನಹಳ್ಳಿ ಗ್ರಾಮದ ಮನೆಯೊಂದಕ್ಕೆ ಕಳೆದ ರಾತ್ರಿ ನುಗ್ಗಿದ ದರೋಡೆಕೋರರು, ಮನೆಯವರನ್ನು ಬೆದರಿಸಿ 1.57 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಮತ್ತು ನಗದು ಹಣ ದೋಚಿ ಪರಾರಿಯಾಗಿದ್ದಾರೆ.

ನಾಲ್ಕು ಮಂದಿ ದರೋಡೆಕೋರರ ಈ ತಂಡ ರಾತ್ರಿ ಸುಮಾರು ಎರಡು ಗಂಟೆಗೆ ಟಿ. ಶ್ರೀನಿವಾಸನ್ ಎಂಬುವವರ ಮನೆಯ ಬಾಗಿಲನ್ನು ಕಲ್ಲುಗುಂಡಿನ ಮೂಲಕ ಮುರಿದು ಒಳನುಗ್ಗಿತು ಎಂದು ಹೇಳಲಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 24-5-1973

- **ಪೊಲೀಸರ ಬಂಡಾಯ ಅಡಗಿಸಲು ಕೇಂದ್ರ ಮೀಸಲು ಪಡೆ ರವಾನೆ**

ನವದೆಹಲಿ, ಮೇ 23– ಉತ್ತರಪ್ರದೇಶದಲ್ಲಿ ಪ್ರಾಂತೀಯ ಸಶಸ್ತ್ರ ಮೀಸಲು ಸಿಬ್ಬಂದಿ ದಂಗೆಯೆದ್ದಿರುವ ಗಲಭೆಪೀಡಿತ ಕೇಂದ್ರಗಳಿಗೆ ಕೇಂದ್ರ ಮೀಸಲು ಪಡೆಯ ಕೆಲವು ತುಕಡಿಗಳನ್ನು ಕೂಡಲೇ ರವಾನಿಸಲು ಸಜ್ಜುಗೊಳಿಸಲಾಗುತ್ತಿದೆ.

ರಕ್ಷಣಾ ಕಾರ್ಯದರ್ಶಿ ಮತ್ತು ಮಾಜಿ ಮುಖ್ಯಕಾರ್ಯದರ್ಶಿ ಗೋವಿಂದ ನಾರಾಯಣ್ ಈಗಾಗಲೇ ಲಖನೌದಲ್ಲಿದ್ದು, ಸಶಸ್ತ್ರ ಪೊಲೀಸ್ ಸಿಬ್ಬಂದಿಯ ಒಂದು ವರ್ಗ ಆರಂಭಿಸಿದ ದಂಗೆಯನ್ನು ಅಡಗಿಸಲು ಸೇನೆ, ಪೊಲೀಸ್ ಮತ್ತು ಪೌರಾಡಳಿತದ ಪ್ರಯತ್ನಗಳನ್ನು ಸಮನ್ವಯಗೊಳಿಸುತ್ತಿರುವರು.

ಇಂದು ಸಂಜೆ ವೇಳೆಗೆ, ರಾಜ್ಯದಲ್ಲಿರುವ ಹತ್ತು ಶಸ್ತ್ರಾಗಾರಗಳ ಪೈಕಿ ಐದು ಶಸ್ತ್ರಾಗಾರಗಳು ಇನ್ನೂ ಪ್ರಾಂತೀಯ ಸಶಸ್ತ್ರ ಪೊಲೀಸ್ ಬಂಡುಗಾರರ ವಶದಲ್ಲಿದ್ದವು.

- **ದತ್ ಆಯೋಗದ ವರದಿ ಸಲ್ಲಿಕೆ**

ಬೆಂಗಳೂರು, ಮೇ 23– ಭದ್ರಾವತಿಯಲ್ಲಿರುವ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕಾರ್ಯ ಕುರಿತು ಪರಿಶೀಲಿಸಲು ಏಕಸದಸ್ಯ ಆಯೋಗವಾಗಿ ನೇಮಕಗೊಂಡಿದ್ದ ಶ್ರೀ ಆರ್.ಸಿ. ದತ್ ಅವರು ತಮ್ಮ ವರದಿಯನ್ನು ಇಂದು ಇಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದರು.

ಅಸಹನೆ ನೀಗಿಕೊಂಡಾಗ ಅಹಿಂಸೆಯ ನಿರುಮ್ಮಳದ ಬದುಕು ಎಲ್ಲರದಾಗುತ್ತದೆ

ಅನ್ನ ದೇವರಿಗಿಂತ ಇನ್ನು ದೇವರು ಇಲ್ಲ

ವಿಶ್ಲೇಷಣೆ

ಸಬಿತಾ ಬನ್ನಾಡಿ

ಜೀಪು ನಿಧಾನವಾಗಿ ಬೆಟ್ಟ ಮತ್ತು ಕಾಡಿನ ಏರು ಹಾದಿಯಲ್ಲಿ ಹೋಗುತ್ತಿದ್ದರೆ, ರಸ್ತೆಯೂ ಕಾಣದಂತಹ ಮಬ್ಬುಗತ್ತಲು. ಕಾಡಿನ ನಡುವೆ ಹೀಗೆ ಹೋಗುತ್ತಿರುವಾಗ ಕುತೂಹಲ ಮತ್ತು ಆತಂಕ. ಮಿಲಿಟರಿಯ ಬೆಂಗಾವಲು ಪಡೆ ನಮ್ಮನ್ನು ಹಿಂಬಾಲಿಸುತ್ತಿತ್ತು. ಹಾಗೇ ಏರುತ್ತಿರುವಾಗ ಇದ್ದಕ್ಕಿದ್ದಂತೆ ಬೆಳಕು ಚೆಲ್ಲಿತು. ಧಿಗ್ಗನೆ ಕಂಡ ಬೆಳಕಿಗೆ ನಾವೆಲ್ಲಾ 'ಹಾ' ಎಂದು ಉತ್ಸಾಹಿತರಾದೆವು. ಮಾತ್ರವಲ್ಲ, ಅದುವರೆಗೂ ಇದ್ದ ಬೃಹತ್ ಮರಗಳು ಮರೆಯಾಗಿ ಹಸಿರು ತುಂಬಿದ ಗದ್ದೆಗಳ ರಮಣೀಯ ದೃಶ್ಯ ಕಂಡಿತು. ಕ್ರಮೇಣ ಅಲ್ಲಲ್ಲಿ ಸೋಲಾರ್ ರಸ್ತೆ ದೀಪಗಳು ಕಾಣಿಸುತ್ತಾ ಚಿಕ್ಕ ಚಿಕ್ಕ ಮನೆಗಳ ಪುಟ್ಟ ಊರು ಮೈತೆರೆದುಕೊಂಡಿತು. ಆಗ ಹೆಚ್ಚೂಕಡಿಮೆ ಸಂಜೆ ನಾಲ್ಕು ಗಂಟೆಯ ಸಮಯ.

'ಹಿಂದೆಲ್ಲಾ ಮರುದಿನ ಬೆಳಿಗ್ಗೆ ನಾಲ್ಕು ಗಂಟೆಯ ಹೊತ್ತಿಗೆ ಕರೆದುಕೊಂಡು ಹೋಗಲಾಗುತ್ತಿತ್ತು. ಈ ಬಾರಿ ನಿಮ್ಮನ್ನು ಹಿಂದಿನ ದಿನವೇ ಕರೆತರಲಾಗಿದೆ' ಎಂದು ಡ್ರೈವರ್ ಹೇಳಿದಾಗ, ಊರಿನ ಸೌಂದರ್ಯ ನೋಡಿ, ಇಂದು ಬಂದಿದ್ದೇ ಒಳ್ಳೆಯದಾಯಿತು ಎಂದು ಮನಸ್ಸು ಹೇಳುತ್ತಿತ್ತು. ಇದು 2013ರ ಅಸೆಂಬ್ಲಿ ಎಲೆಕ್ಷನ್ ಸಮಯದಲ್ಲಿ, ನಕ್ಸಲರ ಪ್ರಭಾವವಿದ್ದ ಹಳ್ಳಿಯೊಂದಕ್ಕೆ ಚುನಾವಣಾ ಅಧಿಕಾರಿಯಾಗಿ ಕರ್ತವ್ಯಕ್ಕೆ ಹೋಗಿದ್ದಾಗಿನ ಅನುಭವ. ನಾವು ಅಲ್ಲಿಗೆ ಹೋಗಿ ಇಳಿಯುತ್ತಿದ್ದಂತೆಯೇ ಮಿಲಿಟರಿಯವರು ಆ ಪುಟ್ಟ ಶಾಲೆಯ ನೆಲ ಮತ್ತು ಚಾವಣಿಯ ಮೇಲೆ ನಾಲ್ಕೂ ದಿಕ್ಕಿಗೆ ಮುಖಮಾಡಿ ತಮ್ಮ ಗನ್ ಅನ್ನು ಗುರಿಯಾಗಿಸಿ ಸಜ್ಜಾಗಿ ಪಹರೆ ನಿಂತರು.

ನಕ್ಸಲರು ಚುನಾವಣಾ ಪ್ರಕ್ರಿಯೆಯನ್ನು ಒಪ್ಪುವವರಲ್ಲ. ಅವರು ತಳೆಯುವ ಹಿಂಸೆಯ ದಾರಿಯನ್ನು ಒಪ್ಪುವುದು ಸಾಧ್ಯವಿಲ್ಲ. ಹೀಗಿದ್ದೂ ಹಳ್ಳಿಯ ಜನರಿಗೆ ನಕ್ಸಲರ ಕುರಿತಾದ ಧೋರಣೆ ಯಾವುದು ಎಂಬ ಬಗೆಗೆ ನನಗೆ ಕುತೂಹಲ ಇತ್ತು. ಅಲ್ಲಿ 250 ವೋಟುಗಳು ಮಾತ್ರ ಇದ್ದಿದ್ದರಿಂದ ಗಡಿಬಿಡಿ ಇರಲಿಲ್ಲ. ಜನ ಆರಾಮಾಗಿ ವೋಟು ಹಾಕಿದರು. ಪೋಲಿಂಗ್ ಏಜೆಂಟರು ಮಾತಿಗೆ ಸಿಕ್ಕರು. ಆ ಕಡಿಮೆ ಅವಕಾಶದಲ್ಲೂ ನಾನು ಆ ಜನರ ಭಾವವನ್ನು ತಿಳಿಯಲು ಪ್ರಯತ್ನಿಸಿದೆ. ಅವರ್‍ಯಾರೂ ಆತಂಕಿತರಾಗಿರಲಿಲ್ಲ, ಬಾಯಿ ಬಿಡುತ್ತಲೂ ಇರಲಿಲ್ಲ.

ಆದರೆ ಕೆಲವರು, 'ನಮ್ಮ ಜಮೀನುಗಳಿಗೆ ಹಕ್ಕುಪತ್ರವೂ ಇದ್ದಿರಲಿಲ್ಲ. 'ಅವರು' ಬಂದ ಮೇಲೆ ನಮ್ಮೆಡೆಗೆ ಎಲ್ಲರ ಗಮನ ಬಂದು ಈಗ ಕೆಲವು ಸೌಲಭ್ಯಗಳು ಸಿಕ್ಕಿವೆ' ಎಂದು ನೇರವಾಗಿಯೇ ಹೇಳಿದರು. ಮಳೆಗಾಲದಲ್ಲಿ ಸಂಪೂರ್ಣ ನಡುದ್ವೀಪದಂತೆ ಆಗಿ ಇತರ ಪ್ರದೇಶಗಳೊಂದಿಗೆ ಸಂಪರ್ಕವನ್ನೇ ಕಳೆದುಕೊಳ್ಳುವ ಆ ಕಾಡ ನಡುವಿನ ಹಳ್ಳಿ ಹೀಗೆ ಗಮನ ಸೆಳೆಯುವಂತಾಗಿತ್ತು. ಎಲ್ಲವೂ ಸುಸೂತ್ರವಾಗಿ ನಡೆದು ನಾವು ಮರಳಿದೆವು.

ಕರ್ನಾಟಕದಲ್ಲಿ ನಕ್ಸಲರು ಕ್ರಮೇಣ ಮರೆಯಾಗಿದ್ದಾರೆ. 2013- 18ರ ಅವಧಿಯಲ್ಲಿ ಬಹಳಷ್ಟು ನಕ್ಸಲರು ಶರಣಾಗಿ ಸಾಮಾನ್ಯ ಜೀವನದೆಡೆ ಕಾಲಿಟ್ಟಿದ್ದಾರೆ. ಬಡಜನರಿಗೆ ಹೊಟ್ಟೆ ತುಂಬುವ ಅನ್ನ ಸಿಗುವುದಕ್ಕೂ ಈ ಬೆಳವಣಿಗೆಗಳಿಗೂ ನೇರ ಸಂಬಂಧ ಇದ್ದೇ ಇರುತ್ತದೆ. ಈ ಕಾರಣಕ್ಕೆ, ನಿಜವಾದ ಸಂತ್ರಸ್ತರಿಗೆ ಅನ್ನಭಾಗ್ಯದಂತಹ ಯೋಜನೆ ಈ ಕ್ಷಣಕ್ಕೂ ನಮ್ಮ ದೇಶದ ಅಗತ್ಯಗಳಲ್ಲೊಂದು. ಈ ಬಗ್ಗೆ ಶೈಕ್ಷಣಿಕವಾಗಿ ಅಧ್ಯಯನಗಳು ಆಗಬೇಕು. ಮತ್ತು ಹೀಗೆ ನಮ್ಮ ಕಣ್ಣ ಮರೆಯಲ್ಲಿರುವ ಜನರ ಸಮಸ್ಯೆಗಳನ್ನು ಅರಿಯುವ ಕೆಲಸಗಳಾಗಬೇಕು. ಹಾಗೆ ನೋಡಹೋದರೆ ದೇಶದಾದ್ಯಂತ ಬಡತನ ನಿವಾರಣೆಗೆ ಕೇಂದ್ರ, ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ನಿರ್ದಿಷ್ಟವಾದ, ಖಚಿತವಾದ ಯೋಜನೆಗಳು ಜಾರಿಯಾಗಬೇಕಿತ್ತು. ಆದರೆ ಇವು ಆಯಾ ರಾಜ್ಯಗಳ ವ್ಯಾಪ್ತಿಯಲ್ಲಿ ಉಳಿದಿದ್ದೇ ಹೆಚ್ಚು ಮತ್ತು ಬಡತನದ ಸ್ವರೂಪ ಬದಲಾಯಿತೇ ವಿನಾ ಬಡತನ ಬದಲಾಗಲಿಲ್ಲ.

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಇರುವ ಜನರ ಸ್ಥಿತಿಗತಿಗಳಲ್ಲಿ ವ್ಯತ್ಯಾಸ ಇದೆ. ಕೂಲಿ ಹೆಚ್ಚು ಇರುವ, ಕಾರ್ಮಿಕರ ಅಲಭ್ಯತೆ ಇರುವ ಕರಾವಳಿ ಪ್ರದೇಶಗಳಿಗೂ, ಸರಿಯಾಗಿ ಕೂಲಿ ಸಿಗದ ಉತ್ತರ ಕರ್ನಾಟಕದ ಭಾಗಗಳಿಗೂ ತುಂಬಾ ಭಿನ್ನತೆ ಇದ್ದು, ಕೃಷಿಯಂತಹ ಕ್ಷೇತ್ರಗಳಲ್ಲಿರುವ ಕಾರ್ಮಿಕರ ಅಲಭ್ಯತೆಯನ್ನು ಸರಿದೂಗಿಸುವ ಯೋಜನೆಗಳು ಬರಬೇಕಾಗಿದೆ. ಇಷ್ಟಾಗಿ, ದೇಶದ ಇನ್ನಿತರ ಕೆಲವು ರಾಜ್ಯಗಳಿಗೆ ಹೋಲಿಸಿಕೊಂಡರೆ ಕರ್ನಾಟಕದ ಸ್ಥಿತಿ ಉತ್ತಮವೆನಿಸಿಬಿಡುತ್ತದೆ. ಇಂದಿಗೂ ನಮ್ಮಲ್ಲಿಗೆ ಬರುವ ಉತ್ತರ ಮತ್ತು ಈಶಾನ್ಯ ರಾಜ್ಯಗಳ ಕೂಲಿ ಕಾರ್ಮಿಕರು ಅಲ್ಲಿ ದಿನಕ್ಕೆ ನೂರೈವತ್ತು, ಇನ್ನೂರು ರೂಪಾಯಿಗೆ ದುಡಿಯುವುದು ಕೇಳಿ ಆಶ್ಚರ್ಯವಾಗುತ್ತದೆ. ಅಲ್ಲಿನ ಬಡಜನರ ದಾರುಣ ಸ್ಥಿತಿಯನ್ನು ತೀವ್ರವಾಗಿ ದಾಖಲಿಸಿರುವ ಮನೋರಂಜನ್ ಬ್ಯಾಪಾರಿಯವರ, 'ಚಾಂಡಾಳನೊಬ್ಬನ ಆತ್ಮವಿಮರ್ಶೆ' (ಅನು: ಡಾ. ಎಚ್.ಎಸ್.ನಾಗಭೂಷಣ) ಎಂಬ ಆತ್ಮಕಥನ ಓದುತ್ತಿದ್ದರೆ, 'ಹೀಗೂ ಇದೆಯೇ?' ಎಂದು ಕರುಳು ಚುರುಗುಟ್ಟುತ್ತದೆ.

ಕನಿಷ್ಠ ಒಂದು ಹೊತ್ತಿನ ಊಟಕ್ಕಾಗಿ ಸಿಗುವ ಯಾವ ಕೆಲಸವನ್ನಾದರೂ ಮಾಡಲು ತಯಾರಿದ್ದೂ, ವಾರಗಟ್ಟಲೆ ಉಪವಾಸ ಇರಬೇಕಾಗುವ, ಜಾತಿಯ ಕಾರಣಕ್ಕೆ ಅಮಾನುಷ ಹಿಂಸೆ ಅನುಭವಿಸುವ ಸ್ಥಿತಿಯೇ ಕೃತಿಯುದ್ದಕ್ಕೂ ತೆರೆದುಕೊಳ್ಳುತ್ತದೆ. ಅತ್ಯಂತ ಕಠಿಣ, ಕಲ್ಮಷ, ಕೊಳಕುಗಳ ನಡುವೆ ಮಾಡುವ ಕೆಲಸಗಳಿಗೂ ಸರಿಯಾದ ಕೂಲಿಯಿಲ್ಲ. ಜೈಲು ಪಾಲಾಗುವುದೇ ಉತ್ತಮ ಎಂಬ ಪರಿಸ್ಥಿತಿ. ಪ್ರತಿಭಾವಂತ ಲೇಖಕರಾದ ಬ್ಯಾಪಾರಿ, ಅಕ್ಷರ ಕಲಿತದ್ದು ಜೈಲಿನಲ್ಲಿ. ಬಂಗಾಳ ಮತ್ತು ಅತ್ಯಂತ ಶ್ರೀಮಂತ ಸಂಪನ್ಮೂಲವುಳ್ಳ ಭೂಭಾಗವಿದ್ದು (ಆಳುವವರು ಕೊಳ್ಳೆಹೊಡೆಯುವ) ಛತ್ತೀಸ್‌ಗಢದ ದಂಡಕಾರಣ್ಯದ ಅವರ ಬದುಕುಗಳನ್ನು ಅರ್ಥ ಮಾಡಿಕೊಳ್ಳಲು ಇದೊಂದು ಉದಾಹರಣೆ ಸಾಕಾಗಬಹುದು: 'ಈ ದಿನ ಸಂಜೆ ಮನೆಗೆ ಸೋತು ಸುಣ್ಣವಾದ ಸೈನಿಕನಂತೆ ವಾಪಸಾದೆ. ಈ ನನ್ನ ಸ್ಥಿತಿಗೆ ಯಾರನ್ನು ಶಪಿಸಬೇಕು ಎಂದು ಗೊತ್ತಾಗಲಿಲ್ಲ. ಯಾರಿಗೂ ನ್ಯಾಯ ಸಿಗಲಿಲ್ಲ. ಮುಖ್ಯವಾಗಿ ನನ್ನ ಹೆಂಡತಿ, ಮಕ್ಕಳಿಗೆ. ಆಕೆಯದು ಅಂಗನವಾಡಿ ಕೆಲಸ. ಗುಡ್ಡಗಾಡಿನ ಏರಿಳಿತದ ಕೆಟ್ಟ ರಸ್ತೆಗಳಲ್ಲಿ ಇಪ್ಪತ್ತು ಮೈಲಿ ಸೈಕಲ್ ತುಳಿತ. ಮೊದಲನೆಯದು ಸಿಸೇರಿಯನ್, ಎರಡನೆಯದು ಫೋರ್‌ಸೆಪ್. ಇಷ್ಟರ ನಡುವೆ ನಸ್‌ಬಂದಿ ಶಸ್ತ್ರಚಿಕಿತ್ಸೆ. ದಿನಾ ಸಂಜೆ ಸುಸ್ತಾಗಿ ಆಕೆ ಮನೆಗೆ ಬರುವಾಗ ಸಂಕಟವಾಗುತ್ತಿತ್ತು'. 250 ರೂಪಾಯಿಗಳಿಗೆ ಹೀಗೆ ಆಕೆ ದುಡಿಯುತ್ತಿದ್ದಳು.

ಈಗಲೂ ಎಷ್ಟೋ ರಾಜ್ಯಗಳಲ್ಲಿ ಅಂಗನವಾಡಿ ಸಿಬ್ಬಂದಿಗೆ ಮೂರೋ, ನಾಲ್ಕೋ ಸಾವಿರ ಪಗಾರ ಅಷ್ಟೇ. ಬ್ಯಾಪಾರಿಯವರು ಹೇಳುವಂತೆ, ಅನಕ್ಷರಸ್ಥ ಬಡಜನ ಯಾವ ಕೆಂಪು ಪುಸ್ತಕವನ್ನೂ ಓದಿ ನಕ್ಸಲೈಟ್ ಆಗಿಲ್ಲ. ಅವರಿಗೆ ಅದು ಗೊತ್ತೇ ಇಲ್ಲ. ಅವರು ತಮ್ಮ ಅನುಭವಗಳಿಂದ ತಮ್ಮ ವಿಮೋಚಕರನ್ನು ಹಾರೈಸಿ ಕೂತಿರುತ್ತಾರೆ. ಆ ವಿಮೋಚಕರು ಸರ್ಕಾರ ಮತ್ತು ಸರ್ಕಾರದ ಪ್ರತಿನಿಧಿಗಳೇ ಆಗಿದ್ದಲ್ಲಿ ಅವರನ್ನೂ ಪ್ರೀತಿಯಿಂದಲೇ ನೋಡಿಕೊಳ್ಳುತ್ತಾರೆ. ಆಗ ಕಾಡ ಪೊದೆಗಳಿಂದ ಬಂದೂಕಿನ ಮೊನೆಗಳು ತಲೆಯೆತ್ತುವ ಸಾಧ್ಯತೆಯೇ ಇರುವುದಿಲ್ಲ.

ಹೊಟ್ಟೆ ತುಂಬಿದವರಲ್ಲಿ ಹಲವರ ಒಂದು ಸಾಮಾನ್ಯ ವರ್ತನೆಯನ್ನು ಗಮನಿಸಬೇಕು. ನಮ್ಮದೇ ತೆರಿಗೆ ಹಣದಿಂದ ಅತಿ ಶ್ರೀಮಂತರ ಲಕ್ಷಾಂತರ ಕೋಟಿ ರೂಪಾಯಿ ಸಾಲವನ್ನು ಮನ್ನಾ ಮಾಡಿದಾಗ ಆಕ್ರೋಶ ಕಾಣಿಸುವುದಿಲ್ಲ ಅಥವಾ ಅದು ಅವರಿಗೆ ಅರಿವಿಗೇ ಬರುವುದಿಲ್ಲ. ನಮ್ಮ ನೆಲ ಜಲ ಕಾಡು ಖನಿಜಗಳ ಸಂಪತ್ತನ್ನು ಯಾರೋ ಕೆಲವೇ ಕೆಲವು ವ್ಯವಹಾರಿಗಳು ಲೂಟಿ ಹೊಡೆದಾಗಲೂ ಏನೂ ಅನ್ನಿಸುವುದಿಲ್ಲ. ಬಡವರಿಗೆ ಕೊಡುವ ತುತ್ತಿನೆಡೆಗೆ ಮಾತ್ರ ಹೊಟ್ಟೆ ಹೊಸೆದುಕೊಳ್ಳುವಷ್ಟು ಅಸಹನೆ!

ಒಂದು ಕಾಯಿಲೆ, ಒಂದು ಮದುವೆಯು ಜೀವಮಾನದ ದುಡಿಮೆಯನ್ನೇ ತಿಂದು ತೇಗುವ ಕಾಲ ಇದು. ಸ್ವಾವಲಂಬನೆಯ ದಾರಿಯನ್ನು ತೋರುವುದೇ ಅತ್ಯುತ್ತಮ ದಾರಿ ಎಂಬೆಡೆಗೆ ಎರಡು ಮಾತಿಲ್ಲ. ಆ ದಾರಿ ತೋರಲು ಸರ್ಕಾರಗಳನ್ನು ಒತ್ತಾಯಿಸೋಣ. ಆದರೆ ಬಡವರ ಬಗೆಗಿನ ಅಸಹನೆಯ ವಿಕಾರ ಅಭಿವ್ಯಕ್ತಿಯ ಹಿಂದೆ ಇರುವುದು ಅವರು ಸದಾ ನಮ್ಮ ಸೇವಕರಷ್ಟೇ ಆಗಿರಬೇಕು ಎಂಬ, ಶತಮಾನಗಳಿಂದ ಪೋಷಿತವಾದ ಶ್ರೇಣೀಕೃತ, ತಪ್ತ ಮನಃಸ್ಥಿತಿಯೇ ಆಗಿದ್ದು, ಅರಿವಿನ ಕಣ್ಣಿನ ಪೊರೆ ಕಳಚಬೇಕಿದೆ.

ಚುರುಮುರಿ



ಸರ್ವಬಣ ಸಂಪನ್ನ

• ಮಣ್ಣೆರಾಜು

'ಮಕ್ಕಳಿಗೆ ಆಸ್ತಿ ಹಂಚುವುದಕ್ಕಿಂತ ಮಂತ್ರಿಗಳಿಗೆ ಖಾತೆ ಹಂಚುವುದು ಕಷ್ಟ ಅಲ್ವೇನ್ರೀ?' ಕೇಳಿದಳು ಸುಮಿ.

'ಹೌದು, ನೀರಾವರಿ ಜಮೀನು ಬೇಕು, ಫಲ ಕೊಡುವ ತೋಟ ಬೇಕು, ಬಂಗಾರ ಬೆಳೆಯುವ ಭೂಮಿ ಬೇಕು ಅಂತ ಮಕ್ಕಳು ಕೇಳುವಂತೆ, ಪ್ರಭಾವಿ ಖಾತೆ ಬೇಕೆಂದು ಮಂತ್ರಿಗಳು ಆಸೆಪಡುವುದು ಸಹಜ' ಅಂದ ಶಂಕ್ರಿ.

'ಸರ್ಕಾರದಲ್ಲಿ ಸಿಎಂ ಬಣ, ಡಿಸಿಎಂ ಬಣ, ಮಂತ್ರಿ ಸ್ಥಾನ ಸಿಗದ ಸಂತ್ರಸ್ತರ ಬಣ, ಯಾವ ಬಣದಲ್ಲೂ ಗುರುತಿಸಿಕೊಳ್ಳದವರ ಬಣ ಇವೆಯಂತೆ. ಎಲ್ಲಾ ಬಣಗಾರರನ್ನು ನಿಭಾಯಿಸುವುದು ನಾಯಕರಿಗೆ ಸವಾಲಿನ ಕೆಲಸವೇ...'

'ಬಣ ಬವಣೆ ಎಲ್ಲ ಸರ್ಕಾರಗಳಲ್ಲೂ ಇದ್ದಿದ್ದೇ. ಬಣ ಬಾಧೆ ಉಲ್ಬಣವಾದಾಗ ಸಕಾಲದಲ್ಲಿ ಗುಣಪಡಿಸಿ ಸರ್ವಬಣ ಸಮನ್ವಯ ಕಾಪಾಡಲು ನಾಯಕರು ಸರ್ವಬಣ ಸಂಪನ್ನರಾಗಬೇಕು'.

'ಪರಸ್ಪರ ಕೈಕೈ ಹಿಡಿದು ಒಗ್ಗಟ್ಟಿನಿಂದ ಆಡಳಿತ ನಡೆಸಿ, ಕೈ ಕೊಡುವ, ಕೈ ಮಿಲಾಯಿಸುವ ಸಾಹಸ ಮಾಡಬೇಡಿ, ಸಾಮರಸ್ಯ, ಸ್ನೇಹಮಂತ್ರ ಜಪಿಸುತ್ತಾ, ಜನರ ಆಶೋತ್ತರಗಳನ್ನು ಈಡೇರಿಸುತ್ತಾ ಭಾಗ್ಯವಂತರಾಗಿ ಬಾಳಿರಿ ಎಂದು ನಾಯಕರಿಗೆ ಪಕ್ಷದ ಹೈಕಮಾಂಡ್ ಸುಖ ಸರ್ಕಾರದ ಸೂತ್ರಗಳನ್ನು ಬೋಧಿಸಿದೆಯಂತೆ'.

'ಅಷ್ಟೇ ಅಲ್ಲ, ಹಾರ್ಡ್‌ವರ್ಕ್ ಮಾಡಿ ಪಾರ್ಲಿಮೆಂಟ್ ಪರೀಕ್ಷೆಯನ್ನು ಡಿಸ್ಟಿಂಕ್ಷನ್‌ನಲ್ಲಿ ಪಾಸ್ ಮಾಡುವ ಸವಾಲನ್ನೂ ಹೈಕಮಾಂಡ್ ನೀಡಿದೆಯಂತೆ'.

'ಚುನಾವಣೆಯಲ್ಲಿ ಸೋತಿರುವ ಪಕ್ಷಗಳು ಹೆಡೆ ತುಳಿದ ಹಾವಿನಂತೆ ಬುಸುಗುಡುತ್ತಿವೆ. ಆ ಪಕ್ಷಗಳ ಕಿವಿ, ಕಣ್ಣು, ಬಾಯಿಗೆ ಬೀಳದಂತೆ ಎಚ್ಚರಿಕೆಯಿಂದ ಆಡಳಿತ ನಡೆಸಿ ಎಂದೂ ಹೇಳಿದೆಯಂತೆ'.

'ಆಡಳಿತದಲ್ಲಿ ಎದುರಾಗುವ ದುಃಖ ದುಮ್ಮಾನಗಳನ್ನು ನಾವು ಬಗೆಹರಿಸುತ್ತೇವೆ, ದೆಹಲಿ ವಿಮಾನ ಹತ್ತಿ ನಮ್ಮ ಮುಂದೆ ಬನ್ನಿ, ಮೀಡಿಯಾ ಮುಂದೆ ಹೋಗಿ ಗೋಳಾಡಬೇಡಿ ಎಂದು ನಾಯಕರಿಗೆ ಹೈಕಮಾಂಡ್ ಕಿವಿಮಾತು ಹೇಳಿರಬಹುದು...' ಎಂದ ಶಂಕ್ರಿ.

ಸಂಗತ

ಹಿಂದುತ್ವ ರಾಜಕಾರಣ ಈ ನೆಲಕ್ಕೆ ಸೂಕ್ತವೇ?

ಹಿಂದುತ್ವದ ವಿಭಜನಕಾರಿ ರಾಜಕಾರಣವು ಕರ್ನಾಟಕದ ರಾಜಕಾರಣದ ಸಂಪ್ರದಾಯಕ್ಕೆ ಹಾಗೂ ಇಲ್ಲಿನ ಜನರ ಸಂಸ್ಕೃತಿಗೆ ಪೂರಕವಾಗಿ ಇಲ್ಲ

• ರವಿ ಜೋಷಿ

ಹಿಂದುತ್ವ ರಾಜಕಾರಣವು ಕರ್ನಾಟಕದ ಮತದಾರರಿಗೆ ಆಪ್ತವೆನಿಸುತ್ತದೆಯೇ? ಕರ್ನಾಟಕದ ರಾಜಕೀಯ ಸಂಸ್ಕೃತಿ ಮತ್ತು ಇಲ್ಲಿನ ಪ್ರಜಾತಂತ್ರದ ಇತಿಹಾಸ ಈ ಬಗ್ಗೆ ಹೇಳುವುದು ಏನು?

ಕರ್ನಾಟಕವು ವೈಚಾರಿಕವಾಗಿ ನಡುಪಂಥವನ್ನು ಅನುಸರಿಸಿಕೊಂಡು ಬಂದ ಇತಿಹಾಸ, ಸಂಪ್ರದಾಯವನ್ನು ಹೊಂದಿದೆ. ರಾಜ್ಯದ ನೀತಿಗಳು ಪ್ರಮುಖವಾಗಿ, ನಡುಪಂಥದಿಂದ ತುಸು ಎಡಕ್ಕೆ ವಾಲಿಕೊಂಡ ಬಗೆಯಲ್ಲಿ ಇವೆ. ಇವು ಸಾಮಾನ್ಯವಾಗಿ ಬಡವರ ಪರ, ಸಮಾಜವಾದಿ ನೆಲೆಯಲ್ಲಿ ರೂಪುಗೊಂಡಂಥವು.

ಕರ್ನಾಟಕದ ನೆಲದಲ್ಲಿ ಗಾಂಧೀಜಿ ಮತ್ತು ಕಾರ್ಲ್‌ಮಾರ್ಕ್ಸ್ ಪ್ರಭಾವ ಇದೆ. ಅವರಿಗಿಂತ ಹೆಚ್ಚಿನ ಪ್ರಭಾವವನ್ನು ಉದಾರವಾದಿ ಪ್ರಜಾತಂತ್ರದಲ್ಲಿ ನಂಬಿಕೆ ಇರಿಸಿದ್ದ ಜವಾಹರಲಾಲ್ ನೆಹರೂ, ಅಂಬೇಡ್ಕರ್, ಸಮಾಜವಾದಿಗಳಾದ ರಾಮ ಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ ಇಲ್ಲಿ ಬೀರಿದ್ದಾರೆ. ಅಲ್ಲದೆ ಜಯಪ್ರಕಾಶ ನಾರಾಯಣ ಅವರ ವಿರೋಧಿಯಾಗಿದ್ದ, ತಮಗೆ ಸೂಕ್ತವೆನಿಸಿದಾಗ ಸಮಾಜವಾದಿ ನೀತಿಯನ್ನು ಅನುಸರಿಸಿದ್ದ ಇಂದಿರಾ ಗಾಂಧಿ ಅವರ ಪ್ರಭಾವವೂ ಇಲ್ಲಿದೆ.

ಲೋಹಿಯಾ ಅವರ ಸಮಾಜವಾದಿ ಚಿಂತನೆಗಳು ಶಾಂತವೇರಿ ಗೋಪಾಲಗೌಡ, ಕೆ.ಎಚ್. ರಂಗನಾಥ್, ಜೆ.ಎಚ್. ಪಟೇಲ್, ಎಸ್.ಆರ್. ಬೊಮ್ಮಾಯಿ, ರಾಮಕೃಷ್ಣ ಹೆಗಡೆ ಅವರ ಮೇಲೆ ಪ್ರಭಾವ ಬೀರಿದ್ದವು. ಮಹತ್ವದ ಭೂಸುಧಾರಣಾ ಕ್ರಮವನ್ನು ಜಾರಿಗೆ ತಂದ ದೇವರಾಜ ಅರಸು ಅವರೂ ಸಮಾಜವಾದಿ ಚಿಂತನೆಗಳಿಂದ ಪ್ರಭಾವಿತರಾಗಿದ್ದರು. ಅದೇ ತಲೆಮಾರಿನ ರಾಜಕಾರಣಿಯಾಗಿರುವ ಎಚ್.ಡಿ. ದೇವೇಗೌಡ ಅವರೂ ಸಮಾಜವಾದ ಮತ್ತು ಧರ್ಮನಿರಪೇಕ್ಷ ತತ್ವದಲ್ಲಿ ಬದ್ಧತೆ ಹೊಂದಿರುವ ವ್ಯಕ್ತಿ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಅವರ ಮಗ ಮಾತ್ರ ಧರ್ಮನಿರಪೇಕ್ಷತೆಯ ವಿಚಾರದಲ್ಲಿ ಈ ಬಗೆಯ ಬದ್ಧತೆಯನ್ನು ತೋರಿಸಿಲ್ಲ.

ಉದಾರವಾದ, ಧರ್ಮನಿರಪೇಕ್ಷ ಮೌಲ್ಯಗಳಿಂದ, ಎಂ.ಎನ್. ರಾಯ್ ಅವರ 'ರ‍್ಯಾಡಿಕಲ್ ಹ್ಯೂಮನಿಸಂ' ಸಿದ್ಧಾಂತದಿಂದ ಸ್ಫೂರ್ತಿ ಪಡೆದ ಬೌದ್ಧಿಕ ಚಳವಳಿಯೊಂದನ್ನು ಕರ್ನಾಟಕ ಕಂಡಿದೆ. ಈ ಉದಾರವಾದಿ, ಧರ್ಮನಿರಪೇಕ್ಷ ಮತ್ತು ವೈಶ್ವಿಕ ಮೌಲ್ಯಗಳು ಕವಿ ಗೋಪಾಲಕೃಷ್ಣ ಅಡಿಗ, ದ.ರಾ. ಬೇಂದ್ರೆ ಮತ್ತು ಕುವೆಂಪು ಅವರ ಕಾವ್ಯಗಳಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿವೆ. ಯು.ಆರ್. ಅನಂತಮೂರ್ತಿ, ಗಿರೀಶ ಕಾರ್ನಾಡ ಅವರ ಬರಹಗಳಲ್ಲಿ, ಪಿ. ಲಂಕೇಶ್ ಅವರ ಪತ್ರಿಕಾ ಬರಹಗಳಲ್ಲಿ ಕೂಡ ಕಾಣಿಸಿಕೊಂಡಿವೆ. ಲಂಕೇಶ್ ಅವರ ಚಿಂತನೆಗಳನ್ನು ಅವರ ಮಗಳು ಗೌರಿ ಲಂಕೇಶ್, ಕೊಲೆಯಾಗುವವರೆಗೂ ಮುಂದಕ್ಕೆ ಒಯ್ಯುವ ಕೆಲಸ ಮಾಡಿದರು.

ಕರ್ನಾಟಕದಲ್ಲಿ ವಿಚಾರವಾದಿಗಳು ಮುನ್ನಡೆಸಿದ ಬಹುಮುಖ್ಯ ಆಂದೋಲನವೊಂದು ನಡೆದಿದೆ. ಅವರು ದೇವಮಾನವರನ್ನು ಬೆತ್ತಲುಗೊಳಿಸಿದರು, ಮೂಢನಂಬಿಕೆಗಳನ್ನು ಬಯಲುಗೊಳಿಸುವ ಕೆಲಸ ಮಾಡಿದರು. ಡಾ. ಅಬ್ರಹಾಂ ಕೋವೂರ್, ಪ್ರೊ.ಎಚ್. ನರಸಿಂಹಯ್ಯ ಅವರು ಈ ಕೆಲಸ ಮಾಡಿದವರ ಪೈಕಿ ಪ್ರಮುಖರು. ವೈಚಾರಿಕತೆ ಹಾಗೂ ಪ್ರಶ್ನಿಸುವ ಮನೋಭಾವವನ್ನು ವಿರೋಧಿಸುವ ವ್ಯಕ್ತಿಗಳಿಂದ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಆಗಿದ್ದ ಪ್ರೊ.ಎಂ.ಎಂ.ಕಲಬುರ್ಗಿ ಅವರ ಹತ್ಯೆಯಾಯಿತು. ಸುಳ್ಳು ಸುದ್ದಿಗಳು, ಪೂರ್ವಗ್ರಹಗಳು, ದ್ವೇಷ ಭಾಷಣಗಳು ಇಂದಿನ ರಾಜಕಾರಣದಲ್ಲಿ ಬಹಳ ಸಾಮಾನ್ಯವಾಗಿರುವ ಈ ಹೊತ್ತಿನಲ್ಲಿ, ಇಂತಹ ವ್ಯಕ್ತಿಗಳ ಕೊಡುಗೆಗಳನ್ನು ನೆನಪು ಮಾಡಿಕೊಳ್ಳುವುದು ಬಹಳ ಮುಖ್ಯ. ಕರ್ನಾಟಕದಲ್ಲಿ ಜಾತಿ ರಾಜಕಾರಣವು ಧರ್ಮ ಆಧಾರಿತ ರಾಜಕಾರಣಕ್ಕಿಂತ ಹೆಚ್ಚು ಮುಖ್ಯವಾಗಿದೆ. ಇಲ್ಲಿನ ರಾಜಕಾರಣದಲ್ಲಿ ಜಾತಿಯು ವಿಭಜಕ ಶಕ್ತಿಯಾಗಿ ಕಾಣಿಸಿಕೊಂಡಿಲ್ಲ. ಇದು ಇಲ್ಲಿ ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ನೀತಿಗಳನ್ನು ಮುಂದಕ್ಕೆ ಒಯ್ಯಲು ನಾಯಕರಿಗೆ ಸಂಘಟನಾ ಶಕ್ತಿಯ ರೂಪದಲ್ಲಿ ನೆರವಿಗೆ ಬಂದಿದೆ.

1952ರ ನಂತರದ 15 ವಿಧಾನಸಭಾ ಚುನಾವಣೆಗಳಲ್ಲಿ, ನಡುಪಂಥೀಯ ಶಕ್ತಿಯಾಗಿರುವ ಕಾಂಗ್ರೆಸ್ ಒಂಬತ್ತು ಬಾರಿ, ನಡುಪಂಥೀಯ ಎಂದೇ ಗುರುತಿಸಬಹುದಾದ ಜನತಾದಳ ಮೈತ್ರಿಕೂಟವು ಎರಡು ಬಾರಿ ಸ್ಪಷ್ಟ ಬಹುಮತ ಪಡೆದುಕೊಂಡಿವೆ. ಇನ್ನುಳಿದ ಮೂರು ಚುನಾವಣೆಗಳಲ್ಲಿ ಬಿಜೆಪಿಯು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಆದರೆ ಅದು ಸ್ಪಷ್ಟ ಬಹುಮತ ಪಡೆದಿರಲಿಲ್ಲ. 2008ರಲ್ಲಿ ಬಹುಮತಕ್ಕೆ ಮೂರು ಸ್ಥಾನಗಳನ್ನು ಕಡಿಮೆ ಪಡೆದಿದ್ದ ಬಿಜೆಪಿಯು ಸರ್ಕಾರ ರಚಿಸಿತು. 2019ರಲ್ಲಿ ಅದು ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿಯನ್ನಾಗಿಸಿ ಸರ್ಕಾರ ರಚಿಸಿದ್ದು ಹೇಗೆ ಎಂಬುದು ಎಲ್ಲರಿಗೂ ಗೊತ್ತಿದೆ.

ರಾಜ್ಯದಲ್ಲಿ 'ಹಿಂದುತ್ವ ರಾಜಕಾರಣ' ಯಾವಾಗಲೂ ಅಗತ್ಯ ಪ್ರಮಾಣದ ಬೆಂಬಲ ಪಡೆದಿಲ್ಲ ಎಂಬುದು ಸ್ಪಷ್ಟ. ರಾಜ್ಯವು ಬಿಜೆಪಿಗಿಂತ ಹೆಚ್ಚಾಗಿ, ಬಿ.ಎಸ್. ಯಡಿಯೂರಪ್ಪ ಅವರನ್ನು ಒಪ್ಪಿಕೊಂಡಿದೆ. ಅವರು ಬಿಜೆಪಿಯನ್ನು ತಮ್ಮ 'ಲಿಂಗಾಯತ ಸಮುದಾಯದ ಬಲ' ಆಧರಿಸಿ ಅಧಿಕಾರಕ್ಕೆ ತಂದರು.

ಲಿಂಗಾಯತ ಮತಬ್ಯಾಂಕ್ ಆಚೆಗೂ ನೆಲೆ ವಿಸ್ತರಿಸಬೇಕಿದ್ದ ಕಾರಣ, ಯಡಿಯೂರಪ್ಪ ಹೆಚ್ಚು ಒಳಗೊಳ್ಳುವ ರಾಜಕಾರಣವನ್ನು ಅನುಸರಿಸಿದರು. ಅದು ಇತರ ಜಾತಿಗಳು, ಧಾರ್ಮಿಕ ಸಮುದಾಯಗಳು ಮತ್ತು ಪ್ರಾದೇಶಿಕ ಸಮುದಾಯಗಳನ್ನು ಜೊತೆಯಲ್ಲಿ ಕರೆದೊಯ್ಯುವಂಥದ್ದು. ಹೀಗಾಗಿ ಅವರು ತೀವ್ರಗಾಮಿ ಭಾಷೆಯಲ್ಲಿ ಮಾತನಾಡುವುದಿಲ್ಲ. ಅವರು ಮುಖ್ಯಮಂತ್ರಿ ಆಗಿದ್ದಾಗ ಯಾರೊಬ್ಬರೂ 'ಹಲಾಲ್, ಹಿಜಾಬ್, ನಮಾಜ್, ಲವ್ ಜಿಹಾದ್'ನಂಥ ವಿಷಯಗಳನ್ನು ಹೆಚ್ಚು ಪ್ರಸ್ತಾಪಿಸದಂತೆ ನೋಡಿಕೊಂಡರು.

ಲೇಖಕ: ಕೇಂದ್ರ ಕ್ಯಾಬಿನೆಟ್ ಸಚಿವಾಲಯದ ಮಾಜಿ ಅಧಿಕಾರಿ

ವಾಚಕರ ವಾಣಿ

ರಾಷ್ಟ್ರಪತಿಗೆ ಆಹ್ವಾನ ಇಲ್ಲವೇಕೆ?

ಭಾರತದ ಮೊದಲ ಪ್ರಜೆ ಹಾಗೂ ಶಾಸಕಾಂಗ, ಕಾರ್ಯಾಂಗದ ಮುಖ್ಯಸ್ಥರೂ ಆಗಿರುವ ರಾಷ್ಟ್ರಪತಿಯವರಿಗೆ ಸಂಸತ್ ಭವನದ ಉದ್ಘಾಟನಾ ಸಮಾರಂಭಕ್ಕೆ ಆಹ್ವಾನ ನೀಡದಿರುವುದು ಪ್ರಜಾಪ್ರಭುತ್ವದ ಹಿನ್ನಡೆ. ಹಿಂದಿನ ಬಾರಿ ರಾಮಮಂದಿರ ನಿರ್ಮಾಣ, ಸಂಸತ್ ಭವನದ ಶಂಕುಸ್ಥಾಪನೆ ಸಂದರ್ಭದಲ್ಲೂ ಮೊದಲ ಪ್ರಜೆಗೆ ಆಹ್ವಾನ ನೀಡದಿದ್ದುದು, ಈಗಲೂ ಅದೇ ಧೋರಣೆ ಮುಂದುವರಿದಿರುವುದು ಸರಿಯಲ್ಲ.

ಇಂಥ ನಿರ್ಧಾರಗಳು ಸಮಾಜದಲ್ಲಿ ಸಮಾನತೆ ತತ್ವಕ್ಕೇ ಹಿನ್ನಡೆ ಉಂಟುಮಾಡುತ್ತವೆ ಅಂದರೆ ತಪ್ಪಾಗಲಾರದು. ಪ್ರಜೆಗಳು ಹಾಗೂ ಮಾಧ್ಯಮಗಳು ಇಂಥ ನಡೆಯ ವಿರುದ್ಧ ಧ್ವನಿ ಎತ್ತಿ ಸರ್ಕಾರಕ್ಕೆ ಚಾಟಿ ಬೀಸುವಂತಾಗಲಿ.

ಸಾಗರ್ ದ್ರಾವಿಡ್, ಹಿರಿಯೂರು

ಪ್ರತಿದಿನ ವಿಚಾರಣೆ ನಡೆಯುವಂತಾದರೆ...

ಒಬ್ಬ ಮಾಜಿ ಶಾಸಕರ ಮನೆಯಲ್ಲಿ ಕೋಟಿಗಟ್ಟಲೆ ಹಣ ಸಿಕ್ಕಿದ್ದು, ಎಡಿಜಿಪಿ ಒಬ್ಬರು ಜೈಲು ಸೇರಿದ್ದು, ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಂಡಂತಹ ಪ್ರಕರಣಗಳನ್ನು ಉಲ್ಲೇಖಿಸಿರುವ ಸಚಿವ ಎಂ.ಬಿ.ಪಾಟೀಲ (ಕಿಡಿನುಡಿ, ಮೇ 23), ಬಿಜೆಪಿಯ ಭ್ರಷ್ಟಾಚಾರಕ್ಕೆ ಇವುಗಳಿಗಿಂತ ದೊಡ್ಡ ಸಾಕ್ಷ್ಯ ಬೇಕೇ ಎಂದು ಕೇಳಿದ್ದಾರೆ. ಬಿಜೆಪಿ ನೇತೃತ್ವದ ಸರ್ಕಾರವಿದ್ದಾಗ ಆಗಿರುವ ಭ್ರಷ್ಟಾಚಾರ ಹಗರಣಗಳ ತನಿಖೆಯನ್ನು ಕೈಗೆತ್ತಿಕೊಳ್ಳುವ ಬಗ್ಗೆಯೂ ಹೇಳಿದ್ದಾರೆ. ಈ ಮುಂಚೆ ಆಡಳಿತ ನಡೆಸಿದ ಎಲ್ಲ ಪಕ್ಷಗಳ ನೇತೃತ್ವದ ಸರ್ಕಾರಗಳ ವಿರುದ್ಧವೂ ಭ್ರಷ್ಟಾಚಾರದ ಆರೋಪಗಳು ಇದ್ದೇ ಇವೆ. ಅಂದಂದಿನ ಸರ್ಕಾರ ಆ ಆರೋಪಗಳನ್ನು ಗಂಭೀರವಾಗಿ ಪರಿಗಣಿಸಿದ್ದು ಇದೆಯೇ?

ಇದುವರೆಗೂ ಎಷ್ಟು ಪ್ರಕರಣಗಳು ಯಾವುದೇ ಪಕ್ಷದ ನೇತೃತ್ವದ ಸರ್ಕಾರದ ವಿರುದ್ಧ, ರಾಜಕಾರಣಿಗಳ ವಿರುದ್ಧ ನ್ಯಾಯಾಲಯದಲ್ಲಿ ದಾಖಲಾಗಿವೆ ಮತ್ತು ಇದುವರೆಗೂ ಆಗಿರುವ ಪ್ರಗತಿ ಏನು? ಎಲ್ಲಿದೆ ಮಾಹಿತಿ? ಹಿಂದಿನ ಎಲ್ಲ ಸರ್ಕಾರಗಳು ಮತ್ತು ರಾಜಕಾರಣಿಗಳ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳು ದಾಖಲಾಗಿ, ಅವು ಶೀಘ್ರ ಇತ್ಯರ್ಥಗೊಳ್ಳಲು ಪ್ರತ್ಯೇಕ ನ್ಯಾಯಾಲಯ ಸ್ಥಾಪನೆಯ ಅಗತ್ಯ ಇದೆ. ವಿಚಾರಣೆ ಪ್ರತಿದಿನ ಎಂಬಂತೆ ನಡೆಯುವಂತಾದರೆ ನ್ಯಾಯನಿರ್ಣಯವೂ ಬೇಗ ಆದೀತು. ಪ್ರತಿಯೊಂದು ಪಕ್ಷದವರೂ ಮತ್ತೊಂದು ಪಕ್ಷದ ನೇತೃತ್ವದ ಸರ್ಕಾರದ ಬಗ್ಗೆ ಆಪಾದನೆ ಮಾಡುತ್ತಾರೆ, ಸೂಕ್ತ ಸಮಯದಲ್ಲಿ ದಾಖಲೆಗಳನ್ನು ಬಹಿರಂಗಪಡಿಸುವುದಾಗಿ ಹೇಳಿಕೆ ನೀಡುತ್ತಾರೆ. ಆಪಾದನೆಗಳ ಪರಿಯನ್ನು ಗಮನಿಸಿದರೆ, ರಾಜಕಾರಣಿ ಹತ್ತಾರು ವರ್ಷ ಸೆರೆವಾಸದಲ್ಲಿ ಇರಬೇಕಾಗುತ್ತದೆ. ಬರೀ ಮಾತಿನಲ್ಲೇ ಎಲ್ಲ ಆದರೆ ಆಯಿತೇ? ಮಾತಿಗಿಂತ ಕೃತಿ ಲೇಸು.

ಸಾಮಗ ದತ್ತಾತ್ರಿ, ಬೆಂಗಳೂರು

ಫಲಿತಾಂಶ

ಹೆಸರಲ್ಲೇ 'ಪಾಸ್'
ಎಂದಿದ್ದರೂ
ವರುಣನ
ಪರೀಕ್ಷೆಯಲ್ಲಿ
ಫೇಲಾಯಿತು
ಬೆಂಗಳೂರಿನ
ಅಂಡರ್‌ಪಾಸ್!

ಮಹಾಂತೇಶ ಮಾಗನೂರ
ಬೆಂಗಳೂರು

ಮಾದರಿ ತಂದೆ, ಅಭಿನಂದನಾರ್ಹ ನಡೆ

'ಮಗಳಿಗೆ ಪೈಲಟ್ ತರಬೇತಿ ಕೊಡಿಸುತ್ತಿದ್ದುದಕ್ಕೆ ನಮ್ಮ ಸಮುದಾಯದಲ್ಲಿ ಕೆಲವರು ವಿರೋಧ ವ್ಯಕ್ತಪಡಿಸಿದ್ದುಂಟು. ಆದರೆ ನಮಗೆ ಮಗಳ ಕನಸು ಮುಖ್ಯವಾಗಿತ್ತು' ಎಂದಿದ್ದಾರೆ, ಕಮರ್ಷಿಯಲ್ ಪೈಲಟ್ ಆಗುವ ಅರ್ಹತೆ ಗಳಿಸಿರುವ ಮಂಗಳೂರಿನ ಯುವತಿ ಹನಿಯಾ ಹನೀಫ್ ಅವರ ತಂದೆ ಮಹಮ್ಮದ್ ಹನೀಫ್ (ಪ್ರ.ವಾ., ಮೇ 23). ರಾಜಕಾರಣಿಗಳ ಮೇಲಾಟದ ಸುದ್ದಿಗಳನ್ನು ಓದಿ ಓದಿ ಚಿಟ್ಟು ಹಿಡಿದಿದ್ದ ಮನಸ್ಸಿಗೆ, ತಮ್ಮ ಮಗಳ ಕನಸಿಗೆ ಹಾಲೆರೆದ ಹನೀಫ್ ಅವರ ಮಾತುಗಳು ನಿಜಕ್ಕೂ ಹಾಲು ಕುಡಿದಷ್ಟೇ ಸಂತಸ ನೀಡಿದವು. ಮಗಳ ಮನಸ್ಸನ್ನು ಬಾಲ್ಯದಿಂದಲೇ ಗಮನಿಸಿದ ಹನೀಫ್, ತಂದೆಯ ಕರ್ತವ್ಯವನ್ನು ಪೂರೈಸಿದ್ದಾರೆ. ಹಾಗಾಗಿ ಮಗಳು ಹನಿಯಾ ಇಂದು ಒಬ್ಬ ಪೈಲಟ್. ಇದು ನಾಡೇ ಹೆಮ್ಮೆಪಡುವ ವಿಚಾರ. ತಮ್ಮ ಸಮುದಾಯದ ಕೆಲವರಿಂದ ನಕಾರಾತ್ಮಕ ಸ್ಪಂದನೆ ದೊರೆತರೂ ಹನೀಫ್ ಅವರು ಅದನ್ನು ಮೀರಿ ಮಗಳ ಬೆಳೆಯುವ ರೆಕ್ಕೆಯನ್ನು ಬಲಪಡಿಸಿದ್ದಾರೆ. ಅನಂತ ಆಕಾಶಕ್ಕೆ ನೆಗೆಯುವಂತೆ ಆಕೆಯನ್ನು ಪೋಷಿಸಿದ್ದಾರೆ. ಅವರ ನಡೆ ಮಾದರಿ ಮತ್ತು ಅಭಿನಂದನಾರ್ಹ.

ಕಾಂತೇಶ ಕದರಮಂಡಲಗಿ, ಶಿವಮೊಗ್ಗ

ಪ್ರಜಾಪ್ರಭುತ್ವದ ಸ್ಫೂರ್ತಿಗೆ ಅಪಚಾರ

ವಿಧಾನಸಭೆ ಚುನಾವಣೆ ನಂತರ ಕರೆಯಲಾದ ಪ್ರಥಮ ವಿಧಾನಸಭಾ ಅಧಿವೇಶನದ ಮೊದಲ ದಿನವೇ ನಲವತ್ತೆರಡು ನೂತನ ಚುನಾಯಿತ ಸದಸ್ಯರು ಗೈರುಹಾಜರಾಗಿದ್ದುದು ಬೇಸರದ ಸಂಗತಿ. ಈ ಮೂಲಕ ಅವರು ತಮ್ಮ ಕ್ಷೇತ್ರದ ಮತದಾರರಿಗೆ ಮತ್ತು ಪ್ರಜಾಪ್ರಭುತ್ವದ ಸ್ಫೂರ್ತಿಗೆ ಅಪಚಾರ ಎಸಗಿದಂತಾಗಿದೆ. ಕಾನೂನು ಕಟ್ಟಲೆಗಳನ್ನು ಶ್ರದ್ಧೆ ಮತ್ತು ಆಸಕ್ತಿಯಿಂದ ರೂಪಿಸುವ ಜಾಣ್ಮೆ, ಕೌಶಲವನ್ನು ಜನಪ್ರತಿನಿಧಿಗಳು ರೂಢಿಸಿಕೊಳ್ಳಲಿ. ಅದಕ್ಕೆ ಬೇಕಾದ ಪೂರಕ ಓದು, ಸಂವಾದ ಮತ್ತು ಚರ್ಚೆಗಳಲ್ಲಿ ತೊಡಗಿಸಿಕೊಂಡು ಸಮಾಜಕ್ಕೆ ಮಹತ್ವದ ಕೊಡುಗೆ ಕೊಡುವಲ್ಲಿ ಅವರು ಆಸಕ್ತಿ ವಹಿಸಲಿ. ಈ ದಿಸೆಯಲ್ಲಿ ನೂತನ ಶಾಸಕರಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ ಸಿಗುವಂತಾಗಲಿ.

ಡಾ. ಟಿ.ವಿ.ನಾಗರಾಜ, ಬೆಂಗಳೂರು

ರೈಲು ಪ್ರಯಾಣಿಕರಿಗೆ ಬರಲಿ 'ಅಚ್ಛೇ ದಿನ್'

ಗಂಟೆಗೆ ಸುಮಾರು 150 ಕಿ.ಮೀ. ವೇಗದಲ್ಲಿ ಚಲಿಸುವ 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲುಗಳ ಬಗ್ಗೆ ಮಾತನಾಡುವ ಈ ಕಾಲದಲ್ಲಿ, ಡೀಸೆಲ್ ಎಂಜಿನ್‌ನಲ್ಲಿ ಓಡುವ ಕೆಲವು ಪ್ಯಾಸೆಂಜರ್ ರೈಲುಗಳ ವೇಗ ತೀರಾ ಕಳಪೆ ಮಟ್ಟದ್ದಾಗಿದೆ. ಕೆಲವೊಮ್ಮೆ ಸರಾಸರಿ ವೇಗ ಗಂಟೆಗೆ 30 ಕಿ.ಮೀ.ಗಿಂತಲೂ ಕಡಿಮೆ ಇರುತ್ತದೆ. ಉದಾಹರಣೆಗೆ, ಅರಸೀಕೆರೆ- ಬೆಂಗಳೂರು ಪ್ಯಾಸೆಂಜರ್ ರೈಲು. ಸಮಮಾರ್ಗದಲ್ಲಿ ಚಲಿಸುತ್ತಿದ್ದರೂ ಯಾವುದೋ ಬೆಟ್ಟ ಏರಿದಹಾಗೆ ಭಾಸವಾಗುತ್ತದೆ ಇದರ ಶಬ್ದ. ವಿದ್ಯುದೀಕರಣಗೊಂಡಿರುವ ಮಾರ್ಗಗಳಲ್ಲಿ ಎಲೆಕ್ಟ್ರಿಕ್ ಲೋಕೊಮೋಟಿವ್, ಹೆಚ್ಚು ನಿಲ್ದಾಣಗಳನ್ನು ಹೊಂದಿರುವ ಮಾರ್ಗಗಳಲ್ಲಿ ಹೆಚ್ಚು ದಕ್ಷ ಎಂಜಿನ್‌ಗಳನ್ನು ಬಳಕೆ ಮಾಡಿದರೆ ರೈಲು ಪ್ರಯಾಣಿಕರಿಗೆ 'ಅಚ್ಛೇ ದಿನ್' ಬಂದೀತು.

ಕರಿಯಪ್ಪ ಆರ್., ಕಲ್ಲಹಳ್ಳಿ, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಶಸ್ತಿಗೆ ನಾಮನಿರ್ದೇಶಿತರು

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ಕ್ಕೆ ದಿನಗಣನೆ ಶುರುವಾಗಿದೆ. 2022ನೇ ಸಾಲಿನ ಸಿನಿಮಾಗಳ ಪೈಕಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರನ್ನು ತಿಳಿಸುವ ಸಮಯ ಇದು. ಈವರೆಗೆ ಹದಿನಾಲ್ಕು ವಿಭಾಗಗಳ ನಾಮನಿರ್ದೇಶನಗಳನ್ನು ಪ್ರಕಟಿಸಲಾಗಿದೆ. ‘ಅತ್ಯುತ್ತಮ ನೃತ್ಯ ನಿರ್ದೇಶನ’ ವಿಭಾಗದ ನಾಮನಿರ್ದೇಶಿತರ ವಿವರ ಇಲ್ಲಿದೆ. ‘ಚಲನಚಿತ್ರ ಉದ್ಯಮಕ್ಕೆ ಹೊಸ ದಿಕ್ಕು ತೋರಿಸಬಲ್ಲ ಸಿನಿಮಾ’ಗಳನ್ನು ನಾಲ್ಕು ವಿಭಾಗಗಳಲ್ಲಿ ಮುಖ್ಯ ತೀರ್ಪುಗಾರರೇ ಆಯ್ಕೆ ಮಾಡಲಿದ್ದಾರೆ. ಪರಿಣತರ ತಂಡವು ಈ ವಿಭಾಗಗಳಿಗೆ ನಾಮನಿರ್ದೇಶನ ಮಾಡಿದೆ. ಅವುಗಳ ವಿವರವೂ ಇಲ್ಲಿದೆ. ‘ಸಿನಿ ಸಮ್ಮಾನ’ದ ಕುರಿತ ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ.. prajavani.net/cinesamman



ಅತ್ಯುತ್ತಮ ನಿರ್ಮಾಣ ವಿನ್ಯಾಸ

777 ಚಾರ್ಲಿ


ಕೆ.ಜಿ.ಎಫ್ ಚಾಪ್ಟರ್–2

ಕಾಂತಾರ

ಸಕುಟುಂಬ ಸಮೇತ

ಮಾನ್ಸೂನ್ ರಾಗ

ಅತ್ಯುತ್ತಮ ನೃತ್ಯ ನಿರ್ದೇಶನ

ಮೋಹನ್
ಹಾಡು: ತೂಫಾನ್
ಚಿತ್ರ: ಕೆ.ಜಿ.ಎಫ್ ಚಾಪ್ಟರ್–2


ರಾಜ್ ಬಿ.ಶೆಟ್ಟಿ
ಹಾಡು: ವರಾಹ ರೂಪಂ
ಚಿತ್ರ: ಕಾಂತಾರ

ರವೀಂದ್ರನಾಥ ಸಿರಿವರ
ಹಾಡು: ಐ..ಐ..ಐಹೊಳೆ
ಚಿತ್ರ: ಐಹೊಳೆ

ಎ.ಹರ್ಷ
ಹಾಡು: ಗಿಚ್ಚ ಗಿಲಿ ಗಿಲಿ
ಚಿತ್ರ: ಓಲ್ಡ್ ಮಾಂಕ್

ಅತ್ಯುತ್ತಮ ವಿಎಫ್‌ಎಕ್ಸ್, ಎಸ್‌ಎಫ್‌ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್

ಜೇಮ್ಸ್

ಕಾಂತಾರ

777 ಚಾರ್ಲಿ

ತುರ್ತು ನಿರ್ಗಮನ

ಮಠ

ಅತ್ಯುತ್ತಮ ಧ್ವನಿಗ್ರಹಣ ಹಾಗೂ ಶಬ್ದವಿನ್ಯಾಸ

ಕಾಂತಾರ

ವೇದ

ಸಕುಟುಂಬ ಸಮೇತ

ತಲೆದಂಡ

ತುರ್ತು ನಿರ್ಗಮನ

ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ


ತಲೆದಂಡ

ಫೋರ್‌ವಾಲ್ಸ್

ಸಾರಾ ವಜ್ರ

ಐಹೊಳೆ

ದಾರಿ ಯಾವುದಯ್ಯ ವೈಕುಂಠಕೆ

ಧರಣಿ ಮಂಡಲ ಮಧ್ಯದೊಳಗೆ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಮಹಿಳೆಯೊಬ್ಬರು ಸಂಚರಿಸುತ್ತಿದ್ದ ಕಾರನ್ನು ತಡೆದ ಇಬ್ಬರು ವ್ಯಕ್ತಿಗಳು, ಕಾರಿನಿಂದ ಮಹಿಳೆಯನ್ನು ಹೊರಗೆಳೆದು ಗುಂಡಿನ ದಾಳಿ ನಡೆಸುವ ದೃಶ್ಯ ಇರುವ ವಿಡಿಯೊವೊಂದು ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. @HiNdU05019434 ಹೆಸರಿನ ಖಾತೆ ಸೇರಿದಂತೆ ಹಲವು ಟ್ವಿಟರ್ ಖಾತೆಗಳಲ್ಲಿ ಈ ವಿಡಿಯೊ ಅಪ್‌ಲೋಡ್ ಆಗಿದೆ. ಕಾರಿನಲ್ಲಿ ಹೋಗುತ್ತಿದ್ದ ಮಹಿಳೆ ಆರ್‌ಎಸ್‌ಎಸ್ ಸದಸ್ಯೆಯಾಗಿದ್ದ ಕಾರಣಕ್ಕೆ ಜಿಹಾದಿಗಳು ಹತ್ಯೆ ಮಾಡಿದ್ದಾರೆ ಎಂದು ಈ ವಿಡಿಯೊವನ್ನು ಹಂಚಿಕೊಂಡವರು ಆರೋಪಿಸಿದ್ದಾರೆ. ಆದರೆ ಇದು ನೈಜ ಘಟನೆಯಲ್ಲ. ಇದು ಬೀದಿನಾಟಕದ ದೃಶ್ಯ.

ಕರ್ನಾಟಕದಲ್ಲಿ ಗೌರಿ ಲಂಕೇಶ್ ಅವರ ಹತ್ಯೆಗೆ ಪ್ರತಿರೋಧವಾಗಿ ಕೇರಳದ ಮಲಪ್ಪುರಂ ಡಿವೈಎಫ್‌ಐ ಘಟಕವು ಬೀದಿನಾಟಕವೊಂದನ್ನು ಪ್ರದರ್ಶಿಸಿತ್ತು. 2017ರಲ್ಲಿ ಮಾಡಲಾದ ಬೀದಿನಾಟಕದ ವಿಡಿಯೊವನ್ನು ನೈಜ ಘಟನೆ ಎಂಬಂತೆ ಹಾಗೂ ಇತ್ತೀಚೆಗೆ ನಡೆದಿದ್ದು ಎಂಬಂತೆ ತಪ್ಪಾಗಿ ಅರ್ಥೈಸಿಕೊಂಡು ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ ಎಂದು ‘ಆಲ್ಟ್ ನ್ಯೂಸ್’ ವರದಿ ಮಾಡಿದೆ. ಮಾತೃಭೂಮಿ, ಹಿಂದೂಸ್ತಾನ್ ಟೈಮ್ಸ್ ಸೇರಿದಂತೆ ಹಲವು ಪತ್ರಿಕೆಗಳು ಅಂದು ನಡೆದಿದ್ದ ಬೀದಿನಾಟಕದ ವರದಿಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದವು.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ವಿಶ್ವಮೂಲದ ದರ್ಶನ

ನಶ್ವರಾಕೃತಿ ನಾಮಮಯ ವಿಶ್ವವಾರ್ಧಿಯಿದು |
ಶಾಶ್ವತಬ್ರಹ್ಮದುಚ್ಛ್ವಾಸ ಘನಬಿಂದು ||
ಪ್ರಶ್ವಸಿತದಲೆಗಳನೆ ಪಿಡಿದು ಗುರಿಯರಿತೀಜೆ |
ವಿಶ್ವಮೂಲಾಪ್ತಿಯಲ - ಮಂಕುತಿಮ್ಮ || **890**

ಪದ-ಅರ್ಥ: ನಶ್ವರಾಕೃತಿ = ನಶ್ವರ(ಶಾಶ್ವತವಲ್ಲದ) + ಆಕೃತಿ, ವಿಶ್ವವಾರ್ಧಿಯಿದು = ವಿಶ್ವ + ವಾರ್ಧಿ-(ಸಮುದ್ರ) + ಇದು, ಶಾಶ್ವತಬ್ರಹ್ಮದುಚ್ಛ್ವಾಸ = ಶಾಶ್ವತ + ಬ್ರಹ್ಮದ + ಉಚ್ಛ್ವಾಸ(ಉಸಿರು), ಪ್ರಶ್ವಸಿತದಲೆಗಳನೆ + ಪ್ರಶ್ವಸಿತದ(ಉಸಿರಾಟದ) + ಅಲೆಗಳನೆ, ಪಿಡಿದು = ಹಿಡಿದು, ಗುರಿಯರಿತೀಜೆ = ಗುರಿಯರಿತು + ಈಜೆ, ವಿಶ್ವಮೂಲಾಪ್ತಿಯಲ = ವಿಶ್ವಮೂಲ + ಅಪ್ತಿ(ದರ್ಶನ, ದೊರೆಯುವಿಕೆ) + ಅಲ.

ವಾಚ್ಯಾರ್ಥ: ಈ ವಿಶ್ವ ನಶ್ವರವಾದ ಆಕೃತಿ ಮತ್ತು ನಾಮಗಳ ಸಮುದ್ರ. ಇದು ಶಾಶ್ವತವಾದ ಬ್ರಹ್ಮದ ಉಚ್ಛ್ವಾಸದ ಘನವಾದ ಬಿಂದು. ಈ ಬಿಂದು ಸಾಗರದ ಅಲೆಗಳಲ್ಲಿ ಒಂದು. ಉಸಿರಾಟದ ಅಲೆಗಳನ್ನು ಹಿಡಿದು, ಗುರಿಯನ್ನು ತಿಳಿದು ಈಜಿದರೆ ವಿಶ್ವದ ಮೂಲವಾದ ಪರಸತ್ವದ ದರ್ಶನವಾಗುತ್ತದೆ.

ವಿವರಣೆ: ಇದೊಂದು ಅತ್ಯದ್ಭುತವಾದ ಕಲ್ಪನೆಯ ಚಿತ್ರಣ. ಈ ಪ್ರಪಂಚ ಒಂದು ವಿಶಾಲವಾದ ಸಮುದ್ರ. ಇದರಲ್ಲಿ ಇರುವುದು ಯಾವುವು? ಕೇವಲ ನಶ್ವರವಾದ ಆಕಾರ ಮತ್ತು ಹೆಸರುಗಳು. ಪ್ರಪಂಚದಲ್ಲಿ ಎಷ್ಟೊಂದು ಕೋಟಿ, ಕೋಟಿ ಜೀವಗಳು ಬಂದು ಹೋದವಲ್ಲ! ಅವು ಒಂದೂ ಉಳಿಯಲಿಲ್ಲ, ಉಳಿಯುವುದಿಲ್ಲ. ಅದೆಷ್ಟೇ ದೊಡ್ಡ ಸಾಧನೆ ಮಾಡಿದರೂ, ಅದೇನೆ ವಿಶೇಷತೆ ಇದ್ದರೂ ಯಾವ ಜೀವವೂ ಶಾಶ್ವತವಾಗಿ ಉಳಿಯಲಿಲ್ಲ. ಪ್ರತಿಯೊಂದು ಜೀವಕ್ಕೊಂದು ಹೆಸರು. ಎಲ್ಲೋ ಕೆಲವೊಂದು ಹೆಸರುಗಳನ್ನು ಬಿಟ್ಟರೆ ಯಾವ ಹೆಸರೂ ಯಾರ ನೆನಪಿನಲ್ಲೂ ಇಲ್ಲ. ಅಂದರೆ ಈ ವಿಶ್ವವೆಂಬ ಸಮುದ್ರದಲ್ಲಿ ಯಾವ ಆಕಾರವೂ, ಯಾವ ಹೆಸರೂ ಶಾಶ್ವತವಲ್ಲ, ನಶ್ವರ. ಪ್ರಪಂಚವೆಂಬುದು ಸಮುದ್ರವೆಂದರೆ ಅದು ಹುಟ್ಟಿದ್ದು ಹೇಗೆ? ಅದು ಶಾಶ್ವತವಾದ ಬ್ರಹ್ಮದ ಉಚ್ಛ್ವಾಸದ ಒಂದು ಬಿಂದು ಘನವಾದದ್ದು. ಬ್ರಹ್ಮದ ಒಂದು ಉಸಿರಿನ ಬಿಂದು ಘನವಾದಾಗ ಈ ವಿಶ್ವದ ಸೃಷ್ಟಿ. ಇಂಥ ಸಮುದ್ರದ ಅಲೆಗಳೆಂದರೆ ಅಸಂಖ್ಯವಾದ ಜೀವಗಳು. ಬಿಂದುವಿಗೆ ಎಂದರೆ ಒಂದು ಜೀವಕ್ಕೆ, ತಾನು ಬಂದದ್ದು ಎಲ್ಲಿಂದ, ತನ್ನ ಮೂಲ ಯಾವುದು ಎಂಬುದರ ಕಲ್ಪನೆ ಇದೆಯೆ? ಬಹಳಷ್ಟು ಜೀವಗಳಿಗೆ ತಮಗೊಂದು ಶಾಶ್ವತವಾದ ಮೂಲವಿದೆ ಎನ್ನುವುದೇ ಹೊಳೆದಿಲ್ಲ. ಹಾಗೆಯೇ ತಳಮಳಿಸುತ್ತ, ಹೊರಳುತ್ತ, ಆವಿಯಾಗಿ ಮರೆಯಾಗುವವರೆಗೆ ಇರುವುದೇ ಬದುಕಿನ ಗುರಿ ಎಂದು ಭಾವಿಸಿವೆ. ಆದರೆ ಯಾರೋ ಕೆಲವು ಸಾಧಕರು. ನಮಗೊಂದು ಮೂಲವಿರಬೇಕಲ್ಲ ಎಂದು ಚಿಂತಿಸಿ ಅದನ್ನು ಹುಡುಕಲು, ಪಡೆಯಲು ಪ್ರಯತ್ನಿಸುತ್ತಾರೆ. ಅದನ್ನು ಕಗ್ಗ ಹೇಳುತ್ತದೆ, ಪರಬ್ರಹ್ಮದ ಉಸಿರಾಟದ ಅಲೆಗಳಲ್ಲಿ ಒಂದು ಬಿಂದುವಾದ ಜೀವ, ತನಗೊಂದು ಮೂಲವಿದೆ ಎಂದು ನಿರ್ಧರಿಸಿಕೊಂಡು, ಆ ಗುರಿಯನ್ನು ಅರಿತು, ಏಕಮನಸ್ಸಿನಿಂದ ಗುರಿಯೆಡೆಗೆ ಈಜಿದಾಗ ಮಾತ್ರ ಅವರಿಗೆ ವಿಶ್ವಮೂಲದ ದರ್ಶನವಾಗುತ್ತದೆ. ಆಗ ಪರಮಶಾಂತಿ ದೊರಕುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಮೇ 24, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಪಂಚಮಿ ಗಂ. 27-01 ನಕ್ಷತ್ರ: ಪುನರ್ವಸು ಗಂ. 15-06 ಯೋಗ: ಗಂಡ ಗಂ. 17-19, ಕರಣ: ಬವ ಗಂ. 13-57, ವೃಷಭ ಮಾಸದ 09 ನೇ ದಿನ, ಮಳೆನಕ್ಷತ್ರ: ಕೃತ್ತಿಕಾ 4 ರಾಹುಕಾಲ : ಬೆಳಿಗ್ಗೆ 09-00 – 10-30 ಸೂರ್ಯೋದಯ : 06-07 ಸೂರ್ಯಾಸ್ತ : 06-48 ಮುಸ್ಲಿಂ ದಿನಾಂಕ : 04 ಜುಲ್ಹಾಯದ್, ಅದೃಷ್ಟ ಸಂಖ್ಯೆ : 8, 4

ಮೇಷ: ವ್ಯವಹಾರಿಕವಾಗಿ ಇರುವ ಹಳೆಯ ಬಾಕಿ ಮೊತ್ತ ಕೈ ಸೇರಲಿದೆ. ಸರ್ಕಾರಿ ನೌಕರರಿಗೆ ವರ್ಗಾವಣೆಯ ಯೋಗವಿದೆ. ಲೋಹದ ಕಾರ್ಖಾನೆಯವರಿಗೆ, ಚಿನ್ನಾಭರಣ ವ್ಯಾಪಾರಿಗಳು ಉದ್ಯೋಗದಲ್ಲಿ ಅಧಿಕ ಲಾಭವನ್ನು ಹೊಂದುವಿರಿ.

ವೃಷಭ: ಹೊಸ ಯೋಜನೆಗಳನ್ನು ಆರಂಭಿಸುವ ಮುನ್ನ ದೀರ್ಘಾಲೋಚನೆ ಮತ್ತು ಸಲಹೆ ಪಡೆದುಕೊಳ್ಳುವುದನ್ನು ಅವಶ್ಯ ಪಾಲಿಸಿ. ಪದವೀಧರರಿಗೆ ಗೌರವ ದೊರಕಲಿದೆ. ಸತ್ಕಾರ್ಯಗಳಿಂದ ಪುಣ್ಯಸಂಪಾದನೆಯಾಗಲಿದೆ.

ಮಿಥುನ: ಅಧಿಕ ತಿರುಗಾಟಗಳಿಂದ ದೇಹಾಯಾಸ ಇದ್ದರೂ ಆದಾಯಕ್ಕೆ ಕೊರತೆ ಇರುವುದಿಲ್ಲ. ತಾತ್ಕಾಲಿಕ ಹುದ್ದೆಯವರಿಗೆ ಕಾಯಂ ಆಗುವ ಸಾಧ್ಯತೆ ಇರುತ್ತದೆ. ಜಗದ್ಗುರು ಸೇವೆಯಿಂದ ಅಭೀಷ್ಟಸಿದ್ಧಿಯಾಗುವುದು.

ಕರ್ಕಾಟಕ: ಸಮಯೋಚಿತ ಕಾರ್ಯ ನಡೆಸುವಲ್ಲಿ ಆಲಸ್ಯ, ವಾದ-ವಿವಾದಗಳಲ್ಲಿ ಪರಕೀಯರೊಡನೆ ನಿಷ್ಕಾರಣ ವೈಷಮ್ಯ, ಸ್ವಕೀಯ ಪರಿವಾರದಲ್ಲಿ ಅಭಿಪ್ರಾಯ ಭೇದಗಳಿಂದ ತಾಪತ್ರಯಗಳಿಗೆ ಗುರಿಯಾಗುವಿರಿ.

ಸಿಂಹ: ಸಾಮಾಜಿಕ ಕ್ಷೇತ್ರಕ್ಕೆ ನೀಡಿರುವ ನಿಮ್ಮ ಕೊಡುಗೆಯು ಎಲ್ಲರ ಪ್ರಶಂಸೆಗೆ ಪಾತ್ರವಾಗುತ್ತದೆ. ಗುರು-ಹಿರಿಯರಅನುಗ್ರಹದಿಂದ ನೆಮ್ಮದಿ ಕಾಣುವಿರಿ. ಅವಿವಾಹಿತರಿಗೆ ಶುಭ ಫಲಗಳು ಲಭಿಸುವುದು.

ಕನ್ಯಾ: ಉದ್ವೇಗಕ್ಕೆ ಒಳಗಾಗದೆ ತಾಳ್ಮೆಯಿಂದ ವ್ಯವಹರಿಸಿದರೆ ನಿಮ್ಮ ಹಾದಿ ಸುಗಮವಾಗಿ ಸಾಗುತ್ತದೆ. ನೂತನ ಮನೆ ನಿರ್ಮಾಣ ಅಥವಾ ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕ ವಾತಾವರಣ ಸ್ನೇಹಿತರಿಂದ ಸಿಗಲಿದೆ.

ತುಲಾ: ಪ್ರಾರಂಭಿಸಿದ ಕಾರ್ಯಗಳು ಸೂಕ್ತ ಸಮಯದಲ್ಲಿ ಪೂರ್ಣಗೊಳ್ಳುವುದು. ವ್ಯವಹಾರದಲ್ಲಿ ಹೊರರಾಜ್ಯದ ಮುಖ್ಯವಾದ ವ್ಯಕ್ತಿಯೊಬ್ಬರ ಪರಿಚಯ ವ್ಯಾಪಾರ ಅಭಿವೃದ್ಧಿಯ ದಾರಿ ಹಿಡಿಯಲು ಕಾರಣವಾಗುವುದು.

ವೃಶ್ಚಿಕ: ಈ ದಿನ ವ್ಯವಹರಿಸುವಾಗ ಪ್ರದರ್ಶಿಸಿದ ಬುದ್ಧಿವಂತಿಕೆ ಲಾಭಕ್ಕೆ ಕಾರಣವಾಗುವುದು. ಸಮಸ್ಯೆಯ ಗೋಪುರವನ್ನು ಹೊತ್ತಿರುವ ನಿಮಗೆ ಪರಿಹಾರ ದೊರಕಲಿದೆ. ಆರೋಗ್ಯದ ಬಗ್ಗೆ ನಿಗಾವಹಿಸುವುದು ಅಗತ್ಯ.

ಧನು: ಗ್ರಹದ ಫಲಗಳು ಅನುಕೂಲಕರವಾಗಿ ತೋರುವುದರಿಂದ ವ್ಯಾಪಾರೋದ್ಯಮಗಳು ಮನಸ್ಸಿನಂತೆ ನಡೆದು ನಿರೀಕ್ಷೆಗೂ ಮಿಕ್ಕಿ ಲಾಭದಾಯಕವಾಗುವುದು. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವ ಸೂಚನೆ ಇದೆ.

ಮಕರ: ಆರ್ಥಿಕತೆ ಮತ್ತು ಆರೋಗ್ಯದ ವಿಷಯದಲ್ಲಿ ಹೆಚ್ಚಿನ ನೆಮ್ಮದಿಯನ್ನು ನೀವು ಈ ದಿನದಲ್ಲಿ ಅಪೇಕ್ಷಿಸಬಹುದು. ಈ ದಿನದಂದು ನಿಶ್ಚಿತ ಗುರಿ ಸಾಧಿಸಲು ಬಹಳ ಶ್ರಮಪಡಬೇಕಾಗಿಲ್ಲ. ವ್ಯವಹಾರ ಲಾಭ ಪಥದಲ್ಲಿರುವುದು.

ಕುಂಭ: ಅನವಶ್ಯಕ ಖರ್ಚುಗಳಿಗೆ ಕಡಿವಾಣ ಹಾಕುವುದನ್ನು ಅಭ್ಯಾಸ ಮಾಡಿಕೊಳ್ಳಿರಿ. ಸಂಜೆಯ ಸಮಯದಲ್ಲಿ ಹೊಟ್ಟೆಗೆ ಸಂಬಂಧಿಸಿದ ಅನಾರೋಗ್ಯ ಕಾಡಲಿದೆ. ಈ ದಿನವು ಹೊಸ ಪರಿವರ್ತನೆಯನ್ನು ನಿಮ್ಮ ಬಾಳಲ್ಲಿ ತರಲಿದೆ

ಮೀನ: ಚಿಂತೆಯು ನಿಮ್ಮನ್ನು ಕಾಡಲಿದೆ. ಶನೈಶ್ಚರನ ಸ್ತೋತ್ರ ಪಠಿಸುವುದರಿಂದ ಒಳಿತಾಗುತ್ತದೆ. ಕೌಟುಂಬಿಕ ವೈಮನಸ್ಯಗಳನ್ನು ಜಾಣ್ಮೆಯಿಂದ ಬಗೆಹರಿಸಿಕೊಳ್ಳಿ. ಮಾತಿನಂತೆ ನಡೆಯದ ಮಕ್ಕಳ ಮೇಲೆ ಬೇಸರವಾಗುತ್ತದೆ.

ಪದಬಂಧ 5328

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವುದು (4)
3.ಇದು ಪಕ್ಕದ ಗೃಹ (4)
5.ಪಾವತಿ ಪತ್ರ ಇಲ್ಲಿದೆ (3)
6.ಸೊಂಟದಿಂದ ಪ್ರಾರಂಭವಾದ ಕಂಪನ (3)
8.ಸಮನಾಗಿಲ್ಲದಿರುವುದು (3)
9.ಕೊನೆಗೆ ಯೋಗವಿದ್ದದ್ದಕ್ಕೇ ಈ ಅಗಲಿಕೆ! (3)
10.ಈತ ಗ್ರೀಸ್ ದೇಶದವನು (3)
12.ನೀರು ತುಂಬುವ ಕಲಶ (3)
14.ಬಹಳ ಒಜ್ಜೆಯನ್ನು ಹೀಗೆನ್ನಿ (4)
15.ಕನ್ನಡಿಗ ಧರಿಸಿದ ಚಾಳೀಸು (4)

ಮೇಲಿಂದ ಕೆಳಕ್ಕೆ

1.ಮಾನವಂತನನ್ನು ನೋಡಿದ್ದಕ್ಕೇ ಈ ಸಂಶಯ! (4)
2.ವಾಗ್ಮಿ ಅಥವಾ ಪ್ರತಿನಿಧಿ ಎಂದರೂ ಆದೀತು (3)
3.ಸಮಾಧಾನ ಹೀಗೆ ಬಂದಿದೆ (3)
4.ನಿರ್ನಾಮವಾಗುವುದು (4)
7.ಕಾಲಿಗೆ ಧರಿಸುವ ಅಭರಣ (3)
8.ನಂಜಿನಿಂದ ಕೂಡಿದ ಸಂಗತಿ (3)
9.ಕನ್ನಡಿಗ ಮಾಡಿಕೊಂಡ ಎಕ್ಸ್ ಚೇಂಜ್! (4)
11.ರುಚಿಕಟ್ಟಾದ ಅಡುಗೆ (4)
12.ಈತ ಕಬ್ಬಿಣದ ಕೆಲಸಗಾರ (3)
13.ಗಣಿತವನ್ನು ಬಲ್ಲವನು (3)

1			2	■	3			4
	■	■		■		■	■	
	■	■	5			■	■	
6		7	■	■	■	8		
■	■		■	■	■		■	■
9			■	■	■	10		11
	■	■	12		13	■	■	
	■	■		■		■	■	
14				■	15			

5327ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನವ 3.ಪ್ರವಾಸ
5.ರಸಿಕ 7.ಪರಿಹಾರ
9.ಕುಟೀರ 10.ಕಲ್ಯಾಣ
11.ರವಿವಾರ 13.ಮಕರ
15.ತವರ 16.ನೆಪ

ಮೇಲಿಂದ ಕೆಳಕ್ಕೆ:
2.ವರಾರ 3.ಪ್ರತೀಕ
4.ಸಲ್ಲಾಪ 6.ಸಿತಾರ
8.ರಮಣ 9.ಕುಬೇರ
10.ಕನಕ 12.ರಜತ
13.ಮಧುರ 14.ರವಾನೆ

ಸುಡೊಕು 5714

		5	6		2			
	3				4	6	8	
6				1			5	
	8	3		6				4
1				4				8
2			8		1	5	6	
					3			
4		2		9			3	1
	1		4		6			5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5713 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ತೀರ್ಪು ಕಾಯ್ದಿರಿಸಿದ ದೆಹಲಿ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: 'ಗ್ರಾಹಕರು ಗುರುತಿನ ಚೀಟಿ ತೋರಿಸದೆಯೇ ₹2,000 ಮುಖಬೆಲೆಯ ನೋಟುಗಳನ್ನು ಬೇರೆ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಿಸಿಕೊಳ್ಳಲು ಅವಕಾಶ ಕಲ್ಪಿಸಿರುವ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ಆದೇಶದ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್ ಮಂಗಳವಾರ ಈ ಕುರಿತ ತೀರ್ಪು ಕಾಯ್ದಿರಿಸಿದೆ.

ವಕೀಲ ಅಶ್ವಿನ್ ಕುಮಾರ್ ಉಪಾಧ್ಯಾಯ ಸಲ್ಲಿಸಿರುವ ಪಿಐಎಲ್‌ನ ವಿಚಾರಣೆ ಪೂರ್ಣಗೊಳಿಸಿರುವ ನ್ಯಾಯಪೀಠ, 'ನಾವು ಈ ಸಂಬಂಧ ಸೂಕ್ತ ತೀರ್ಪು ಪ್ರಕಟಿಸುತ್ತೇವೆ' ಎಂದು ಹೇಳಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಸವಿನೆನಪು



ದಿ|| ಶ್ರೀಮುನಿಶಾಮಪ್ಪ (ಮೊಟಪ್ಪ) ನಿಧನ: 15-08-1984

ದಿ|| ಶ್ರೀಮತಿ ಮುನಿಯಮ್ಮ ನಿಧನ: 24-05-2002

ನೀವು ನಮ್ಮನ್ನಗಲಿ ತಂದೆ–39 / ತಾಯಿ–21 ವರ್ಷಗಳು ಕಳೆದರೂ ನಿಮ್ಮ ಸೌಜನ್ಯ, ನಿಮ್ಮ ಸವಿನೆನಪು ನಮ್ಮ ಹೃದಯಲ್ಲಿ ಅಚ್ಚಳಿಯದೇ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ

ಶ್ರೀಮತಿ ಕಲ್ಪನ, ಶ್ರೀ ಎಂ. ಗೋಪಾಲ್ ಮತ್ತು ಮಕ್ಕಳು.

ಮಾಲೀಕರು, ಮೆ: ವೇಣು ಎಂಟರ್‌ಪ್ರೈಸಸ್, ಗುತ್ತಿಗೆದಾರರು, M.M. Towers, Complex & Farm, ಕುಟುಂಬ ವರ್ಗದವರು ಖಾಜಿಹೊಸಹಳ್ಳಿ, ಹೊಸಕೋಟೆ (ತಾ), ಬೆಂಗಳೂರು ಗ್ರಾಮಾಂತರ ಜಿಲ್ಲೆ.

₹2,000 ನೋಟು ಹಿಂಪಡೆಯುವಿಕೆ ಕುರಿತು ಎಸ್‌ಬಿಐ ವರದಿ

ನಗದು ಅವಲಂಬನೆಗೆ ಯುಪಿಐ ಮದ್ದು

• ವಿಜಯ್ ಜೋಷಿ

ಮುಖ್ಯಾಂಶಗಳು

- ಗ್ರಾಮೀಣ ಪ್ರದೇಶಗಳಲ್ಲೂ ತಗ್ಗುತ್ತಿರುವ ನಗದು ಬಳಕೆ
- ಪಾವತಿಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳುತ್ತಿರುವ ಯುಪಿಐ

ಬೆಂಗಳೂರು: ₹2,000 ಮುಖಬೆಲೆಯ ನೋಟುಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಚಲಾವಣೆಯಿಂದ ಹಿಂದಕ್ಕೆ ಪಡೆಯುತ್ತಿರುವುದು 'ದೊಡ್ಡ ಸಂಗತಿ ಆಗುವ ಸಾಧ್ಯತೆ ಇಲ್ಲ' ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಅಂದಾಜಿಸಿದೆ.

ಹೀಗೆ ಹೇಳುತ್ತಿರಲು ಪ್ರಮುಖ ಕಾರಣಗಳನ್ನು ಎಸ್‌ಬಿಐ ಅರ್ಥಶಾಸ್ತ್ರಜ್ಞರು ನೀಡಿದ್ದಾರೆ. ಮೊದಲನೆಯದು, ಏಕೀಕೃತ ಪಾವತಿ ವ್ಯವಸ್ಥೆಯು (ಯುಪಿಐ) ತಂದಿರುವ ಬದಲಾವಣೆ. ಎರಡನೆಯದು, ₹2,000 ಮುಖಬೆಲೆಯ ನೋಟುಗಳ ಚಲಾವಣೆಯನ್ನು ಆರ್‌ಬಿಐ ನಿಧಾನವಾಗಿ ತಗ್ಗಿಸಿರುವುದು.

ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ) ಮೂಲಕ ಆಗುವ ಪಾವತಿಗಳ ಮೌಲ್ಯ ಹಾಗೂ ಸಂಖ್ಯೆಯಲ್ಲಿ ಗ್ರಾಮೀಣ ಮತ್ತು ಅರೆಪಟ್ಟಣ ಪ್ರದೇಶಗಳ ಪಾಲು ಶೇ 60ರಷ್ಟಿದೆ. ನಗರಗಳಲ್ಲಿ ಮಾತ್ರ ಡಿಜಿಟಲ್ ಪಾವತಿಗಳು ಹೆಚ್ಚಿವೆ ಎಂಬ ನಂಬಿಕೆ ತಪ್ಪು. ಗ್ರಾಮೀಣ ಮತ್ತು ಅರೆಪಟ್ಟಣಗಳಿಗೆ ಸೇರಿದವರೂ ಡಿಜಿಟಲ್ ಪಾವತಿಗಳನ್ನು ಹೆಚ್ಚು ಬಳಸುತ್ತಿದ್ದಾರೆ, ನಗದು ವಹಿವಾಟಿನ ಮೇಲೆ ಕಡಿಮೆ ಅವಲಂಬಿತರಾಗಿದ್ದಾರೆ ಎಂಬುದನ್ನು ಇದು ಸೂಚಿಸುತ್ತಿದೆ ಎಂದು ಎಸ್‌ಬಿಐ ಹೇಳಿದೆ.

ಕಳೆದ ವರ್ಷ ನಡೆಸಿದ ಅಧ್ಯಯನದ ಪ್ರಕಾರ 2018ರ ನವೆಂಬರ್ ನಂತರದಲ್ಲಿ ಎಟಿಎಂಗಳಿಂದ ನಗದು ಹಿಂಪಡೆಯುವುದು ಕಡಿಮೆ ಆಗಿದೆ. ಅಲ್ಲದೆ, ಯುಪಿಐ ಮೂಲಕ ಮಾಡುವ ಪಾವತಿಯಲ್ಲಿ ₹100ರಷ್ಟು ಹೆಚ್ಚಳವಾದರೆ, ಡೆಬಿಟ್ ಕಾರ್ಡ್ ವಹಿವಾಟಿನಲ್ಲಿ ₹18ರಷ್ಟು ಕಡಿಮೆ ಆಗುತ್ತದೆ. ಪ್ರತಿ ವ್ಯಕ್ತಿ ವರ್ಷಕ್ಕೆ ಸರಾಸರಿ 8 ಬಾರಿ ಮಾತ್ರ ಎಟಿಎಂಗೆ ಭೇಟಿ ನೀಡುತ್ತಿದ್ದಾನೆ. ಈ ಮೊದಲು ವ್ಯಕ್ತಿಯೊಬ್ಬ ಎಟಿಎಂಗೆ ವರ್ಷಕ್ಕೆ ಸರಾಸರಿ 16 ಬಾರಿ ಭೇಟಿ ನೀಡುತ್ತಿದ್ದ ಎಂದು ವರದಿಯಲ್ಲಿ ವಿವರಿಸಲಾಗಿದೆ.

'ಡಿಜಿಟಲ್ ಪಾವತಿಗಳಲ್ಲಿ ದೇಶವು ಹೊಸ ಮೈಲಿಗಲ್ಲುಗಳನ್ನು ದಾಟಿದೆ. ಒಟ್ಟು ಜಿಡಿಪಿಯಲ್ಲಿ ಡಿಜಿಟಲ್ ಪಾವತಿಗಳ ಪ್ರಮಾಣ ಹೆಚ್ಚಾಗುತ್ತಿದೆ. ವ್ಯಕ್ತಿಯಿಂದ ವ್ಯಕ್ತಿಗೆ ಹಾಗೂ ವ್ಯಕ್ತಿಯಿಂದ ವ್ಯಾಪಾರಿಗೆ ಮಾಡುವ ಪಾವತಿಗಳಲ್ಲಿ ಯುಪಿಐ ಅತ್ಯಂತ ಜನಪ್ರಿಯವಾಗಿದೆ. ಒಟ್ಟು ಡಿಜಿಟಲ್ ಪಾವತಿಗಳಲ್ಲಿ ಶೇ 73ರಷ್ಟು ಯುಪಿಐ ಮೂಲಕ ಆಗುತ್ತಿವೆ. 2016–17ರಲ್ಲಿ ಯುಪಿಐ ಬಳಸಿ 1.8 ಕೋಟಿ ಪಾವತಿಗಳು ಆಗಿದ್ದವು. 2022–23ರಲ್ಲಿ ಅದು 8,375 ಕೋಟಿಗೆ ಏರಿಕೆ ಆಗಿದೆ' ಎಂದು ಎಸ್‌ಬಿಐ ವಿವರಿಸಿದೆ.

2016–17ರಲ್ಲಿ ಯುಪಿಐ ಮೂಲಕ ₹6,947 ಕೋಟಿ ಮೊತ್ತ ಪಾವತಿಸಲಾಗಿತ್ತು. 2022–23ರಲ್ಲಿ ಇದು ₹139 ಲಕ್ಷ ಕೋಟಿಗೆ ಹೆಚ್ಚಾಗಿದೆ. ಆದರೆ, 2022–23ರಲ್ಲಿ ಚಲಾವಣೆಯಲ್ಲಿನ ನಗದಿನ ಪ್ರಮಾಣವು ಜಿಡಿಪಿಯ ಶೇ 12.4ರಷ್ಟು ಮಾತ್ರ ಇದೆ. ಇದು 2015–16ರಲ್ಲಿಯೂ ಇಷ್ಟೇ ಇತ್ತು. ಚಲಾವಣೆಯಲ್ಲಿ ಇರುವ ನಗದಿನ ಹೆಚ್ಚಳದ ಪ್ರಮಾಣವು ತಗ್ಗಿದೆ ಎಂದು ಎಸ್‌ಬಿಐ ಹೇಳಿದೆ.

₹2,000 ಮುಖಬೆಲೆಯ ನೋಟು ಅರ್ಥವ್ಯವಸ್ಥೆಯಲ್ಲಿ ಹೊಂದಿರುವ ಪಾಲು ನಿಧಾನವಾಗಿ ಕಡಿಮೆಯಾಗುವಂತೆ ಆರ್‌ಬಿಐ ನೋಡಿಕೊಂಡಿದೆ. ಇದು ಈ ನೋಟನ್ನು ಚಲಾವಣೆಯಿಂದ ಸಂಪೂರ್ಣವಾಗಿ ಹೊರತೆಗೆಯುವುದಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ಎಸ್‌ಬಿಐ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ನೋಟು ಬದಲಾವಣೆ ಶುರು

ನವದೆಹಲಿ (ಪಿಟಿಐ): ₹2,000 ಮುಖಬೆಲೆಯ ನೋಟುಗಳ ವಿನಿಮಯಕ್ಕೆ ಬ್ಯಾಂಕ್‌ಗಳು ಮಂಗಳವಾರದಿಂದ ಅವಕಾಶ ಕಲ್ಪಿಸಿದ್ದು, ಸಾರ್ವಜನಿಕರಿಂದ ಧಾವಂತ ಕಂಡುಬಂದಿಲ್ಲ. ಕೆಲವು ಶಾಖೆಗಳ ಮುಂದೆ ಮಾತ್ರ ಸಣ್ಣ ಪ್ರಮಾಣದ ಸರದಿ ಸಾಲು ಕಂಡುಬಂದವು.

ಪ್ರಮುಖ ನಗರಗಳಲ್ಲಿ ಖಾಸಗಿ ಬ್ಯಾಂಕ್‌ಗಳಲ್ಲಿ ವಹಿವಾಟು ಎಂದಿನಂತೆ ಇತ್ತು. 'ನೋಟು ಬದಲಿಸಿಕೊಳ್ಳಲು ಅಥವಾ ಜಮಾ ಮಾಡಲು ಸೆಪ್ಟೆಂಬರ್ 30ರವರೆಗೆ ಅವಕಾಶ ಇರುವ ಕಾರಣ, ಜನರು ಹೆಚ್ಚು ಆತಂಕಕ್ಕೆ ಒಳಗಾದಂತಿಲ್ಲ' ಎಂದು ಅಧಿಕಾರಿಯೊಬ್ಬರು ಹೇಳಿದರು.

ನೋಟು ಬದಲಿಸಿಕೊಳ್ಳಲು ಬಂದವರಿಂದ ಕೆಲವು ಬ್ಯಾಂಕ್‌ಗಳು ಆಧಾರ್, ಪ್ಯಾನ್‌ನಂತಹ ಗುರುತಿನ ಚೀಟಿಯನ್ನು ಪಡೆದಿವೆ. ಕೆಲವೆಡೆ ಬ್ಯಾಂಕ್‌ಗಳು ನೋಟುಗಳನ್ನು ಬದಲಿಸಿ ಕೊಡುತ್ತಿಲ್ಲ, ಬದಲಿಗೆ ಜಮಾ ಮಾಡುವಂತೆ ಹೇಳುತ್ತಿವೆ ಎಂದು ಗ್ರಾಹಕರು ದೂರಿದ್ದಾರೆ.

ಕೆಲವೆಡೆ ಬೇಕು ಗುರುತಿನ ಚೀಟಿ: ನೋಟು ಬದಲಿಸಿಕೊಳ್ಳಲು ಬರುವವರಿಂದ ಯಾವುದೇ ಗುರುತಿನ ಚೀಟಿ ಕೇಳುವುದಿಲ್ಲ ಎಂದು ಎಸ್‌ಬಿಐ ಹೇಳಿದೆ. ಆದರೆ, ಕೆಲವು ಬ್ಯಾಂಕ್‌ಗಳು ಗ್ರಾಹಕರಿಂದ ಗುರುತಿನ ಚೀಟಿ ಅಥವಾ ಸಂಖ್ಯೆಯನ್ನು ಕೇಳುತ್ತಿವೆ.

'ಜಮಾ ಮಾಡಲು ಬರುವವರು ತಮ್ಮ ಖಾತೆಗಳಿಗೆ ಎಷ್ಟು ಮೊತ್ತ ಬೇಕಿದ್ದರೂ ಜಮಾ ಮಾಡಬಹುದು. ಆದರೆ, ನೋಟು ವಿನಿಮಯಕ್ಕೆ ಬರುವವರಿಂದ ಅವರ ಮೊಬೈಲ್ ದೂರವಾಣಿ ಸಂಖ್ಯೆ, ಆಧಾರ್ ಸಂಖ್ಯೆ ಪಡೆದುಕೊಳ್ಳುತ್ತಿದ್ದೇವೆ' ಎಂದು ಬ್ಯಾಂಕ್ ಅಧಿಕಾರಿಯೊಬ್ಬರು ತಿಳಿಸಿದರು. ನೋಟುಗಳ ಬದಲಾವಣೆಗೆ ಮೈಸೂರಿನಲ್ಲಿ ಭಾರಿ ಪ್ರತಿಕ್ರಿಯೆಯೇನೂ ವ್ಯಕ್ತವಾಗಿಲ್ಲ. ಹಿಂದೆ ನೋಟು ಅಮಾನ್ಯವಾದಾಗ ಸೃಷ್ಟಿಯಾಗಿದ್ದ ಜನಜಂಗುಳಿಯ ಪರಿಸ್ಥಿತಿ ಈ ಬಾರಿಯೂ ಆಗಬಹುದು ಎಂದು ಕೆಲವು ಬ್ಯಾಂಕ್ ಸಿಬ್ಬಂದಿ ನಿರೀಕ್ಷಿಸಿದ್ದರು. ಆದರೆ ಇನ್ನಿತರೆ ವ್ಯವಹಾರಗಳಿಗಾಗಿ ಬಂದವರೇ ಹೆಚ್ಚಿದ್ದರು.

ಐ.ಟಿ.: ಕೆಲಸ ಕಳೆದುಕೊಂಡವರ ಸಂಖ್ಯೆ 60 ಸಾವಿರ

ನವದೆಹಲಿ (ರಾಯಿಟರ್ಸ್): ದೇಶದ ಐ.ಟಿ. ಉದ್ಯಮದಲ್ಲಿ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಸರಿಸುಮಾರು 60 ಸಾವಿರ ಮಂದಿ ಹೊರಗುತ್ತಿಗೆ ನೌಕರರು ಕೆಲಸ ಕಳೆದುಕೊಂಡಿದ್ದಾರೆ ಎಂದು ನೇಮಕಾತಿ ಏಜೆನ್ಸಿಗಳ ಒಕ್ಕೂಟವಾದ ಇಂಡಿಯನ್ ಸ್ಟಾಫಿಂಗ್ ಫೆಡರೇಷನ್ (ಐಎಸ್‌ಎಫ್) ಹೇಳಿದೆ.

ಈ ಒಕ್ಕೂಟವು 120ಕ್ಕೂ ಹೆಚ್ಚಿನ ಏಜೆನ್ಸಿಗಳನ್ನು ಒಳಗೊಂಡಿದೆ. ಕಂಪನಿಗಳು ಗುತ್ತಿಗೆ ಏಜೆನ್ಸಿಗಳ ಮೂಲಕ ನೇಮಕ ಮಾಡಿಕೊಳ್ಳುವ ನೌಕರರ ಪ್ರಮಾಣವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 7.7ರಷ್ಟು ಕಡಿಮೆ ಆಗಿದೆ. 'ಐ.ಟಿ. ವಲಯದಲ್ಲಿ ತಾತ್ಕಾಲಿಕ ಉದ್ಯೋಗಿಗಳ ನೇಮಕಾತಿಯು ಕಡಿಮೆ ಆಗಿರುವುದು ಜಾಗತಿಕ ಮಟ್ಟದಲ್ಲಿ ಐ.ಟಿ. ವಲಯದಲ್ಲಿ ನೇಮಕಾತಿಗಳು ಕಡಿಮೆ ಆಗುತ್ತಿರುವುದನ್ನು ಪ್ರತಿಫಲಿಸುತ್ತಿದೆ' ಎಂದು ಒಕ್ಕೂಟದ ಅಧ್ಯಕ್ಷ ಲೋಹಿತ್ ಭಾಟಿಯಾ ಹೇಳಿದ್ದಾರೆ.

ಆದರೆ, ಮಾರುಕಟ್ಟೆಯಲ್ಲಿ ಬೇಡಿಕೆ ಚೆನ್ನಾಗಿ ಇರುವ ಕಾರಣ ತಯಾರಿಕೆ, ಸರಕು ಸಾಗಣೆ ಮತ್ತು ರಿಟೇಲ್ ವಲಯಗಳಲ್ಲಿ ನೇಮಕಾತಿಗಳು ಕಡಿಮೆ ಆಗಿಲ್ಲ ಎಂದು ಅವರು ಹೇಳಿದ್ದಾರೆ.

ಕೋವಿಡ್ ಸಾಂಕ್ರಾಮಿಕ ತೀವ್ರವಾಗಿದ್ದ ಹೊತ್ತಿನಲ್ಲಿ ಐ.ಟಿ. ಸೇವಾ ವಲಯವು ಇತರ ಉದ್ದಿಮೆಗಳಿಗೆ ಆನ್‌ಲೈನ್ ಮೂಲಕ ಉತ್ಪನ್ನಗಳ ಮಾರಾಟ, ಮನೆಯಿಂದಲೇ ಕೆಲಸ ಮಾಡುವುದನ್ನು ಸಾಧ್ಯವಾಗಿಸಲು ನೆರವಾಯಿತು. ಆದರೆ, ಸಾಂಕ್ರಾಮಿಕದ ಪ್ರಭಾವ ಕಡಿಮೆ ಆದ ನಂತರದಲ್ಲಿ ನೌಕರರು ಕಚೇರಿಗಳಿಂದ ಕೆಲಸ ಮಾಡಲು ಆರಂಭಿಸಿದ್ದಾರೆ. ಐ.ಟಿ. ಸೇವೆಗಳಿಗೆ ಬೇಡಿಕೆ ಕಡಿಮೆಯಾಗುವಲ್ಲಿ ಇದೂ ಒಂದು ಕಾರಣವಾಗಿದೆ.

ಹಣದುಬ್ಬರ ಏರಿಕೆ, ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಮತ್ತು ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮಗಳಿಂದಾಗಿ ಭಾರತದ ಐ.ಟಿ. ಸೇವಾ ವಲಯವು ಸಾಂಕ್ರಾಮಿಕದ ಅವಧಿಯಲ್ಲಿ ಕಂಡಿದ್ದ ತೀವ್ರಗತಿಯ ಬೆಳವಣಿಗೆಯು ಕೊನೆಗೊಳ್ಳಲಿದೆ ಎಂದು ಜೆ.ಪಿ. ಮಾರ್ಗನ್ ಸಂಸ್ಥೆ ಅಂದಾಜಿಸಿದೆ.

ಸಾಫ್ಟ್‌ವೇರ್ ಉದ್ಯಮದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ನೌಕರರನ್ನು ನೇಮಕ ಮಾಡಿಕೊಳ್ಳುವ ಪ್ರವೃತ್ತಿಯು ಮುಂದಿನ ಕೆಲವು ತ್ರೈಮಾಸಿಕಗಳಲ್ಲಿಯೂ ಕಡಿಮೆ ಮಟ್ಟದಲ್ಲಿರಬಹುದು ಎಂದು ಭಾಟಿಯಾ ಅವರು ಅಂದಾಜಿಸಿದ್ದಾರೆ.

ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣ ಪ್ರಕರಣದಲ್ಲಿ ಎಎಪಿ ನಾಯಕ ಮನೀಶ್ ಸಿಸೋಡಿಯಾ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ದೆಹಲಿಯ ನ್ಯಾಯಾಲಯವು ಮೇ 8ರವರೆಗೆ ವಿಸ್ತರಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18314
ಇಂದಿನ ಅಂತ್ಯ	18348
▲	33
ದಿನದ ಗರಿಷ್ಠ	18419

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಬೆಂಗಳೂರು

● **ಪ್ರಶ್ನೆ:** ನಾನು ಇತ್ತೀಚೆಗೆ ಉದ್ಯೋಗದಿಂದ ನಿವೃತ್ತಿ ಹೊಂದಿದ್ದೇನೆ. ನಿವೃತ್ತಿಯ ಸಂದರ್ಭದಲ್ಲಿ ಸಿಕ್ಕಿದ ಮೊತ್ತದಲ್ಲಿ ಬೆಂಗಳೂರಿನಲ್ಲೊಂದು ನಿವೇಶನ ಕೊಳ್ಳುವ ಯೋಚನೆ ಮಾಡಿದ್ದೇನೆ. ಈ ನಿವೇಶನದಲ್ಲಿ ಮುಂದೆ ಮನೆ ಕಟ್ಟಿಸುವ ಯೋಚನೆ ಇದೆ. ನಿವೇಶನದ ಮಾರುಕಟ್ಟೆ ಬೆಲೆ ಸುಮಾರು ₹60 ಲಕ್ಷ ಆಗಬಹುದು. ಆದರೆ ಸರ್ಕಾರಿ ಬೆಲೆ ಸುಮಾರು ₹45 ಲಕ್ಷ. ಖರೀದಿಯ ಬಗ್ಗೆ ಇನ್ನೂ ಮಾತುಕತೆ ನಡೆಯುತ್ತಿದೆ. ಈ ರೀತಿ ಜಮೀನು ಖರೀದಿಸುವಾಗ ಖರೀದಿದಾರರೇ ಶೇ 1ರಷ್ಟು ತೆರಿಗೆ ಪಾವತಿಸಬೇಕೆಂದು ಕೇಳಿ ತಿಳಿದುಕೊಂಡೆ. ಹಾಗಿದ್ದರೆ ಇದು ನನಗೆ ಹೆಚ್ಚುವರಿ ಮೊತ್ತವೇ? ಅಥವಾ ನಿವೃತ್ತಿ ಸಂದರ್ಭದಲ್ಲಿ ಸಿಗುವ ಆದಾಯಕ್ಕೆ ಬರುವ ಹೆಚ್ಚುವರಿ ತೆರಿಗೆ ಪಾವತಿಗೆ ಇದನ್ನು ವಜಾ ಮಾಡಿಕೊಳ್ಳುವ ಅವಕಾಶ ಇದೆಯೇ? ತೆರಿಗೆ ಉಳಿಸಲು ಕಡಿಮೆ ಮೌಲ್ಯಕ್ಕೆ ಆಸ್ತಿ ಖರೀದಿ ದಾಖಲಿಸುವುದು ಸೂಕ್ತವೇ?

ಉತ್ತರ: ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 194 ಐಎ ಪ್ರಕಾರ, ₹50 ಲಕ್ಷಕ್ಕೂ ಹೆಚ್ಚಿನ ಮೌಲ್ಯದ ಯಾವುದೇ ಸ್ಥಿರಾಸ್ತಿ ಖರೀದಿ ಮಾಡುವ ಸಂದರ್ಭದಲ್ಲಿ ಖರೀದಿದಾರರು ಆಸ್ತಿಯ ಮೌಲ್ಯದ ಶೇ 1ರಷ್ಟು ಮೊತ್ತವನ್ನು ತೆರಿಗೆಯ ರೂಪದಲ್ಲಿ ಕಡಿತ ಮಾಡಿ ಯಾರು ಮಾರಾಟ ಮಾಡುತ್ತಾರೋ ಅಂತಹ ವ್ಯಕ್ತಿಗಳ ಪ್ಯಾನ್ ಖಾತೆಯಲ್ಲಿ ಜಮಾ ಮಾಡಬೇಕು. ಇದರ ಮೂಲ ಉದ್ದೇಶ ಟಿಡಿಎಸ್ ಮಾಡಿಸುವ ಮೂಲಕ ಆದಾಯ ತೆರಿಗೆ ಇಲಾಖೆಗೆ ಪೂರ್ವ ಮಾಹಿತಿ ಒದಗಿಸಿ ದೊಡ್ಡ ಮೊತ್ತದ ಆಸ್ತಿ ವ್ಯವಹಾರದಲ್ಲಾಗುವ ತೆರಿಗೆ ವಂಚನೆಯನ್ನು ತಪ್ಪಿಸುವುದು. ಹೀಗಾಗಿ ತೆರಿಗೆ ಕಡಿತಗೊಳಿಸುವ ಜವಾಬ್ದಾರಿಯನ್ನು ಆಸ್ತಿ ಖರೀದಿ ಮಾಡುವ ವ್ಯಕ್ತಿಯ ಮೇಲೆ ಹೊರಿಸಲಾಗಿದೆ. ಒಂದು ವೇಳೆ ತೆರಿಗೆ ಕಡಿತಗೊಳಿಸದೆ ಆಗುವ ಲೋಪಗಳಿಗೆ ಖರೀದಿದಾರರೇ ಜವಾಬ್ದಾರರಾಗಿರುತ್ತಾರೆ.

ನೀವು ಪ್ರಶ್ನೆಯಲ್ಲಿ ಕೇಳಿರುವಂತೆ, ಮಾರಾಟಮಾಡುವವರ ಹೆಸರಲ್ಲಿ ತೆರಿಗೆ ಕಡಿತಗೊಳಿಸಿ ಅವರ ಪ್ಯಾನ್ ಖಾತೆಯಡಿ ಪಾವತಿಸುವುದು ನಿಮ್ಮ ಜವಾಬ್ದಾರಿ. ನೀವು ಅದನ್ನು ನಿಮ್ಮ ಇತರ ತೆರಿಗೆ ಪಾವತಿಯೊಡನೆ ಬಳಸಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ನೀವು ತೆರಿಗೆ ಪಾವತಿಸಿದ ನಂತರ ಫಾರಂ 16ಬಿ ಯನ್ನು ಮಾರಾಟಗಾರರಿಗೆ ನೀಡಬೇಕು ಹಾಗೂ ಫಾರಂ 26ಕ್ಯುಬಿ ಅನ್ನು ತೆರಿಗೆ ಕಡಿತಗೊಳಿದಾಗ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಬೇಕು. ಇದಕ್ಕೆ ನೀವು ಅಗತ್ಯವಾಗಿ ಪರಿಣತರ ನೆರವು ಪಡೆದುಕೊಳ್ಳಿ. ನೀವು ಕಡಿತಗೊಳಿಸುವ ತೆರಿಗೆ ಮೊತ್ತ ಯಾರಿಗೂ ನಷ್ಟವಲ್ಲ. ಮಾರಾಟಗಾರರಿಗೆ ಸಂದಾಯ ಮಾಡುವ ಒಟ್ಟು ಮೊತ್ತದಿಂದ ಇದನ್ನು ಕಡಿಮೆ ಮಾಡಬಹುದಾಗಿದೆ ಹಾಗೂ ಅವರು ಪಾವತಿಸುವ ತೆರಿಗೆಗೆ ವಜಾ ಮಾಡಿಕೊಳ್ಳುವ ಅವಕಾಶ ಅವರಿಗಿದೆ.

ತೆರಿಗೆ ಕಡಿತ ಕಡಿಮೆ ಮಾಡುವ ಉದ್ದೇಶದಿಂದ ಆಸ್ತಿ ಮೌಲ್ಯ ಕಡಿಮೆ ಮೌಲ್ಯಕ್ಕೆ ದಾಖಲಿಸುವ ವಿಚಾರವಾಗಿ ಕೇಳಿದ್ದೀರಿ. ಒಂದು ವೇಳೆ ಆಸ್ತಿಯನ್ನು ಸರ್ಕಾರ ನಿಗದಿಪಡಿಸಿರುವ ಮೊತ್ತಕ್ಕಿಂತ ಕಡಿಮೆ ಮೊತ್ತಕ್ಕೆ ದಾಖಲಿಸಿಕೊಂಡರೂ ತೆರಿಗೆಯನ್ನು ಸರ್ಕಾರಿ ಮೌಲ್ಯ ಅಥವಾ ನಿಜವಾಗಿ ಪಾವತಿಸಿದ ಮೌಲ್ಯ ಇವೆರಡರಲ್ಲಿ ಯಾವುದು ಅಧಿಕವೋ ಅದರ ಮೇಲೆ ಶೇ 1ರ ದರದಲ್ಲಿ ಪಾವತಿಸಬೇಕು. ಇನ್ನೂ ಒಂದು ಅಂಶ, ಮುಂದೆ ನೀವು ಆಸ್ತಿ ಮಾರಾಟ ಮಾಡುವ ಸಂದರ್ಭ ಬಂದರೆ ದಾಖಲೆಯಲ್ಲಿ ಖರೀದಿ ಮೌಲ್ಯ ಕಡಿಮೆ ನಮೂದಾಗಿದ್ದರೆ, ಅಸಹಜ ಲಾಭದ ಮೇಲೆ ಅನಗತ್ಯ ತೆರಿಗೆ ಕಟ್ಟಬೇಕಾಗಿ ಬರಬಹುದು. ಈ ಬಗ್ಗೆ ಗಮನವಿರಲಿ. ಇದರ ಕುರಿತು ನಿಮಗೆ ನಿವೇಶನ ಮಾರಾಟ ಮಾಡುವವರಿಗೆ ಅಗತ್ಯವಿದ್ದಲ್ಲಿ ಮನವರಿಕೆ ಮಾಡಿಕೊಡಿ.

ಧರ್ಮೇಂದ್ರ ಕುಮಾರ್, ಮಂಗಳೂರು

● **ಪ್ರಶ್ನೆ:** ನಾನು ನನ್ನ ಹೆಸರಲ್ಲಿದ್ದ ಒಂದು ನಿವೇಶನವನ್ನು ಮಾರಾಟ ಮಾಡುವ ಬಗ್ಗೆ ಖರೀದಿದಾರರೊಂದಿಗೆ ಇತ್ತೀಚೆಗೆ ಕರಾರು ಮಾಡಿಕೊಂಡಿದ್ದೆ. ನಂತರ, ನಿವೇಶನ ಕೊಳ್ಳುವವರಿಗೆ ಹೆಚ್ಚು ಸೂಕ್ತವೂ ಕಡಿಮೆ ಮೊತ್ತಕ್ಕೂ ಸಿಗುವ ಬೇರೆ ಆಸ್ತಿ ಸಿಕ್ಕ ಕಾರಣ ನನ್ನಿಂದ ಖರೀದಿ ಮಾಡುವ ಒಪ್ಪಂದ ಮುರಿದುಬಿತ್ತು. ನಾನು ಕರಾರು ಮಾಡುವ ಸಂದರ್ಭದಲ್ಲಿ ಮುಂಗಡ ಮೊತ್ತವಾಗಿ ಸುಮಾರು ₹5 ಲಕ್ಷ ಪಡೆದಿದ್ದೆ. ಕರಾರಿನಂತೆ, ಖರೀದಿದಾರರ ಕಡೆಯಿಂದ ಒಪ್ಪಂದ ಮುರಿದುಬಿದ್ದರೆ, ಈ ಮೊತ್ತ ವಾಪಸ್ ನೀಡಬೇಕಾಗಿಲ್ಲ ಎಂದು ಬರೆಯಿಸಿಕೊಂಡಿದ್ದೆವು. ಈಗ ನನ್ನ ಪ್ರಶ್ನೆ ಏನೆಂದರೆ, ಈ ಮೊತ್ತಕ್ಕೆ ಶೇ 20ರ ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ಬರುತ್ತದೆಯೇ? ಇಲ್ಲಿ ಬರುವ ತೆರಿಗೆ ಮೊತ್ತಕ್ಕೆ ಯಾವುದಾದರೂ ವಿನಾಯಿತಿ ಇದೆಯೇ? ನನ್ನ ಜಮೀನು ಸುಮಾರು 10 ವರ್ಷಗಳಿಂದ ನನ್ನ ಒಡೆತನದಲ್ಲಿದೆ. ತೆರಿಗೆ ಅನ್ವಯವಾಗುವ ಬಗ್ಗೆ ಮಾಹಿತಿ ಕೊಡಿ.

ಉತ್ತರ: ಯಾವುದೇ ಮೊತ್ತ ತೆರಿಗೆಗೆ ಒಳಪಡಲು ಮೊದಲನೆಯದಾಗಿ ಅದು ಆದಾಯವಾಗಿರಬೇಕು ಹಾಗೂ ಅಂತಹ ಆದಾಯ ಒಂದು ನಿರ್ದಿಷ್ಟ ವರ್ಗದೊಳಗೆ (ಅಂದರೆ, ವೇತನ, ಕಟ್ಟಡ ಬಾಡಿಗೆ, ವ್ಯಾಪಾರ-ವ್ಯವಹಾರ, ಆಸ್ತಿ ಮಾರಾಟ ಇತ್ಯಾದಿ) ಬಂದಿರಬೇಕು. ಈ ಯಾವುದೇ ನಿರ್ದಿಷ್ಟ ವರ್ಗದೊಳಗೆ ಬರದಿದ್ದ ಸಂದರ್ಭದಲ್ಲಿ ಅಂತಹ ಆದಾಯ 'ಇತರ ಆದಾಯ' ವರ್ಗಕ್ಕೆ ಒಳಪಡುತ್ತದೆಯೇ ಎಂಬುದನ್ನೂ ನೋಡಬೇಕಾಗುತ್ತದೆ.

ಆದಾಯ ತೆರಿಗೆ ಕಾನೂನಿನ ಅಡಿ ಯಾವುದೇ ಬಂಡವಾಳ ಆಸ್ತಿ ಮಾರಾಟವಾದಾಗ, ಅಂದರೆ ವ್ಯಕ್ತಿಯೊಬ್ಬನ ಹಕ್ಕು ಆ ಆಸ್ತಿಗೆ ಸಂಬಂಧಿಸಿದಂತೆ ವರ್ಗಾವಣೆಗೊಂಡಾಗ ಮಾತ್ರವೇ, ಆ ಆಸ್ತಿಯ ಮಾರಾಟವು ಲಾಭ-ನಷ್ಟದ ಲೆಕ್ಕಾಚಾರದ ಪರಿಧಿಗೆ ಬರುತ್ತದೆ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 56(2)(ix) ಪ್ರಕಾರ, ಖರೀದಿದಾರರು ಒಪ್ಪಂದದಲ್ಲಿನ ಷರತ್ತುಗಳನ್ನು ಪಾಲಿಸದೆ ಬಂಡವಾಳ ಆಸ್ತಿಯ ವರ್ಗಾವಣೆಗಾಗಿ ಮಾತುಕತೆಯ ಸಂದರ್ಭದಲ್ಲಿ ಮುಂಗಡವಾಗಿ ಸ್ವೀಕರಿಸಿದ ಯಾವುದೇ ಮೊತ್ತವನ್ನು ಆಸ್ತಿ ಮಾರಾಟಗಾರರು ಮುಟ್ಟುಗೋಲು ಹಾಕಿದರೆ ಅಂತಹ ಮೊತ್ತ ಇತರ ಮೂಲಗಳಿಂದ ಬರುವ ಆದಾಯದ ಅಡಿಯಲ್ಲಿ ತೆರಿಗೆಗೆ ಒಳಪಡುತ್ತದೆ ಎಂಬ ಉಲ್ಲೇಖವಿದೆ.

ನೀವು ಪ್ರಶ್ನೆಯಲ್ಲಿ ತಿಳಿಸಿರುವಂತೆ, ನಿವೇಶನ ಮಾರಾಟ ಮಾಡುವ ಉದ್ದೇಶದಿಂದ ಒಂದಷ್ಟು ಮೊತ್ತವನ್ನು ಮುಂಗಡವಾಗಿ ಪಡೆದಿದ್ದೀರಿ. ಒಂದುವೇಳೆ ಕರಾರು ಮುರಿದುಬಿದ್ದರೆ ಈ ಮೊತ್ತ ಹಿಂದಿರುಗಿಸುವ ಅಗತ್ಯವಿಲ್ಲ ಎಂಬ ಷರತ್ತಿನಡಿ ಇದನ್ನು ಪಡೆದಿರುತ್ತೀರಿ ಹಾಗೂ ಅದರಂತೆ ಆ ಮೊತ್ತ ನಿಮ್ಮಲ್ಲೇ ಉಳಿಸಿಕೊಂಡಿದ್ದೀರಿ. ಮೇಲೆ ತಿಳಿಸಿರುವಂತೆ, ಈ ಮೊತ್ತವು ಆಸ್ತಿ ಸಂಬಂಧ ಗಳಿಸಿರುವ ಮೊತ್ತವಾದರೂ ಜಮೀನು ಇನ್ನೂ ವರ್ಗಾವಣೆ ಆಗದ ಕಾರಣ ಅಂತಹ ಮೊತ್ತ ಬಂಡವಾಳ ಆಸ್ತಿ ಮಾರಾಟದಡಿ ವರ್ಗೀಕರಣ ಆಗುವುದಿಲ್ಲ. ಹೀಗಾಗಿ ಶೇ 20ರ ತೆರಿಗೆ ದರ ಅನ್ವಯವಾಗುವ ಸನ್ನಿವೇಶ ಬರುವುದಿಲ್ಲ. ಬದಲಾಗಿ, ಇದು 'ಇತರ ಆದಾಯ'ಗಳ ವರ್ಗದ ಅಡಿ ತೆರಿಗೆಗೆ ಒಳಪಡುತ್ತದೆ. ನಿಮ್ಮ ಸಾಮಾನ್ಯ ತೆರಿಗೆ ದರವೇ ಇದಕ್ಕೆ ಅನ್ವಯವಾಗುತ್ತದೆ. ಇಲ್ಲಿ ಗಳಿಸುವ ಆದಾಯಕ್ಕೆ ನಿರ್ದಿಷ್ಟ ಕಡಿತಗಳಿರುವುದಿಲ್ಲ. ಸೆಕ್ಷನ್ 80ಸಿ ಅಡಿ ಎಲ್ಲರಿಗೂ ಸಿಗುವ ವಿನಾಯಿತಿಗಳು ಸಿಗುತ್ತವೆ. ಆದಕ್ಕೂ ಮೊದಲು ನಿಮಗೆ ಹೊಸ ಅಥವಾ ಹಳೆಯ ತೆರಿಗೆ ಪದ್ಧತಿಯಲ್ಲಿ ಯಾವುದು ಸೂಕ್ತ ಎನ್ನುವುದನ್ನೂ ಪರಾಮರ್ಶಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001 ಇ–ಮೇಲ್: businessdesk@prajavani.co.in

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹800-1,000
ಮಧ್ಯಮ	₹500-800
ಸಣ್ಣ	₹300-500

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615(1617)
ಸೋಯಾ (ರಿಫೈನ್ಡ್)	₹915(912)
ಸೂರ್ಯಕಾಂತಿ (ರಿಫೈನ್ಡ್)	₹940(945)
ಪಾಮೋಲಿನ್	₹882(885)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹530

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು -	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40500
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಪುತ್ತೂರು	
ಕೋಕ	11000-25000
ಹೊಸತು	33500-40500
ಸಾಗರ	
ಬಿಳಿಗೋಟು	28532-32044
ಚಾಲಿ	35699-36509
ಕೋಕ	28989-34399
ಕೆಂಪುಗೋಟು	30899-34299
ರಾಶಿ	42050-48419
ಸಿಪ್ಪೆಗೋಟು	20271-21199
ಶಿವಮೊಗ್ಗ	
ಬೆಟ್ಟೆ	46019-54100
ಗೊರಬಲು	18000-35069
ರಾಶಿ	34509-48599
ಸಿದ್ದಾಪುರ	
ಬಿಳಿಗೋಟು	28119-32899
ಚಾಲಿ	35299-37709
ಕೋಕ	27119-32809
ಹಳೆಚಾಲಿ	35665-37499
ಕೆಂಪುಗೋಟು	29112-32289
ರಾಶಿ	42829-46799
ತಟ್ಟಿಬೆಟ್ಟೆ	37699-44899
ಶಿರಸಿ	
ಬೆಟ್ಟೆ	33801-45999
ಬಿಳಿಗೋಟು	23609-33899
ಚಾಲಿ	34899-38209
ಕೆಂಪುಗೋಟು	30699-35682
ರಾಶಿ	43689-46699
ಯಲ್ಲಾಪುರ	
ಆಪಿ	57165-57165
ಬಿಳಿಗೋಟು	24699-34499
ಚಾಲಿ	31818-38555
ಕೋಕ	18001-31312
ಕೆಂಪುಗೋಟು	27099-35499
ರಾಶಿ	40090-50599
ತಟ್ಟಿಬೆಟ್ಟೆ	36899-45009

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,250	15350	15300	189.20 ಸೆಂಟ್ಸ್
ಎಸಿ	7,980	8000	7700	
ಆರ್‌ಪಿ	10,500	10750	10550	ಲಂಡನ್
ಆರ್‌ಸಿ	6,000	236	5750	2629 ಡಾಲರ್ಸ್

ಕೊಬ್ಬರಿ ಧಾರಣೆ

ಮಂಗಳೂರು	₹8500-9105
ಪುತ್ತೂರು	₹4500-7300

ಮುಂಬೈ ಧಾರಣೆ

ಶೇಂಗಾ 23-5-2023

ಜಾವಾ 70/80(ಹೊಸ)	11950-12000
ಜಾವಾ 80/90(ಹೊಸ)	11450-11500
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625(1627)
ಒಂದು ವಾರದ ಡೆಲಿವರಿ	1620(1622)
ಸೋಯಾ ಕಚ್ಚಾ	852(860)
ಪಾಮ್ ವಾರದ ಡೆಲಿವರಿ	880(883)
ಸೂರ್ಯಕಾಂತಿ ಎಣ್ಣೆ ಕಚ್ಚಾ	855(855)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 60250(60500)

ಬೆಳ್ಳಿ ಕೆ.ಜಿ 70850(72500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Walk-in

WANTED
B.Sc / M.Sc in Geologist (MIS) Agri, Animal Husbandry MBA in Agri Marketing
MSW - With Computer Knowledge, Field Exp. is Desirable 3 to 5 Years Exp. & Freshers Also.
Interested Can Send Your CV and Marks card Convocation Certificate and photo to the below e-mail ID : mahatmagandhitrust@gmail.com
GOVT. OF INDIA PROJECT WORK, PLACE OF WORK : Bangalore Rural, Hassan and Tumkur Districts
Interview held on : 24th to 31st May 2023 @ 2:00 pm to 5:00 pm (Sunday Holiday)
Mahathma Gandhi Trust (R)
0821-2420374
93438 28203
99454 25447
www.mahatmagandhitrust.com

Drivers

DRIVERS WANTED Electric Cabs. Rs. 35000/- month. Employment Office, Kolar Busstand, 24- May- 9 AM, 08069459645

Hospital & Medical Jobs

URGENTLY REQUIRED NURSES IN HOSPITAL
7th Cross Road, Dasarahalli Circle, 5th Main Road, 775, 8th Cross Road, Near Veeresh Theater, MC Layout, Vijayanagar, Bengaluru - 560 040

Post	No.of Post	Qualification	Experience Required	Salary
"Staff Nurse" in Govt. (BBMP Bengaluru) on Contract	62	B.Sc. Nursing Recognized from Karnataka Nursing Council	Freshers eligible (No Experience Required)	Monthly CTC Rs. 23, 500/- P.M.,

OTHER BENEFITS: Salary revisions every 6-months, Only 8-hours Shift, Overtime Extra, Date of Interview - 19-05-2023 to 31-05-2023, Contact (Call or Whatsapp): Santosh - 8884398469, Mohd Shuaib - 7090608608, Madhav - 8073905797, Email ID-madhavmac@yahoo.co.in. Contract on M/s GA Digital Web Word Pvt.Ltd.(GAD), Bengaluru.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ.ಕೊರಿಯರ್ ಇದೆ. 8050064329, 8050064330.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611227266/ 9611221244

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟವಸತಿ ಇದೆ.12,000 - 17,000. 8951315839, 9880120052

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್ ಲೈನ್ ಕಂಪನಿಗಳಿಗೆ SSLC,PUC, ಡಿಗ್ರಿ,ಡಿಪ್ಲೋಮಾದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 65,000/- ವಸತಿಯೂಟದೊಂದಿಗೆ 9036125229

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಟೆಲ್‌ಗಾಗಿ ನಾರ್ತ್ ಇಂಡಿಯನ್ ಕುಕ್‌ಗಳು ಮತ್ತು ಸಪ್ಲೈಯರ್‌ಗಳು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಸಂಪರ್ಕಿಸಿ: 8892491613, 9739013813

Wanted

ಆಂಧ್ರಪ್ರದೇಶ ಪ್ರೊಡಕ್ಟಿವಿಟಿ ಕೌನ್ಸಿಲ್, ಹೈದರಾಬಾದ್ ಇವರು, ಐಟಿಐ ವಿದ್ಯಾರ್ಹತೆಯುಳ್ಳ (ಇಲೆಕ್ಟ್ರಾನಿಕ್ಸ್, ಫಿಟ್ಟರ್ಸ್, ವೆಲ್ಡರ್ಸ್) ಕನಿಷ್ಠ ಒಂದರಿಂದ ನಾಲ್ಕು ವರ್ಷ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ, ಹೈದರಾಬಾದ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ಪ್ರತಿಷ್ಠಿತ ಉತ್ಪಾದನಾ ಕೈಗಾರಿಕೆಗಳಲ್ಲಿ ಉದ್ಯೋಗ ಅವಕಾಶಗಳನ್ನು ಒದಗಿಸುತ್ತಿದ್ದಾರೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಅನುಭವದ ವಿವರಗಳನ್ನು ಹೊಂದಿರುವ ರೆಸ್ಯೂಮ್‌ನ್ನು appchyd@gmail.com ವಿಳಾಸಕ್ಕೆ ಇಮೇಲ್ ಮಾಡಬಹುದು ಅಥವಾ ವಿವರಗಳಿಗಾಗಿ 9000212019 ಸಂಖ್ಯೆಗೆ ಕರೆ ಮಾಡಬಹುದು.

ಇಸ್ತ್ರಿ ಮಾಡುವ ಅನುಭವವುಳ್ಳ ಕೆಲಸಗಾರರು ಬೇಕಾಗಿದ್ದಾರೆ ಸಂಬಳ ದಿನಕ್ಕೆ 900/ರೂ.ವಾರಕ್ಕೆ ತಿಂಗಳಿಗೆ ಬೋನಸ್‌ರೂಂ ಸೌಲಭ್ಯವಿರುತ್ತದೆ. ಕೆಲಸ ಬೆಳಿಗ್ಗೆ 10.00.ರಾತ್ರಿ 8.00. (ಸೋಮವಾರದಿಂದ ಶನಿವಾರದವರೆಗೆ) ಸಂಪರ್ಕಿಸಿ: ಜಯನಗರ, ಬನಶಂಕರಿ, ಬೆಂಗಳೂರು.9880266007, 9663668007

ಬೊಮ್ಮಸಂದ್ರ ಏರಿಯಾದಲ್ಲಿರುವ ಒಂದು ಪ್ರಮುಖ ಪ್ರಿಂಟಿಂಗ್ & ಪ್ಯಾಕೇಜಿಂಗ್ ಕಂಪನಿಗೆ ಆಫ್ ಸೆಟ್ ಪ್ರಿಂಟರ್ಸ್/ ಅಸಿಸ್ಟಂಟ್ ಪ್ರಿಂಟರ್ಸ್/ ಹೆಲ್ಪರ್ಸ್/ ಪ್ರಿಂಟಿಂಗ್ ಸೂಪರ್ ವೈಸರ್ಸ್ (ಹೈಡಲ್ಬರ್ಗ್) ಬೇಕಾಗಿದ್ದಾರೆ. ಯುವಿ ಪ್ರಿಂಟಿಂಗ್ ಅನುಭವಿಗಳಿಗೆ ಆದ್ಯತೆ. ಸಂಪರ್ಕಿಸಿ:9940247239

ಜಾಬ್ ಗಳಿಗೆ ಫುಲ್ ಹಾಗೂ ಪಾರ್ಟ್ ಟೈಂ ಕೆಲಸಗಾರರು ಬೇಕಾಗಿದ್ದಾರೆ. ಯಾವುದೇ ವಿದ್ಯಾರ್ಹತೆ ಪರವಾಗಿಲ್ಲ. ಸಂಪರ್ಕಿಸಿ: 8722155842 / 8722155787

ಭವಿಷ್ಯ

Astrology

ನಂ.1 ವಶೀಕರಣ ಸ್ಪೆಷಲಿಸ್ಟ್, ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀಪುರುಷ ವಶೀಕರಣ, ಶತ್ರುಕಾಟ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 9844174018

ವೈಯಕ್ತಿಕ

Change of Name

I, Suda Bhovi spouse of No 1158877X Rank Ex Late Hony Hb/ Sub Name: Suba Bhovi have changed my name from Suda Bhovi to Shashikala Subha Bhovi vide affidavit dated 12/05/2023 sworn before notary Vanajakshi R, Bangalore.

ಪ್ರವಾಸ

Travel

07.07.2023 11.09.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 15.06.2023 19.07.2023 ಭೂತಾನ್ 8 ದಿನಗಳು. 18.07.2023 20.08.2023 ನೇಪಾಳ,ಮುಕ್ತಿನಾಥ್ 9 ದಿನಗಳು. 22.06.2023 27.07.2023 ರಾಮೇಶ್ವರ,ಮದುರೈ, ಕುಂಭಕೋಣಮ್ 6 ದಿನಗಳು. 25.06.2023 27.07.2023 ಗ್ಯಾಂಗ್‌ಟಾಕ್,ಡಾರ್ಜಲಿಂಗ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು.03 9448402248 7022547922

18 ದಿನಗಳ ಯುಕೆ ಯುರೋಪ್ ಪ್ರವಾಸ ಹತ್ತು ದೇಶಗಳು, ವಿಮಾನದರ,ವೀಸ,ವಸತಿ, ಊಟ,gst,ವಿಮೆ, ಪ್ರವಾಸ ಕೋಚ್, ಪ್ರೇಕ್ಷಣೀಯ ಸ್ಥಳಗಳು ಎಲ್ಲಾ ಸೇರಿರುತ್ತದೆ.ಹೊರಡುವ ದಿನ 26.07.2023. ಹಾಗೂ ಇತರ ಪ್ರವಾಸ. ಬುಕ್ಕಿಂಗ್‌ಗಳಿಗಾಗಿ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9880079644, 9900080791

10/7/2023 13/17ದಿನಗಳು ರೈಲು/ವಿಮಾನದಲ್ಲಿ ದೆಹಲಿ ಆಗ್ರ ಅಮೃತಸರ ವೈಷ್ಣವದೇವಿ ಅಮರನಾಥ್ ಕಾಶ್ಮೀರ ಕುರುಕ್ಷೇತ್ರ ಇತ್ಯಾದಿ24000/34000/ (ಕೆಲವೇ ಸೀಟುಗಳಿವೆ)'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಆಸ್ಟ್ರೇಲಿಯಾ ಉದ್ಯಮಿಗಳ ಜತೆಯಲ್ಲಿ ಪ್ರಧಾನಿ ಮಾತುಕತೆ • ಸಿಡ್ನಿಯಲ್ಲಿ ಭಾರತೀಯರ ಸಾಂಸ್ಕೃತಿಕ ಸಂಭ್ರಮ

ಭಾರತದಲ್ಲಿ ಹೂಡಿಕೆಗೆ ಮೋದಿ ಆಹ್ವಾನ

ಸಿಡ್ನಿ (ಪಿಟಿಐ): ಭಾರತದಲ್ಲಿ ತಂತ್ರಜ್ಞಾನ, ಕೌಶಲ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿ ಹೂಡಿಕೆ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಆಸ್ಟ್ರೇಲಿಯಾದ ಉದ್ಯಮಿಗಳಿಗೆ ಆಹ್ವಾನ ನೀಡಿದ್ದಾರೆ.

ಮೂರು ದೇಶಗಳ ಪ್ರವಾಸದ ಭಾಗವಾಗಿ ಆಸ್ಟ್ರೇಲಿಯಾಗೆ ಸೋಮವಾರ ಭೇಟಿ ನೀಡಿರುವ ಮೋದಿ ಅವರು, ಇಲ್ಲಿನ ಉದ್ಯಮಿಗಳ ಜತೆಗೆ ಮಾತುಕತೆ ನಡೆಸಿದರು. ಹ್ಯಾಂಕಾಕ್ ಪ್ರಾಸ್ಪೆಕ್ಟಿಂಗ್‌ನ ಮುಖ್ಯಸ್ಥೆ ಗಿನಾ ರೈನ್‌ಹರ್ಟ್, ಫಾರ್ಟೆಸ್ಕ್ಯೂ ಫ್ಯೂಚರ್ ಇಂಡಸ್ಟ್ರಿ ಮತ್ತು ಆಸ್ಟ್ರೇಲಿಯಾಸೂಪರ್‌ನ ಸಿಇಒ ಪಾಲ್ ಶ್ರಾಡರ್ ಜತೆಗೆ ಮೋದಿ ಅವರು ಹೂಡಿಕೆ ಕುರಿತು ಮಾತುಕತೆ ನಡೆಸಿದರು.

ಗಿನಾ ಜತೆಗಿನ ಮಾತುಕತೆ ವೇಳೆ ಮೋದಿ ಅವರು, ಭಾರತದಲ್ಲಿ ಖನಿಜ ಸಂಪತ್ತಿನ ಗಣಿಗಾರಿಕೆ ಕ್ಷೇತ್ರದಲ್ಲಿ ಕೌಶಲ ಅಭಿವೃದ್ಧಿಗೆ, ತಂತ್ರಜ್ಞಾನ ಬಳಕೆಗೆ ತೆಗೆದುಕೊಂಡಿರುವ ಕ್ರಮಗಳು ಮತ್ತು ಆ ವಲಯಗಳಲ್ಲಿ ಹೂಡಿಕೆಗೆ ಇರುವ ಅವಕಾಶಗಳ ಬಗ್ಗೆ ಪ್ರಸ್ತಾಪಿಸಿದರು ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ತನ್ನ ಪ್ರಕಟಣೆಯಲ್ಲಿ ಹೇಳಿದೆ.

ಸಾಂಸ್ಥಿಕ ಹೂಡಿಕೆ ಸಂಸ್ಥೆ ಆಸ್ಟ್ರೇಲಿಯಾಸೂಪರ್‌ನ ಪಾಲ್ ಜತೆಗಿನ ಮಾತುಕತೆ ವೇಳೆ, ವಿದೇಶಿ ಸಂಸ್ಥೆಗಳ ಹೂಡಿಕೆಗೆ ಭಾರತದಲ್ಲಿ ವಿಪುಲ ಅವಕಾಶಗಳಿವೆ. ಇಂತಹ ಹೂಡಿಕೆಯಲ್ಲಿ ವಿದೇಶಿ ಸಂಸ್ಥೆಗಳಿಗೆ ಭಾರತವು ನೆಚ್ಚಿನ ದೇಶವಾಗಿದೆ ಎಂದು ಮೋದಿ ಹೇಳಿದ್ದಾರೆ. ಜತೆಗೆ, ನವೀಕರಿಸಬಹುದಾದ ಇಂಧನ ಕ್ಷೇತ್ರಕ್ಕೆ ಭಾರತವು ಆದ್ಯತೆ ನೀಡುತ್ತಿದ್ದು, ಆ ಕ್ಷೇತ್ರದಲ್ಲಿ ಹೂಡಿಕೆಗೆ ವಿಪುಲ ಅವಕಾಶಗಳಿವೆ. ಹೀಗಾಗಿ ಹೂಡಿಕೆಗೆ ಭಾರತವನ್ನು ಪರಿಗಣಿಸಬಹುದು ಎಂದು ಫಾರ್ಟೆಸ್ಕ್ಯೂ ಫ್ಯೂಚರ್‌ಗೆ ಆಹ್ವಾನ ನೀಡಿದ್ದಾರೆ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಭಾರತದಲ್ಲಿ ಈ ಹಿಂದಿನ ಹೂಡಿಕೆಗಳ ಸಂದರ್ಭದಲ್ಲಿ ತಮ್ಮ ಅನುಭವ ಮತ್ತು ಭಾರತದ ಸಹಕಾರ ಉತ್ತಮವಾಗಿದೆ ಎಂದು ಮೂವರೂ ಉದ್ಯಮಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಮೋದಿ ಮೇನಿಯಾ

ಪಪುವಾ ನ್ಯೂಗಿನಿಯಿಂದ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆಸ್ಟ್ರೇಲಿಯಾದಲ್ಲಿ ಭವ್ಯ ಸ್ವಾಗತ ನೀಡಲಾಯಿತು. 21 ಸಾವಿರ ಪ್ರೇಕ್ಷಕರ ಸಾಮರ್ಥ್ಯದ ಸಿಡ್ನಿಯ ಕ್ಯುಡೋಸ್ ಬ್ಯಾಂಕ್ ಅರೇನಾದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೋದಿ ರ‍್ಯಾಲಿ ನಡೆಯಿತು. ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಭಾರತೀಯ ಸಮುದಾಯ ಉದ್ದೇಶಿಸಿ ಮೋದಿ ಮಾತನಾಡಿದಾಗ 'ಮೋದಿ.. ಮೋದಿ...' ಎಂಬ ಘೋಷಣೆಗಳು ಮುಗಿಲುಮುಟ್ಟಿದ್ದವು.

- ಭಾರತೀಯ ಸಮುದಾಯ ಉದ್ದೇಶಿಸಿ ಮಾತನಾಡಿದ ಮೋದಿ, ಭಾರತ-ಆಸ್ಟ್ರೇಲಿಯಾ ನಡುವಿನ ಗಟ್ಟಿ ಬಾಂಧವ್ಯಕ್ಕೆ ಪರಸ್ಪರ ನಂಬಿಕೆ ಹಾಗೂ ಗೌರವವೇ ಬಹುದೊಡ್ಡ ಬುನಾದಿಗಳು ಎಂದು ಬಣ್ಣಿಸಿದರು. ಮುಂದಿನ ಐದು ವರ್ಷಗಳಲ್ಲಿ ಉಭಯ ದೇಶಗಳ ನಡುವಿನ ವ್ಯಾಪಾರ ವಹಿವಾಟು ಒಂದು ಪಟ್ಟು ಆಗಲಿದೆ ಎಂದು ಮೋದಿ ವಿಶ್ವಾಸ ವ್ಯಕ್ತಪಡಿಸಿದರು
- ಭಾರತ-ಆಸ್ಟ್ರೇಲಿಯಾ ನಡುವಿನ ಗಟ್ಟಿ ಬಾಂಧವ್ಯವನ್ನು ಬಣ್ಣಿಸುತ್ತಾ, ಯೋಗ, ಕ್ರಿಕೆಟ್, ಸಿನಿಮಾ ಹಾಗೂ 'ಮಾಸ್ಟರ್‌ಶೆಫ್' ಅಡುಗೆ ಕಾರ್ಯಕ್ರಮ ಉಲ್ಲೇಖಿಸಿದರು

ಸಿಡ್ನಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾರತೀಯ ಸಮುದಾಯದವರನ್ನು ಉದ್ದೇಶಿಸಿ ಮಾತನಾಡಿದರು — ಎಎಫ್‌ಪಿ ಚಿತ್ರ

- 'ಭಾರತ-ಆಸ್ಟ್ರೇಲಿಯಾ ಕ್ರಿಕೆಟ್ ಬಾಂಧವ್ಯಕ್ಕೆ 75 ವರ್ಷಗಳು ತುಂಬಿವೆ. ಕ್ರಿಕೆಟ್‌ನ ರೋಚಕ ಪಂದ್ಯಗಳ ರೀತಿಯಲ್ಲೇ, ನಮ್ಮ ಕ್ರಿಕೆಟ್‌ಯೇತರ ಸಂಬಂಧಗಳು ಆಳವಾಗಿ ಬೆಳೆದಿವೆ: ಮೋದಿ

ಪ್ರಧಾನಿ ಮೋದಿ ಅವರು 'ಬಾಸ್'. ಖ್ಯಾತ ಗಾಯಕ ಬ್ರೂಸ್ ಸ್ಪ್ರಿಂಗ್‌ಸ್ಟೀನ್ ಅವರಿಗೂ ಈ ರೀತಿಯ ಸ್ವಾಗತ ಸಿಕ್ಕಿರಲಿಲ್ಲ
ಆ್ಯಂಟೊನಿ ಅಲ್ಬನೀಸ್, ಆಸ್ಟ್ರೇಲಿಯಾ ಪ್ರಧಾನಿ

- ಆಸ್ಟ್ರೇಲಿಯಾದ ಸ್ಪಿನ್ನರ್ ಶೇನ್ ವಾರ್ನ್ ಅವರು ನಿಧನರಾದಾಗ ಲಕ್ಷಾಂತರ ಭಾರತೀಯರು ದುಃಖಿಸಿದ್ದರು ಎಂದು ಮೋದಿ ನೆನಪಿಸಿಕೊಂಡರು
- ಭಾರತ-ಆಸ್ಟ್ರೇಲಿಯಾ ಬಾಂಧವ್ಯವನ್ನು ತೆರೆದಿಡುವ 'ಸಿ', 'ಡಿ' ಹಾಗೂ 'ಇ'ಗಳನ್ನು ಮೋದಿ ವಿವರಿಸಿದರು. ಮೂರು 'ಸಿ'ಗಳು: ಕಾಮನ್‌ವೆಲ್ತ್, ಕ್ರಿಕೆಟ್ ಮತ್ತು ಕರ್ರಿ. ಮೂರು 'ಡಿ'ಗಳು: ಡೆಮಾಕ್ರಸಿ, ಡಾಯಸ್ಪೊರಾ (ಅನಿವಾಸಿ ಭಾರತೀಯ ಸಮುದಾಯ) ಮತ್ತು ದೋಸ್ತಿ. ಮೂರು 'ಇ'ಗಳು: ಎನರ್ಜಿ, ಎಕಾನಮಿ ಮತ್ತು ಎಜುಕೇಷನ್
- ಸಿಡ್ನಿ ನಗರದ ಒಂದು ರಸ್ತೆಗೆ 'ಲಿಟ್ಲ್ ಇಂಡಿಯಾ' ಎಂದು ಮರುನಾಮಕರಣ ಮಾಡಲಾಯಿತು
- ಆಸ್ಟ್ರೇಲಿಯಾದ ಬ್ರಿಸ್ಬೇನ್‌ನಲ್ಲಿ ಭಾರತೀಯ ಕಾನ್ಸುಲೇಟ್ ತೆರೆಯುವುದಾಗಿ ಪ್ರಧಾನಿ ಘೋಷಣೆ ಮಾಡಿದರು. ಈ ಮೂಲಕ ಭಾರತೀಯರ ಬಹುದಿನಗಳ ಬೇಡಿಕೆ ಈಡೇರಲಿದೆ ಎಂದರು

'ಸ್ವಚ್ಛ ಭಾರತ' ಪ್ರಸ್ತಾಪಿಸಿದ 'ಶೌಚಾಲಯ ಯೋಧ'

ಜಾಗತಿಕ ನೈರ್ಮಲ್ಯ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 'ನಂಬರ್ ಒನ್ ಚೇಂಜ್‌ಮೇಕರ್' ಎಂದು 'ಶೌಚಾಲಯ ಯೋಧ' ಎಂದೇ ಗುರುತಿಸಿಕೊಂಡಿರುವ ಮಾರ್ಕ್ ಬಲ್ಲಾ ಅವರು ಪ್ರಶಂಸಿಸಿದ್ದಾರೆ. ಆಸ್ಟ್ರೇಲಿಯಾದ ವಿವಿಧ ಕ್ಷೇತ್ರಗಳ ಗಣ್ಯರ ಜೊತೆ ಮೋದಿ ಅವರು ಸಂವಾದ ನಡೆಸಿದರು. ಮಾರ್ಕ್ ಅವರು ಮೋದಿ ಅವರ ಭೇಟಿ ವೇಳೆ ನೈರ್ಮಲ್ಯ ಹಾಗೂ 'ಭಾರತದ ಸ್ವಚ್ಛಭಾರತ ಅಭಿಯಾನ'ದ ಬಗ್ಗೆ ಮಾತನಾಡಿದರು.

ಕಲೆ, ಸಂಗೀತ, ವಿಜ್ಞಾನ ಮೊದಲಾದ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿರುವ ಆಸ್ಟ್ರೇಲಿಯಾದ ಗಣ್ಯರ ಜೊತೆ ಪ್ರಧಾನಿ ನರೇಂದ್ರ ಮೋದಿ ಅವರು ಸಂವಾದ ನಡೆಸಿದರು.

ಭಾರತ-ಆಸ್ಟ್ರೇಲಿಯಾ ಬಾಂಧವ್ಯ ವೃದ್ಧಿಗೆ ತಮ್ಮ ಕೊಡುಗೆ ನೀಡುವಂತೆ ಮೋದಿ ಅವರು ಗಣ್ಯರಲ್ಲಿ ಮನವಿ ಮಾಡಿದರು. ಸೆಲೆಬ್ರಿಟಿ ಶೆಫ್ ಟೊಡ್ ಅವರು ಮೋದಿ ಅವರನ್ನು ಮಹಾನ್ ಪ್ರಭಾವಶಾಲಿ ವ್ಯಕ್ತಿ ಎಂದು ಬಣ್ಣಿಸಿದರು. ಮೋದಿ ಅವರು ಭಾರತದಲ್ಲಿ ಗೋಚರಿಸುತ್ತಿರುವ ಪ್ರಭಾವಿ ನಾಯಕ ಎಂದು ನೊಬೆಲ್ ಪುರಸ್ಕೃತ ಸ್ಮಿಟ್ ಅವರು ಹೇಳಿದರು.

ಖ್ಯಾತ ಗಾಯಕ ಸೆಬಾಸ್ಟಿಯನ್ ಅವರು ಕಾನ್ಪುರ ಮೂಲದ ತಮ್ಮ ತಾಯಿ ಹಾಗೂ ತಮ್ಮ ಸಂಗೀತದ ಬಗ್ಗೆ ಮೋದಿ ಅವರ ಜತೆ ಮಾತನಾಡಿದರು. ಈ ವೇಳೆ ಮೋದಿ ಅವರು 'ನಾಟು ನಾಟು' ಗೀತೆಯ ವಿಡಿಯೊವನ್ನು ತೋರಿಸಿದರು. ಸೆಬಾಸ್ಟಿಯನ್ ಅವರು ಈ ನೃತ್ಯವನ್ನು ಕಲಿಯುವ ಅಭಿಲಾಷೆ ವ್ಯಕ್ತಪಡಿಸಿದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್
ನಂ. 75, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಪಠ್ಯಪುಸ್ತಕ ಖರೀದಿಗೆ ನೆರವಾಯಿತು

ವಿದ್ಯಾರ್ಥಿವೇತನ ಪ್ರಥಮ ಪಿಯುಸಿ ಪಠ್ಯಪುಸ್ತಕ ಖರೀದಿಗೆ ಉಪಯೋಗವಾಯಿತು. ಆರ್ಥಿಕವಾಗಿ ಸಬಲರಲ್ಲದ ನಮ್ಮ ಕುಟುಂಬಕ್ಕೆ ಇದರಿಂದ ಹೆಚ್ಚಿನ ಉಪಯೋಗವಾಯಿತು. 'ಪ್ರಜಾವಾಣಿ' ಸಂಸ್ಥೆ ಇಂತಹ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿರುವುದು ಒಳ್ಳೆಯ ಬೆಳವಣಿಗೆ. ಪತ್ರಿಕಾ ಬಳಗಕ್ಕೆ ಧನ್ಯವಾದಗಳು.

ಕಾರ್ತಿಕ್ ಎಸ್.ಎಚ್., ಸಾಗರ, ಶಿವಮೊಗ್ಗ

ಶುಲ್ಕ ಭರಿಸಲು ಸಹಕಾರಿಯಾಯಿತು

ಎಸ್ಸೆಸ್ಸೆಲ್ಸಿ ಮುಗಿದ ನಂತರ 'ಪ್ರಜಾವಾಣಿ' ಕೊಟ್ಟಿರುವ ವಿದ್ಯಾರ್ಥಿವೇತನದ ಹಣವನ್ನು ಕಾಲೇಜಿನ ಶುಲ್ಕ ಭರಿಸಲು ಬಳಸಿಕೊಂಡಿದ್ದು, ಸ್ವಲ್ಪ ಹಣದಲ್ಲಿ ಪುಸ್ತಕ ಖರೀದಿಸಿದೆ. ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಇಂತಹ ವಿದ್ಯಾರ್ಥಿವೇತನಗಳು ಅವರ ಶೈಕ್ಷಣಿಕ ಬದುಕಿಗೆ ನೆರವಿಗೆ ಬರುತ್ತಿವೆ. ಶಿಕ್ಷಣಕ್ಕೆ ನೆರವಾದ 'ಪ್ರಜಾವಾಣಿ'ಗೆ ಧನ್ಯವಾದಗಳು.

ಸ್ಫೂರ್ತಿ, ಕುಂದಾಪುರ, ಉಡುಪಿ

ಸಂಕ್ಷಿಪ್ತ ಸುದ್ದಿ

8 ಪ್ರಕರಣಗಳಲ್ಲಿ ಇಮ್ರಾನ್‌ಗೆ ಜಾಮೀನು

ಇಸ್ಲಾಮಾಬಾದ್ (ಪಿಟಿಐ): ನ್ಯಾಯಾಂಗ ಸಂಕೀರ್ಣದಲ್ಲಿನ ಹಿಂಸಾಚಾರಕ್ಕೆ ಸಂಬಂಧಿಸಿದ ಎಂಟು ಪ್ರಕರಣಗಳಲ್ಲಿ ಪಾಕಿಸ್ತಾನದ ಭಯೋತ್ಪಾದನಾ ನಿಗ್ರಹ ನ್ಯಾಯಾಲಯ (ಎಟಿಸಿ) ಮಂಗಳವಾರ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಜೂನ್ 8ರವರೆಗೆ ಜಾಮೀನು ನೀಡಿದೆ.

ಕುನೊ ಉದ್ಯಾನ: ಎರಡು ತಿಂಗಳ ಮರಿಚೀತಾ ಸಾವು

ಭೂಪಾಲ್ (ಪಿಟಿಐ): 'ಎರಡು ತಿಂಗಳ ಹಿಂದಯಷ್ಟೇ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಜನಿಸಿದ್ದ ಮರಿ ಚೀತಾ ಮಂಗಳವಾರ ಮೃತಪಟ್ಟಿದೆ' ಎಂದು ಅರಣ್ಯ ಇಲಾಖೆ ಹೇಳಿದೆ. ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ತರಲಾಗಿದ್ದ ಚೀತಾಗಳಲ್ಲಿ ಕಳೆದ ಎರಡು ತಿಂಗಳಲ್ಲಿ ನಾಲ್ಕು ಚೀತಾಗಳು ಮೃತಪಟ್ಟಿವೆ.

ನಿತ್ರಾಣದ ಕಾರಣದಿಂದಾಗಿ ಮರಿಚೀತಾ ಮೃತಪಟ್ಟಿರಬಹುದು ಎಂದು ಶಂಕಿಸಿರುವ ಇಲಾಖೆಯು, 'ಹುಟ್ಟಿನಿಂದಲೂ ಮರಿಗೆ ನಿಶ್ಯಕ್ತಿ ಇತ್ತು' ಎಂದು ಹೇಳಿದೆ. 'ಜ್ವಾಲಾ' ಹೆಸರಿನ ಚೀತಾವು ಈ ವರ್ಷದ ಮಾರ್ಚ್ ಕೊನೇ ವಾರದಲ್ಲಿ ಒಟ್ಟು ನಾಲ್ಕು ಮರಿಗಳಿಗೆ ಜನ್ಮ ನೀಡಿತ್ತು.

ಮಾನಹಾನಿ ಪ್ರಕರಣ ಕೇಜ್ರಿವಾಲ್, ಎಎಪಿ ಸಂಸದನಿಗೆ ಸಮನ್ಸ್

ಅಹಮದಾಬಾದ್ (ಪಿಟಿಐ): ಮಾನಹಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಎಎಪಿ ರಾಜ್ಯಸಭೆ ಸದಸ್ಯ ಸಂಜಯ್ ಸಿಂಗ್ ಅವರಿಗೆ ಸ್ಥಳೀಯ ಕೋರ್ಟ್ ಮಂಗಳವಾರ ಸಮನ್ಸ್ ಜಾರಿ ಮಾಡಿದೆ.

ಜೂನ್ 7ರಂದು ವಿಚಾರಣೆಗೆ ಹಾಜರಾಗಬೇಕು ಎಂದು ಸೂಚಿಸಿದೆ. ಪ್ರಧಾನಿ ಮೋದಿ ಅವರ ಶೈಕ್ಷಣಿಕ ವಿದ್ಯಾರ್ಹತೆ ಕುರಿತು ಇಬ್ಬರ ಹೇಳಿಕೆಗೆ ಸಂಬಂಧಿಸಿ ಗುಜರಾತ್ ವಿಶ್ವವಿದ್ಯಾಲಯವು ಕ್ರಿಮಿನಲ್ ಮಾನಹಾನಿ ಪ್ರಕರಣ ದಾಖಲಿಸಿತ್ತು.

ಕೆಮ್ಮಿನ ಸಿರಪ್ ರಫ್ತು ನೀತಿ ಪರಿಷ್ಕರಣೆ

ನವದೆಹಲಿ: ಕಲಬೆರಕೆ ಕೆಮ್ಮಿನ ಸಿರಪ್‌ಗಳ ತಯಾರಿಕೆ ಕುರಿತು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲುಎಚ್‌ಒ) ಮೂರು ಬಾರಿ ಎಚ್ಚರಿಕೆ ನೀಡಿದ್ದ ಕಾರಣ, ಭಾರತೀಯ ಔಷಧಗಳ ರಫ್ತು ನಿಯಮಗಳಲ್ಲಿ ಬದಲಾವಣೆ ತರಲಾಗಿದೆ. ಇಂತಹ ಔಷಧಗಳನ್ನು ವಿದೇಶಗಳಿಗೆ ರಫ್ತು ಮಾಡುವ ಮುನ್ನ ಸರ್ಕಾರಿ ಮಾನ್ಯತೆಯ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಬೇಕು ಎಂದು ಔಷಧ ತಯಾರಕರಿಗೆ ಸೂಚನೆ ನೀಡಲಾಗಿದೆ.

ವಿದೇಶಿ ವ್ಯಾಪಾರ ಮಹಾನಿರ್ದೇಶನಾಲಯವು ರಫ್ತು ನೀತಿಗಳನ್ನು ಪರಿಷ್ಕರಿಸಿದೆ. ಈ ನೀತಿಗಳ ಅಡಿಯಲ್ಲಿ, ಕೆಮ್ಮಿನ ಸಿರಪ್‌ಗಳನ್ನು ವಿದೇಶಕ್ಕೆ ರಫ್ತು ಮಾಡುವ ಮುನ್ನ ಸರ್ಕಾರ ಗುರುತಿಸಿರುವ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಬೇಕಿವೆ. ಜೂನ್ 1ರಿಂದ ಈ ಹೊಸ ನೀತಿ ಜಾರಿಗೆ ಬರಲಿದೆ.

ವಿರೋಧ ಪಕ್ಷಗಳ ಒಗ್ಗಟ್ಟಿನ ಸತ್ವಪರೀಕ್ಷೆ

ಸಂಸತ್ತಿನ ಒಳ – ಹೊರಗೆ ಸುಗ್ರೀವಾಜ್ಞೆ ವಿರುದ್ಧ ಹೋರಾಡಲು ಬೆಂಬಲ ಕೋರಿದ ಎಎಪಿ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ/ನವದೆಹಲಿ: ದೆಹಲಿ ಸರ್ಕಾರದ ರೆಕ್ಕೆಗಳನ್ನು ಕತ್ತರಿಸುವ ಕೇಂದ್ರದ ಸುಗ್ರೀವಾಜ್ಞೆಯು ಸಂಸತ್ತಿನ ಒಳಗೆ ಮತ್ತು ಹೊರಗೆ ಪ್ರತಿಪಕ್ಷಗಳ ಒಗ್ಗಟ್ಟನ್ನು ಈಗ ಪರೀಕ್ಷೆಗೆ ಒಡ್ಡಿದೆ.

ರಾಜ್ಯಸಭೆಯಲ್ಲಿ ವಿಧೇಯಕದ ವಿರುದ್ಧ ಮತ ಚಲಾಯಿಸಲು ಬಿಜೆಡಿ ಮತ್ತು ವೈಎಸ್‌ಆರ್ ಕಾಂಗ್ರೆಸ್ ಪಕ್ಷಗಳು ತಮ್ಮೊಂದಿಗೆ ಕೈಜೋಡಿಸಿದರೆ 2024ರ ಲೋಕಸಭಾ ಚುನಾವಣೆಗೂ ಮುನ್ನ ಬಿಜೆಪಿ ಮಣಿಸುವ ಅವಕಾಶ ಲಭಿಸಲಿದೆ ಎಂದು ವಿರೋಧ ಪಕ್ಷಗಳು ಭಾವಿಸಿವೆ. ಆದರೆ, ದೆಹಲಿ ಮತ್ತು ಪಂಜಾಬ್‌ನಲ್ಲಿ ಕಾಂಗ್ರೆಸ್ ನಾಯಕರು, ಕೇಜ್ರಿವಾಲ್ ಬೆಂಬಲಿಸಲು ವಿರೋಧಿಸಿದ್ದಾರೆ. ಕಾಂಗ್ರೆಸ್ ಈವರೆಗೆ ತನ್ನ ನಿರ್ಧಾರ ಬಹಿರಂಗವಾಗಿ ಪ್ರಕಟಿಸಿಲ್ಲ.

ಕೋಲ್ಕತ್ತದಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮಂಗಳವಾರ ತಮ್ಮನ್ನು ಭೇಟಿಯಾದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರೊಂದಿಗೆ ಸಭೆ ನಡೆಸಿದರು — ಪಿಟಿಐ ಚಿತ್ರ

ರಾಜ್ಯಸಭೆಯಲ್ಲಿ ಪ್ರತಿಪಕ್ಷಕ್ಕೆ 106 ಸದಸ್ಯರ ಮತ್ತು ಎನ್‌ಡಿಎಗೆ 112 ಸದಸ್ಯರ ಬಲ ಇದೆ. ಆಡಳಿತಾರೂಢ ಬಿಜೆಪಿಯು ಇತರ 20 ಸದಸ್ಯರ ಬೆಂಬಲವನ್ನು ಅವಲಂಬಿಸಿದ್ದು, ಇದರಲ್ಲಿ ಬಿಜೆಡಿ ಮತ್ತು ವೈಎಸ್‌ಆರ್‌ನ ತಲಾ ಒಂಬತ್ತು ಮತ್ತು ಬಿಎಸ್‌ಪಿ ಮತ್ತು ಜೆಡಿಎಸ್‌ನ ತಲಾ ಒಬ್ಬ ಸದಸ್ಯ ಇದ್ದಾರೆ.

ಪಕ್ಷದ ರಾಜ್ಯ ಘಟಕಗಳು ಮತ್ತು ಇತರ ಪಕ್ಷಗಳೊಂದಿಗೆ ಸಮಾಲೋಚಿಸಿ ನಿರ್ಧರಿಸಲಾಗುವುದು ಎಂದು ಕಾಂಗ್ರೆಸ್

2024ರಲ್ಲೂ ಪ್ರಧಾನಿ ಹುದ್ದೆ ಖಾಲಿ ಇಲ್ಲದ ಕಾರಣ, ಜನರ ಹಣ ವೆಚ್ಚ ಮಾಡಿ ನಡೆಸುವ ಇಂಥ ರಾಜಕೀಯ ಪ್ರವಾಸೋದ್ಯಮ ಯಾವುದೇ ಪರಿಣಾಮ ಬೀರುವುದಿಲ್ಲ
ದಿಲೀಪ್ ಘೋಷ್, ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷ

ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಟ್ವಿಟರ್‌ನಲ್ಲಿ ಹೇಳಿದ್ದಾರೆ. ಸಂಸತ್ತಿನಲ್ಲಿ ಈ ಸುಗ್ರೀವಾಜ್ಞೆಯನ್ನು ಕಾಂಗ್ರೆಸ್ ಬೆಂಬಲಿಸುವುದಿಲ್ಲ ಎಂದು ಮೂಲಗಳು ತಿಳಿಸಿವೆ.

ರಾಜೀವ್ ಗಾಂಧಿಗೆ ನೀಡಿದ್ದ ಭಾರತ ರತ್ನ ವಾಪಸ್ ಪಡೆಯುವ ನಿರ್ಣಯ ಅಂಗೀಕರಿಸುವಲ್ಲಿ ಕೇಜ್ರಿವಾಲ್ ಅವರ ಪಕ್ಷವು ಬಿಜೆಪಿ ಜತೆಗೆ ನಿಂತಿದೆ ಎಂದು ಕಾಂಗ್ರೆಸ್ ಹಿರಿಯ ನಾಯಕ ಅಜಯ್ ಮಾಕೆನ್ ಅವರು ಟ್ವೀಟ್ ಮಾಡಿದ್ದಾರೆ.

ಜತೆಗೆ, ಕೇಂದ್ರದ ಸುಗ್ರೀವಾಜ್ಞೆ ಸಂವಿಧಾನದ ಆಶಯಗಳಿಗೆ ವಿರುದ್ಧವಾದುದು ಎಂದೂ ಹೇಳಿದ್ದಾರೆ.

ಬಿಜೆಪಿ ವಿರುದ್ಧ ಒಗ್ಗಟ್ಟಿನ ಹೋರಾಟ– ಮಮತಾ: ಸುಗ್ರೀವಾಜ್ಞೆ ವಿರುದ್ಧ ಹೋರಾಟಕ್ಕೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ, ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ತಮ್ಮ ಸಂಪೂರ್ಣ ಬೆಂಬಲ ಘೋಷಿಸಿದರು.

ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರೊಂದಿಗೆ ಮಂಗಳವಾರ ಮಧ್ಯಾಹ್ನ ಕೋಲ್ಕತ್ತದ ನೇತಾಜಿ ಸುಭಾಷ್ ಚಂದ್ರ ಬೋಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಕೇಜ್ರಿವಾಲ್ ಅವರು, ರಾಜ್ಯ ಸಚಿವಾಲಯದಲ್ಲಿ ಮಮತಾ ಬ್ಯಾನರ್ಜಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ರಾತ್ರಿ ದೆಹಲಿಯಿಂದ ಚಂಡೀಗಢಕ್ಕೆ ಟ್ರಕ್‌ನಲ್ಲಿ ಪ್ರಯಾಣ ನಡೆಸಿದರು — ಪಿಟಿಐ ಚಿತ್ರ

ಟ್ರಕ್‌ನಲ್ಲಿ ರಾಹುಲ್ ಪ್ರಯಾಣ: ಚಾಲಕರ 'ಮನದ ಮಾತು' ಆಲಿಕೆ

ಚಂಡೀಗಢ/ನವದೆಹಲಿ (ಪಿಟಿಐ): ಟ್ರಕ್ ಚಾಲಕರು ಅನುಭವಿಸುತ್ತಿರುವ ಸಮಸ್ಯೆಗಳನ್ನು ಆಲಿಸಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೆಹಲಿಯಿಂದ ಚಂಡೀಗಢಕ್ಕೆ ಟ್ರಕ್‌ನಲ್ಲಿ ಪ್ರಯಾಣ ನಡೆಸಿದರು ಎಂದು ಪಕ್ಷವು ಮಂಗಳವಾರ ಹೇಳಿದೆ.

ತಮ್ಮ ನೆಚ್ಚಿನ ಬಿಳಿ ಬಣ್ಣದ ಟಿ-ಶರ್ಟ್ ಧರಿಸಿದ್ದ ರಾಹುಲ್ ಅವರು ಸೋಮವಾರ ರಾತ್ರಿ ಟ್ರಕ್‌ನಲ್ಲಿ ಕುಳಿತು ಪ್ರಯಾಣಿಸಿರುವ ಮತ್ತು ಢಾಬಾದಲ್ಲಿ ಕುಳಿತು ಚಾಲಕರೊಂದಿಗೆ ಸಂವಾದ ನಡೆಸಿರುವ ವಿಡಿಯೊ ಬಿಡುಗಡೆ ಮಾಡಲಾಗಿದೆ. ಟ್ರಕ್ ಪ್ರಯಾಣಿಕರ ಸಮಸ್ಯೆಗಳನ್ನು ಅರಿಯಲು ರಾಹುಲ್ ಅವರು ದೆಹಲಿಯಿಂದ ಚಂಡೀಗಢದವರೆಗೆ ಟ್ರಕ್‌ನಲ್ಲಿ ತೆರಳಿದರು ಎಂದು ಕಾಂಗ್ರೆಸ್ ಪಕ್ಷವು ಟ್ವೀಟ್ ಮಾಡಿದೆ.

ದೇಶದ ರಸ್ತೆಗಳಲ್ಲಿ ಸುಮಾರು 90 ಲಕ್ಷ ಟ್ರಕ್ ಚಾಲಕರು ಕಾರ್ಯನಿರತರಾಗಿದ್ದಾರೆ. ಅವರೆಲ್ಲರೂ ತಮ್ಮದೇ ಆದ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಅವರ ಸಮಸ್ಯೆಗಳಿಗೆ ಧ್ವನಿಯಾಗಲು, ಅವರ 'ಮನದ ಮಾತು'ಗಳನ್ನು ರಾಹುಲ್ ಆಲಿಸಿದರು ಎಂದು ಕಾಂಗ್ರೆಸ್ ಹೇಳಿದೆ.

ಮಂಗಳವಾರ ನಸುಕಿನಲ್ಲಿ ಅಂಬಾಲಾ- ಚಂಡೀಗಢ ರಾಷ್ಟ್ರೀಯ ಹೆದ್ದಾರಿಯಲ್ಲಿನ ಅಂಬಾಲಾದ ಗುರುದ್ವಾರ ಸಮೀಪ ಟ್ರಕ್ ನಿಲ್ಲಿಸಿ ರಾಹುಲ್ ಪ್ರಾರ್ಥನೆ ಸಲ್ಲಿಸಿದರು. ಟ್ರಕ್ ಚಾಲಕರೊಂದಿಗೆ ರಾಹುಲ್ ಸಭೆ ನಡೆಸಿರುವ ಚಿತ್ರಗಳನ್ನು ಪಕ್ಷದ ಸಾಮಾಜಿಕ ಮಾಧ್ಯಮ ವಿಭಾಗದ ಮುಖ್ಯಸ್ಥೆ ಸುಪ್ರಿಯಾ ಶ್ರೀನಾಥೆ ಟ್ವೀಟ್ ಮಾಡಿದ್ದಾರೆ.

ಯುಪಿಎಸ್‌ಸಿ: ಮಹಿಳೆಯರದ್ದೇ ಮೇಲುಗೈ

ಪ್ರಜಾವಾಣಿ ವಾರ್ತೆ

ಗರಿಮಾ ಲೋಹಿಯಾ

ಉಮಾ ಹರಥಿ

ನವದೆಹಲಿ: ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಕಳೆದ ವರ್ಷ ನಡೆಸಿದ್ದ ನಾಗರಿಕ ಸೇವಾ ಪರೀಕ್ಷೆಗಳ ಫಲಿತಾಂಶ ಪ್ರಕಟಿಸಿದ್ದು, ಈ ಬಾರಿ ಕೂಡ, ಮೊದಲ ನಾಲ್ಕು ಸ್ಥಾನಗಳು ಸೇರಿ ಮಹಿಳಾ ಅಭ್ಯರ್ಥಿ ಗಳೇ ಪಾರಮ್ಯ ಮೆರೆದಿದ್ದಾರೆ. ಮೊದಲ 25 ಅಗ್ರ ಸ್ಥಾನ ಪಡೆದವರಲ್ಲಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ 14.

ಇಶಿತಾ ಕಿಶೋರ್ ಮೊದಲ ಸ್ಥಾನ ಪಡೆದಿದ್ದರೆ, ಗರಿಮಾ ಲೋಹಿಯಾ ದ್ವಿತೀಯ, ಉಮಾ ಹರಥಿ ಎನ್. ಹಾಗೂ ಸ್ಮೃತಿ ಮಿಶ್ರಾ ಕ್ರಮವಾಗಿ ಮೂರು, ನಾಲ್ಕನೇ ಸ್ಥಾನ ಪಡೆದಿದ್ದಾರೆ. ಮಯೂರ್ ಹಜಾರಿಕಾ ಅವರು 5ನೇ ಸ್ಥಾನ ಪಡೆದಿದ್ದಾರೆ. ಸತತ ಎರಡನೇ ವರ್ಷವೂ ಮೊದಲ 3 ಸ್ಥಾನಗಳನ್ನು ಮಹಿಳೆಯರೇ ಪಡೆದಿದ್ದಾರೆ.

ಇಶಿತಾ ಅವರು ದೆಹಲಿ ವಿಶ್ವವಿದ್ಯಾಲಯದ ವಾಣಿಜ್ಯ ಪದವೀಧರೆಯಾಗಿದ್ದು, ಯುಪಿಎಸ್‌ಸಿ ಪರೀಕ್ಷೆಯಲ್ಲಿ ರಾಜ್ಯಶಾಸ್ತ್ರ ಮತ್ತು ಅಂತರ ರಾಷ್ಟ್ರೀಯ ಸಂಬಂಧಗಳು ಅವರ ಐಚ್ಛಿಕ ವಿಷಯವಾಗಿತ್ತು. ಗರಿಮಾ ಅವರೂ ದೆಹಲಿ ವಿಶ್ವವಿದ್ಯಾಲಯದ ವಾಣಿಜ್ಯ ಪದವೀಧರೆ.

ಅವರು ಐಚ್ಛಿಕ ವಿಷಯಗಳನ್ನಾಗಿ ವಾಣಿಜ್ಯಶಾಸ್ತ್ರ ಮತ್ತು ಅಕೌಂಟನ್ಸಿ ಆಯ್ಕೆ ಮಾಡಿಕೊಂಡಿದ್ದರು.

ಐಐಟಿ- ಹೈದರಾಬಾದ್‌ನಿಂದ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದಿರುವ ಉಮಾ ಹರಥಿ ಅವರು ಐಚ್ಛಿಕ ವಿಷಯವಾಗಿ ಮಾನವಶಾಸ್ತ್ರ ಆಯ್ಕೆ ಮಾಡಿಕೊಂಡಿದ್ದರು. ದೆಹಲಿ ವಿಶ್ವವಿದ್ಯಾಲಯದ ವಿಜ್ಞಾನ ಪದವೀಧರೆಯಾಗಿರುವ ಸ್ಮೃತಿ ಮಿಶ್ರಾ ಅವರು ಪ್ರಾಣಿವಿಜ್ಞಾನವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದರು.

ಆಡಳಿತ ಮತ್ತು ಅಭಿವೃದ್ಧಿ ಕ್ಷೇತ್ರಗಳಲ್ಲಿ ಕೊಡುಗೆ ನೀಡುವ ಉದ್ದೇಶದಿಂದ ಯುಪಿಎಸ್ ಪರೀಕ್ಷೆ ತೆಗೆದುಕೊಂಡೆ. ಕುಟುಂಬದ ಬೆಂಬಲದಿಂದ ಈ ಸಾಧನೆ ಸಾಧ್ಯವಾಗಿದೆ
ಇಶಿತಾ ಕಿಶೋರ್
ಮೊದಲ ಸ್ಥಾನ ಪಡೆದ ಅಭ್ಯರ್ಥಿ

ಅಭ್ಯರ್ಥಿಗಳು: ವಿವಿಧ ಸೇವೆಗಳಿಗೆ ನೇಮಕಾತಿಗಾಗಿ ಆಯೋಗವು, 613 ಪುರುಷರು ಹಾಗೂ 320 ಮಹಿಳೆಯರು ಸೇರಿ ಒಟ್ಟು 933 ಅಭ್ಯರ್ಥಿಗಳನ್ನು ಶಿಫಾರಸು ಮಾಡಿದೆ. 178 ಅಭ್ಯರ್ಥಿಗಳ ಹೆಸರು ಕಾಯ್ದಿರಿಸಿದ ಪಟ್ಟಿಯಲ್ಲಿವೆ. ಕೇಂದ್ರ ಸರ್ಕಾರ ನೀಡಿರುವ ಮಾಹಿತಿಯಂತೆ, ಖಾಲಿ ಇರುವ 1,022 ಹುದ್ದೆಗಳಿಗೆ ಯುಪಿಎಸ್‌ಸಿ ನಡೆಸುವ ಪರೀಕ್ಷೆ ಮೂಲಕ ಆಯ್ಕೆ ಮಾಡಲಾಗುತ್ತದೆ. 180 ಐಎಎಸ್, 38 ಐಎಫ್‌ಎಸ್, 200 ಐಪಿಎಸ್, 473 ಗ್ರೂಪ್ 'ಎ', 131 ಗ್ರೂಪ್ 'ಬಿ' ಹುದ್ದೆಗಳನ್ನು ಒಳಗೊಂಡಿವೆ ಎಂದು ಆಯೋಗ ತಿಳಿಸಿದೆ.

30ಕ್ಕೂ ಹೆಚ್ಚು ಮಂದಿ ಯಶಸ್ವಿ

ಒಂದನೇ ಪುಟದಿಂದ...

ಬಹುತೇಕ ಕಲಾ ವಿಭಾಗದ ವಿಷಯಗಳನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಈಗಾಗಲೇ ರೈಲ್ವೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವರು ಮತ್ತೊಮ್ಮೆ ಪರೀಕ್ಷೆಗೆ ಹಾಜರಾಗಿ ರ‍್ಯಾಂಕ್ ಉತ್ತಮಪಡಿಸಿಕೊಂಡಿದ್ದಾರೆ. ಬೆಂಗಳೂರಿನ ಎಚ್.ಎಸ್. ಭಾವನಾ 55ನೇ ರ‍್ಯಾಂಕ್, ಡಿ. ಸೂರಜ್ 197, ಸೌರಭ ಎ. ನರೇಂದ್ರ 198, ಆಕಾಶ್ ಎ.ಎಲ್ 210, ಪಿ. ಶ್ರವಣ್ ಕುಮಾರ್ 222 ರ‍್ಯಾಂಕ್ ಪಡೆದಿದ್ದಾರೆ. ಕಳೆದ ವರ್ಷ ರಾಜ್ಯದ 26ಕ್ಕೂ ಹೆಚ್ಚು ಅಭ್ಯರ್ಥಿಗಳು ಆಯ್ಕೆಯಾಗಿದ್ದರು.

ಶಿಫಾರಸು ಮಾಡಲಾಗಿರುವವರ ಪೈಕಿ 345 ಅಭ್ಯರ್ಥಿಗಳು ಸಾಮಾನ್ಯ ವರ್ಗಕ್ಕೆ ಸೇರಿದವರಾಗಿದ್ದರೆ. 99 ಮಂದಿ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿದವರು. ಒಬಿಸಿ-263, ಎಸ್‌ಸಿ-154 ಹಾಗೂ ಎಸ್‌ಟಿಗೆ ಸೇರಿದ ಅಭ್ಯರ್ಥಿಗಳ ಸಂಖ್ಯೆ 72. ಈ ಅಭ್ಯರ್ಥಿಗಳ ಪೈಕಿ 41 ಅಂಗವಿಕಲರು ಸಹ ಇದ್ದಾರೆ.

ವಿಷಯಗಳ ಆಯ್ಕೆ: ಮೊದಲ 25 ಸ್ಥಾನಗಳನ್ನು ಪಡೆದಿರುವ ಅಭ್ಯರ್ಥಿಗಳು ಯುಪಿಎಸ್‌ಸಿ ಪರೀಕ್ಷೆಯಲ್ಲಿ(ಮೇನ್ಸ್) ಐಚ್ಛಿಕ ವಿಷಯಗಳನ್ನಾಗಿ ಮಾನವ ಶಾಸ್ತ್ರ, ವಾಣಿಜ್ಯ ಮತ್ತು ಅಕೌಂಟನ್ಸಿ, ಅರ್ಥಶಾಸ್ತ್ರ, ಎಲೆಕ್ಟ್ರಿಕಲ್ ಎಂಜಿನಿಯರಿಂಗ್, ಕಾನೂನು, ಇತಿಹಾಸ, ಗಣಿತ, ರಾಜ್ಯಶಾಸ್ತ್ರ ಮತ್ತು ಅಂತರರಾಷ್ಟ್ರೀಯ ಸಂಬಂಧಗಳು, ತತ್ವಶಾಸ್ತ್ರ, ಸಮಾಜವಿಜ್ಞಾನ ಹಾಗೂ ಪ್ರಾಣಿವಿಜ್ಞಾನ ಆಯ್ಕೆ ಮಾಡಿಕೊಂಡಿದ್ದಾರೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಡೆದಿದ್ದ ಪರೀಕ್ಷೆಗೆ (ಮೇನ್ಸ್) 13,090 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದರು. ಈ ಪೈಕಿ 2,529 ಅಭ್ಯರ್ಥಿಗಳು ವ್ಯಕ್ತಿತ್ವ ಸಂದರ್ಶನಕ್ಕೆ ಅರ್ಹತೆ ಪಡೆದಿದ್ದರು.

ಸಹಾಯಧನ ಪ್ರಮಾಣ ಶೇ 40ರಿಂದ ಶೇ 15ಕ್ಕೆ ಇಳಿಕೆ

ಇವಿ ಸಹಾಯಧನ ಕಡಿತಕ್ಕೆ ಆಕ್ಷೇಪ

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳ ಮೇಲಿನ ಸಹಾಯ ಧನವನ್ನು ಶೇ 40ರಿಂದ ಶೇ 15ಕ್ಕೆ ಇಳಿಸಿದ ಕೇಂದ್ರ ಸರ್ಕಾರದ ಕ್ರಮವು ಉದ್ಯಮವನ್ನು ಬಾಧಿಸಲಿದೆ ಎಂದು ವಿದ್ಯುತ್ ಚಾಲಿತ ವಾಹನಗಳ ತಯಾರಕರ ಸೊಸೈಟಿ (ಎಸ್‌ಎಂಇವಿ) ಹೇಳಿದೆ.

ಆದರೆ, ವಿದ್ಯುತ್ ಚಾಲಿತ ವಾಹನ ತಯಾರಕ ನವೋದ್ಯಮಗಳು ಸರ್ಕಾರದ ಈ ಕ್ರಮವನ್ನು ಸ್ವಾಗತಿಸಿವೆ.

ವಿದ್ಯುತ್ ಚಾಲಿತ ವಾಹನಗಳ ತಯಾರಿಕೆ, ಖರೀದಿ ಮತ್ತು ಬಳಕೆಯನ್ನು ಉತ್ತೇಜಿಸಲು ಕೇಂದ್ರ ಬೃಹತ್ ಕೈಗಾರಿಕಾ ಸಚಿವಾಲಯವು ಫೇಮ್-2 ಯೋಜನೆ ಅಡಿ ಸಹಾಯಧನ ನೀಡುತ್ತಿತ್ತು. ಈ ಕಾರ್ಯಕ್ರಮದ ಅಡಿ ಇವಿ-ದ್ವಿಚಕ್ರ ವಾಹನಗಳಿಗೆ ನೀಡುತ್ತಿದ್ದ ಶೇ 40ರಷ್ಟು ಸಹಾಯಧನವನ್ನು ಜೂನ್ 1ರಿಂದ ಅನ್ವಯವಾಗುವಂತೆ ಶೇ 15ಕ್ಕೆ ಇಳಿಸಲಾಗಿದೆ.

ಮುಖ್ಯಾಂಶಗಳು

- ಜೂನ್ 1ರಿಂದ ಅನ್ವಯ: ಏರಲಿದೆ ಇವಿ-ದ್ವಿಚಕ್ರ ವಾಹನಗಳ ಬೆಲೆ
- ಸರ್ಕಾರದ ಕ್ರಮ ಸ್ವಾಗತಿಸಿದ ಇವಿ ನವೋದ್ಯಮಗಳು

ಸಹಾಯಧನ ಕಡಿತದ ನಂತರ ವಿದ್ಯುತ್ ಚಾಲಿತ ದ್ವಿಚಕ್ರವಾಹನಗಳ ಬೆಲೆಯಲ್ಲಿ ಎಷ್ಟು ಹೆಚ್ಚಳವಾಗಲಿದೆ ಎಂಬ ನಿಖರ ಮಾಹಿತಿ ಲಭ್ಯವಾಗಿಲ್ಲ. ಪ್ರೀಮಿಯಂ ವಿದ್ಯುತ್ ಚಾಲಿತ ಸ್ಕೂಟರ್‌ಗಳ ಬೆಲೆಯಲ್ಲಿ ₹22,000 ದಿಂದ ₹37,000 ರದವರೆಗೂ ಏರಿಕೆಯಾಗಬಹುದು ಎಂದು ಉದ್ಯಮದ ಮೂಲಗಳು ಹೇಳಿವೆ.

ಇವಿಗಳ ಬೆಲೆ ಏರಿಕೆಯಿಂದ ಜನರು ಪೆಟ್ರೋಲ್ ಚಾಲಿತ ವಾಹನಗಳತ್ತ ವಾಲಬಹುದು. ಇದರಿಂದ ಕಚ್ಚಾತೈಲ ಆಮದು ಪ್ರಮಾಣವೂ ಏರಿಕೆಯಾಗಬಹುದು
ಸೊಹಿಂದರ್ ಗಿಲ್, ಎಸ್‌ಎಂಇವಿ ಪ್ರಧಾನ ನಿರ್ದೇಶಕ

ಸರ್ಕಾರದ ಈ ನಡೆ ಸ್ವಾಗತಾರ್ಹ. ಸಹಾಯಧನ ಕಡಿತ ಮಾಡುವುದರಿಂದ, ಇವಿ ಉದ್ಯಮಗಳು ಸುಸ್ಥಿರ ಬೆಳವಣಿಗೆ ಸಾಧಿಸಲು ಸಾಧ್ಯವಾಗುತ್ತದೆ
ನಿಖಿಲ್ ಭಾಟಿಯಾ, ಹಾಪ್ ಎಲೆಕ್ಟ್ರಿಕ್ ಮೊಬಿಲಿಟಿ ಸಿಇಒ

'ಸಹಾಯಧನವನ್ನು ದಿಢೀರ್ ಎಂದು ಕಡಿತ ಮಾಡಿದ್ದರಿಂದ, ಇವಿ-ದ್ವಿಚಕ್ರವಾಹನಗಳ ಬೆಲೆಯಲ್ಲಿ ಏರಿಕೆಯಾಗಲಿದೆ. ಇದರಿಂದ ಅವುಗಳ ಮಾರಾಟ ಇಳಿಕೆಯಾಗಲಿದೆ. ಈಡೀ ಉದ್ಯಮ ಕ್ಷೇತ್ರವು ಗಣನೀಯ ಅವಧಿಯವರೆಗೆ ಇದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ' ಎಂದು ಎಸ್‌ಎಂಇವಿ ಹೇಳಿದೆ.

ಭಾರತದ ಮಾರುಕಟ್ಟೆಯು ಈಗಲೂ ಬೆಲೆಯನ್ನು ಗಂಭೀರವಾಗಿ ಪರಿಗಣಿಸುತ್ತದೆ. ಸಹಾಯಧನ ಹೊರತುಪಡಿಸಿದ ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ನೈಜ ಬೆಲೆಗೆ ಭಾರತೀಯ ಗ್ರಾಹಕರು ಇನ್ನೂ ಹೊಂದಿಕೊಂಡಿಲ್ಲ. ಈಗ ಸಹಾಯಧನವನ್ನು ಗಣನೀಯ ಪ್ರಮಾಣದಲ್ಲಿ ಕಡಿತ ಮಾಡಿದರೆ, ಇವಿ ದ್ವಿಚಕ್ರವಾಹನಗಳು ದುಬಾರಿ ಎನಿಸಿಬಿಡುತ್ತವೆ. ಹೀಗಾಗಿ ಸಹಾಯಧನವನ್ನು ಹಂತ-ಹಂತವಾಗಿ ಕಡಿತ ಮಾಡಿದ್ದರೆ ಸೂಕ್ತವಾಗಿರುತ್ತಿತ್ತು ಎಂದು ಎಸ್‌ಎಂಇವಿ ಪ್ರಧಾನ ನಿರ್ದೇಶಕ ಸೊಹಿಂದರ್ ಗಿಲ್ ಹೇಳಿದ್ದಾರೆ.

ಹೊಸ ಸಂಸತ್ ಭವನ ಉದ್ಘಾಟನೆ ಕಾಂಗ್ರೆಸ್– ಬಿಜೆಪಿ ವಾಕ್ಸಮರ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರಿಂದಲೇ ನೂತನ ಸಂಸತ್ ಭವನವನ್ನು ಉದ್ಘಾಟಿಸುವ ತೀರ್ಮಾನ ಈಗ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

'ಸಂಸತ್ತಿನ ವ್ಯಾಪ್ತಿಯಲ್ಲಿ ರಾಷ್ಟ್ರಪತಿಯವರೂ ಬರುತ್ತಾರೆ. ಅವರಿಂದಲೇ ಉದ್ಘಾಟಿಸಬೇಕು' ಎಂದು ಕಾಂಗ್ರೆಸ್‌ನ ಮುಖಂಡರು ಸಂವಿಧಾನ ಉಲ್ಲೇಖಿಸಿ ಆಗ್ರಹಪಡಿಸಿದ್ದರು. ಇದಕ್ಕೆ ತಿರುಗೇಟು ನೀಡಿರುವ ಕೇಂದ್ರ ಸಚಿವ ಹರದೀಪ್ ಪುರಿ, 'ಕಾಂಗ್ರೆಸ್‌ನವರು ಸಂವಿಧಾನವನ್ನು ತಪ್ಪಾಗಿ ಉಲ್ಲೇಖಿಸುತ್ತಿದ್ದಾರೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ರಾಷ್ಟ್ರಪತಿ ಅವರಿಂದಲೇ ನೂತನ ಸಂಸತ್ ಭವನವನ್ನು ಉದ್ಘಾಟಿಸಬೇಕು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖಂಡರಾದ ಮನೀಶ್ ತಿವಾರಿ, ಶಶಿ ತರೂರ್ ಅವರು ಆಗ್ರಹಪಡಿಸಿದ್ದರು.

ಸರಣಿ ಟ್ವೀಟ್‌ನಲ್ಲಿ ಇದಕ್ಕೆ ಪ್ರತಿಕ್ರಿಯಿಸಿರುವ ಪುರಿ, 'ಹೊಸ ಸಂಸತ್ ಭವನ ಕುರಿತು ಟೀಕಿಸುವುದು ಮತ್ತು ಪ್ರಶ್ನಿಸುವುದನ್ನು ಅವರು ಹಿಂದೆಯೂ ಮಾಡಿದ್ದರು. ಆದರೆ, ಸ್ವತಃ ಪಾಲಿಸುತ್ತಿರಲಿಲ್ಲ' ಎಂದಿದ್ದಾರೆ

ಪುರಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ ಟ್ವೀಟ್ ಮಾಡಿರರುವ ಮನೀಶ್ ತಿವಾರಿ ಅವರು, 'ಸಂವಿಧಾನದ 79ನೇ ವಿಧಿಯನ್ನು ಉಲ್ಲೇಖಿಸಿದ್ದು, ಆ ಪ್ರಕಾರ, ಸಂಸತ್ತಿನ ವ್ಯಾಪ್ತಿಗೆ ರಾಷ್ಟ್ರಪತಿ, ಉಭಯ ಸದನಗಳು ಸೇರಿವೆ. ನಾನು ತಪ್ಪಾಗಿ ಉಲ್ಲೇಖಿಸಿದ್ದೇನೆ ಎಂದಾದರೆ, ಬಹುಶಃ ಪುರಿ ಅವರು ಬೇರಾವುದೋ ಸಂವಿಧಾನ ಓದುತ್ತಿರಬಹುದು' ಎಂದು ವ್ಯಂಗ್ಯವಾಡಿದ್ದಾರೆ.

ವೋಟ್ ಬ್ಯಾಂಕ್ ಅನ್ನು ಗುರಿಯಾಗಿಸಿ ಬಿಜೆಪಿಯು ದಲಿತರು, ಬುಡಕಟ್ಟು ಜನರನ್ನು ಆಯ್ಕೆ ಮಾಡುತ್ತದೆ ಎಂಬ ಖರ್ಗೆಯವರ ಹೇಳಿಕೆ ಉಲ್ಲೇಖಿಸಿ, 'ಇದು ಅನಗತ್ಯ ಹೇಳಿಕೆ. ಕಾಂಗ್ರೆಸ್ ದೇಶದ ಪರವಾಗಿ ಇರಬೇಕಾದ ಉತ್ಸಾಹ ಮತ್ತು ಹೆಮ್ಮೆಯ ಪ್ರಜ್ಞೆಯನ್ನೇ ಕಳೆದುಕೊಂಡಿದೆ' ಎಂದರು.

ಸಮಾರಂಭಕ್ಕೆ ಬಹಿಷ್ಕಾರ

ನೂತನ ಸಂಸತ್ ಭವನ ಉದ್ಘಾಟನೆಗೆ ರಾಷ್ಟ್ರಪತಿ ಮುರ್ಮು ಅವರನ್ನು ಆಹ್ವಾನಿಸದಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಟಿಎಂಸಿ, ಉದ್ಘಾಟನಾ ಕಾರ್ಯಕ್ರಮ ಬಹಿಷ್ಕರಿಸುವುದಾಗಿ ಮಂಗಳವಾರ ಹೇಳಿದೆ. ಕಾರ್ಯಕ್ರಮವನ್ನು ಬಹಿಷ್ಕರಿಸುವುದಾಗಿ ಘೋಷಿಸಿದ ಮೊದಲ ಪಕ್ಷವೂ ಟಿಎಂಸಿ ಆಗಿದೆ.

ಋತುರಾಜ್ ಅರ್ಧಶತಕ; ಗುಜರಾತ್‌ಗೆ ಸೋಲುಣಿಸಿ 10ನೇ ಬಾರಿ ಪ್ರಶಸ್ತಿ ಸುತ್ತಿಗೆ ಲಗ್ಗೆ

ಫೈನಲ್‌ಗೆ ಚೆನ್ನೈ ಸೂಪರ್ ಕಿಂಗ್ಸ್

ಚೆನ್ನೈ (ಪಿಟಿಐ): ಆರಂಭಿಕ ಬ್ಯಾಟರ್ ಋತುರಾಜ್ ಗಾಯಕವಾಡ್ ಅವರ ಅರ್ಧಶತಕ ಹಾಗೂ ಬೌಲರ್‌ಗಳ ಪರಿಣಾಮಕಾರಿ ಪ್ರದರ್ಶನದ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಐಪಿಎಲ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿತು.

ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ 'ಕ್ವಾಲಿಫೈಯರ್–1' ಪಂದ್ಯದಲ್ಲಿ ಚೆನ್ನೈ 15 ರನ್‌ಗಳಿಂದ ಗುಜರಾತ್ ಟೈಟನ್ಸ್ ವಿರುದ್ಧ ಗೆದ್ದಿತು. ಇದರೊಂದಿಗೆ ದಾಖಲೆಯ 10ನೇ ಬಾರಿ ಪ್ರಶಸ್ತಿ ಸುತ್ತಿಗೆ ತಲುಪಿದ ಸಾಧನೆ ಮಾಡಿತು.

ಮೊದಲು ಬ್ಯಾಟ್ ಮಾಡಿದ ಮಹೇಂದ್ರ ಸಿಂಗ್ ಧೋನಿ ಬಳಗ ನಿಗದಿತ ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 172 ರನ್ ಕಲೆಹಾಕಿತು. ಗುಜರಾತ್ ತಂಡವು 20 ಓವರ್‌ಗಳಲ್ಲಿ ಎಲ್ಲ ವಿಕೆಟ್ ಕಳೆದುಕೊಂಡು 157 ರನ್ ಗಳಿಸಲಷ್ಟೇ ಶಕ್ತವಾಯಿತು.

ದೀಪಕ್ ಚಾಹರ್, ಮಹೀಶ್ ತೀಕ್ಷಣ, ರವೀಂದ್ರ ಜಡೇಜ ಮತ್ತು ಮಥೀಶ ಪಥಿರಾಣ ಅವರು ತಲಾ ಎರಡು ವಿಕೆಟ್ ಕಬಳಿಸಿ ಗುಜರಾತ್ ಬ್ಯಾಟರ್‌ಗಳನ್ನು ನಿಯಂತ್ರಿಸಿದರು.

ಅನುಭವಿ ನಾಯಕ ಧೋನಿ, ಬೌಲರ್‌ಗಳ ಸಮರ್ಥ ಬಳಕೆ ಮತ್ತು ಕ್ಷೇತ್ರರಕ್ಷಕರನ್ನು ಉತ್ತಮವಾಗಿ ನಿಯೋಜಿಸಿ ಯಶಸ್ಸು ಕಂಡರು.

ಸವಾಲಿನ ಗುರಿ ಬೆನ್ನತ್ತಿದ ಹಾರ್ದಿಕ್ ಪಾಂಡ್ಯ ಬಳಗದ ಆರಂಭ ಉತ್ತಮವಾಗಿರಲಿಲ್ಲ. ವೃದ್ಧಿಮಾನ್ ಸಹಾ 12 ರನ್ ಗಳಿಸಿ ದೀಪಕ್ ಚಾಹರ್ ಅವರಿಗೆ ವಿಕೆಟ್ ಒಪ್ಪಿಸಿದರು. ಈ ವೇಳೆ ತಂಡದ ಮೊತ್ತ ಮೂರು ಓವರ್‌ಗಳಲ್ಲಿ 22 ರನ್‌ಗಳಾಗಿತ್ತು. ಬಳಿಕ ಶುಭಮನ್ ಗಿಲ್ (42) ಅವರಿಗೆ ಜೊತೆ ನೀಡುವಲ್ಲಿ ಹಾರ್ದಿಕ್ (8) ಕೂಡ ವಿಫಲರಾದರು. ಮಹೀಶ್ ತೀಕ್ಷಣ ಎಸೆತದಲ್ಲಿ ಜಡೇಜ ಅವರಿಗೆ ಕ್ಯಾಚಿತ್ತರು.

ಮಧ್ಯಮ ಕ್ರಮಾಂಕದಲ್ಲಿ ದಸುನ್ ಶನಕ (17), ವಿಜಯ್ ಶಂಕರ್ (14) ಹಾಗೂ ಡೇವಿಡ್ ಮಿಲ್ಲರ್ ಅವರಿಗೂ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ. ರಾಹುಲ್ ತೆವಾಟಿಯಾ ಮಿಂಚಲಿಲ್ಲ.

ಗಿಲ್ ಹಾಗೂ ಕೊನೆಯಲ್ಲಿ ಅಬ್ಬರಿಸಿದ ರಶೀದ್ ಖಾನ್ (30, 16ಎ, 4X3, 6X2) ಹೋರಾಟಕ್ಕೆ ಫಲ ಲಭಿಸಲಿಲ್ಲ.

ಕೊನೆಯ ಎರಡು ಓವರ್‌ಗಳಲ್ಲಿ ಗುಜರಾತ್ ಗೆಲುವಿಗೆ 35 ರನ್ ಬೇಕಿತ್ತು. 19ನೇ ಓವರ್ ಎಸೆದ ತುಷಾರ್ ದೇಶಪಾಂಡೆ ಕೇವಲ ಎಂಟು ರನ್ ನೀಡಿ ರಶೀದ್ ವಿಕೆಟ್ ಕಬಳಿಸಿದರು. ಕೊನೆಯ ಓವರ್‌ನಲ್ಲಿ ದೀಪಕ್ 11 ರನ್ ನೀಡಿ ಮೊಹಮ್ಮದ್ ಶಮಿ ಅವರನ್ನು ಔಟ್ ಮಾಡುವ ಮೂಲಕ ಗುಜರಾತ್ ಇನಿಂಗ್ಸ್‌ಗೆ ಅಂತ್ಯ ಹಾಡಿದರು.

ಸೋತ ಗುಜರಾತ್ ತಂಡವು ಮೇ 26 ರಂದು ನಡೆಯುವ 'ಕ್ವಾಲಿಫೈಯರ್–2' ಪಂದ್ಯದಲ್ಲಿ ಆಡಲಿದೆ. ಇಲ್ಲಿ ಜಯಿಸಿದರೆ ಫೈನಲ್ ತಲುಪಲಿದೆ.

ಚೆನ್ನೈ ಸವಾಲಿನ ಮೊತ್ತ: ಟಾಸ್ ಗೆದ್ದ ಟೈಟನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಎದುರಾಳಿಗಳನ್ನು ಬ್ಯಾಟಿಂಗ್‌ಗೆ ಕಳುಹಿಸಿದರು. ಆಕರ್ಷಕ ಆಟವಾಡಿದ ಋತುರಾಜ್ (60 ರನ್, 44 ಎ) ಚೆನ್ನೈ ತಂಡಕ್ಕೆ ಆಸರೆಯಾದರು. ಇನ್ನೊಬ್ಬ ಆರಂಭಿಕ ಬ್ಯಾಟರ್ ಡೆವೊನ್ ಕಾನ್ವೆ 40 ರನ್ ಗಳಿಸಿದರು.

ಋತುರಾಜ್ ಮತ್ತು ಕಾನ್ವೆ ಮೊದಲ ವಿಕೆಟ್‌ಗೆ 87 ರನ್‌ಗಳ ಜತೆಯಾಟ ನೀಡಿ ಚೆನ್ನೈಗೆ ಭದ್ರ ಬುನಾದಿ ಹಾಕಿಕೊಟ್ಟರು. ಗಾಯಕವಾಡ್ ಎರಡು ರನ್ ಗಳಿಸಿದ್ದಾಗ ದರ್ಶನ್ ನಲ್ಕಂಡೆ ಬೌಲಿಂಗ್‌ನಲ್ಲಿ ಗಿಲ್‌ಗೆ ಕ್ಯಾಚಿತ್ತಿದ್ದರು. ಆದರೆ ಆ ಎಸೆತ ನೋಬಾಲ್ ಆಗಿತ್ತು. ತಮಗೆ ದೊರೆತ ಅವಕಾಶವನ್ನು ಅವರು ಚೆನ್ನಾಗಿ ಬಳಸಿಕೊಂಡರು.

'ಪವರ್ ಪ್ಲೇ' ಅವಧಿಯಲ್ಲಿ 49 ರನ್ ಕಲೆಹಾಕಿದ ಚೆನ್ನೈ, 10 ಓವರ್‌ಗಳು ಕೊನೆಗೊಂಡಾಗ ವಿಕೆಟ್ ನಷ್ಟವಿಲ್ಲದೆ 85 ರನ್ ಗಳಿಸಿತ್ತು. 11ನೇ ಓವರ್‌ನಲ್ಲಿ ಮೋಹಿತ್ ಅವರು ಋತು ರಾಜ್ ವಿಕೆಟ್ ಪಡೆದು ಟೈಟನ್ಸ್‌ಗೆ ಮೊದಲ ಯಶಸ್ಸು ತಂದಿತ್ತರು. ಅವರು ಪುಲ್ ಮಾಡುವ ಪ್ರಯತ್ನದಲ್ಲಿ ಮಿಲ್ಲರ್‌ಗೆ ಕ್ಯಾಚಿತ್ತರು. ಬಳಿಕ ಬಂದ ಶಿವಂ ದುಬೆ (1) ವಿಫಲರಾದರು.

ಆ ಬಳಿಕ ಟೈಟನ್ಸ್ ಬೌಲರ್‌ಗಳು ತಮ್ಮ ಹಿಡಿತ ಬಿಗಿಗೊಳಿಸಿದರು. 11–14 ಓವರ್‌ಗಳ ನಡುವೆ ಕೇವಲ 23 ರನ್ ಮಾತ್ರ ಬಿಟ್ಟುಕೊಟ್ಟರು.

ಬಿರುಸಿನ ಆರಂಭ ಪಡೆದ ರಹಾನೆ (17) ಹೆಚ್ಚುಹೊತ್ತು ನಿಲ್ಲಲಿಲ್ಲ. ಅಂಬಟಿ ರಾಯುಡು ಮತ್ತು ರವೀಂದ್ರ ಜಡೇಜ ಅವರು ಕೊನೆಯಲ್ಲಿ ಹೋರಾಟ ಮಾಡಿ ತಂಡದ ಮೊತ್ತವನ್ನು 170ರ ಗಡಿ ದಾಟಿಸಿದರು.

ಚೆನ್ನೈ ತಂಡದ ಋತುರಾಜ್ ಗಾಯಕವಾಡ್ ಬ್ಯಾಟಿಂಗ್ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 7ಕ್ಕೆ 172 (20 ಓವರ್)
ಋತುರಾಜ್ ಸಿ ಮಿಲ್ಲರ್ ಬಿ ಮೋಹಿತ್ 60 (44 ಎ., 4X7, 6X1)
ಕಾನ್ವೆ ಸಿ ರಶೀದ್ ಬಿ ಶಮಿ 40 (34 ಎ., 4X4)
ದುಬೆ ಬಿ ನೂರ್ ಅಹಮದ್ 1 (3 ಎ)
ರಹಾನೆ ಸಿ ಗಿಲ್ ಬಿ ನಲ್ಕಂಡೆ 17 (10 ಎ., 6X1)
ರಾಯುಡು ಸಿ ಶನಕ ಬಿ ರಶೀದ್ 17 (9 ಎ., 4X1, 6X1)
ಜಡೇಜ ಬಿ ಶಮಿ 22 (16 ಎ., 4X2)
ಧೋನಿ ಸಿ ಪಾಂಡ್ಯ ಬಿ ಮೋಹಿತ್ 1 (2 ಎ)
ಮೊಯೀನ್ ಔಟಾಗದೆ 9 (4 ಎ., 6X1)
ಇತರೆ 5 (ಬೈ 1, ಲೆಗ್ ಬೈ 2, ನೋಬಾಲ್ 2)
ವಿಕೆಟ್ ಪತನ: 1–87 (ಋತುರಾಜ್ ಗಾಯಕವಾಡ್; 10.3), 2–30 (ಶಿವಂ ದುಬೆ; 11.3), 3–121 (ಅಜಿಂಕ್ಯ ರಹಾನೆ; 14.5), 4–125 (ಡೆವೊನ್ ಕಾನ್ವೆ; 15.1), 5–148 (ಅಂಬಟಿ ರಾಯುಡು; 17.6), 6–155 (ಮಹೇಂದ್ರ ಸಿಂಗ್ ಧೋನಿ; 18.5), 7–172 (ರವೀಂದ್ರ ಜಡೇಜ; 19.6)
ಬೌಲಿಂಗ್: ಮೊಹಮ್ಮದ್ ಶಮಿ 4–0–28–2, ದರ್ಶನ್ ನಲ್ಕಂಡೆ 4–0–44–1, ರಶೀದ್ ಖಾನ್ 4–0–37–1, ನೂರ್ ಅಹಮದ್ 4–0–29–1, ಮೋಹಿತ್ ಶರ್ಮಾ 4–0–31–2

ಗುಜರಾತ್ ಟೈಟನ್ಸ್ 157 (20 ಓವರ್)
ಸಹಾ ಸಿ ಪಥಿರಾಣ ಬಿ ಚಾಹರ್ 12 (11 ಎ., 4X2)
ಗಿಲ್ ಸಿ ಕಾನ್ವೆ ಬಿ ಚಾಹರ್ 42 (38 ಎ., 4X4, 6X1)
ಹಾರ್ದಿಕ್ ಸಿ ಜಡೇಜ ಬಿ ತೀಕ್ಷಣ 8 (7 ಎ., 4X1)
ಶನಕ ಸಿ ತೀಕ್ಷಣ ಬಿ ಜಡೇಜ 17 (16 ಎ., 4X1, 6X1)
ಮಿಲ್ಲರ್ ಬಿ ಜಡೇಜ 4 (6 ಎ.)
ವಿಜಯ್ ಶಂಕರ್ ಸಿ ಗಾಯಕವಾಡ್ ಬಿ ಪಥಿರಾಣ 14 (10 ಎ., 6X1)
ತೆವಾಟಿಯಾ ಬಿ ತೀಕ್ಷಣ 3 (5 ಎ)
ರಶೀದ್ ಸಿ ಕಾನ್ವೆ ಬಿ ದೇಶಪಾಂಡೆ 30 (16 ಎ., 4X3, 6X2)
ದರ್ಶನ್ ರನೌಟ್ (ಸಬ್–ಸೇನಾಪತಿ) 0 (1 ಎ),ನೂರ್ ಅಹಮದ್ ಔಟಾಗದೆ 7 (5 ಎ., 4X1), ಶಮಿ ಸಿ ಚಾಹರ್ ಬಿ ಪಥಿರಾಣ 5 (5 ಎ., 4X1)
ಇತರೆ 15 (ಲೆಗ್ ಬೈ 2, ವೈಡ್ 13)
ವಿಕೆಟ್ ಪತನ: 1–22 (ವೃದ್ಧಿಮಾನ್ ಸಹಾ; 2.6), 2–41 (ಹಾರ್ದಿಕ್ ಪಾಂಡ್ಯ; 5.5), 3–72 (ದಸುನ್ ಶನಕ; 10.3), 4–88 (ಡೇವಿಡ್ ಮಿಲ್ಲರ್; 12.5), 5–88 (ಶುಭಮನ್ ಗಿಲ್; 13.1), 6–98 (ರಾಹುಲ್ ತೆವಾಟಿಯಾ; 14.3), 7–136 (ವಿಜಯ್ ಶಂಕರ್; 17.3), 8–136 (ದರ್ಶನ್ ನಲ್ಕಂಡೆ; 17.4), 9–142 (ರಶೀದ್ ಖಾನ್; 18.3), 10–157 (ಮೊಹಮ್ಮದ್ ಶಮಿ; 19.6)
ಬೌಲಿಂಗ್: ದೀಪಕ್ ಚಾಹರ್ 4–0–29–2, ತುಷಾರ್ ದೇಶಪಾಂಡೆ 4–0–43–1, ಮಹೀಶ್ ತೀಕ್ಷಣ 4–0–28–2, ರವೀಂದ್ರ ಜಡೇಜ 4–0–18–2, ಮಥೀಶ ಪಥಿರಾಣ 4–0–37–2

ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ 15 ರನ್ ಗೆಲುವು

ಮುಂಬೈಗೆ ಲಖನೌ ಸವಾಲು

ಎಲಿಮಿನೇಟರ್ ಇಂದು; ಆತ್ಮವಿಶ್ವಾಸದಲ್ಲಿ ರೋಹಿತ್ ಪಡೆ

ಚೆನ್ನೈ (ಪಿಟಿಐ): ಐಪಿಎಲ್ ಟೂರ್ನಿಯ ಪ್ಲೇ ಆಫ್‌ಗೆ 'ನಾಟಕೀಯ' ರೀತಿಯಲ್ಲಿ ಪ್ರವೇಶ ಪಡೆದಿರುವ ಮುಂಬೈ ಇಂಡಿಯನ್ಸ್ ತಂಡ, ಬುಧವಾರ ನಡೆಯಲಿರುವ 'ಎಲಿಮಿನೇಟರ್' ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ.

ಕಳೆದ ಟೂರ್ನಿಯಲ್ಲಿ ಕೊನೆಯ ಸ್ಥಾನ ಪಡೆದು ಮುಖಭಂಗ ಅನುಭವಿಸಿದ್ದ ರೋಹಿತ್ ಶರ್ಮಾ ಬಳಗ, ಈ ಬಾರಿ ಅಲ್ಪ ಅದೃಷ್ಟದ ನೆರವಿನೊಂದಿಗೆ ಲೀಗ್ ಹಂತವನ್ನು ದಾಟಿದೆ. ಭಾನುವಾರ ನಡೆದಿದ್ದ ಕೊನೆಯ ಲೀಗ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಮಣಿಸಿದ್ದರಿಂದ ಮುಂಬೈ 'ಪ್ಲೇ ಆಫ್'ನಲ್ಲಿ ಸ್ಥಾನ ಪಡೆದಿತ್ತು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯದಲ್ಲಿ ಸೋಲುವ ತಂಡ ಟೂರ್ನಿಯಿಂದ ಹೊರಬೀಳಲಿದ್ದು, ಗೆಲುವು ಸಾಧಿಸುವ ತಂಡ ಮೇ 26 ರಂದು ಅಹಮದಾಬಾದ್‌ನಲ್ಲಿ ನಡೆಯಲಿರುವ 'ಕ್ವಾಲಿಫೈಯರ್–2' ಪಂದ್ಯದಲ್ಲಿ ಆಡಲಿದೆ.

ಲಖನೌ ತಂಡ ಕಳೆದ ಆವೃತ್ತಿಯ ಟೂರ್ನಿಯ 'ಎಲಿಮಿನೇಟರ್'ನಲ್ಲಿ ಆರ್‌ಸಿಬಿ ಎದುರು ಸೋತಿತ್ತು. ಈ ಬಾರಿ ಅಲ್ಪ ಮುಂದೆ ಹೆಜ್ಜೆಯಿಡಬೇಕು ಎಂಬ ಛಲದೊಂದಿಗೆ ಮುಂಬೈ ವಿರುದ್ಧ ಕಣಕ್ಕಿಳಿಯಲಿದೆ.

ಕೆ.ಎಲ್.ರಾಹುಲ್ ಅವರು ಗಾಯಗೊಂಡು ಟೂರ್ನಿಯಿಂದ ಅರ್ಧದಲ್ಲೇ ಹೊರನಡೆದಿದ್ದರೂ, ಕೃಣಾಲ್ ಪಾಂಡ್ಯ ಅವರು ನಾಯಕತ್ವದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದಾರೆ.

ಬ್ಯಾಟಿಂಗ್ ಬಲ: ಮುಂಬೈ ತಂಡವು ತನ್ನ ಬ್ಯಾಟಿಂಗ್ ಶಕ್ತಿಯ ಮೇಲೆ ನಂಬಿಕೆ ಇಟ್ಟುಕೊಂಡಿದೆ. ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್, ರೋಹಿತ್ ಶರ್ಮಾ ಮತ್ತು ಕ್ಯಾಮರೂನ್ ಗ್ರೀನ್ ಉತ್ತಮ ಲಯದಲ್ಲಿ ಆಡುತ್ತಿದ್ದಾರೆ. ಸೂರ್ಯಕುಮಾರ್ ಅವರು ಒಂದು ಶತಕ ಮತ್ತು ನಾಲ್ಕು ಅರ್ಧಶತಕಗಳ ನೆರವಿನಿಂದ ಒಟ್ಟು 511 ರನ್ ಕಲೆಹಾಕಿದ್ದಾರೆ.

ಆಸ್ಟ್ರೇಲಿಯಾದ ಆಲ್‌ರೌಂಡರ್ ಗ್ರೀನ್, ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಕೊನೆಯ ಲೀಗ್ ಪಂದ್ಯದಲ್ಲಿ ಅಬ್ಬರದ ಶತಕ ಗಳಿಸಿದ್ದರು. ರೋಹಿತ್ ಬಳಗದ ಬ್ಯಾಟರ್‌ಗಳನ್ನು ಕಟ್ಟಿಹಾಕಬೇಕಾದರೆ, ಸಾಕಷ್ಟು ಪರಿಶ್ರಮ ಅಗತ್ಯ ಎಂಬ ಅರಿವು ಲಖನೌ ಬೌಲರ್‌ಗಳಿಗೆ ಇದೆ.

ಮುಂಬೈನ ಬಲಿಷ್ಠ ಬ್ಯಾಟಿಂಗ್ ಕ್ರಮಾಂಕಕ್ಕೆ ಕಡಿವಾಣ ತೊಡಿಸಬೇಕಾದರೆ ಲೆಗ್‌ಸ್ಪಿನ್ನರ್ ರವಿ ಬಿಷ್ಣೋಯಿ ಅವರು ಮಹತ್ವದ ಪಾತ್ರ ವಹಿಸಬೇಕಿದೆ. ಬಿಷ್ಣೋಯಿ ಒಟ್ಟು 16 ವಿಕೆಟ್ ಪಡೆದಿದ್ದಾರೆ. ನವೀನ್ ಉಲ್ ಹಕ್, ಆವೇಶ್ ಖಾನ್, ಅಮಿತ್ ಮಿಶ್ರಾ ಮತ್ತು ಕೃಣಾಲ್ ಅವರಿಂದಲೂ ಬಿಗುವಾದ ದಾಳಿ ಮೂಡಿಬರಬೇಕಿದೆ.

ರಾಹುಲ್ ಅನುಪಸ್ಥಿತಿಯಲ್ಲಿ ಮಾರ್ಕಸ್ ಸ್ಟೊಯಿನಿಸ್, ಕೈಲ್ ಮೇಯರ್ಸ್ ಮತ್ತು ನಿಕೊಲಸ್ ಪೂರನ್ ಅವರು ಅವರು ಲಖನೌ ತಂಡದ ಬ್ಯಾಟಿಂಗ್ ವಿಭಾಗಕ್ಕೆ ಬಲ ತುಂಬಿದ್ದಾರೆ. ಈ ಮೂವರು ಕ್ರಮವಾಗಿ 368, 361 ಮತ್ತು 358 ರನ್ ಕಲೆಹಾಕಿದ್ದಾರೆ. ಸ್ಪಿನ್ ಬೌಲಿಂಗ್‌ಗೆ ನೆರವು ನೀಡುವ ಚಿದಂಬರಂ ಕ್ರೀಡಾಂಗಣದ ಪಿಚ್‌ನಲ್ಲಿ ಇವರು ಪರಿಣಾಮಕಾರಿ ಆಗುವರೇ ಎಂಬುದನ್ನು ನೋಡಬೇಕು.

ಮುಂಬೈ ತಂಡದ ಬೌಲಿಂಗ್ ವಿಭಾಗವು ಅನುಭವಿ ಸ್ಪಿನ್ನರ್ ಪೀಯೂಷ್ ಚಾವ್ಲಾ ಮತ್ತು ವೇಗದ ಬೌಲರ್ ಜೇಸನ್ ಬೆಹ್ರೆನ್‌ಡಾರ್ಫ್ ಅವರನ್ನು ನೆಚ್ಚಿಕೊಂಡಿದೆ. ಇವರು ಕ್ರಮವಾಗಿ 20 ಹಾಗೂ 14 ವಿಕೆಟ್‌ಗಳನ್ನು ಗಳಿಸಿದ್ದಾರೆ.

ಮೇ 16 ರಂದು ಲೀಗ್ ಹಂತದಲ್ಲಿ ಉಭಯ ತಂಡಗಳು ಪೈಪೋಟಿ ನಡೆಸಿದ್ದಾಗ, ಲಖನೌ ತಂಡಕ್ಕೆ ಐದು ವಿಕೆಟ್‌ಗಳ ಗೆಲುವು ಒಲಿದಿತ್ತು.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್

ಪ್ರಮುಖ ಆಟಗಾರರು	
ಮುಂಬೈ ಇಂಡಿಯನ್ಸ್	
ಸೂರ್ಯಕುಮಾರ್ ಯಾದವ್	511 ರನ್
ಇಶಾನ್ ಕಿಶನ್	439 ರನ್
ಕ್ಯಾಮರಾನ್ ಗ್ರೀನ್	381 ರನ್
ಪೀಯೂಷ್ ಚಾವ್ಲಾ	20 ವಿಕೆಟ್
ಲಖನೌ ಸೂಪರ್‌ಜೈಂಟ್ಸ್	
ಮಾರ್ಕಸ್ ಸ್ಟೊಯಿನಿಸ್	368 ರನ್
ಕೈಲ್ ಮೇಯರ್ಸ್	361 ರನ್
ನಿಕೊಲಸ್ ಪೂರನ್	358 ರನ್
ರವಿ ಬಿಷ್ಣೋಯಿ	16 ವಿಕೆಟ್

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	730

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	26

ಕೃಣಾಲ್ ಪಾಂಡ್ಯ
ರೋಹಿತ್ ಶರ್ಮಾ

ವಿಶ್ವಕಪ್ ಮಹಿಳಾ ಶೂಟಿಂಗ್: ಸ್ಕೀಟ್‌ನಲ್ಲಿ ಸಾಧನೆ

ಗನೀಮತ್‌ಗೆ ಬೆಳ್ಳಿ; ದರ್ಶನಾಗೆ ಕಂಚು

ಅಲ್ಮಾಟಿ (ಪಿಟಿಐ): ಗನೀಮತ್ ಸೆಖೊ ಮತ್ತು ದರ್ಶನಾ ರಾಠೋಡ್ ಅವರು ಐಎಸ್‌ಎಸ್‌ಎಫ್ ಮಹಿಳೆಯರ ವಿಶ್ವ ಕಪ್ ಶೂಟಿಂಗ್ ಸ್ಪರ್ಧೆಯ ಸ್ಕೀಟ್‌ನಲ್ಲಿ ಮಂಗಳವಾರ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದುಕೊಂಡರು. ಭಾರತ ಈ ವಿಶ್ವಕಪ್‌ನಲ್ಲಿ ಎರಡು ವೈಯಕ್ತಿಕ ಪದಕಗಳನ್ನು ಇದೇ ಮೊದಲ ಬಾರಿ ಗೆದ್ದುಕೊಂಡಿದೆ.

ಚಿನ್ನ ಗೆಲ್ಲುವ ನೆಚ್ಚಿನ ಸ್ಪರ್ಧಿಯಾಗಿದ್ದ ಸ್ಥಳೀಯ ಶೂಟರ್ ಅಸ್ಸಿಮ್ ಒರಿಬ್‌ಬೆ ಅವರು 60 ಶಾಟ್‌ಗಳ ಫೈನಲ್‌ನಲ್ಲಿ ತಲಾ 50 ಬಾರಿ ಗುರಿತಲುಪಿದ್ದರು. 'ಶೂಟ್ ಆಫ್'ನಲ್ಲಿ ಮಿಂಚಿದ ಅಸ್ಸಿಮ್ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಗನೀಮತ್, ಶೂಟ್ ಆಫ್ ಟಾರ್ಗೆಟ್‌ನ ಎರಡು ಅವಕಾಶಗಳಲ್ಲಿ ಒಮ್ಮೆ ಗುರಿತಪ್ಪಿದರು. ಇನ್ನೊಂದೆಡೆ ಅಸ್ಸಿಮ್ ಎರಡೂ ಬಾರಿ ಯಶಸ್ಸು ಕಂಡರು.

ಗನೀಮತ್, ವಿಶ್ವಕಪ್‌ನಲ್ಲಿ 2ನೇ ಬಾರಿ ಪದಕ ಗೆದ್ದಂತಾಯಿತು. ಇನ್ನೊಂದೆಡೆ ಇದು ದರ್ಶನಾ ಅವರಿಗೆ ಸೀನಿಯರ್ ವಿಭಾಗದಲ್ಲಿ ಮೊದಲ ಪದಕ.ಇದಕ್ಕೆ ಮೊದಲು ದರ್ಶನಾ, ಆರು ಮಂದಿ ಮಹಿಳೆಯರ ಫೈನಲ್ ತಲುಪಿದ್ದರು. ಆ ಹಾದಿಯಲ್ಲಿ 120 ಸ್ಕೋರ್ ಗಳಿಸಿ ರಾಷ್ಟ್ರೀಯ ದಾಖಲೆ ಸರಿಗಟ್ಟಿದ್ದರು. ಗನೀಮತ್ 117 ಸ್ಕೋರ್‌ನೊಡನೆ ನಾಲ್ಕನೇ ಸ್ಥಾನ ಪಡೆದಿದ್ದರು. ಒರಿನ್‌ಬೆ 121 ಸ್ಕೋರ್‌ನೊಡನೆ ಅಗ್ರಸ್ಥಾನದೊಡನೆ ಫೈನಲ್ಸ್‌ಗೆ ಅರ್ಹತೆ ಪಡೆದಿದ್ದರು.

ಪುರುಷರ ಸ್ಕೀಟ್ ವಿಭಾಗದಲ್ಲಿ ಭಾರತದ ಮೂವರು ಕಣದಲ್ಲಿದ್ದರೂ, ಫೈನಲ್ ಪ್ರವೇಶಿಸುವಲ್ಲಿ ಯಶಸ್ಸು ಕಾಣಲಿಲ್ಲ.

ದರ್ಶನಾ ಮತ್ತು ಗನೀಮತ್ ಸೆಖೊ– ಎಸ್‌ಎಐ ಮೀಡಿಯಾ ಟ್ವಿಟರ್ ಚಿತ್ರ

ಬ್ಯಾಡ್ಮಿಂಟನ್: ಪ್ರಧಾನ ಸುತ್ತಿಗೆ ಮಾಳವಿಕಾ, ಅಶ್ಮಿತಾ

ಕ್ವಾಲಾಲಂಪುರ (ಪಿಟಿಐ): ಭಾರತದ ಮಾಳವಿಕಾ ಬನ್ಸೋಡ್ ಮತ್ತು ಅಶ್ಮಿತಾ ಚಲಿಹಾ ಅವರು ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಪ್ರಧಾನ ಸುತ್ತು ಪ್ರವೇಶಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 42ನೇ ಸ್ಥಾನದಲ್ಲಿರುವ ಮಾಳವಿಕಾ ಮಂಗಳವಾರ ನಡೆದ ಅರ್ಹತಾ ಸುತ್ತಿನ ಪಂದ್ಯದಲ್ಲಿ 21–12, 21–19 ರಲ್ಲಿ ಚೀನಾ ತೈಪೆಯ ಲಿನ್ ಸಿಯಾಂಗ್ ಅವರನ್ನು ಮಣಿಸಿದರು. ವಿಶ್ವದ 53ನೇ ರ‍್ಯಾಂಕ್‌ನ ಆಟಗಾರ್ತಿ ಅಶ್ಮಿತಾ 10-21, 21-19, 21-17 ರಲ್ಲಿ ಕೆನಡಾದ ವೆನ್ ಯು ಜಾಂಗ್ ವಿರುದ್ಧ ಗೆದ್ದರು.

ಬುಧವಾರ ನಡೆಯಲಿರುವ ಮೊದಲ ಸುತ್ತಿನ ಪಂದ್ಯದಲ್ಲಿ ಮಾಳವಿಕಾ ಅವರು ಎರಡನೇ ಶ್ರೇಯಾಂಕದ ಆಟಗಾರ್ತಿ ವಾಂಗ್ ಜಿ ಯಿ ವಿರುದ್ಧ ಆಡಲಿದ್ದರೆ, ಅಶ್ಮಿತಾ ಅವರು ನಾಲ್ಕನೇ ಶ್ರೇಯಾಂಕದ ಆಟಗಾರ್ತಿ ಹಾನ್ ಯುಯೆ ಅವರ ಸವಾಲು ಎದುರಿಸುವರು.

ಕರ್ನಾಟಕದ ಮಿಥುನ್ ಮಂಜುನಾಥ್ ಪ್ರಧಾನ ಸುತ್ತು ಪ್ರವೇಶಿಸಲು ವಿಫಲರಾದರು. ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಅವರು 13-21, 19-21 ರಲ್ಲಿ ತೈಪೆಯ ಚಿಯಾ ಹಾವೊ ಲೀ ಎದುರು ಪರಾಭವಗೊಂಡರು. ಶಂಕರ್ ಮುತ್ತುಸ್ವಾಮಿ 10-21, 14-21 ರಲ್ಲಿ ತೈಪೆಯ ಚಿ ಯು ಜೆನ್ ಕೈಯಲ್ಲಿ ಸೋತರು.

ಮಾಳವಿಕಾ ಬನ್ಸೋಡ್

ಪ್ರಮೋದ್‌ಗೆ 2 ಚಿನ್ನ

ನವದೆಹಲಿ (ಪಿಟಿಐ): ಪ್ಯಾರಾಲಿಂಪಿಕ್ ಚಾಂಪಿಯನ್ ಪ್ರಮೋದ್ ಭಗತ್ ಅವರು ಮನಾಮಾದಲ್ಲಿ ನಡೆದ ಬಹರೇನ್ ಪ್ಯಾರಾ ಬ್ಯಾಡ್ಮಿಂಟನ್ ಅಂತರರಾಷ್ಟ್ರೀಯ ಟೂರ್ನಿಯ ಪುರುಷರ ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ (ಕ್ರಮವಾಗಿ ಎಸ್‌ಎಲ್‌3, ಎಸ್‌ಎಲ್‌3–4 ಕ್ಲಾಸ್ ವಿಭಾಗದಲ್ಲಿ) ಮಂಗಳವಾರ ಎರಡು ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಪ್ರಮೋದ್ ಎಸ್‌ಎಲ್‌3 ಸಿಂಗಲ್ಸ್ ಫೈನಲ್‌ನಲ್ಲಿ ಸ್ವದೇಶದ ನಿತೇಶ್ ಅವರನ್ನು 21–16, 21–17ರಿಂದ ಸೋಲಿಸಿದರು. ಸುಕಾಂತ್ ಕದಂ ಜೊತೆಗೂಡಿ ಡಬಲ್ಸ್ ಫೈನಲ್‌ನಲ್ಲಿ ನಿತೇಶ್–ತರುಣ್ ಜೋಡಿಯನ್ನು 22–24, 21–9, 21–14 ರಿಂದ ಸೋಲಿಸಿದರು.

ಏಷ್ಯಾಕಪ್ ಜೂನಿಯರ್ ಹಾಕಿ: ಭಾರತ –ಚೀನಾ ತೈಪೆ ಮುಖಾಮುಖಿ

ಸಲಾಲ, ಒಮನ್ (ಪಿಟಿಐ): ವಿಶ್ವಕಪ್ ಟೂರ್ನಿಗೆ ಅರ್ಹತೆ ಗಳಿಸುವ ಗುರಿಯಿಟ್ಟುಕೊಂಡಿರುವ ಭಾರತ ಪುರುಷರ ಜೂನಿಯರ್ ತಂಡವು ಬುಧವಾರ ಇಲ್ಲಿ ನಡೆಯಲಿರುವ ಜೂನಿಯರ್ ಏಷ್ಯಾಕಪ್ ಹಾಕಿ ಟೂರ್ನಿಯ ಮೊದಲ ಪಂದ್ಯದಲ್ಲಿ ಚೀನಾ ತೈಪೆ ಸವಾಲು ಎದುರಿಸಲಿದೆ.

ಹಾಲಿ ಚಾಂಪಿಯನ್ ಕೂಡ ಆಗಿರುವ ಭಾರತ, ಪ್ರಶಸ್ತಿ ಉಳಿಸಿಕೊಳ್ಳುವ ವಿಶ್ವಾಸದಲ್ಲಿದ್ದು, ಕೌಶಲಭರಿತ ಆಟವನ್ನು ಪ್ರದರ್ಶಿಸಬೇಕಿದೆ. ಈ ಟೂರ್ನಿಯಲ್ಲಿ ಮೊದಲ ಮೂರು ಸ್ಥಾನ ಪಡೆಯುವ ತಂಡಗಳು ಡಿಸೆಂಬರ್‌ನಲ್ಲಿ ಮಲೇಷ್ಯಾದಲ್ಲಿ ನಿಗದಿಯಾಗಿರುವ ಜೂನಿಯರ್ ವಿಶ್ವಕಪ್‌ಗೆ ಪ್ರವೇಶ ಗಿಟ್ಟಿಸಲಿವೆ.

ಏಷ್ಯಾಕಪ್ ಟೂರ್ನಿಯಲ್ಲಿ ಭಾರತ ಹಾಗೂ ಪಾಕಿಸ್ತಾನ ತಲಾ ಮೂರು ಸಲ ಟ್ರೋಫಿ ಗೆದ್ದ ತಂಡಗಳು.ಉತ್ತಮ್ ಸಿಂಗ್ ನಾಯಕತ್ವದಲ್ಲಿರುವ ಭಾರತ ತಂಡವು ಪಾಕಿಸ್ತಾನ, ಜಪಾನ್, ಥಾಯ್ಲೆಂಡ್ ಮತ್ತು ಚೀನಾ ತೈಪೆ ತಂಡಗಳನ್ನೊಳಗೊಂಡ 'ಎ' ಗುಂಪಿನಲ್ಲಿದೆ. 'ಬಿ' ಗುಂಪಿನಲ್ಲಿರುವುದು ಆತಿಥೇಯ ಒಮನ್, ಕೊರಿಯಾ, ಮಲೇಷ್ಯಾ, ಬಾಂಗ್ಲಾದೇಶ, ಉಜ್ಬೇಕಿಸ್ತಾನ ತಂಡಗಳು.

ವಿಶ್ವ ಟೇಬಲ್ ಟೆನಿಸ್: ಮಣಿಕಾ ಬಾತ್ರಾ ಮುನ್ನಡೆ

ಡರ್ಬನ್ (ಪಿಟಿಐ): ಭಾರತದ ಮಣಿಕಾ ಬಾತ್ರಾ, ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಪ್ರಿಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ವಿಶ್ವದ 39ನೇ ಕ್ರಮಾಂಕದ ಮಣಿಕಾ ಮಂಗಳವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ 11–9, 14–12, 11–4, 11–8 ರಿಂದ ವೊಂಗ್ ಕ್ಸಿನ್ ರು ಅವರನ್ನು ನೇರ ಆಟಗಳಿಂದ ಸೋಲಿಸಿದರು.

ವಿಶ್ವ ಕ್ರಮಾಂಕದಲ್ಲಿ 171ನೇ ಸ್ಥಾನದಲ್ಲಿರುವ ವೊಂಗ್ ಮೇಲಿನ ಗೆಲುವಿನಿಂದ ಮಣಿಕಾ ಅವರು 32ರ ಸುತ್ತು ತಲುಪಿದ ಭಾರತದ ಏಕೈಕ ಆಟಗಾರ್ತಿಯಾಗಿ ಕಣದಲ್ಲಿ ಉಳಿದಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಶರತ್ ಕಮಲ್ ಮತ್ತು ಜಿ.ಸತ್ಯನ್ ಬೇಗನೇ ನಿರ್ಗಮಿಸಿದ್ದರು. ಶರತ್ ಸೋಮವಾರ ಹೊರಬಿದ್ದರೆ, ಸತ್ಯನ್ ಮಂಗಳವಾರ ನಡೆದ ಪಂದ್ಯದಲ್ಲಿ ವಿಶ್ವದ 9ನೇ ಕ್ರಮಾಂಕದ ಆಟಗಾರ ಡಾಂಗ್ ಕ್ಸಿಯು (ಜರ್ಮನಿ) ಎದುರು 6–11, 6–11, 5–11, 7–11 ರಲ್ಲಿ ಸೋಲನುಭವಿಸಿದರು.

ಮಣಿಕಾ ಮತ್ತು ಸತ್ಯನ್ ಮಿಕ್ಸೆಡ್ ಡಬಲ್ಸ್ ಪಂದ್ಯ ಆಡಬೇಕಿದೆ. ಶರತ್ ಮತ್ತು ಸತ್ಯನ್ ಪುರುಷರ ಡಬಲ್ಸ್ ಪ್ರಿಕ್ವಾರ್ಟರ್‌ಫೈನಲ್ ಪಂದ್ಯವನ್ನು ಬುಧವಾರ ಆಡಲಿದ್ದಾರೆ.


ಮಣಿಕಾ ಬಾತ್ರಾ

ವಿಟಿಯು ಅಥ್ಲೆಟಿಕ್ಸ್: ಟ್ರಿಪಲ್ ಜಂಪ್‌ನಲ್ಲಿ ಪವಿತ್ರಾ ದಾಖಲೆ

5000 ಮೀ. ಓಟ: ರಕ್ಷಿತಾ ಪ್ರಥಮ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ (ವಿಸಿಇಟಿ) ವಿದ್ಯಾರ್ಥಿನಿ ಐ.ರಕ್ಷಿತಾ ಅವರು ಮಂಗಳವಾರ ನಡೆದ, ವಿಟಿಯು 24ನೇ ಅಂತರ ಕಾಲೇಜು ಅಥ್ಲೆಟಿಕ್ ಕೂಟದ ಮಹಿಳೆಯರ ವಿಭಾಗದ 5,000 ಮೀ. ಓಟದಲ್ಲೂ ಪ್ರಥಮ ಸ್ಥಾನ ಪಡೆದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೈದಾನದಲ್ಲಿ ಸೋಮವಾರ (ಎರಡನೇ ದಿನ) ನಡೆದ 20 ಕಿ.ಮೀ ನಡಿಗೆ ಸ್ಪರ್ಧೆಯಲ್ಲಿ (2 ಗಂಟೆ 17 ನಿಮಿಷ 13 ಸೆಕೆಂಡ್) ರಕ್ಷಿತಾ ಅವರು ಹೊಸ ದಾಖಲೆ ಬರೆದಿದ್ದರು. ಮೂರನೇ ದಿನ ಓಟದಲ್ಲೂ ಪಾರಮ್ಯ ಮೆರೆದರು. 5,000 ಮೀ. ಓಟದಲ್ಲಿ ಕೂರ್ಗ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕೆ.ಟಿ.ಚೋಂದಮ್ಮ (ದ್ವಿತೀಯ) ಹಾಗೂ ಬೆಂಗಳೂರಿನ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ ಸೀಮಾ ತೆಂಡೂಲ್ಕರ್ ಮೂರನೇ ಸ್ಥಾನ ಪಡೆದರು.

ಮಹಿಳೆಯರ 4X100 ಮೀ. ರಿಲೇ ಓಟದಲ್ಲಿ ವಿಸಿಇಟಿಯ ಜಿ.ಪವಿತ್ರಾ ನೇತೃತ್ವದ ತಂಡ ಮೊದಲ, ಆರ್.ವಿ.ಎಂಜಿನಿಯರಿಂಗ್ ಕಾಲೇಜಿನ ಎಲ್. ಜಿ.ನಮ್ಯ ನೇತೃತ್ವದ ತಂಡ ಎರಡನೇ ಹಾಗೂ ಮಂಗಳೂರಿನ ಸೆಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ಶುಭ್ರಾ ರೈ ನೇತೃತ್ವದ ತಂಡ ಮೂರನೇ ಸ್ಥಾನ ಪಡೆದುಕೊಂಡವು.

ಮಹಿಳೆಯರ ಟ್ರಿಪಲ್ ಜಂಪ್‌ನಲ್ಲಿ ವಿಸಿಇಟಿಯ ಜಿ.ಪವಿತ್ರಾ ಅವರು 12.58 ಮೀ. ಜಿಗಿಯುವ ಮೂಲಕ ತಮ್ಮದೇ ಹಳೆಯ ದಾಖಲೆ (12.11 ಮೀ)ಯನ್ನು ಉತ್ತಮಪಡಿಸಿಕೊಂಡರು.

ಮಹಿಳೆಯರ ಹೆಪ್ಟಥ್ಲಾನ್‌ನಲ್ಲಿ 2,206 ಪಾಯಿಂಟ್ಸ್ ಗಳಿಸಿದ ವಿಸಿಇಟಿಯ ಬಿ.ಜಯಶ್ರೀ (ಪ್ರಥಮ), 1,720 ಪಾಯಿಂಟ್ಸ್ ಗಳಿಸಿದ ಎಎಂಸಿ ಎಂಜಿನಿಯರಿಂಗ್ ಕಾಲೇಜಿನ ಎಂ.ಧ್ರುವ ಮತ್ತು 1,269 ಅಂಕ ಗಳಿಸಿದ ಮೈಸೂರಿನ ಎನ್‌ಐಇಯ ಎಂ.ಎ.ಅನಘಾ ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಗಳಿಸಿದರು.

ಮಹಿಳೆಯರ ಷಾಟ್‌ಪಟ್‌ನಲ್ಲಿ ಮಂಗಳೂರಿನ ಎಸ್‌ಐಟಿ ಕಾಲೇಜಿನ ರಿಕ್ತಾ ಕಿರಣ್ (9.94 ಮೀ), 200 ಮೀ. ಓಟದಲ್ಲಿ ಬಿ.ಎಂಎಸ್ ಆರ್ಕಿಟೆಕ್ಚರ್ ಕಾಲೇಜಿನ ಎಸ್.ಧೃತಿ ಮೊದಲ ಸ್ಥಾನಗಳನ್ನು ಪಡೆದರು.

ಪುರುಷರ ವಿಭಾಗ: 4X100 ಮೀ. ರಿಲೇನಲ್ಲಿ ವಿವೇಕಾನಂದ ಕಾಲೇಜು ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯ ಲೋಹಿತ್ ನೇತೃತ್ವದ ತಂಡ, 5000 ಮೀ. ಓಟದಲ್ಲಿ ರಾಮನಗರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಸಿ.ರಂಗನಾಥ, ಷಾಟ್‌ಪಟ್‌ನಲ್ಲಿ ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಸಂಪತ್ ಹೆಗ್ಡೆ (12.72 ಮೀ), 110 ಮೀ. ಹರ್ಡಲ್ಸ್ ಓಟದಲ್ಲಿ ತುಮಕೂರಿನ ಸಿದ್ಧಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಸ್.ಎಂ.ಹರ್ಷ, ಟ್ರಿಪಲ್ ಜಂಪ್‌ನಲ್ಲಿ ಜ್ಯೋತಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎನ್.ಎಂ.ಜೀವನ್ (13.91 ಮೀ), 200 ಮೀ. ಓಟದಲ್ಲಿ ಕೋಲಾರದ ತಿಮ್ಮಯ್ಯ ಎಂಜಿನಿಯರಿಂಗ್ ಕಾಲೇಜಿನ ಬಿ.ಧನುಷ್ ಮೊದಲ ಸ್ಥಾನ ಪಡೆದರು.

ಜಿ.ಪವಿತ್ರಾ

26ರಿಂದ ರಾಜ್ಯ ಚೆಸ್ ಚಾಂಪಿಯನ್‌ಷಿಪ್

ಬೆಂಗಳೂರು: ಕನಕಪುರ ರಸ್ತೆಯ ಕೋಣನಕುಂಟೆಯ ಫೋರಂ ಮಾಲ್‌ನಲ್ಲಿ ಇದೇ 26 ರಿಂದ 30ರವರೆಗೆ ರಾಜ್ಯ ಚೆಸ್ ಚಾಂಪಿಯನ್‌ಷಿಪ್ ನಡೆಯಲಿದೆ. ಜಿಎಂ, ಐಎಂ, ರೇಟೆಡ್ ಆಟಗಾರರು ಸೇರಿ 600ಕ್ಕೂ ಹೆಚ್ಚು ಮಂದಿ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಒಟ್ಟು ₹10 ಲಕ್ಷ ಬಹುಮಾನ ಹೊಂದಿರುವ ಈ ಚಾಂಪಿಯನ್‌ಷಿಪ್‌ಗೆ ಅಕ್ಷಯಕಲ್ಪ ಆರ್ಗ್ಯಾನಿಕ್ ಪ್ರಾಯೋಜಕತ್ವ ವಹಿಸಿದೆ ಎಂದು ಪ್ರಾಯೋಜಕ ಸಂಸ್ಥೆಯ ಸಹ ಸಂಸ್ಥಾಪಕ ಶಶಿಕುಮಾರ್ ಮತ್ತು ರಾಜ್ಯ ಚೆಸ್ ಸಂಸ್ಥೆ ಕಾರ್ಯದರ್ಶಿ ಅರವಿಂದ ಶಾಸ್ತ್ರಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೊದಲ 60 ಸ್ಥಾನ ಪಡೆದವರಿಗೆ, ವಯೋ ವರ್ಗ ವಿಭಾಗದಲ್ಲಿ ವಿಜೇತರಾದವರಿಗೆ ಬಹುಮಾನ ನೀಡಲಾಗುವುದು. ಮಹಿಳೆಯರೇ ಪದಾಧಿಕಾರಿಗಳಾಗಿರುವ ಬೆಂಗಳೂರು ನಗರ ಜಿಲ್ಲಾ ಚೆಸ್ ಸಂಸ್ಥೆ ಸಹಯೋಗದಲ್ಲಿ ಟೂರ್ನಿಯು ನಡೆಯಲಿದೆ.

ಚೆಸ್ ಆಟಗಾರರಾಗಿದ್ದುಕೊಂಡು ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಗಣ್ಯರ ಜೊತೆ ಚಾಂಪಿಯನ್‌ಷಿಪ್‌ನ ಅವಧಿಯ ಒಂದು ದಿನ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗುವುದು ಎಂದು ಅವರಿಂದ ಶಾಸ್ತ್ರಿ ಹೇಳಿದರು.

ಚಾಂಪಿಯನ್‌ಷಿಪ್ ಬಗ್ಗೆ ಹೆಚ್ಚಿನ ಮಾಹಿತಿಗೆ 0831 7426652 ಸಂಪರ್ಕಿಸಬಹುದು.

ಟೈಗರ್ ಕಪ್: ಕ್ರೀಡಾಕ್ಷೇತ್ರ ತಂಡಕ್ಕೆ ಜಯ

ಬೆಂಗಳೂರು: ಕ್ರೀಡಾಕ್ಷೇತ್ರ ತಂಡವು ಟೈಗರ್ ಕಪ್ 16 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು. ಬಿ.ಕೆ. ಕ್ರಿಕೆಟ್ ಮೈದಾನದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಕ್ರೀಡಾಕ್ಷೇತ್ರ 9 ವಿಕೆಟ್‌ಗಳಿಂದ ಪಿಇಎಸ್‌ಸಿಎ ಸಿಬಿಟಿ ತಂಡವನ್ನು ಪರಾಭವಗೊಳಿಸಿತು.

ಮತ್ತೊಂದು ಪಂದ್ಯದಲ್ಲಿ ಇಐಎಸ್‌ಬಿ 69 ರನ್‌ಗಳಿಂದ ಯಂಗ್ ಲಯನ್ಸ್ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರುಗಳು: ಪಿಇಎಸ್‌ಸಿಎ ಸಿಬಿಟಿ: 29.3 ಓವರ್‌ಗಳಲ್ಲಿ 89 (ಶೌರ್ಯ 5ಕ್ಕೆ 3, ಯುವಾನ್ ಜೈನ್ 20ಕ್ಕೆ 3). ಕ್ರೀಡಾಕ್ಷೇತ್ರ: 11.4 ಓವರ್‌ಗಳಲ್ಲಿ 1 ವಿಕೆಟ್‌ಗೆ 92 (ಅಮೋಘ್ ಶೆಟ್ಟಿ 37, ಯಶಸ್ ಪ್ರಸನ್ನ 27).
ಇಐಎಸ್‌ಬಿ: 30 ಓವರ್‌ಗಳಲ್ಲಿ 5 ವಿಕೆಟ್‌ಗೆ 258 (ಆದರ್ಶ್ ಸುಬ್ರಮಣಿಯನ್ ಜೆ. 101, ವೇದಾಂತ್ ಕುಮಾರ್ 55, ಪಾರ್ಥ್ ರಂಜಿತ್ 48). ಯಂಗ್ ಲಯನ್ಸ್: 30 ಓವರ್‌ಗಳಲ್ಲಿ 5 ವಿಕೆಟ್‌ಗೆ 189 (ಅರ್ಜುನ್ ಪೊಟ್ಟಿ 80, ಚಿನ್ಮಯಿ 57; ರಾಘವ್ 44ಕ್ಕೆ 3).